ವಿಕಸನ

ಒಕ್ಕಲಿಗ ಸಾಧಕರು



## ಪರಹಿತ ಚಿಂತಕ

# ಟಿ. ಮಾದಯ್ಯಗೌಡ

ಡಾ. ಎಂ.ಜಿ. ಬಸವರಾಜ

ಪರಹಿತ ಚಿಂತಕ

# ಟಿ. ಮಾದಯ್ಯಗೌಡ

ಒಕ್ಕಲಿಗ ಸಾಧಕರು

ಪದ್ಮಭೂಷಣ ಜಗದ್ಗುರು ಶ್ರೀಶ್ರೀಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮಿಗಳವರ
75ನೇ ವರ್ಧಂತಿ-ಅಮೃತ ಮಹೋತ್ಸವ ವರ್ಷದ ನೆನಪಿಗೆ

ಪರಹಿತ ಚಿಂತಕ

# ಟಿ. ಮಾದಯ್ಯಗೌಡ

ಎಂ. ಜಿ. ಬಸವರಾಜ

ವಿಕಸನ
ವಿಜ್ಞಾತಂ ಭವನ, ಆದಿಚುಂಚನಗಿರಿ ವಿಶ್ವವಿದ್ಯಾನಿಲಯ (ACU)
ಬಿ.ಜಿ.ನಗರ-571448, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ

T. MADAIAH GOWDA - Bipgraphy


by
**M. G. Basavaraja**
No. 742, 11th Main
4th Stage. Kuvempa Nagara
Mysuru - 570009
M : 93413 57122

Published by
**VIKASANA**
Vijnatham Bhavana
Adichunchanagiri University
B. G Nagar - 571448
Nagamangala Taluk, Mandya Dist.

© VIKASANA
ಅಧಿಕೃತ ಮಾರಾಟಗಾರರು ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

First Impression : 2018
Price : Rs.130/-
Pages : iv + xxiv + 140 = 168
Paper Used : 80 GSM Maplitho
Book Size : 1/8th Demmy
Cover Page Design : S.T. Dilipkumar

Printed by
**SHAKTHI PRINTERS & PUBLISHERS**
Bengaluru- 560 058



ಪದ್ಮಭೂಷಣ ಜಗದ್ಗುರು ಶ್ರೀಶ್ರೀಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು




ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

Sri Adichunchanagiri Mahasamsthana Math

ಶ್ರೀ ಆದಿಚುಂಚನಗಿರಿ ಕ್ಷೇತ್ರ, -571811, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

Sri Adichunchanagiri kshetra-571811, Nagamangala tq, Mandya Dist,.

Branch: Sri Adichunchanagiri Mahasamsthana Math, Vijayanagara Branch, Bengaluru-560040.

Ph: 080-23300923, 23103729.




# ಆಶೀರ್ವಾದ ನುಡಿ

ಭೂತಾಯಿಯ ಸಾಂಗತ್ಯದಲ್ಲಿಯೇ ಬಾಳುವ ಮನುಷ್ಯ ಇಲ್ಲಿ ತನ್ನ ಇರುವಿಕೆಯ ಛಾಪನ್ನು ಮೂಡಿಸದೇ ಹೋದರೆ ಇಳೆಯ ಮೇಲಿನ ಆತನ ಹುಟ್ಟಿಗೆ ಅರ್ಥವಿರುವುದಿಲ್ಲ. ಆ ನಿಟ್ಟಿನಲ್ಲಿ ಮನುಷ್ಯ ನಾಲ್ಕು ಜನ ಸ್ಮರಿಸುವಂತಹ ಸತ್ಕರ್ಮಗಳನ್ನು, ಸಾಧನೆಗಳನ್ನು ಮಾಡಬೇಕು. ಮತ್ತೊಬ್ಬರಿಗೆ ಆದರ್ಶವಾಗುವಂತಹ ಬಾಳುವೆಯನ್ನು ನಡೆಸಬೇಕು. ತನ್ಮೂಲಕ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು. ಆ ದೃಷ್ಟಿಯಿಂದ ವಿಶ್ವ ಮಾನವತ್ವದ ಮಹಾನ್ ಗುಣಗಳನ್ನೆಲ್ಲ ತನ್ನಲ್ಲಡಗಿಸಿ ಕೊಂಡಿರುವ ಕನ್ನಡ ನಾಡಿನ ಭವ್ಯ ಸಂಸ್ಕೃತಿಯನ್ನು, ಹಿರಿಮೆ ಗರಿಮೆಗಳನ್ನು ವಿಖ್ಯಾತಗೊಳಿಸುವಲ್ಲಿ ಸಮಾಜದ ಹಲವು ಮಂದಿ ಜ್ಞಾನಿಗಳು, ವಿಜ್ಞಾನಿಗಳು, ಕಲಾವಿದರು, ವೈದ್ಯರು, ಸಮಾಜ ಸೇವಕರು, ಆಡಳಿತಗಾರರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಹಲವು ಮಂದಿ ಪುಣ್ಯ ಪುರುಷರ ಪಾತ್ರ ಮಹತ್ವಪೂರ್ಣವಾದುದು. ಒಬ್ಬೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ತಮ್ಮ ಅನುಪಮ ಕೊಡುಗೆಯನ್ನು ನೀಡುವ ಮೂಲಕ ಸಮಾಜದ ಏಳಿಗೆಯನ್ನು ಸಾಧಿಸಿದ್ದಾರೆ. ಈ ಎಲ್ಲ ಸಾಧಕರ ಜೀವನ ಅನಂತವಾದುದು; ಪರಿಪೂರ್ಣ ವಾದುದು. ಇಂಥ

ಸಾಧಕರ ಜೀವನ ಮುಂದಿನ ಪೀಳಿಗೆಗೆ ದಿವ್ಯ ಸಂದೇಶ. ಈ ಸಂದೇಶದ ಬೆಳಕಿನಲ್ಲಿ ಭಾವೀ ಪೀಳಿಗೆ ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು; ಬೆಳಗಿಸಿಕೊಳ್ಳಬೇಕು.

ಈ ಎಲ್ಲ ಸಾಧಕರು ತಾವು ನಂಬಿದ ತತ್ತ್ವಾದರ್ಶಗಳಿಗೆ, ಮೌಲ್ಯಗಳಿಗೆ ಚ್ಯುತಿ ಬಾರದಂತೆ ಕಾರ್ಯ ನಿರ್ವಹಿಸಿ ನಾಡಿನ ಹಿರಿಮೆಯನ್ನು ಬೆಳಗಿದ್ದಾರೆ. ಸಾಮಾನ್ಯ ಮನುಷ್ಯರಾಗಿ ಬಂದು ತಾವೂ ಬೆಳೆದು, ಜೊತೆಗೆ ಒಟ್ಟು ಸಮಾಜದ ಸಮಕಾಲೀನ ಪ್ರಜ್ಞೆಯನ್ನು ವಿಸ್ತಾರಗೊಳಿಸಿ ಹೋಗಿದ್ದಾರೆ. ವಿಶೇಷವಾಗಿ ನಮ್ಮ ಸಮಾಜ ಬಾಂಧವರು ಬಹಳ ಹಿಂದಿನಿಂದಲೂ ಕೃಷಿಯಲ್ಲಿ ತೊಡಗಿಕೊಂಡು ಇಡೀ ನಾಡಿಗೇ ಅನ್ನದಾತರೆನಿಸಿ ಸರ್ವಜ್ಞ ಕವಿಯ 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು' ಎಂಬ ಮಾತಿಗೆ ಅನ್ವರ್ಥವಾಗಿದ್ದಾರೆ. ಕೇವಲ ಕೃಷಿಕರಾಗಿ ಅಷ್ಟೇ ಅಲ್ಲದೆ, ರಾಜ ಮಹಾರಾಜರ ಕಾಲದಿಂದಲೂ ಆಡಳಿತದ ಬೆನ್ನೆಲುಬಾಗಿ ದುಡಿದಿದ್ದಾರೆ. ನಾಡಿಗೆ ತಮ್ಮ ಅತ್ಯಮೂಲ್ಯ ಕೊಡುಗೆಯನ್ನು ಸಲ್ಲಿಸಿದ್ದಾರೆ. ದಕ್ಷತೆಯಿಂದ ಪ್ರಾಮಾಣಿಕ ಮತ್ತು ಪ್ರಜಾವಾತ್ಸಲ್ಯಭರಿತ ಆಳ್ವಿಕೆ ನಡೆಸಿ ನಾಡಪ್ರಭುವಾಗಿ ಭವ್ಯ ಇತಿಹಾಸವನ್ನೇ ನಿರ್ಮಿಸಿದ್ದಾರೆ. ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಕಲೆ, ಧರ್ಮ, ಸಾಹಿತ್ಯ, ಸಂಸ್ಕೃತಿ, ರಾಜಕೀಯ, ವೈದ್ಯಕೀಯ, ಆಡಳಿತ, ಅಭಿವೃದ್ಧಿ... ಮುಂತಾದ ಕ್ಷೇತ್ರಗಳಲ್ಲಿ ಅಪರಿಮಿತವಾದ ಸೇವೆಯನ್ನು ಸಲ್ಲಿಸಿದವರಿದ್ದಾರೆ. ಆದರೆ ಇವರ ಜೀವನ ಸಾಧನೆಯನ್ನು ಸೂಕ್ತ ರೀತಿಯಲ್ಲಿ ದಾಖಲಿಸದೇ ಇರುವುದರಿಂದ, ಅದ್ವಿತೀಯ ಸಾಧನೆಯನ್ನು ಮಾಡಿದರೂ ನೂರಾರು ಮಂದಿ ಸಾಧಕರು ಸಮಾಜದಲ್ಲಿ ಮುನ್ನೆಲೆಗೆ ಬಾರದೆ ತೆರೆಯ ಮರೆಯಲ್ಲಿಯೇ ಅಜ್ಞಾತವಾಗಿ ಉಳಿದು ಹೋಗಿದ್ದಾರೆ.


ಸಮಾಜದಲ್ಲಿ ಸಾಧನೆ ಮಾಡಿದವರು ಬಹಳಷ್ಟು ಮಂದಿ ಇದ್ದಾರೆ. ಮೊದಲಿನಿಂದಲೂ ನಮ್ಮ ಸಮಾಜ ಸಾಧನೆ ಮಾಡುವುದರಲ್ಲಿ ಯಾವತ್ತೂ ಮುಂದಿತ್ತು. ಆದರೆ ಮಾಡಿದ ಸಾಧನೆಯನ್ನು ದಾಖಲಿಸುವಲ್ಲಿ, ಇತಿಹಾಸವನ್ನು ತಿಳಿದುಕೊಳ್ಳುವಲ್ಲಿ ಹಿಂದುಳಿದಿತ್ತು. ಇತಿಹಾಸವನ್ನು ತಿಳಿದುಕೊಂಡಂಥ ವ್ಯಕ್ತಿ ಮರು ಇತಿಹಾಸವನ್ನು ಸೃಷ್ಟಿ ಮಾಡಲು ಸಾಧ್ಯವಿದೆ ಎಂಬ ಅರಿವಿನ ಕೊರತೆ ಇದಕ್ಕೆಲ್ಲ ಪ್ರಮುಖ ಕಾರಣ. ಸಾಧಕರ ಜೀವನ ಸಾಧನೆಯನ್ನು ದಾಖಲಿಸುವವರ ಕೊರತೆ ಈಗ ಮಾತ್ರವಲ್ಲ ಹಿಂದೆಯೂ ಇತ್ತು. ಇತಿಹಾಸವನ್ನು ಸೃಷ್ಟಿಸುವವರನ್ನು ಹೊಂದಿದ್ದ ಸಮಾಜ ಇತಿಹಾಸವನ್ನು ರಚಿಸುವಂತಹವರ ಅಭಾವವನ್ನು ಇಂದಿಗೂ ಎದುರಿಸುತ್ತಿದೆ.

ಸಾಧಕರ ಜೀವನ ಸಾಧನೆಯನ್ನು ದಾಖಲಿಸುವವರ ಕೊರತೆಯಿಂದಾಗಿ ಹಲವು ಮಂದಿ ಸಾಧಕರ ಜೀವನ, ಸಾಧನೆ, ಅವರ ವ್ಯಕ್ತಿತ್ವದ ವಿವರಗಳು ಇತಿಹಾಸದಲ್ಲಿ ದಾಖಲಾಗದಿರುವುದು ಸಮಾಜಕ್ಕೆ ಬಹು ದೊಡ್ಡ ನಷ್ಟ. ಇನ್ನು ಮುಂದಾದರೂ ಹಾಗಾಗುವುದು ಬೇಡ. ಈ ನಾಡಿನಲ್ಲಿ ಬದುಕಿ ಸಾಧನೆಯ ಉತ್ತುಂಗ ಶಿಖರಕ್ಕೆ ಯಾರು ಯಾರು ಏರಿ ಹೋಗಿದ್ದಾರೋ ಅಂಥವರ ಸೇವೆ ಹಾಗೂ ಸಾಧನೆಗಳನ್ನು ಆಯಾ ಸಂದರ್ಭದಲ್ಲಿಯೇ ದಾಖಲಿಸುವಂತಾಗಬೇಕು ಎಂಬುದು ನಮ್ಮ ಪರಮಪೂಜ್ಯ ಸದ್ಗುರುಗಳಾದ ಪದ್ಮಭೂಷಣ

ಡಾ.ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಸಂಕಲ್ಪವಾಗಿತ್ತು. ಪರಮಪೂಜ್ಯ ಶ್ರೀ ಗುರೂಜಿರವರ ಸತ್ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನಮ್ಮ ಶ್ರೀಮಠವು 2017ರ ಜನವರಿಯಲ್ಲಿ ಯೋಜನೆಯೊಂದನ್ನು ರೂಪಿಸಿ 'ವಿಕಸನ' ಎಂಬ ಪ್ರಕಾಶನ ಗ್ರಂಥಮಾಲೆಯನ್ನು ಪ್ರಾರಂಭಿಸಿತು. ತನ್ಮೂಲಕ ವಿಜ್ಞಾನ, ಕಲೆ, ಸಂಸ್ಕೃತಿ, ನಡವಳಿಕೆ ಮುಂತಾದ ಕ್ಷೇತ್ರಗಳಲ್ಲಿ ಅಪರಿಮಿತ ಸಾಧನೆಯನ್ನು ಮಾಡಿರುವವರನ್ನು ಹಾಗೂ ಸಮಾಜದ ಸರ್ವಾಂಗೀಣ ಏಳಿಗೆಗಾಗಿ ದುಡಿದು ಅಜ್ಞಾತರಾಗಿರುವ ಸಾಧಕರನ್ನು ಕುರಿತಂತೆ ಕೃತಿಗಳನ್ನು ಪ್ರಕಾಶಿಸಲು ತೀರ್ಮಾನಿಸಿತು. ಈ ಮಾಲಿಕೆಗೆ ಹಿರಿಯ ಜಾನಪದ ತಜ್ಞರೂ, ಸಾಹಿತಿಗಳೂ ಆದ ಹ.ಕ.ರಾಜೇಗೌಡರ ನೇತೃತ್ವದಲ್ಲಿ ಸಂಪಾದಕ ಮಂಡಳಿಯನ್ನು ರಚಿಸಿ ಕಾರ್ಯೋನ್ಮುಖಗೊಳಿಸಲಾಯಿತು.

ತತ್ಫಲವಾಗಿ ಪ್ರಸ್ತುತ ಇಪ್ಪತ್ತೈದು ಮಂದಿ ಸಾಧಕರ ಜೀವನ ಪರಿಚಯ ಕೃತಿರೂಪದಲ್ಲಿ ಹೊರಬರಲು ಸಿದ್ಧಗೊಂಡಿರುವುದು ನಮಗೆ ಬಹಳ ಸಂತಸವನ್ನುಂಟು ಮಾಡಿದೆ. ಕೃತಿಗಳನ್ನು ರಚಿಸಿರುವ ಲೇಖಕರು ಕ್ಷೇತ್ರಕಾರ್ಯ ಮಾಡುವ ಮೂಲಕ ಅಜ್ಞಾತ ಸಾಧಕರ ವ್ಯಕ್ತಿತ್ವ ಮತ್ತು ಕಾರ್ಯಸಾಧನೆಗಳ ಅತ್ಯಮೂಲ್ಯ ಸಾರವನ್ನು ಸಂಗ್ರಹಿಸಿ, ಪ್ರತಿಯೊಬ್ಬರ ಚಿತ್ತಭಿತ್ತಿಯಲ್ಲಿ ನೆಲೆ ನಿಲ್ಲುವಂತೆ ಹೃದಯಂಗಮವಾಗಿ ನಿರೂಪಿಸಿರುವುದು ಶ್ಲಾಘನೀಯ. ಈ ಎಲ್ಲ ಇಪ್ಪತ್ತೈದು ಕೃತಿಗಳೂ ನಮ್ಮ ಪರಮಪೂಜ್ಯ ಶ್ರೀಗುರೂಜಿರವರ ಎಪ್ಪತ್ತೈದನೆಯ ವರ್ಧಂತ್ಯುತ್ಸವದ ಶುಭ ಸಂದರ್ಭದಲ್ಲಿ ಲೋಕಾರ್ಪಣೆಗೊಳ್ಳುತ್ತಿರುವುದು ಸಮಯೋಚಿತವಾಗಿದೆ. ಓದುಗರು ಈ ಕೃತಿಗಳಲ್ಲಿರುವ ಸಾಧಕರ ಸದ್ಗುಣಗಳನ್ನು ಗ್ರಹಿಸಲೆಂದು, ಆ ಸದ್ಗುಣಗಳ ಬೆಳಕು ಮುಂದಿನ ಪೀಳಿಗೆಯ ಬದುಕಿಗೆ ದಾರಿದೀಪವಾಗಲೆಂದು ಆಶಿಸುತ್ತಾ, 'ವಿಕಸನ' ಗ್ರಂಥಮಾಲೆಯ ಕಾರ್ಯಗಳು ಮತ್ತಷ್ಟು ವಿಸ್ತೃತವಾಗಿ ನೆರವೇರಲೆಂದು, ಭಗವಂತನು ಕೃತಿಯ ಸಂಪಾದಕರಿಗೆ, ಸಂಪಾದಕ ಮಂಡಳಿ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ಸಕಲ ಸನ್ಮಂಗಳವನ್ನುಂಟು ಮಾಡಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಇಂತು ಭಗವತ್ಸೇವೆಯಲ್ಲಿ



**ಡಾ. ನಿರ್ಮಲಾನಂದನಾಥ ಸ್ವಾಮೀಜಿ**

ಪೀಠಾಧ್ಯಕ್ಷರು

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ



ಎರಡನೆಯ ಪತ್ನಿ ನಂಜಮ್ಮಣ್ಣಿಯವರೊಂದಿಗೆ




ಸಹಧರ್ಮಿಣಿ ಶಾರದಮ್ಮಣ್ಣಿಯವರೊಂದಿಗೆ




ತಂದೆ ಅಂಕೇಗೌಡರು–ತಾಯಿ ನಿಂಗಮ್ಮನವರು



ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರೊಂದಿಗೆ



ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಮತ್ತು ವಿದ್ಯಾಮಂತ್ರಿ ವಿ.ವೆಂಕಟಪ್ಪನವರೊಂದಿಗೆ

# ಅಧ್ಯಕ್ಷರ ಮಾತು

ಕನ್ನಡ ನಾಡು ಬಹಳ ಪ್ರಾಚೀನ ಕಾಲದಿಂದಲೂ ಅಸ್ಥಿತ್ವದಲ್ಲಿದ್ದ ಬಗ್ಗೆ ದಾಖಲೆಗಳು ದೊರೆಯುತ್ತವೆ. ಈ ದೇಶದಲ್ಲಿ ಅನೇಕ ಜಾತಿ ಜನಾಂಗಗಳು ಕ್ರಮೇಣವಾಗಿ ಹುಟ್ಟಿಕೊಂಡಿವೆ. ಅವುಗಳಲ್ಲಿ ಒಕ್ಕಲಿಗರು ಈ ದೇಶದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇದ್ದವರು. ಇದು ಕೃಷಿ ಮೂಲ ಸಂಸ್ಕೃತಿಯ ಗ್ರಾಮಗಳಿಂದ ಕೂಡಿದ ದೇಶ. ಈಗಲೂ ನಗರಗಳಿಗಿಂತ ಹಳ್ಳಿಗಳೇ ಹೆಚ್ಚು. ಈ ಹಳ್ಳಿಗಳ ಪ್ರಧಾನ ವೃತ್ತಿ ವ್ಯವಸಾಯ. ಇದನ್ನು ತಮ್ಮ ಜೀವನದ ಅಂಗವಾಗಿ ಮಾಡಿಕೊಂಡವರು ಒಕ್ಕಲಿಗ ಜನಾಂಗದವರು. ಕ್ರಿಸ್ತಪೂರ್ವ ಮುನ್ನೂರರಲ್ಲಿ ಭಾರತಕ್ಕೆ ಬಂದು ಹೋದ ಮೆಗಾಸ್ತನೀಸ್ ತನ್ನ ಪ್ರವಾಸಕಥನದಲ್ಲಿ ಹೀಗೆ ಹೇಳಿಕೊಂಡಿದ್ದಾನೆ: "ಭಾರತದ ಜನರನ್ನು ಏಳು ಪಂಗಡಗಳಾಗಿ ವಿಭಜಿಸಲಾಗಿದೆ. ಇವು ವೃತ್ತಿಯ ಆಧಾರದ ಮೇಲೆ ರಚಿತವಾದವು. ಮೊದಲನೆಯ ಪಂಗಡ ವೇದಾಂತಿಗಳದ್ದು; ಎರಡನೆಯ ಪಂಗಡ ಒಕ್ಕಲಿಗರು ಅಥವಾ ಬೇಸಾಯಗಾರರು. ಈ ದೇಶದ ಜನಸಂಖ್ಯೆಯ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚಾಗಿದ್ದಾರೆ. ಇವರು ತಮ್ಮ ಹಳ್ಳಿಗಳಲ್ಲಿ ಇದ್ದುಕೊಂಡು ಹೆಂಡತಿ ಮಕ್ಕಳೊಂದಿಗೆ ಹಗಲಿರುಳು ಎನ್ನದೆ ಚಳಿಮಳೆ ಎನ್ನದೆ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಇವರನ್ನು ಅತ್ಯಂತ

ಪವಿತ್ರವಾದ ಜನಾಂಗವೆಂದು ಪರಿಗಣಿಸಲಾಗಿದೆ" ಎಂದು ಮೆಗಾಸ್ತನೀಸ್ ಏಳು ವೃತ್ತಿ ಪಂಗಡಗಳ ವಿವರಗಳನ್ನು ಕೊಟ್ಟಿದ್ದಾನೆ. ಆದ್ದರಿಂದ ಈ ದೇಶದ ಪ್ರಧಾನ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಇದ್ದವರು ಒಕ್ಕಲಿಗರು ಎಂಬುದು ಸಾಬೀತಾಗುತ್ತದೆ.

ಮೆಗಾಸ್ತನೀಸ್ ಈ ವೃತ್ತಿ ಪಂಗಡಗಳ ಬಗ್ಗೆ ಇದ್ದ ಸಾಮಾಜಿಕ ಸ್ಥಾನಮಾನಗಳು, ನಡಾವಳಿಗಳು ಇವುಗಳನ್ನೆಲ್ಲ ಪಟ್ಟಿ ಮಾಡಿದ್ದಾನೆ. "ಒಂದು ವೃತ್ತಿಯನ್ನು ಮಾಡುವವರು ಇನ್ನೊಂದು ವೃತ್ತಿಯನ್ನು ಮಾಡುವಂತಿಲ್ಲ. ಒಂದು ಪಂಗಡದವರು ಇನ್ನೊಂದು ಪಂಗಡದ ಹೆಣ್ಣನ್ನು ಮದುವೆಯಾಗುವಂತಿಲ್ಲ. ಈ ನಿಯಮಗಳನ್ನು ಗ್ರಾಮಮುಖಂಡ ಅಥವಾ ಗೌಡ ನೋಡಿಕೊಳ್ಳುತ್ತಾನೆ". ಇದರಿಂದ ಒಕ್ಕಲಿಗರು ಒಂದು ವೃತ್ತಿ ಪ್ರಧಾನವಾದ, ಕೃಷಿ ಪ್ರಧಾನವಾದ ಜನಾಂಗ ಎಂಬುದು ಖಚಿತವಾಗುತ್ತದೆ. ಇದರಿಂದಾಗಿ ಗ್ರಾಮಗಳಲ್ಲಿ ವಾಸ ಮಾಡುತ್ತಿದ್ದವರು ಒಕ್ಕಲಿಗರು. ಮುಂದೆ ಕ್ರಮೇಣವಾಗಿ ತಾಂತ್ರಿಕರು ಹುಟ್ಟಿಕೊಂಡರು. ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸವವರು, ಒಕ್ಕಲಿಗರ ಬಟ್ಟೆ ಬರೆಯನ್ನು ಶುಚಿ ಮಾಡುವವರು, ಕ್ಷೌರಿಕರು ಹೀಗೆ ಅನೇಕ ತಾಂತ್ರಿಕರು ಸೃಷ್ಟಿಯಾದರು. ಇವರಿಗೆ ವಾರ್ಷಿಕವಾಗಿ 'ಹಡದೆ' ಎಂಬ ಹೆಸರಿನಲ್ಲಿ ರೈತರು ಜೀವನಕ್ಕೆ ಬೇಕಾಗುವ ಎಲ್ಲಾ ವಸ್ತುಗಳನ್ನು ಕೊಡುತ್ತಿದ್ದರು. ಕ್ರಮೇಣವಾಗಿ ಈ ತಾಂತ್ರಿಕರ ಮಕ್ಕಳು ಮೊಮ್ಮಕ್ಕಳು ಇದೇ ವೃತ್ತಿಯನ್ನು ಅವಲಂಬಿಸಿ ಅಂತಹ ಜನಾಂಗಗಳು ಸೃಷ್ಟಿಯಾದವು. ಆದರೆ ವೃತ್ತಿಯ ನಿಯಮದಂತೆ ಅವರು ಬೇರೆ ವೃತ್ತಿಗಳನ್ನು ಮಾಡುವಂತಿರಲಿಲ್ಲ. ಒಕ್ಕಲಿಗರು ಕೊಡುವ ಹಡದೆ ವಿಸ್ತೃತವಾದ ಇಂತಹ ಕುಟುಂಬಗಳಿಗೆ ಸಾಲದಾಯಿತು. ಇದರಿಂದಾಗಿ ಅವರು ತಮ್ಮ ಜೀವನಕ್ಕಾಗಿ ಒಕ್ಕಲಿಗರ ಭೂಮಿಯಲ್ಲಿ ಪಾಲುದಾರರಾಗಿ ಕೆಲಸ ಮಾಡತೊಡಗಿದರು. ಮುಂದೆ ವೃತ್ತಿ ಪಂಗಡ ನಿಯಮಗಳು ಸಡಿಲವಾಗುತ್ತ ಹೋದವು. ಇದರಿಂದಾಗಿ ಬೇರೆಯವರು ವ್ಯವಸಾಯಕ್ಕಾಗಿ ಸ್ವಂತ ಭೂಮಿಯನ್ನು ಮಾಡಿಕೊಳ್ಳತೊಡಗಿದರು. ಈ ಹಿನ್ನೆಲೆಯಲ್ಲಿ ಇದರ ಜೊತೆಗೆ ಬೇರೆ ಬೇರೆ ಧಾರ್ಮಿಕ ಆಂದೋಲನಗಳು ಹುಟ್ಟಿಕೊಂಡವು. ಕ್ರಿಸ್ತಪೂರ್ವ ಮುನ್ನೂರರಿಂದ ಕ್ರಿಸ್ತಶಕ ಐದುನೂರರವರೆಗೆ ಈ ವೃತ್ತಿ ಆಧಾರಿತ ಪಂಗಡಗಳೇ ಪ್ರಧಾನವಾಗಿದ್ದು ಕಂಡುಬರುತ್ತದೆ.

ಕ್ರಿಸ್ತಶಕ ಐದನೇ ಶತಮಾನದಲ್ಲಿ ಭಾರತಕ್ಕೆ ಬಂದ ಫಾಹಿಯಾನ್ ಮತ್ತು ಹ್ಯೂಯನ್‌ತ್ಸಾಂಗ್ ಮೊಟ್ಟ ಮೊದಲಿಗೆ ಹೀಗೆ ಹೇಳಿದ್ದಾರೆ: ಭಾರತದ ಜನಾಂಗವನ್ನು ನಾಲ್ಕು ವರ್ಣ ಅಥವಾ ಜಾತಿಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಜಾತಿ ಬ್ರಾಹ್ಮಣರು, ಎರಡನೆಯವರು ಕ್ಷತ್ರಿಯರು, ಮೂರನೆಯವರು ವೈಶ್ಯರು, ನಾಲ್ಕನೆಯವರು ಶೂದ್ರರು. ಈ ನಾಲ್ಕು ವರ್ಣಗಳಲ್ಲದೆ ಪಂಚಮರು ಎಂಬ ಐದನೆಯ ಪಂಗಡವು ಒಂದಿದೆ. ಇದು

ಸ್ಪಷ್ಟವಾಗಿ ನಮ್ಮಲ್ಲಿ ಜಾತಿಪದ್ಧತಿ ಮತ್ತು ವರ್ಣಪದ್ಧತಿ ಹುಟ್ಟಿಕೊಂಡ ಕಾಲ. ಇದರ ಪ್ರಕಾರ ದೇಶದ ಬಹುಸಂಖ್ಯಾತ ಒಕ್ಕಲಿಗರನ್ನು ಎರಡನೆಯ ಸ್ಥಾನದಿಂದ ನಾಲ್ಕನೆಯ ಸ್ಥಾನಕ್ಕೆ ತಳ್ಳಲಾಯಿತು. ಹೀಗೆ ಒಕ್ಕಲಿಗರನ್ನು ಕನಿಷ್ಠ ಎಂದು ಪರಿಗಣಿಸಿದ್ದರಿಂದ ಅವರು ಹೊಸದಾಗಿ ಸೃಷ್ಟಿಯಾದ ಅನೇಕ ಜಾತಿಗಳಿಗೆ ಮತಾಂತರಗೊಂಡರು. ಇದರಿಂದ ಅವರ ಸಂಖ್ಯೆ ಕಡಿಮೆಯಾದರೂ ಇಂದಿಗೂ ಒಕ್ಕಲಿಗರೇ ಬೇರೆ ಬೇರೆ ಪಂಗಡ ಮತ್ತು ಹೆಸರುಗಳಲ್ಲಿ ಭಾರತದ ಅತ್ಯಂತ ದೊಡ್ಡ ಜನಾಂಗವಾಗಿದ್ದಾರೆ.

ಒಕ್ಕಲಿಗರು ಒಂದು ಜಾತಿಯೇ, ಜನಾಂಗವೇ, ವೃತ್ತಿ ಆಧಾರಿತ ಪಂಗಡವೇ ಎಂದೆಲ್ಲಾ ವಾದ ಮಂಡಿಸುವವರಿದ್ದಾರೆ. ಇನ್ನು ಕೆಲವರು ಒಕ್ಕಲುತನ ಮಾಡುವವರೆಲ್ಲ ಒಕ್ಕಲಿಗರೇ ಎಂದು ವಾದವನ್ನು ಮಂಡಿಸುತ್ತಾರೆ. ಈಗ ಸಾಮಾನ್ಯವಾಗಿ ಎಲ್ಲಾ ಜಾತಿಯವರು ಅಲ್ಪ–ಸ್ವಲ್ಪ ಜಮೀನುಗಳನ್ನು ಹೊಂದಿ ಒಕ್ಕಲುತನದಲ್ಲಿ ನಿರತರಾಗಿದ್ದಾರೆ. ಆದರೆ ಅವರ್‍ಯಾರು ತಮ್ಮನ್ನು ಒಕ್ಕಲಿಗರು ಎಂದು ಕರೆದುಕೊಳ್ಳುವುದಿಲ್ಲ. ಬ್ರಾಹ್ಮಣರು, ವೀರಶೈವರು ರೈತರಿಗೆ ಸಹಾಯ ಮಾಡುತ್ತಿದ್ದ ತಾಂತ್ರಿಕ ವರ್ಗದವರು, ದಲಿತರು ಇವರೆಲ್ಲಾ ಈಗ ಭೂಮಿಯನ್ನು ಹೊಂದಿ ಕೃಷಿ ನಿರತರಾಗಿದ್ದರೆ. ಆದರೆ ಇವರಲ್ಲಿ ಯಾರು ಕೂಡ ಒಕ್ಕಲಿಗರು ಎಂದು ತಮ್ಮನ್ನು ಕರೆದುಕೊಳ್ಳುವುದಿಲ್ಲ. ಕೃಷಿ ಒಂದು ಸಂಸ್ಕೃತಿಯಾಗಿ ರೂಪುಗೊಂಡದ್ದು ಒಕ್ಕಲಿಗರಿಂದ. ಅದು ವಿಸ್ತಾರವಾಗಿ ಬೆಳೆದದ್ದು ಕೂಡ ಒಕ್ಕಲಿಗರಿಂದಲೇ. ಈಗ ಯಾರು ಬೇಕಾದರು ಯಾವ ವೃತ್ತಿಯನ್ನು ಬೇಕಾದರು ಮಾಡಬಹುದು. ಆದರೆ ಮೂಲ ಜಾತಿ ಹಾಗೆಯೇ ಉಳಿದಿದೆ. ಹೇಗೆ ಕೃಷಿ ಮಾಡುವ ಬ್ರಾಹ್ಮಣರನ್ನು ಒಕ್ಕಲಿಗರು ಎಂದು ಕರೆಯಲಾಗುವುದಿಲ್ಲವೋ ಹಾಗೆಯೇ ವೇದವನ್ನು ಓದಿದ ಒಕ್ಕಲಿಗರನ್ನು ಬ್ರಾಹ್ಮಣರು ಎಂದು ಕರೆಯಲಾಗುವುದಿಲ್ಲ. ಇದು ಎಲ್ಲಾ ಜಾತಿಗಳಿಗೂ ಅನ್ವಯವಾಗುತ್ತದೆ. ಜಾತಿಗೂ ಜನಾಂಗಗಳಿಗೂ ವ್ಯತ್ಯಾಸವಿದೆ. ಪ್ರತಿಯೊಂದು ಜಾತಿಗೂ ಅದನ್ನು ಹುಟ್ಟುಹಾಕಿದ ಮೂಲಪುರುಷನೊಬ್ಬನಿರುತ್ತಾನೆ. ಅದು ಏಕದೈವನಿಷ್ಠೆಯನ್ನು ಹೊಂದಿರುತ್ತದೆ. ಇದರ ಜೊತೆಗೆ ಜಾತಿಯ ಲಾಂಛನ ಇರುತ್ತದೆ. ವೀರಶೈವರಿಗೆ ಬಸವಣ್ಣ, ವೀರವೈಷ್ಣವರಿಗೆ ರಾಮಾನುಜಾಚಾರ್ಯ, ಮಾಧ್ವರಿಗೆ ಮಧ್ವಾಚಾರ್ಯ, ಸ್ಮಾರ್ತರಿಗೆ ಶಂಕರಾಚಾರ್ಯ ಮೂಲ ಪುರುಷರು. ಕ್ರಮೇಣವಾಗಿ ವೀರಶೈವರಿಗೆ ಲಿಂಗ, ವೀರವೈಷ್ಣವರಿಗೆ ಮೂರು ನಾಮ, ಬ್ರಾಹ್ಮಣರಿಗೆ ಜನಿವಾರ ಇವು ಜಾತಿಯ ಲಾಂಛನಗಳು. ಈ ಎಲ್ಲಾ ಜಾತಿಗಳು ಏಕದೈವ ಆರಾಧಕರು. ಒಕ್ಕಲಿಗರಿಗೆ ಈ ರೀತಿಯ ಸಂಸ್ಥಾಪಕನಾಗಲಿ, ಲಾಂಛನವಾಗಲಿ ಇಲ್ಲ. ಆದ್ದರಿಂದಲೇ ಅವರು ಎಲ್ಲಾ ದೈವಶಕ್ತಿಗಳನ್ನು ಪೂಜಿಸುತ್ತಾರೆ; ಆರಾಧಿಸುತ್ತಾರೆ. ಜೈನರ ಗೊಮ್ಮಟೇಶ್ವರ, ಮುಸಲ್ಮಾನರ ಬಾಬಯ್ಯ, ಯೇಸುಕ್ರಿಸ್ತ ಹೀಗೆ ಎಲ್ಲಾ ಧರ್ಮದ

ದೇವರು ದಿಂಡರುಗಳಿಗೂ ಕೈ ಮುಗಿಯುತ್ತಾರೆ. ಪೂಜೆ ಸಲ್ಲಿಸುತ್ತಾರೆ. ದೈವ ಯಾವ ಜಾತಿಯವರದಾಗಲಿ ಅದನ್ನು ಗೌರವಿಸುವುದು ಒಕ್ಕಲಿಗರಿಗೆ ರಕ್ತಗತವಾಗಿ ಬಂದಿದೆ. ಆದ್ದರಿಂದಲೇ ವಿಶ್ವಮಾನವ ಸಂದೇಶವನ್ನು ಕೊಡುವಂತಹ ಮಹಾಪುರುಷ ಕುವೆಂಪು ಇಲ್ಲಿ ಹುಟ್ಟಿ ಜಗತ್ತನ್ನು ಆವರಿಸಿದ್ದು. ಹಾಗೆಯೇ ಈ ಜನಾಂಗದಿಂದ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಮಹತ್ತರವಾದ ಕೊಡುಗೆಯನ್ನು ನೀಡಿದ ಮಹನೀಯರು, ಮಹಿಳೆಯರು ಜನಿಸಿ ತಮ್ಮ ಆದರ್ಶವನ್ನು ಬಿಟ್ಟು ಹೋಗಿದ್ದಾರೆ.

ಒಕ್ಕಲಿಗ ಜನಾಂಗದಿಂದ ಅನೇಕ ರಾಜವಂಶಗಳು ಮೂಡಿಬಂದು ತಮ್ಮದೇ ಆದ ಸ್ಥಾನಮಾನಗಳನ್ನು ಗಳಿಸಿವೆ. ತಲಕಾಡಿನ ಗಂಗರು, ಹೊಯ್ಸಳಲಿನ ಹೊಯ್ಸಳರು, ರಾಷ್ಟ್ರಕೂಟರು ಒಕ್ಕಲಿಗ ಮೂಲದಿಂದ ಬಂದಿರುವುದು ಸಂಶೋಧನೆಗಳಿಂದ ಸ್ಪಷ್ಟವಾಗಿದೆ. ನೇಗಿಲನ್ನು ಲಾಂಛನವಾಗಿವುಳ್ಳ ಚಾಲುಕ್ಯರು ಕೂಡ ಒಕ್ಕಲಿಗ ಮೂಲದವರೆಂಬ ಬಗ್ಗೆ ಮಾಹಿತಿಗಳು ದೊರೆಯುತ್ತವೆ. ಒಕ್ಕಲಿಗ ಮೂಲದ ಪ್ರಾಚೀನ ಮಂತ್ರಿ, ಪ್ರಧಾನಿಗಳು ಸಿಗುತ್ತಾರೆ. ಒಕ್ಕಲಿಗ ಮೂಲದ ಕವಿಗಳು, ಕಲಾವಿದರು, ಶೂರರು, ಗ್ರಾಮಗಳನ್ನು ಅತ್ಯಂತ ಗೌರವದಿಂದ ಆಳಿದ ಗೌಡರುಗಳು ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಈ ದೇಶದ ಅಭಿವೃದ್ಧಿಗೆ ಕಾರಣರಾದವರು ಕಂಡುಬರುತ್ತಾರೆ. ಇದು ಈಗ ಕೂಡ ಮುಂದುವರಿದು ಕೊಂಡು ಬರುತ್ತಿದೆ. ಆಧುನಿಕ ಭಾರತಕ್ಕೆ ಪ್ರಧಾನಿಯೊಬ್ಬನನ್ನು ಕೊಟ್ಟ ಕೀರ್ತಿ ಕೂಡ ಒಕ್ಕಲಿಗೆ ಸಂದಿದೆ. ಇಂದು ಆಧುನಿಕ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಒಕ್ಕಲಿಗ ಸಾಧಕರು ಕಂಡು ಬರುತ್ತಾರೆ.

ಒಕ್ಕಲಿಗರು ಪ್ರಧಾನವಾಗಿ ಶೈವ ಆರಾಧಕರು. 'ಊರಿಗೊಂದು ಬೋರೆದೇವರ ಗುಡಿ' ಅಂದರೆ ಭೈರವ ದೇವರ ಗುಡಿ ಎಂಬುದು ಗಾದೆಯ ಮಾತಾಗಿದೆ. ಕನ್ನಡ ನಾಡಿನ ಏಕೈಕ ಶೈವ ಧಾರ್ಮಿಕ ಕ್ಷೇತ್ರ ಶ್ರೀ ಆದಿಚುಂಚನಗಿರಿ. ಒಕ್ಕಲಿಗರ ಚುಂಚನ ಭೈರವನಿಗೆ ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಅರಸರು, ಬೆಂಗಳೂರಿನ ಕೆಂಪೇಗೌಡ ಮುಂತಾದ ಅನೇಕ ಒಕ್ಕಲಿಗ ರಾಜರು ದತ್ತಿದಾನಗಳನ್ನು ಬಿಟ್ಟ ದಾಖಲೆಗಳು ದೊರೆಯುತ್ತವೆ ಶಾಸನಗಳು ದೊರೆಯುತ್ತವೆ. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಒಕ್ಕಲಿಗರದೇ ಆದರೂ ಅಲ್ಲಿ ಆರಾಧನೆಗೆ, ಅನ್ನದಾನಕ್ಕೆ ಯಾವುದೇ ಜಾತಿಮತದ ನಿರ್ಬಂಧನೆಗಳು ಇಲ್ಲ. ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಗ್ರಾಮಾಂತರ ಪ್ರದೇಶಗಳಲ್ಲಿ ನೂರಾರು ಶಾಲಾ ಕಾಲೇಜುಗಳನ್ನು ತೆರೆದು ಹಳ್ಳಿಯ ಮಕ್ಕಳಿಗೆ ಶಿಕ್ಷಣ ದೊರೆಯುವಂತೆ ಮಾಡಿದ್ದಾರೆ. ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ

ಮಠವನ್ನು ಭಾರತ ಮತ್ತು ಅದರಾಚೆಗೂ ತೆಗೆದುಕೊಂಡು ಹೋಗುತ್ತಿದ್ದಾರೆ. ಶ್ರೀ ಮಠದ ಬಹುಮುಖಿ ಕಾರ್ಯಗಳಲ್ಲಿ ಅತ್ಯಂತ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಈ ದೇಶದ ಏಳಿಗೆಗಾಗಿ ದುಡಿದ ಸಾಧಕರನ್ನು ಗುರುತಿಸಿ ಅವರ ಸಾಧನೆಗಳು ಮುಂದಿನ ಪೀಳಿಗೆಗೆ ದೊರೆಯುವಂತೆ ಮಾಡುವುದು ಒಂದು. ಈ ಹಿನ್ನೆಲೆಯಲ್ಲಿ ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರು ಸ್ಥಾಪಿಸಿ ಪೋಷಿಸುತ್ತಿರುವ 'ವಿಕಸನ'ದ ಮೂಲಕ ಇಂತಹ ಒಕ್ಕಲಿಗ ಸಾಧಕರ ಜೀವನ ಚರಿತ್ರೆಗಳನ್ನು ಬರೆಯಿಸಿ ಪ್ರಕಟಿಸುವ ಅತ್ಯಂತ ಸಾರ್ಥಕವಾದ ಯೋಜನೆಯನ್ನು ರೂಪಿಸಿದ್ದಾರೆ. 'ಒಕ್ಕಲಿಗ ಸಾಧಕರು' ಎಂಬ ಈ ಪುಸ್ತಕ ಮಾಲೆಯಲ್ಲಿ ಪ್ರಕಟಿಸಬಹುದಾದ ಐದುನೂರಕ್ಕೂ ಹೆಚ್ಚು ಸಾಧಕರನ್ನು ಗುರುತಿಸಲಾಗಿದೆ. ಸುಮಾರು ಇಪ್ಪತ್ತೈದು ಜನ ಒಕ್ಕಲಿಗ ಲೇಖಕರು, ಸಂಶೋಧಕರು ಈ ಕೆಲಸದಲ್ಲಿ ಯಾವುದೇ ಪ್ರತಿಫಲದ ಅಪೇಕ್ಷೆಯಿಲ್ಲದೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಜೀವನ ಚರಿತ್ರೆಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗುತ್ತವೆ, ಆದರ್ಶವಾಗುತ್ತವೆ ಎಂಬುದರಲ್ಲಿ ಅನುಮಾನವಿಲ್ಲ ಈ ಕಾರ್ಯದಲ್ಲಿ ನಮಗೆ ಬೆನ್ನೆಲುಬಾಗಿ ನಿಂತು ಆಶೀರ್ವದಿಸುತ್ತಿರುವ ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರಿಗೆ ನನ್ನ ಭಕ್ತಿಪೂರ್ವಕ ನಮಸ್ಕಾರಗಳು ಈ ಯೋಜನೆಯ ಹೆಚ್ಚು ಭಾರವನ್ನು ಹೊರುತ್ತಿರುವ ಡಾ. ಪದ್ಮಾಶೇಖರ್, ಡಾ. ಡಿ.ಕೆ. ರಾಜೇಂದ್ರ, ಡಾ. ಸೋಮಶೇಖರಗೌಡ, ಎಂ.ಜಿ. ಚಂದ್ರಶೇಖರಯ್ಯ, ಇವರಿಗೆ ನಾನು ಆಭಾರಿಯಾಗಿದ್ದೇನೆ. ಒಕ್ಕಲಿಗ ಸಾಧಕರ ಮಾಲೆಗೆ ಪುಸ್ತಕಗಳನ್ನು ಬರೆದುಕೊಡುತ್ತಿರುವ ಎಲ್ಲಾ ಲೇಖಕರಿಗೆ, 'ವಿಕಸನ' ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಜೀವನಚರಿತ್ರೆಗಳು ಒಕ್ಕಲಿಗರ ಇತಿಹಾಸ ಈ ನಾಡಿನ ಸರ್ವಕ್ಷೇತ್ರಗಳಿಗೂ ಒಕ್ಕಲಿಗರ ಕೊಡುಗೆ ಏನೆಂಬುದನ್ನು ರುಜುವಾತುಪಡಿಸುತ್ತವೆ ಎಂದು ನಂಬಿದ್ದೇನೆ.

**ಹನುಮನಹಳ್ಳಿ** **ಹ.ಕ.ರಾಜೇಗೌಡ**

# ಲೇಖಕರ ಮಾತು

ಟಿ.ಮಾದಯ್ಯಗೌಡರು ಅಪ್ಪಟ ಗಾಂಧೀವಾದಿಗಳು ಅವರು ಹಳೆಯ ಮೈಸೂರು ಭಾಗದ ಗಣ್ಯ ರಾಜಕೀಯ ನಾಯಕರಲ್ಲೊಬ್ಬರಾಗಿದ್ದರು. ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರ ಆಳ್ವಿಕೆಯ ಸ್ಥಿತಿಗತಿಗಳು ಮತ್ತು ಸ್ವಾತಂತ್ರ್ಯ ಹೋರಾಟದ ಬಗೆಗೆ ಸ್ವಂತ ಅನುಭವದಿಂದ ತಿಳಿದುಕೊಂಡವರಾಗಿದ್ದವರು. ಮಾದಯ್ಯಗೌಡರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಪಡೆದ ನಂತರ ಬಾಂಬೆ ಪ್ರೆಸಿಡೆನ್ಸಿಯ ಪುಣೆಯಲ್ಲಿ ಕಾನೂನು ವಿದ್ಯಾಭ್ಯಾಸ ಮಾಡಿದರು. ರಾಮನಗರದಲ್ಲಿ ವಕೀಲಿ ವೃತ್ತಿ ಕೈಗೊಂಡಿದ್ದ ಅವರು ಲಾಯರ್ ಮಾದಯ್ಯಗೌಡರು ಎಂದು ಹೆಸರುವಾಸಿಯಾಗಿದ್ದರು. ಗಾಂಧೀ ತತ್ವಗಳಿಗೆ ಮಾರು ಹೋಗಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜನಮನ್ನಣೆ ಗಳಿಸಿದರು. ಅವರೊಬ್ಬ ವಿನಯವಂತ, ಪ್ರಾಮಾಣಿಕ ಮತ್ತು ಜಾತ್ಯತೀತ ಮನೋಭಾವದ ಶ್ರೇಷ್ಠ ಸಮಾಜ ಸೇವಕ ಮತ್ತು ರಾಜಕೀಯ ಮುಖಂಡರೆನಿಸಿದ್ದರು.

ಮಹಾತ್ಮಾ ಗಾಂಧೀಜಿಯವರು ರಾಷ್ಟ್ರೀಯ ಕಾಂಗ್ರೇಸ್ಸಿನ ಮುಂದಾಳತ್ವ ವಹಿಸಿದ ಮೇಲೆ ಹಾಗೂ ಕಾಂಗ್ರೆಸ್ ಸಂಸ್ಥೆ ಜನಸಾಮಾನ್ಯರ ಸಂಸ್ಥೆಯಾಗಿ ಪರಿವರ್ತನೆಗೊಂಡ ಮೇಲೆ

ಅನೇಕ ಧುರೀಣರು ಪದೇ ಪದೇ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿ ಪ್ರಚಾರ ಪ್ರವಾಸ ಕೈಗೊಂಡುದರ ಪರಿಣಾಮವಾಗಿ ಜನಜಾಗೃತಿಯುಂಟಾಗಿ ಜನರಲ್ಲಿ ಅಪಾರವಾದ ದೇಶ ಪ್ರೇಮ ಮೈಗೂಡಿತು. ಡಾ.ನಾ.ಸು.ಹರ್ಡೀಕರ್‌ರಿಂದ ಸಂಘಟಿತವಾದ ಭಾರತೀಯ ಸೇವಾದಳ ಮೈಸೂರು ಸಂಸ್ಥಾನದ ವಿವಿಧ ಪ್ರದೇಶಗಳಲ್ಲಿ ಯುವಕರ ತರಬೇತಿಗಾಗಿ ಶಿಬಿರಗಳನ್ನು ನಡೆಸಿದ್ದರಿಂದ ಸ್ವಾತಂತ್ರ್ಯ ಹೋರಾಟಗಾರರ ತಂಡಗಳು ಅಸ್ತಿತ್ವಕ್ಕೆ ಬರಲಾರಂಭಿಸಿ, ನೂರಾರು ಸಂಖ್ಯೆಯಲ್ಲಿ ಜನರು ಸ್ವಾತಂತ್ರ್ಯ ಹೋರಾಟಗಾರರಾದರು. ಮೈಸೂರಿನ ಎಂ.ವೆಂಕಟಕೃಷ್ಣಯ್ಯನವರು, ಹೊಸಕೊಪ್ಪದ ಕೃಷ್ಣರಾಯರು, ತುಮಕೂರಿನ ರಂಗಯ್ಯಾಂಗಾರ್ಯರು ಸೇರಿಕೊಂಡು ಮೊದಲ ಬಾರಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಶಾಖೆಗಳನ್ನು ತಮ್ಮ ಜಿಲ್ಲೆಗಳಲ್ಲಿ ತೆರೆದರು. ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಸೆಟ್ಲೂರು ಅವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಿದ ನಂತರ ಅವರ ಅಧ್ಯಕ್ಷತೆಯಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಶಾಖೆ ಪ್ರಾರಂಭವಾಯಿತು. ಎಸ್.ಎಂ.ಎಸ್.ರಜ್ವಿ ಅದರ ಕಾರ್ಯದರ್ಶಿಗಳಾದರು. ಆ ಸಮಯದಲ್ಲಿ ಹುಟ್ಟಿಕೊಂಡ ಮತ್ತೊಬ್ಬ ಸಮರ್ಥ ಸ್ವಾತಂತ್ರ್ಯ ಹೋರಾಟಗಾರರು ತಗಡೂರು ರಾಮಚಂದ್ರರಾಯರು. ೧೯೨೪ರಲ್ಲಿ ಬೆಳಗಾವಿಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಮಹಾಧಿವೇಶನ ನಡೆಯಿತು. ಮೈಸೂರು ಸಂಸ್ಥಾನದಿಂದ ಸ್ವಯಂ ಸೇವಕರ ತಂಡ ಈ ಅಧಿವೇಶನದಲ್ಲಿ ಭಾಗವಹಿಸಿ ಸೇವಾಕಾರ್ಯದಲ್ಲಿ ತೊಡಗಿತು. ನಾಗಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಮೈಸೂರು ಸಂಸ್ಥಾನದಿಂದ ಹೋದ ಸ್ವಯಂ ಸೇವಕರು ಅದರಲ್ಲಿ ಭಾಗವಹಿಸಿ ಸೆರೆಮನೆ ಕಂಡರು. ೧೯೩೭ನೇ ಅಕ್ಟೋಬರ್ ೧೫ರಂದು ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ಮೈಸೂರಿನಲ್ಲಿ ನಡೆಯಿತು. ಅದರ ಹಿಂದಿನ ರಾತ್ರಿ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಕೆ.ಟಿ.ಭಾಷ್ಯಂ ಅವರನ್ನು ರಾಜ ದ್ರೋಹದ ಆಪಾದನೆಯ ಮೇಲೆ ಸರ್ಕಾರ ಬಂಧಿಸಿತು. ಅಧಿವೇಶನದ ದಿನ ಭಾಷ್ಯಂ ಅವರ ಸ್ಥಾನದಲ್ಲಿ ಎಚ್.ಕೆ.ವೀರಣ್ಣಗೌಡರನ್ನು ನಾಯಕರನ್ನಾಗಿ ಆಯ್ಕೆಮಾಡಿದರು.

ನೇತಾಜಿ ಸುಭಾಸ್ ಚಂದ್ರಬೋಸ್ ನೇತೃತ್ವದ ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟ ಮಾಡಲು ಸ್ವತಂತ್ರ ರಾಜಕೀಯ ಸಂಸ್ಥೆಗಳನ್ನು ರಚಿಸಿಕೊಳ್ಳಬಹುದೆಂಬ ನಿರ್ಣಯವಾಯಿತು. ಇದರೊಡನೆ ಮೈಸೂರು ಕಾಂಗ್ರೆಸ್ ಜನ್ಮ ತಾಳಿತು. ಮದ್ದೂರಿನಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಿವಪುರ ಅಧಿವೇಶನವು ಮೈಸೂರು ಸಂಸ್ಥಾನದ ಸರ್ಕಾರವು ಸೋಲನ್ನೊಪ್ಪುವಂತೆ ಮಾಡಿತು. ಶ್ರೀಮನ್ಮಹಾರಾಜರ ಸರ್ಕಾರಕ್ಕೂ

ಮೈಸೂರು ಕಾಂಗ್ರೇಸಿಗೂ ಒಪ್ಪಂದವಾಗಿ ರಾಷ್ಟ್ರಧ್ವಜವನ್ನು ಹಾರಿಸುವ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಲಾಂಛನವಾದ ಗಂಡಭೇರುಂಡ ಧ್ವಜವನ್ನು ಜೊತೆ ಜೊತೆಗೆ ಹಾರಿಸುವ ತೀರ್ಮಾನವಾಯಿತು. ವಿದುರಾಶ್ವಥದಲ್ಲಿ ಧ್ವಜಾರೋಹಣ, ಮೈಸೂರು ನಗರದಲ್ಲಿ ಹ್ಯಾಮಿಲ್ಟನ್ ಭವನ ಸತ್ಯಾಗ್ರಹ, ಕೋಲಾರ ಗಣಿ ಪ್ರದೇಶದಲ್ಲಿ ಕಾಂಗ್ರೇಸ್ ನಾಯಕರ ಪ್ರಚಾರ ಯಾತ್ರೆ, ಅರಣ್ಯ ಸತ್ಯಾಗ್ರಹ ಇವೆಲ್ಲಾ ಈ ಮಧ್ಯೆ ನಡೆದವು. ಸರ್ಕಾರವು ಹೋರಾಟಗಾರರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಇದರಿಂದ ಸರ್ಕಾರದ ಬಗೆಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಜಿಗುಪ್ಸೆಯುಂಟಾಯಿತು. ೧೯೪೦ರಲ್ಲಿ ಶಾಸನ ಸಭೆ ಚುನಾವಣೆಗಳು ನಡೆದವು. ಜನರ ಒಲವು ಸಂಪೂರ್ಣವಾಗಿ ಕಾಂಗ್ರೇಸಿನ ಕಡೆಗೆ ಇದ್ದಿತು. ೧೯೪೨ರ ಕ್ವಿಟ್ ಇಂಡಿಯಾ ಚಳುಚಳಿಯ ಫಲವಾಗಿ ಬ್ರಿಟಿಷರು ಇನ್ನು ಭಾರತವನ್ನು ಆಳಲು ಸಾಧ್ಯವಿಲ್ಲವೆಂದು ಮನಗಂಡರು. ಭಾರತಕ್ಕೆ ಸ್ವಾತಂತ್ರ್ಯ ಬಂದರೂ ರಾಜರುಗಳು ಆಳುತ್ತಿದ್ದ ಆಶ್ರಿತ ಸಂಸ್ಥಾನಗಳಲ್ಲಿ ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರು ಮೈಸೂರು ಚಲೋ ಹೋರಾಟ ಪ್ರಾರಂಭಿಸಿದರು. ಶ್ರೀಮನ್ಮಹಾರಾಜರ ಆಡಳಿತವು ಸಂಧಾನಕ್ಕೆ ಬಂದು ಜನತೆಯ ಪ್ರತಿನಿಧಿಗಳಾದ ಕೆ.ಸಿ.ರೆಡ್ಡಿಯವರಿಗೆ ಅಧಿಕಾರ ಹಸ್ತಾಂತರಿಸಿ ತಮ್ಮ ಸರ್ಕಾರವನ್ನು ವಿಸರ್ಜನೆಗೊಳಿಸಿತು. ಹೀಗೆ ಮೈಸೂರು ಕಾಂಗ್ರೇಸ್ ಅನೇಕ ಹೋರಾಟಗಳನ್ನು ನಡೆಸಿ ಪ್ರಜಾಸರ್ಕಾರ ರಾಜ್ಯದಲ್ಲಿ ಸ್ಥಾಪಿಸಲು ನೆರವಾಯಿತು. ಈ ಗೆಲುವಿನ ಹಿಂದೆ ಇಡೀ ಜನತೆಯ ಮತ್ತು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳಿವೆ. ಅಂತಹ ಅನೇಕ ತ್ಯಾಗಿಗಳಲ್ಲಿ ಮಾದಯ್ಯಗೌಡರೂ ಸೇರಿದ್ದಾರೆ.

ಗೌಡರು ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಕಾಂಗ್ರೇಸ್ ಕಾರ್ಯಕರ್ತರಾಗಿ, ಸ್ಕೌಟ್ ಸ್ವಯಂ ಸೇವಕರಾಗಿ, ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಪ್ರಾಮಾಣಿಕ ಜನಪ್ರತಿನಿಧಿಗಳಾಗಿ ಅಪಾರ ಸಮಾಜ ಸೇವೆ ಮಾಡಿದ್ದಾರೆ. ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಗಾಂಧೀಜಿಯವರ ಅಸಂಗ್ರಹ ನೀತಿಯನ್ನು ತಮ್ಮ ಜೀವನದಲ್ಲಿ ಪರಿಪಾಲಿಸಿದರು. ಪಿತ್ರಾರ್ಜಿತ ಆಸ್ತಿಯ ಹೊರತು ಅವರು ಏನನ್ನೂ ಕೂಡಿಡಲಿಲ್ಲ. ಜಮೀನಿನಲ್ಲಿ ದುಡಿದು, ಜನಪ್ರತಿನಿಧಿಗಳಿಗೆ ನೀಡುತ್ತಿದ್ದ ಮಾಸಾಶನ ಬಳಸಿಕೊಂಡು ಕುಟುಂಬ ನಡೆಸಿದರು. ತಮ್ಮ ಜೀವನದ ಬಹುಭಾಗವನ್ನು ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ, ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಸೌಹಾರ್ದತೆ, ಬಡಜನರ ಏಳಿಗೆ, ಗ್ರಾಮೀಣ ಜನರ ಭವಿಷ್ಯದ ಬಗೆಗೆ ಚಿಂತಿಸುವುದರಲ್ಲಿ ಬಹು

ಸಾರ್ಥಕ ರೀತಿಯಲ್ಲಿ ಜೀವನ ಕಳೆದರು. ಶ್ರೀರಾಮಕೃಷ್ಣ ಆಶ್ರಮ, ಥಿಯೋಸಫಿಕಲ್ ಸೊಸೈಟಿ, ಗೋಖಲೆ ಸಾರ್ವಜನಿಕ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಆದಿಚುಂಚನಗಿರಿ ಮಹಾ ಸಂಸ್ಥಾನ, ಒಕ್ಕಲಿಗರ ಸಂಘ ಮುಂತಾದ ಸಂಘ ಸಂಸ್ಥೆಗಳೊಡನೆ ನಿಕಟ ಸಂಪರ್ಕ ಹೊಂದಿದ್ದರು.

ಶ್ರೀಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀಶ್ರೀಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಮಹಾಪೋಷಕತ್ವದಲ್ಲಿ ಸ್ಥಾಪನೆಗೊಂಡಿರುವ 'ವಿಕಸನ' ಪ್ರಕಟಣಾ ಸಂಸ್ಥೆಯು ಸ್ವಾತಂತ್ರ್ಯ ಹೋರಾಟಗಾರ ಮಾದಯ್ಯಗೌಡರನ್ನು ಕುರಿತ ಈ ಕೃತಿಯನ್ನು ತನ್ನ ಕರ್ತವ್ಯವೆಂದು ಬಗೆದು ಬಹಳ ಅಭಿಮಾನದಿಂದ ಪ್ರಕಟಿಸುತ್ತಿದೆ. ಗೌಡರ ಬಗೆಗಿನ ಈ ಕೃತಿಯನ್ನು ಬರೆಯಲು ಅವಕಾಶ ಮಾಡಿಕೊಟ್ಟ ಶ್ರೀಆದಿಚುಂಚನಗಿರಿ ಮಹಾಸಂಸ್ಥಾನದ ಮಠದ ಪೀಠಾಧ್ಯಕ್ಷರೂ ಹಾಗೂ ವಿಕಸನದ ಮಹಾಪೋಷಕರಾದ ಶ್ರೀಶ್ರೀಶ್ರೀಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ಹಾಗೂ ವಿಕಸನದ ಅಧ್ಯಕ್ಷರಾದ ಹ.ಕ.ರಾಜೇಗೌಡ, ಉಪಾಧ್ಯಕ್ಷರಾದ ಡಾ.ಪದ್ಮಾಶೇಖರ್, ಪ್ರಧಾನ ಕಾರ್ಯದರ್ಶಿಗಳಾದ ಡಾ.ಡಿ.ಕೆ.ರಾಜೇಂದ್ರ, ಕಾರ್ಯದರ್ಶಿಗಳಾದ ಡಾ.ಸೋಮಶೇಖರಗೌಡ, ಪ್ರೊ.ಎಂ.ಜಿ.ಚಂದ್ರಶೇಖರಯ್ಯ ಮತ್ತು ಮಾನ್ಯ ಸದಸ್ಯರುಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಕೃತಿಯನ್ನು ರಚಿಸುವಲ್ಲಿ ಮಾದಯ್ಯಗೌಡರ ಸುಪುತ್ರಿ ಡಾ.ಸರಸ್ವತಿ ರಾಜೇಂದ್ರ, ಅಳಿಯ ಪ್ರೊ.ಡಿ.ಕೆ.ರಾಜೇಂದ್ರ, ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕರಾದ ಕೆ.ಟಿ.ವೀರಪ್ಪ, ನನ್ನ ಧರ್ಮಪತ್ನಿ ಡಾ.ಎಚ್.ಟಿ.ಶೈಲಜ, ಪ್ರೊ.ಬಿ.ಆರ್.ಪ್ರಾಣೇಶ್‌ರಾವ್‌ಅವರ ಸುಪುತ್ರಿ ಡಾ.ಬಿ.ಪಿ.ಇಂದಿರಾ, ನನ್ನ ಸಂಶೋಧನಾ ವಿದ್ಯಾರ್ಥಿ ಮದ್ದೂರಿನ ಲೋಕೇಶ ನೆರವಾಗಿದ್ದಾನೆ. ಸಂಶೋಧನಾ ಅಧ್ಯಯನದಲ್ಲಿ ಬಹಳವಾಗಿ ಒತ್ತಡದಲ್ಲಿದ್ದರೂ ನನ್ನ ಇನ್ನೊಬ್ಬ ಸಂಶೋಧನಾ ವಿದ್ಯಾರ್ಥಿ ಶ್ರೀಡಿ.ಸಿದ್ದಪ್ಪಾಜಿ ಬಿಡುವು ಮಾಡಿಕೊಂಡು ಈ ಕೃತಿಯನ್ನು ಬಹಳ ಸಮಾಧಾನದಿಂದ ಡಿಟಿಪಿ ಮಾಡಿಕೊಟ್ಟಿದ್ದಾನೆ. ಇವರೆಲ್ಲರಿಗೂ ನನ್ನ ವಂದನೆಗಳು ಸಲ್ಲುತ್ತವೆ.

**ಎಂ.ಜಿ.ಬಸವರಾಜ**

# ಪರಿವಿಡಿ

**ಆಶೀರ್ವಾದ ನುಡಿ** / vii

**ಅಧ್ಯಕ್ಷರ ಮಾತು** / xiii

**ಲೇಖಕರ ಮಾತು** / xix

1. ಟಿ. ಮಾದಯ್ಯಗೌಡರು: ಪರಿಚಯ / 1
2. ಟಿ. ಮಾದಯ್ಯಗೌಡರ ಕೌಟುಂಬಿಕ ಹಿನ್ನೆಲೆ / 6
3. ಬಾಲ್ಯ ಮತ್ತು ವಿದ್ಯಾಭ್ಯಾಸ / 8
4. ಸ್ಕೌಟ್ ಚಳುವಳಿಯಲ್ಲಿ ಮಾದಯ್ಯಗೌಡರು / 29
5. ಬಾಂಬೆ ಪ್ರೆಸಿಡೆನ್ಸಿಯ ಪುಣೆಯಲ್ಲಿ ಕಾನೂನು ಪದವಿಯ / 35
6. ಸ್ವಾತಂತ್ರ್ಯ ಹೋರಾಟಗಾರ ಮಾದಯ್ಯಗೌಡರು / 44
7. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಮಾದಯ್ಯಗೌಡರು / 60
8. ಮಾದಯ್ಯಗೌಡರ ವಕೀಲಿ ವೃತ್ತಿ ಮತ್ತು ಸಾಂಸಾರಿಕ ಬದುಕು / 77
9. ಗೌಡರ ನಡೆ ನುಡಿ ಮತ್ತು ಆದರ್ಶ / 98
10. ಅನುಬಂಧ – 1 / 130
11. ಅನುಬಂಧ – 2 / 137

# ೧. ಟಿ.ಮಾದಯ್ಯಗೌಡರು: ಪರಿಚಯ

ಟಿ.ಮಾದಯ್ಯಗೌಡರು ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರದವರು. ಅವರು ಅಪ್ಪಟ ಗಾಂಧೀವಾದಿಗಳು. ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ; ರಾಜ್ಯದ ಮೊದಲ ತಲೆಮಾರಿನ ಕಾಂಗ್ರೆಸ್ ಮುಖಂಡರಲ್ಲೊಬ್ಬರಾಗಿದ್ದರು. ಅವರು ಗಾಂಧೀವಾದಿಯಾಗಿರುವುದರ ಜೊತೆಗೆ ಸಾಹಿತ್ಯಾಭಿಮಾನಿ ಮತ್ತು ಕಲಾಭಿಮಾನಿಯೂ ಆಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿನ ಅವರ ಸಕ್ರಿಯವಾದ ಪಾಲ್ಗೊಳ್ಳುವಿಕೆ ಜನರ ಮೆಚ್ಚುಗೆಗೆ ಪಾತ್ರವಾಗಿತ್ತು. ೧೯೨೦ರ ದಶಕದ ಆರಂಭದಲ್ಲಿಯೇ ಮಹಾತ್ಮಾ ಗಾಂಧೀಜಿಯವರ ವಿಚಾರಧಾರೆಯಿಂದ ಪ್ರಭಾವಿತರಾದರು. ಗಾಂಧೀಜಿಯವರ ನೇತೃತ್ವದ ಕಾಂಗ್ರೆಸ್ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ದೇಶಬಾಂಧವರನ್ನು ಹೋರಾಟ, ತ್ಯಾಗ ಮತ್ತು ಬಲಿದಾನಕ್ಕಾಗಿ ಸಿದ್ಧವಾಗುವುದನ್ನು ಕಲಿಸಿಕೊಡುತ್ತಿತ್ತು. ದೇಶಪ್ರೇಮ ದೇಶಬಾಂಧವರ ಒಳಿತು ಮತ್ತು ಯೋಗಕ್ಷೇಮಕ್ಕಾಗಿ ಕಾಂಗ್ರೆಸ್‌ಗೆ ಇದ್ದ ಬದ್ಧತೆ, ಕಳಕಳಿ ಮತ್ತು ಸುಸಂಸ್ಕೃತಿಯನ್ನು ಗೌಡರು ಬಹಳವಾಗಿ ಮೆಚ್ಚಿಕೊಂಡರು. ಐಶ್ವರ್ಯಸಂಪಾದನೆ ಮತ್ತು ಆಸ್ತಿ-ಪಾಸ್ತಿಗಳನ್ನು ಮಾಡುವುದರ ಬಗೆಗೆ ಗಮನ ನೀಡದೆ ಸಾಕಷ್ಟು ವರಮಾನ ತರುತ್ತಿದ್ದ ಲಾಭದಾಯಕ ವಕೀಲ ವೃತ್ತಿಯನ್ನು ನಿಧಾನಗೊಳಿಸಿ

ಗಾಂಧೀಜಿಯವರ ಕರೆಯ ಮೇರೆಗೆ ತಮ್ಮ ತಾರುಣ್ಯದಲ್ಲಿಯೇ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಸ್ವಾತಂತ್ರ್ಯ ಚಳುವಳಿಗೆ ಹಿಂದೆ ಮುಂದೆ ನೋಡದೆ ಧುಮುಕಿದರು. ಆನಂತರ ಗೌಡರು ಅನುಭವಿಸಿದ ಕಷ್ಟ ಕೋಟಲೆಗಳಿಗೆ ಲೆಕ್ಕವೇ ಇಲ್ಲ. ಅವರು ಕಾಂಗ್ರೆಸ್‌ನ ಮೈಸೂರು ರಾಜ್ಯ ಘಟಕಕ್ಕಾಗಿ ಹಾಗೂ ಬೆಂಗಳೂರು ಗ್ರಾಮಾಂತರ ಘಟಕಕ್ಕಾಗಿ ಕೆಲಸ ಮಾಡಿದರು. ಕರ್ನಾಟಕದ ಕರನಿರಾಕರಣೆ ಮತ್ತು ನಾಗರೀಕ ಅಸಹಕಾರ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಗಾಂಧೀಜಿಯವರು ಕರ್ನಾಟಕಕ್ಕೆ ಬಂದಾಗ ಅವರ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು. ಬೆಳಗಾವಿಯ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ವಿದ್ಯಾರ್ಥಿ ಅಧಿವೇಶನದಲ್ಲಿ ಭಾಗವಹಿಸಿದ್ದರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ ಮುಖಂಡರ ಜೊತೆಗೂಡಿದ್ದರು. ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಎಚ್.ಸಿ.ದಾಸಪ್ಪ, ಎಸ್.ನಿಜಲಿಂಗಪ್ಪ, ಕಡಿದಾಳ್ ಮಂಜಪ್ಪ, ವಿ.ವೆಂಕಟಪ್ಪ, ಎಚ್.ಕೆ.ವೀರಣ್ಣಗೌಡ, ಎಚ್.ಸಿದ್ದಯ್ಯ, ಟಿ.ಸಿದ್ಧಲಿಂಗಯ್ಯ, ಸಾಹುಕಾರ್ ಚನ್ನಯ್ಯ, ನಿಟ್ಟೂರು ಶ್ರೀನಿವಾಸರಾವ್, ಕೆ.ಟಿ.ಭಾಷ್ಯಂ, ತಿ.ತಾ.ಶರ್ಮ, ಸಿದ್ಧವನಹಳ್ಳಿ ಕೃಷ್ಣಶರ್ಮ, ಕೆ.ಸಂಪಂಗಿ ರಾವ್, ವೀರಕೇಸರಿ ಸೀತಾರಾಮ ಶಾಸ್ತ್ರಿ, ಎಂ.ಎನ್.ಜೋಯಿಸ್, ಅಗರಂ ರಂಗಯ್ಯ ಮುಂತಾದ ರಾಜ್ಯದ ಅಗ್ರಪಂಕ್ತಿಯ ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಬರುವ ಪ್ರಥಮ ಪಂಕ್ತಿಯ ಸ್ವಾತಂತ್ರ್ಯ ಹೋರಾಟಗಾರರು ಮಾದಯ್ಯಗೌಡರು.

ಮಹಾತ್ಮಾ ಗಾಂಧೀ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಅವರಿಗೆ ನಂಬಿಕೆಯಿತ್ತು. ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ಗ್ರಾಮೀಣಾಭಿವೃದ್ಧಿಗೆ ಇವರು ನೀಡುತ್ತಾ ಬಂದ ಕೊಡುಗೆ ಸದಾ ಸ್ಮರಣೀಯವಾದುದಾಗಿದೆ. ರಾಜ್ಯದ ಪ್ರಥಮ ಹಂತದ ಬಹು ದೊಡ್ಡ ನಾಯಕರಲ್ಲೊಬ್ಬರಾಗಿ, ಸಾತ್ವಿಕ ಸಂಸದೀಯ ಪಟುವಾಗಿ, ರಾಜ್ಯ ರಾಜಕಾರಣದಲ್ಲಿ ತಮ್ಮದೇ ಆದ ಗುರುತು ಮೂಡಿಸಿ ರಾಜ್ಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ತರಲು ಎಲೆಯ ಮರೆಯ ಕಾಯಿಯಂತೆ ಮಹತ್ವಪೂರ್ಣ ಪಾತ್ರವಹಿಸಿದರು. ಅವರು ಎಂದೂ ಪ್ರಚಾರ ಪ್ರಿಯರಾಗಿರಲಿಲ್ಲ, ಅಧಿಕಾರಕ್ಕಾಗಿ ಹಂಬಲಿಸಲಿಲ್ಲ, ಅವರು ಶ್ರಮಜೀವಿಯಾಗಿದ್ದರೂ ಐಶ್ವರ್ಯದ ಬೆನ್ನತ್ತಿ ಹೋಗಲಿಲ್ಲ. ಸರಳ ಸಾತ್ವಿಕ ಸ್ವಭಾವದ ಅವರು ಸಮಾಜದ ಎಲ್ಲಾ ವರ್ಗಗಳ ಯೋಗಕ್ಷೇಮದ ಬಗೆಗೆ ತಮ್ಮ ಕೈಲಾದ ಸೇವೆ ಸಲ್ಲಿಸುತ್ತಾ ಬಂದ ಅವರು ಮಾನವತಾವಾದಿಯಾಗಿದ್ದರು. ಅವರು ಜನರ ಬಗೆಗೆ ಇಟ್ಟುಕೊಂಡಿದ್ದ ಗೌರವ ಎದ್ದು

ಕಾಣುತ್ತಿತ್ತು. ೧೯೨೨ರಲ್ಲಿ ಗೌಡರು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದರು. ಡಿವಿಜಿಯವರ ಬಗೆಗೆ ಅವರಿಗೆ ಅಪಾರ ಗೌರವ ಮತ್ತು ಅಭಿಮಾನ. ಡಿವಿಜಿ ಅವರಿಂದ ಪ್ರಭಾವಿತರಾಗಿ ಅವರು ಸ್ಥಾಪಿಸಿದ ಸಾಮಾಜಿಕ ಸಂಸ್ಥೆಯಾದ ಗೋಖಲೆ ಇನ್ಸಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ಜೊತೆಗೆ ಸಂಪರ್ಕವಿಟ್ಟುಕೊಂಡಿದ್ದರು. ಅಲ್ಲಿ ಇವರು ನಿಟ್ಟೂರು ಶ್ರೀನಿವಾಸರಾವ್‌ರವರ ನಿಕಟ ಸಂಪರ್ಕಕ್ಕೆ ಬಂದರು.

ರಾಜ್ಯದ ಗ್ರಾಮೀಣ ಜನರ, ರೈತರ ಸರ್ವತೋಮುಖ ಯೋಗಕ್ಷೇಮದ ಬಗೆಗೆ ಅಪಾರ ಬದ್ಧತೆ ಹೊಂದಿದ್ದರು. ರೈತರ ಬದುಕು ಹಸನಾಗದೆ ಗ್ರಾಮೀಣ ಜನಜೀವನದ ಬದುಕು ಹಸನಾಗದು, ಗ್ರಾಮೀಣ ಜನಜೀವನದ ಬದುಕು ಹಸನಾಗದೇ ರಾಜ್ಯ ಅಭಿವೃದ್ಧಿಯಾಗದು ಎಂಬುದು ಗೌಡರ ದೃಢ ನಂಬಿಕೆಯಾಗಿತ್ತು. ರಾಜಕೀಯ ನಾಯಕರಾಗಿದ್ದ ಅವರಿಗೆ ನೀರಾವರಿ, ವ್ಯವಸಾಯ ಮತ್ತು ಪಶುಸಂಗೋಪನೆ ಅತ್ಯಂತ ಪ್ರಿಯವಾದ ಕ್ಷೇತ್ರಗಳಾಗಿದ್ದವು. ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಕೈಗಾರಿಕೆಗಳು ಬಹಳ ಮುಖ್ಯವೆನ್ನುತ್ತಿದ್ದರು.

ಗೌಡರ ಪೂರ್ಣ ಹೆಸರು ತಿಮ್ಮಸಂದ್ರದ ಮಾದಯ್ಯಗೌಡರು. ಅವರು ಹುಟ್ಟಿದ್ದು ೧೮೯೬ರ ಮಾರ್ಚ್ ೧೭ ರಂದು. ಆಗಿನ ಬೆಂಗಳೂರು ಜಿಲ್ಲೆಗೆ ಸೇರಿದ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬರುವ ಭೈರಾಪಟ್ಟಣದ ಹತ್ತಿರವಿರುವ ಸಂಕಲಗೆರೆಯಲ್ಲಿ. ಸಂಕಲಗೆರೆ ಮಾದಯ್ಯಗೌಡರ ತಾಯಿಯ ತವರೂರು. ಇದು ಚನ್ನಪಟ್ಟಣ ತಾಲ್ಲೂಕಿನಲ್ಲಿ ಬರುವ ಒಂದು ಪುಟ್ಟ ಸುಂದರ ಗ್ರಾಮ; ಈಗ ರಾಮನಗರ ಜಿಲ್ಲೆಗೆ ಸೇರಿದೆ. ತಂದೆ ಎಸ್.ಅಂಕೇಗೌಡರು. ಅವರು ಏಳೂರುಗಳ ಪಟೇಲರಾಗಿ ಕುದುರೆಯ ಮೇಲೆ ಸಂಚರಿಸುತ್ತಿದ್ದರು. ಸಾಕಷ್ಟು ಜಮೀನು ಹೊಂದಿದ್ದರು, ಶ್ರಮಜೀವಿಗಳೂ, ದೈವಭಕ್ತರೂ ಮತ್ತು ಪರೋಪಕಾರಿಗಳೆನಿಸಿದ್ದರು. ತಾಯಿ ಶ್ರೀಮತಿ ಲಿಂಗಮ್ಮನವರು; ಅವರು ಶತಾಯುಷಿಗಳಾಗಿದ್ದರು. ಲಿಂಗಮ್ಮನವರು ಕೂಡ ದೈವಭಕ್ತೆ, ಮತ್ತು ಪತಿಯಂತೆ ಶ್ರಮಜೀವಿಗಳು, ಮಕ್ಕಳನ್ನು ಚನ್ನಾಗಿ ಲಾಲನೆ ಪಾಲನೆ ಮಾಡುತ್ತಿದ್ದರು. ಅಂಕೇಗೌಡ-ಲಿಂಗಮ್ಮ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಹಿರಿಯ ಮಗ ಸಿದ್ದೇಗೌಡರು; ಇವರನ್ನು ಅಪ್ಪಾಜಿಗೌಡರೆಂದೂ ಕರೆಯುತ್ತಿದ್ದರು. ಇವರ ನಂತರ ಅಕ್ಕ ಗೌರಮ್ಮನವರು; ಅವರ ಹಿಂದೆ ಕೆಂಪಮ್ಮ ಮತ್ತು ನಾಲ್ಕನೆಯವರೇ ಮಾದಯ್ಯಗೌಡರು.

ಗೌಡರು ತಿಮ್ಮಸಂದ್ರದಲ್ಲಿ ಅಂದಿನ ರೀತಿಯಲ್ಲಿದ್ದ ಅಕ್ಷರಾಭ್ಯಾಸ ಮತ್ತು ಪ್ರಾಥಮಿಕ ಶಿಕ್ಷಣ ಪಡೆದರು. ನಂತರ ಚನ್ನಪಟ್ಟಣದಲ್ಲಿ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದರು. ಮೈಸೂರು ಸಂಸ್ಥಾನದ ಸಹಕಾರ ಇಲಾಖೆಯಲ್ಲಿ ಬಹಳ ದೊಡ್ಡ ಹುದ್ದೆ ಹೊಂದಿದ್ದ ಕೆ.ಎಚ್.ರಾಮಯ್ಯನವರ ಪ್ರೋತ್ಸಾಹದೊಡನೆ ಬೆಂಗಳೂರಿನಲ್ಲಿ

ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಶಿಕ್ಷಣ ಪಡೆದು, ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ., ಪದವಿಯನ್ನು ಪಡೆದರು. ಬಾಂಬೆ ಪ್ರೆಸಿಡೆನ್ಸಿಯ ಪುಣೆ ನಗರದ ಇಂಡಿಯನ್ ಲಾ ಸೊಸೈಟಿ ಕಾನೂನು ಕಾಲೇಜಿನಲ್ಲಿ ಎಲ್.ಎಲ್.ಬಿ ಪದವಿಯನ್ನು ಪೂರ್ಣಗೊಳಿಸಿದ ನಂತರ ಊರಿಗೆ ಹಿಂದಿರುಗಿದರು. ರಾಮನಗರ ಟೌನಿನಲ್ಲಿ ವಕೀಲಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು.

ಶ್ರೀಕೆ.ಎಚ್.ರಾಮಯ್ಯನವರು ಗೌಡರ ಧರ್ಮಪಿತೃವಾಗಿದ್ದರು(ಗಾಡ್‌ಫಾದರ್). ರಾಜಕೀಯ ಕ್ಷೇತ್ರದಲ್ಲಿ ಸಾಹುಕಾರ್ ಚನ್ನಯ್ಯನವರು ರಾಜಕೀಯ ಗುರುವಾಗಿದ್ದರು(ಪೊಲಿಟಿಕಲ್ ಮೆಂಟರ್). ಉನ್ನತ ಶಿಕ್ಷಣ ಪಡೆದು ವಕೀಲ ವೃತ್ತಿಯಲ್ಲಿದ್ದ ಗೌಡರಿಗೆ ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್ ಸದಸ್ಯರಾಗಿ ಕೆಲಸ ಮಾಡುವ ಗೌರವ ದೊರಕಿತು. ಸೆಕೆಂಡರಿ ಎಜುಕೇಶನ್ ಬೋರ್ಡ್, ಸ್ಕೂಲ್ ಬೋರ್ಡ್ ಆಫ್ ಅಡಲ್ಟ್ ಎಜುಕೇಶನ್ ಕೌನ್ಸಿಲ್, ಗ್ರಾಮೀಣಾಭಿವೃದ್ಧಿ ಸಮಿತಿಗಳ ಸದಸ್ಯರನ್ನಾಗಿ ಸರ್ಕಾರವು ಇವರನ್ನು ನೇಮಿಸಿತ್ತು. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿ, ಶಾಸನ ಪರಿಷತ್ತಿನ ಸದಸ್ಯರಾಗಿ, ಮೈಸೂರು ಸಂಸ್ಥಾನದ ರಾಜ್ಯಾಂಗ ಸಭೆ ಸದಸ್ಯರಾಗಿ, ಬೆಂಗಳೂರು(ದಕ್ಷಿಣ) ಕ್ಷೇತ್ರದ ಲೋಕಸಭಾ ಸದಸ್ಯರಾಗಿ, ರಾಮನಗರ ಕ್ಷೇತ್ರದ ವಿಧಾನ ಸಭಾ ಸದಸ್ಯರಾಗಿ ಸೇವೆ ಸಲ್ಲಿಸುವ ಅವಕಾಶಗಳು ಇವರಿಗೆ ದೊರೆತವು. ಈ ಮೊದಲು ರಾಮನಗರದ ಮುನಿಸಿಪಲ್ ಕೌನ್ಸಿಲ್ ಸದಸ್ಯರಾಗಿ, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್, ಬೆಂಗಳೂರು ಲೋಕಲ್ ಎಜುಕೇಶನ್ ಬೋರ್ಡ್ ಸದಸ್ಯರಾಗಿ ಸೇವೆ ಸಲ್ಲಿಸಿದರು. ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಯ ಪೂರ್ಣಾವಧಿ ಅಧ್ಯಕ್ಷರಾಗಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸ್ಕೌಟ್ ಕಮೀಷನರ್ ಆಗಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಗ್ರಾಮೀಣಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದರು. ಪ್ರಾರಂಭದಲ್ಲಿಯೇ ತಾಲ್ಲೂಕು ಮತ್ತು ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ಶಿಕ್ಷಣ, ಸ್ಕೌಟಿಂಗ್, ನಾಟಕ ಮತ್ತು ಜನಪದ ಕಲೆಗಳು, ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಅವರ ಆಸಕ್ತಿದಾಯಕ ಕ್ಷೇತ್ರಗಳಾಗಿದ್ದವು. ಸರ್.ಎಂ.ವಿಶ್ವೇಶ್ವರಯ್ಯನವರು ೧೯೪೯ರಲ್ಲಿ ಗ್ರಾಮೀಣ ಕೈಗಾರಿಕೀಕರಣ ಯೋಜನೆಯನ್ನು ಅಭಿವೃದ್ಧಿಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದರು. ಕೆ.ಸಿ.ರೆಡ್ಡಿಯವರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾದಾಗ ಈ ಯೋಜನೆಯನ್ನು ಮೈಸೂರು ರಾಜ್ಯದಲ್ಲಿ ಜಾರಿಗೆ ತಂದರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾದ ನಂತರವೂ ಈ ಯೋಜನೆ ಮುಂದುವರಿಯಿತು. ಗೌಡರು ವಿಶ್ವೇಶ್ವರಯ್ಯನವರ ಜೊತೆ ಗ್ರಾಮೀಣ ಪ್ರದೇಶಗಳಲ್ಲಿ

ಕೈಗಾರಿಕೆಗಳ ಅಭಿವೃದ್ಧಿಗೆ ಕೈಗೊಂಡ ಯೋಜನೆಗಳು ಅನುಷ್ಠಾನಗೊಳ್ಳಲು ಕೆಲಸ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಗೊಂಡಿದ್ದ ಕರ್ನಾಟಕ ಸಂಘದ ಸದಸ್ಯರಾಗಿ ಬಿ.ಎಂ.ಶ್ರೀ, ಟಿ.ಎಸ್.ವೆಂಕಣ್ಣಯ್ಯ, ತೀ.ನಂ.ಶ್ರೀ, ಕುವೆಂಪು, ಡಿ.ಎಲ್.ನರಸಿಂಹಾಚಾರ್, ನಾ.ಕಸ್ತೂರಿ, ಎಸ್.ವಿ.ರಂಗಣ್ಣ, ಎ.ಆರ್.ಕೃಷ್ಣಶಾಸ್ತ್ರಿ ಮುಂತಾದ ಮೈಸೂರಿನ ಸಾಹಿತ್ಯ ದಿಗ್ಗಜರ ಜೊತೆ ಸಂಪರ್ಕಕ್ಕೆ ಬಂದರು. "ಕರುಣಾಳು ಬಾ ಬೆಳಕೆ" ಎಂದು ಕನ್ನಡದಲ್ಲಿ ಬಿ.ಎಂ.ಶ್ರೀಯವರು ಭಾಷಾಂತರಿಸಿರುವ ಇಂಗ್ಲೀಷ್ ಕವಿ ಕಾರ್ಡಿನಲ್ ನ್ಯೂಮನ್ ರಚಿಸಿದ "ಲೀಡ್ ಕೈಂಡ್ಲಿ ಲೈಟ್" ಎಂಬ ಸುಂದರ ಹೃದಯಸ್ಪರ್ಶಿ ಕವಿತೆಯ ಹಾಡನ್ನು ಆ ಸಂದರ್ಭದಲ್ಲಿ ಕೇಳಿ ಸಂತಸಪಟ್ಟರು. ಕನ್ನಡ ಸಾಹಿತ್ಯ ಪರಿಷತ್ತು, ಶ್ರೀರಾಮಕೃಷ್ಣ ಆಶ್ರಮ, ಥಿಯೋಸಫಿಕಲ್ ಸೊಸೈಟಿ, ಶ್ರೀಗೋಖಲೆ ಸಾರ್ವಜನಿಕ ಸಂಸ್ಥೆ ಮುಂತಾದ ಸಂಘ ಸಂಸ್ಥೆಗಳೊಡನೆ ಸಂಪರ್ಕ ಹೊಂದಿದ್ದರು. ಕರ್ನಾಟಕ ಏಕೀಕರಣ ಹೋರಾಟಗಳ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ೧೯೬೦ರ ದಶಕದ ಕೊನೆಯ ಭಾಗದಲ್ಲಿ ರಾಜಕೀಯ ಕ್ಷೇತ್ರದಿಂದ ನಿವೃತ್ತರಾಗಿ ಹೊಸ ತಲೆಮಾರಿನ ರಾಜಕಾರಣಗಳಿಗೆ ಅವಕಾಶ ಮಾಡಿಕೊಟ್ಟರು. ತಮ್ಮ ಊರು ತಿಮ್ಮಸಂದ್ರದಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನ ಸಾಗಿಸಿದರು. ತಮ್ಮ ಉಸಿರಿರುವರೆವಿಗೂ ಸಮಾಜ ಸೇವೆಗಾಗಿ ತಮ್ಮ ಜೀವವನ್ನು ಮುಡಿಪಾಗಿಟ್ಟಿದ್ದರು.

❖

# ೨. ಮಾದಯ್ಯಗೌಡರ ಕೌಟುಂಬಿಕ ಹಿನ್ನೆಲೆ

ಮಾದಯ್ಯಗೌಡರ ವಂಶದ ಪೂರ್ವಿಕರು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತಗಡೂರು ಗ್ರಾಮದವರು. ಅವರು ತಲಕಾಡು ಗಂಗರ ಕಾಲದ ಹಿನ್ನೆಲೆಯ ಗಂಗಡಕಾರ ಒಕ್ಕಲಿಗ ಸಮಾಜದ ಕೊಮ್ಮೆಕುಲದವರು. ವ್ಯವಸಾಯ ಇವರ ಪ್ರಧಾನ ಕಸುಬು. ವೃತ್ತಿಗಾಯಕ ವರ್ಗಕ್ಕೆ ಸೇರಿದ ಹೆಳವರು ಈ ಕುಲದ ಮನೆಗಳಿಗೆ ಹೋಗಿ ಈಗಲೂ "ಕುಲವೆತ್ತಿ ಕೊಂಡ್ಯಾಡೇವೊ, ಕೊಮ್ಮೆಕುಲದ ಗೌಡಗಳ ಕುಲವೆತ್ತಿ ಕೊಂಡ್ಯಾಡೆವೋ" ಎಂದು ಹಾಡುವುದುಂಟು. ಕೊಮ್ಮೆ ಕುಲದವರು ದನಕರುಗಳ ಸಾಕಣೆ, ದವಸ ಧಾನ್ಯಗಳನ್ನು ಬೆಳೆದು ಸುರಕ್ಷಿತವಾಗಿ ದಾಸ್ತಾನು ಮಾಡಲು ಬಿದಿರು ಅಥವಾ ಮಣ್ಣಿನಿಂದ ಮಾಡಿದ ಸಾಧನಗಳನ್ನು ಮಾಡಿ ಬಳಸುತ್ತಿದ್ದರು. ಪ್ರಕೃತಿಯಲ್ಲಿ ನೈಸರ್ಗಿಕವಾಗಿ ಬೆಳೆಯುವ ವಿವಿಧ ಸೊಪ್ಪುಗಳು, ಗೆಡ್ಡೆಗೆಣಸುಗಳನ್ನು ಯತೇಚ್ಛವಾಗಿ ಬಳಸುತ್ತಿದ್ದರು. ಅವರು ದುಡಿದು ತಿನ್ನುವ ವ್ಯವಸಾಯಗಾರರಾಗಿದ್ದರು. ಕೊಮ್ಮೆ ಸೊಪ್ಪು ಇವರ ಮೆಚ್ಚಿನ ಸೊಪ್ಪಾಗಿತ್ತು. ಈ ಸೊಪ್ಪು ಪೋಷಕಾಂಶಗಳ ಆಗರ; ಕೊರಡು ಕೊನರಿಸಬಲ್ಲದು. ಕೊಮ್ಮೆ ಸೊಪ್ಪಿನ ಊಟವೆಂದರೆ ಕುಟುಂಬದವರೆಲ್ಲರಿಗೂ ಅಚ್ಚುಮೆಚ್ಚು. ಆ

ಕಾಲದಲ್ಲಿ ವೀರಶೈವ ಗುರುಗಳ ಸಲಹೆಯಂತೆ ವೀರಶೈವ ಧರ್ಮಪಾಲನೆ ಮಾಡುವವರಾಗಿದ್ದರು. ಅವರದು ಏಳು ಮಂದಿ ಅಣ್ಣ-ತಮ್ಮಂದಿರ ಅವಿಭಕ್ತ ಕುಟುಂಬವಾಗಿತ್ತು. ಅವರು ಧರ್ಮನಿಷ್ಠ, ಸಾತ್ವಿಕ ಮತ್ತು ಸಜ್ಜನಿಕೆಯ ಕುಟುಂಬದವರಾಗಿದ್ದರು. ಯಾವುದೇ ಗಲಾಟೆ, ಗದ್ದಲ, ವಿರಸ ವೈರತ್ವಗಳಿಲ್ಲದೆ ನೆಮ್ಮದಿಯ ಜೀವನ ಸಾಗಿಸುತ್ತಿದ್ದರು. ಉಣ್ಣುವುದಕ್ಕೆ ತಿನ್ನುವುದಕ್ಕೆ ಯಾವುದೇ ಕೊರತೆ ಇರುತ್ತಿರಲಿಲ್ಲ. ಮನೆಯಲ್ಲಿ ಸಾಕೆಷ್ಟು ದನಕರುಗಳು ಇದ್ದು ಹಾಲು, ಮೊಸರುಗಳಿಗೆ ಕೊರತೆಯಿರುತ್ತಿರಲಿಲ್ಲ. ಈ ಅಣ್ಣ-ತಮ್ಮಂದಿರಲ್ಲಿನ ಹಿರಿಯಣ್ಣನಿಗೆ ಕೆಂಪಮ್ಮ ಎಂಬ ಮಗಳಿದ್ದಳು. ಕೆಂಪಮ್ಮ ತನ್ನ ದೈವದತ್ತ ರೂಪ, ಗುಣ, ಸೌಂದರ್ಯ, ಸೌಶೀಲ್ಯ ಸದ್ಗುಣಗಳಿಂದ ಅಣ್ಣ-ತಮ್ಮಂದಿರೆಲ್ಲರಿಗೂ ಪ್ರೀತಿ ಪಾತ್ರಳಾಗಿದ್ದಳು. ಕೆಂಪಮ್ಮ ಸುಕುಮಾರಿಯಾಗಿ ಬಿದಿಗೆಯ ಚಂದ್ರನಂತೆ ಬೆಳೆಯುತ್ತಿದ್ದಳು. ಮನೆಗೆ ಬೇಕಾದ ನೀರು ತರುವುದು, ದನಕರುಗಳಿಗೆ ಮೇವು, ನೀರು ಕೊಡುವುದು, ಹಾಲು ಕರೆಯುವುದು, ಅಡುಗೆ ಮಾಡುವುದು ಮುಂತಾದ ಕೆಲಸ ಕಾರ್ಯಗಳಲ್ಲಿ ಹಿರಿಯರಿಗೆ ನೆರವಾಗುತ್ತಿದ್ದಳು. ಮನೆಮಂದಿಗೆಲ್ಲಾ ಅಚ್ಚುಮೆಚ್ಚಿನವಳಾಗಿದ್ದಳಷ್ಟೇ ಅಲ್ಲ, ಊರಿನವರ ಮೆಚ್ಚುಗೆಗೂ ಪಾತ್ರಳಾಗಿದ್ದಳು.

ಒಂದು ದಿನ ದನಕರುಗಳಿಗೆ ಮೇವು ಹಾಕಿ, ಹಾಲು ಕರೆಯುವ ಹಸುವನ್ನು ಆರೈಕೆ ಮಾಡುತ್ತಾ ಕೆಚ್ಚಲು ತೊಳೆದು ಹಾಲು ಕರೆಯುತ್ತಿದ್ದಳು. ನಂತರ ಕೆಚ್ಚಲಲ್ಲಿ ಕರುವಿಗೆ ಹಾಲು ಬಿಟ್ಟು ಒಳಗೆ ಇಟ್ಟು ಬಂದು ನೋಡಿದಾಗ ಹಾಲು ಕುಡಿದ ಕರು ಇದ್ದಕ್ಕಿದ್ದಂತೆ ಓಡಿಹೋಯಿತು. ಬಿಟ್ಟರೆ ಕಾಡು ಪ್ರಾಣಿಗಳ ಪಾಲಾಗುವ ಭಯವಿತ್ತು. ಓಡಿ ಹೋಗಿ ಕರುವನ್ನು ಹಿಡಿದುಕೊಂಡು ಆ ಹೆಣ್ಣು ಮಗಳು ತನ್ನ ಕೈಯಲ್ಲಿ ಹಗ್ಗವಿಲ್ಲದಿದ್ದುದರಿಂದ ತನ್ನ ಉದ್ದನೆಯ ಹಾಗೂ ದಟ್ಟವಾದ ಕೂದಲನ್ನೇ ಹಗ್ಗದಂತೆ ಬಳಸಿಕೊಂಡು ಅದರ ಕುತ್ತಿಗೆಗೆ ಸುತ್ತಿ ಹಿಡಿದುಕೊಂಡು ಬರುತ್ತಿದ್ದಳು. ಆ ಸಮಯದಲ್ಲಿ ಆ ಊರಿನಲ್ಲಿದ್ದ ಗೂಂಡಾಗಿರಿಯ ಸ್ವಭಾವದ ಪ್ರಭಾವಿ ಊರಮುಖಂಡನೊಬ್ಬನು ಕೆಂಪಮ್ಮನನ್ನು ಕೆಟ್ಟ ದೃಷ್ಟಿಯಿಂದ ನೋಡಿದನು. ಕೆಲವು ದಿನ ಬಿಟ್ಟು, ಆ ಹುಡುಗಿಯನ್ನು ತನಗೆ ಮದುವೆ ಮಾಡಿಕೊಡುವಂತೆ ಕೆಂಪಮ್ಮನ ಕುಟುಂಬದ ಹಿರಿಯರಿಗೆ ತನ್ನ ನೆಂಟರ ಮೂಲಕ ಹೇಳಿ ಕಳಿಸಿದನು. ಇದು ಕುಟುಂಬದ ಯಾರಿಗೂ ಒಪ್ಪಿಗೆಯಾಗಲಿಲ್ಲ. ಆ ವ್ಯಕ್ತಿ ವಯಸ್ಸಿನಲ್ಲಿ ಬಹಳ ದೊಡ್ಡವನು. ಯಾವ ದೃಷ್ಟಿಯಿಂದ ನೋಡಿದರೂ ಒರಿಗೆಯಾಗುತ್ತಿರಲಿಲ್ಲ. ಅವನು ಕೊಮ್ಮೆ ಕುಲಕ್ಕೂ ಸೇರಿದವನಾಗಿರಲಿಲ್ಲ. ತಮ್ಮ ಮಗಳನ್ನು ಮದುವೆ ಮಾಡಿಕೊಡುವುದು ತಮ್ಮ ಕುಟುಂಬಕ್ಕೆ ಹಾಗೂ ಕೊಮ್ಮೆ ಕುಲಕ್ಕೆ ಗೌರವವಾದುದಲ್ಲ ಎಂದು ಇಡೀ ಕುಟುಂಬದವರು ತೀರ್ಮಾನಿಸಿದರು. ನಮ್ಮ ಹೆಣ್ಣು ಮಗಳನ್ನು ಮದುವೆ ಮಾಡಿಕೊಡಲು ಆಗುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿ ಕಳುಹಿಸಿದರು.

ಮದುವೆಗೆ ಒಪ್ಪದಿದ್ದುದು ಆ ಮುಖಂಡನಿಗೆ ಬಹಳಷ್ಟು ಅಸಮಾಧಾನ ಉಂಟು ಮಾಡಿತು. ಅವನು ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಕೆಂಪಮ್ಮನ ಕುಟುಂಬದವರಿಗೆ ವಿವಿಧ ರೀತಿಯಲ್ಲಿ ಕಿರುಕುಳ ನೀಡಲು ಪ್ರಾರಂಭಿಸಿದನು. ಆ ಊರಿನ ಭಯದ ವಾತಾವರಣದಲ್ಲಿ ಬದುಕಿ ಬಾಳ್ವೆ ನಡೆಸುವುದು ಆ ಕುಟುಂಬದವರಿಗೆ ಬಹಳ ಕಷ್ಟವಾಯಿತು. ಅಣ್ಣ-ತಮ್ಮಂದಿರೆಲ್ಲಾ ಮಾತಾಡಿಕೊಂಡು ಊರು ಬಿಡಲು ತೀರ್ಮಾನಿಸಿದರು. ಅದರಂತೆ ರಾತೋರಾತ್ರಿ ಮನೆಯ ಸಾಮಾನು ಸರಂಜಾಮುಗಳನ್ನೆಲ್ಲಾ ಗಾಡಿಯಲ್ಲಿ ತುಂಬಿಕೊಂಡು ಸದ್ದುಗದ್ದಲವಿಲ್ಲದೆ ಬಹುದೂರದ ಕಾವೇರಿನದೀ ತೀರಕ್ಕೆ ಬಂದು ಗಿಡಮರಗಳ ಮರಸಲಿನಲ್ಲಿ ಯಾರಿಗೂ ಕಾಣದಂತೆ ತಂಗಿದರು. ಭಯ ಮತ್ತು ಆತಂಕಗಳೊಡನೆ ದೂರ ಪ್ರಯಾಣ ಮಾಡಿದ್ದ ಅವರೆಲ್ಲರು ಬಹಳ ದಣಿದಿದ್ದರು. ಎತ್ತುಗಳು ಬಹಳ ಸಮಯ ಮೇವು ನೀರಿಲ್ಲದೆ ಟೊಳ್ಳು ಹೊಟ್ಟೆಗೆ ಬಂದು ದಣಿದು ಮುಂದಕ್ಕೆ ಹೋಗಲು ಕಷ್ಟಪಡುತ್ತಿದ್ದವು. ಎಲ್ಲರಿಗೂ ಹಸಿವಾಗುತ್ತಿತ್ತು. ಎತ್ತುಗಳಿಗೆ ಹುಲ್ಲು ನೀರು ಕೊಟ್ಟು ವಿಶ್ರಾಂತಿ ನೀಡಿ ತಾವು ತಂದಿದ್ದ ಬುತ್ತಿಯನ್ನು ಬಿಚ್ಚಿಕೊಂಡು ಊಟಮಾಡಿ ಭಯ ಭೀತಿಯ ಮಧ್ಯೆಯೇ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು.

ಮಾರನೆಯ ದಿನ ಬೆಳಿಗ್ಗೆ ಕೊಮ್ಮೆಕುಲದ ಕುಟುಂಬದವರು ಊರು ಬಿಟ್ಟು ಹೋಗಿದ್ದು ಊರಿನಲ್ಲಿ ಸುದ್ದಿಯಾಯಿತು. ವಿಷಯ ತಿಳಿದ ಆ ಮುಖಂಡನು ಸುಮ್ಮನಾಗಲಿಲ್ಲ. ಈ ಕುಟುಂಬದವರನ್ನು ಹೇಗಾದರೂ ಮಾಡಿ ಬಿಡವೆ ಹುಡುಕಿ ಹಿಡಿದುಕೊಂಡು ಬರಲು ತಮ್ಮ ಆಳುಕಾಳುಗಳನ್ನು ಎಚ್ಚರಿಸಿ ಕಳಿಸಿದನು. ನದಿ ತೀರದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ತಮ್ಮನ್ನು ಹಿಡಿಯಲು ಬಂದು ಹುಡುಕುತ್ತಿದ್ದ ಆ ಮುಖಂಡನ ಕಡೆಯವರನ್ನು ದೂರದಿಂದಲೇ ನೋಡಿ ಆತಂಕಗೊಂಡರು. ತಮ್ಮನ್ನು ತಾವು ಆ ಮುಖಂಡನ ಕಡೆಯವರಿಂದ ರಕ್ಷಿಸಿಕೊಳ್ಳಲೇಬೇಕಾಗಿತ್ತು. ತಡಮಾಡದೆ ಗಾಬರಿಯಿಂದ ತುಂಬಿ ಹರಿಯುತ್ತಿದ್ದ ಕಾವೇರಿ ನದಿಗೆ ಕೈಮುಗಿದುಕೊಂಡು ಭಕ್ತಿಯಿಂದ ಈ ರೀತಿ ಪ್ರಾರ್ಥಿಸಿದರು. "ಕಾವೇರಮ್ಮ ತಾಯಿ, ನಾವು ಈ ಪ್ರವಾಹವನ್ನು ಯಾರ ಜೀವಕ್ಕೂ ಅಪಾಯವಾಗದಂತೆ ಸುರಕ್ಷಿತವಾಗಿ ದಾಟಿ ಆ ಕಡೆಯ ದಡವನ್ನು ಸೇರಲು ಅನುಗ್ರಹ ನೀಡಿ ನಮ್ಮ ಸಂಕಷ್ಟವನ್ನು ಅರ್ಥಮಾಡಿಕೊಂಡು ಸಹಾಯ ಮಾಡಮ್ಮ. ನಾವೆಲ್ಲಾ ಸುರಕ್ಷಿತವಾಗಿ ಆ ಕಡೆಯ ದಡವನ್ನು ತಲುಪಿದ ನಂತರ ನಮ್ಮ ಮೈಮೇಲಿರುವ ಶಿವಲಿಂಗವನ್ನು ನಿನಗೆ ಅರ್ಪಿಸಿ, ಕುರಿಮರಿಯ ಬಾಡೂಟದ ಪರ ಮಾಡಿಸುತ್ತೇವೆ" ಎಂದು ಭಕ್ತಿಯಿಂದ ಕೈಮುಗಿಯುತ್ತಾ ಹರಕೆ ಕಟ್ಟಿಕೊಂಡು ಬೇಡಿದರು. ಆಶ್ಚರ್ಯವೋ ಎಂಬಂತೆ ಪವಾಡವೊಂದು ಅಲ್ಲಿ ನಡೆದೇ ಬಿಟ್ಟಿತು. ನೋಡು ನೋಡುತ್ತಿದಂತೆ ದಡ ಮೀರಿ

ತುಂಬಿ ಹರಿಯುತ್ತಿದ್ದ ಕಾವೇರಿ ನದಿಯ ಪ್ರವಾಹದ ರಭಸ ಕ್ರಮೇಣ ಕಡಿಮೆಯಾಯಿತು. ಆತಂಕದ ಮಧ್ಯೆ ಅವರು ಆಶ್ಚರ್ಯಗೊಂಡರು. ತಡಮಾಡದೆ ತುಂಬಿದ ಗಾಡಿಗಳನ್ನು ಕಷ್ಟಪಟ್ಟು ಆ ಕಡೆ ದಡ ಮುಟ್ಟಿಸಿದರು. ಎಲ್ಲರೂ ಸುರಕ್ಷಿತವಾಗಿ ದಡದಾಟಲು ಸಾಧ್ಯವಾಯಿತು. ಅವರೆಲ್ಲಾ ಅಲ್ಲಿ ನಿಂತು ಕಾವೇರಿ ನದಿಗೆ ಕೃತಜ್ಞತೆ ಅರ್ಪಿಸಿ ಸ್ವಲ್ಪ ಹೊತ್ತು ಅಲ್ಲಿಯೇ ಸುಧಾರಿಸಿಕೊಂಡರು.

ಆ ಮುಖಂಡನ ಕಡೆಯವರು ಅಲ್ಲಿ ಇಲ್ಲಿ ಹುಡುಕುತ್ತಾ ಅಲ್ಲಿಗೆ ಬರುವಷ್ಟರಲ್ಲಿ ಮತ್ತೆ ಧಾರಾಕಾರ ಮಳೆ ಸುರಿಯಿತು. ಪರಿಣಾಮವಾಗಿ ಕಾವೇರಿ ನದಿ ಮತ್ತೆ ಉಕ್ಕಿ ರಭಸವಾಗಿ ಹರಿಯಲಾರಂಭಿಸಿತು. ರಭಸವಾಗಿ ಹರಿಯುತ್ತಿದ್ದ ಕಾವೇರಿ ನದಿಯನ್ನು ಅವರಿಗೆ ದಾಟಲು ಸಾಧ್ಯವಾಗಲಿಲ್ಲ. ಕೆಲವು ಕಾಲ ಸುಮ್ಮನೆ ಯೋಚಿಸುತ್ತಾ ನಿಂತುಕೊಂಡರು. ಬೇರೆ ಏನೂ ಉಪಾಯ ಅವರಿಗೆ ಹೊಳೆಯಲಿಲ್ಲ. ಅವರು ಬಂದ ಕೆಲಸ ಕೈಗೂಡದೆ ಬರಿಗೈಯಲ್ಲಿ ನಿರಾಶೆಯಿಂದ ಊರಿಗೆ ಹಿಂತಿರುಗಿದರು. ದೈವಕೃಪೆ ಇವರ ಪರವಾಗಿತ್ತು. ಕಾವೇರಿಮಾತೆ ಇವರ ಪರವಾಗಿದ್ದಳು.

ನದಿಯನ್ನು ಪ್ರಯಾಸ ಪಟ್ಟು ದಾಟಿದ ಅಣ್ಣ-ತಮ್ಮಂದಿರು ಕಷ್ಟ ಬಂದೊದಗಿದ ಸಂದರ್ಭದಲ್ಲಿ ಮಾಡಿಕೊಂಡಿದ್ದ ಹರಕೆಯನ್ನು ತೀರಿಸಿಕೊಂಡರು. ಪ್ರಯಾಣ ಮುಂದುವರಿಸಿ ದಣಿವಾದಾಗ ಸೂಕ್ತ ಸ್ಥಳಗಳಲ್ಲಿ ಬೀಡು ಬಿಟ್ಟುಕೊಂಡು ಅಲ್ಲಲ್ಲಿ ದೊರೆಯುತ್ತಿದ್ದ ಸೊಪ್ಪು, ಗೆಡ್ಡೆಗೆಣಸುಗಳು, ಹಣ್ಣು ಹಂಪಲುಗಳನ್ನು ತಿಂದುಕೊಳ್ಳುತ್ತಿದ್ದರು. ಜೊತೆಗೆ ತಮ್ಮೊಡನೆ ಕಟ್ಟಿಕೊಂಡು ಬಂದಿದ್ದ ಅಡುಗೆಯ ಲವಾಜಮೆಗಳನ್ನು ಬಳಸಿಕೊಂಡು ಆಹಾರ ಪದಾರ್ಥಗಳನ್ನು ತಯಾರಿಸಿಕೊಂಡು ಹಸಿವು ನೀಗಿಸಿಕೊಳ್ಳುತ್ತಿದ್ದರು. ಸದಾ 'ದೇವರೇ ಕಾಪಾಡಪ್ಪ' ಎಂದು ಬೇಡುತ್ತಿದ್ದರು. ಅಲ್ಲಿ ಇಲ್ಲಿ ಸೂಕ್ತ ಸ್ಥಳಕ್ಕಾಗಿ ಸಮೀಕ್ಷೆ ನಡೆಸುತ್ತಾ ಒಂದು ಸೂಕ್ತ ಕಾಡು ಪ್ರದೇಶಕ್ಕೆ ಬಂದರು. ಅಲ್ಲಿನ ಕೆಲವು ಪುಣ್ಯಾತ್ಮರು ಇವರ ಕಷ್ಟಗಳನ್ನು ಕೇಳಿಸಿಕೊಂಡು "ನೀವು ಯಾರು? ಎಲ್ಲಿಂದ ಬಂದವರು? ಭಯಪಟ್ಟಂತೆ ಕಾಣುತ್ತಿದ್ದೀರಲ್ಲಾ; ನಿಮಗೆ ಏನಾದರೂ ಸಹಾಯಬೇಕಿತ್ತೇ?" ಎಂದು ಔದಾರ್ಯತೆಯಿಂದ ಕೇಳಿದರು. ಎಲ್ಲವನ್ನೂ ತಿಳಿದುಕೊಂಡ ಅಲ್ಲಿನ ಪುಣ್ಯಾತ್ಮರು ಅಗತ್ಯವಾದ ಸಹಾಯವನ್ನು ಮಾಡಿ "ದೇವರು ನಿಮ್ಮ ಕಷ್ಟಗಳನ್ನು ಬಗೆ ಹರಿಸಲಿ" ಎಂದು ಹರಸಿದರು. ಅಲ್ಲಿ ನಿರಾತಂಕದಿಂದ ಸ್ವಲ್ಪಹೊತ್ತು ಉಳಿದು ದಣಿವು ನೀಗಿಸಿಕೊಂಡು ಪ್ರಯಾಣ ಮುಂದುವರಿಸಿದರು.

ಭಯದಿಂದ ಬಿಡುಗಡೆಗೊಂಡಿದ್ದ ಅವರು ಸಮಾಧಾನವಾಗಿ ಪ್ರಯಾಣಿಸುತ್ತಿದ್ದ ಆ ಸಮಯದಲ್ಲಿ ಶಿವಲಿಂಗದ ಆಕೃತಿಯ ಗುಂಡುಕಲ್ಲು ತಮ್ಮ ಗಾಡಿಯಲ್ಲಿದ್ದುದನ್ನು ಕಂಡು

ಎಲ್ಲರೂ ಆಶ್ಚರ್ಯಗೊಂಡರು. "ಇದೇನಿದು? ಹರಕೆ ತೀರಿಸಿದ್ದೇವೆ. ಇದನ್ನು ಯಾಕೆ ಗಾಡಿಯಲ್ಲಿಟ್ಟುಕೊಂಡು ಬಂದಿರಿ?" ಎಂದು ಹಿರಿಯರೊಬ್ಬರು ಕೇಳಿದರು. "ನಾನು ಇಟ್ಟುಕೊಂಡು ಬಂದಿಲ್ಲ" ಎಂದು ಒಬ್ಬರು ಹೇಳಿದರೆ; ಇನ್ನೊಬ್ಬರು "ನಾನೂ ಇಟ್ಟುಕೊಂಡು ಬಂದಿಲ್ಲ" ಎಂದರು. "ಆಯಿತು, ಶಿವಲಿಂಗವನ್ನು ಕೆಳಗೆ ಇಟ್ಟು ಪ್ರಯಾಣ ಮುಂದುವರಿಸೋಣ" ಎಂದು ತೀರ್ಮಾನಿಸಿ ಕೆಳಗಿಟ್ಟು ಬಂದರು. ಸ್ವಲ್ಪ ದೂರ ಹೋದ ಮೇಲೆ ಆ ಶಿವಲಿಂಗವು ಮತ್ತೆ ಗಾಡಿಯಲ್ಲಿ ಪ್ರತ್ಯಕ್ಷವಾಯಿತು. ಎಲ್ಲರಿಗೂ ಇದೇನಾಗುತ್ತಿದೆ! ಎಂದು ಆಶ್ಚರ್ಯದಿಂದ ಮಾತಾಡಿಕೊಂಡರು. ಮಲಗುವಾಗಲೂ ಎಲ್ಲರಿಗೂ ಈ ಶಿವಲಿಂಗದ್ದೇ ಗುಂಗು ಉಂಟಾಯಿತು. ರಾತ್ರಿ ಅವರೆಲ್ಲರೂ ಮಲಗಿದ್ದಾಗ ಕನಸಿನಲ್ಲಿ ಶಿವಲಿಂಗವು ಮತ್ತೆ ಪ್ರತ್ಯಕ್ಷವಾಯಿತು. "ಏನಪ್ಪಾ, ನಾನು ಯಾರು ಎಂದು ಕೊಂಡಿದ್ದೀರಿ? ನಾನು ನಿಮ್ಮ ಕುಲದೇವರು; ನೀವು ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಾ ಗೊತ್ತು ಗುರಿಯಿಲ್ಲದೇ ನನ್ನನ್ನು ನೆನೆಯುತ್ತಾ ಆತಂಕದಿಂದ ಅಲೆಯುತ್ತಾ ಇದ್ದೀರಿ. ಇಂಥಾ ಸಮಯದಲ್ಲಿ ನನ್ನನ್ನು ನಂಬಿರುವ ನಿಮ್ಮನ್ನು ಕೈಬಿಡಲಾರೆ. ನೀವು ಎಲ್ಲಿ ನೆಲೆ ಊರುತ್ತೀರೋ ಅಲ್ಲಿ ನನ್ನನ್ನು ಪ್ರತಿಷ್ಠಾಪನೆ ಮಾಡಿ" ಎಂದು ಶಿವಲಿಂಗವು ಅವರಿಗೆ ಹೇಳಿದಂತಾಯಿತು. ಇದೆಲ್ಲಾ ನಮ್ಮ ಭ್ರಮೆಯೋ ಅಥವಾ ಭ್ರಾಂತಿಯೋ ಎಂದು ಅವರು ಭಾವಿಸಲಿಲ್ಲ. "ಭಗವಂತಾ, ನಿಮ್ಮ ಅಪ್ಪಣೆಯಂತೆಯೇ ಆಗಲಿ" ಎಂದು ಆ ಸ್ವಾಮಿಗೆ ಕೈಮುಗಿಯುತ್ತಾ ಪ್ರಾರ್ಥನೆ ಸಲ್ಲಿಸಿದರು. ಶ್ರದ್ಧಾಭಕ್ತಿಗಳಿಂದ ಕಾರ್ಯೋನ್ಮುಖರಾಗಿ ಆ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿ ಗುಡಿ ಕಟ್ಟಿದರು. ಅಲ್ಲಿ ಬಿಡಾರ ಹೂಡಿದ್ದ ಸಮಯದಲ್ಲಿ ಅಡಿಗೆ ಮಾಡುವಾಗ ಬಳಸಿದ ಕವೆಗೋಲು, ದೊಣ್ಣೆಗಳನ್ನು ಅಲ್ಲಿ ನೆಟ್ಟರು. ಮಳೆ ಬಂದು ಅವೆಲ್ಲಾ ಚಿಗುರಿ ಗಿಡಮರಗಳಾದವು. ದಟ್ಟವಾದ ಗಿಡಮರಗಳಿಂದ ತುಂಬಿದ್ದ ಆ ಸ್ಥಳ ವಾಸಿಸಲು ಅವರೆಲ್ಲರಿಗೂ ಸೂಕ್ತವೆನಿಸಿತು. ದೇವನೊಲಿದು ಹರಸಿದ ಆ ಸ್ಥಳವೇ ಅವರ ನೆಲೆಯಾಯಿತು. ಇದೆಲ್ಲ ದೈವೀಕೃಪೆ ಎಂದು ಹರ್ಷಪಟ್ಟು ಅಲ್ಲಿಯೇ ನೆಲೆಯೂರಲು ನಿರ್ಧರಿಸಿದರು. ಕಾಲಕ್ರಮೇಣ ಅದು ಭೀಮನಹಳ್ಳಿಯಾಯಿತು.

ಅಣ್ಣ-ತಮ್ಮಂದಿರು ಅಲ್ಲಿಯೇ ಮನೆಕಟ್ಟಿಕೊಂಡು ವ್ಯವಸಾಯ ಮಾಡುತ್ತಾ, ದನಕರುಗಳನ್ನು ನೋಡಿಕೊಳ್ಳುತ್ತಾ ಜೀವನ ಪ್ರಾರಂಭಿಸಿದರು. ನಮ್ಮ ಸಂಕಷ್ಟಗಳು ಇನ್ನು ಬಗೆಹರಿದವು ಎಂದು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು. ಆದರೆ ಸಾತ್ವಿಕ ಸ್ವಭಾವದ ಕೆಂಪಮ್ಮನಿಗೆ ಮಾತ್ರ ನೆಮ್ಮದಿಯಿರಲಿಲ್ಲ. ಸದಾ ಏನೋ ಯೋಚಿಸುತ್ತಾ ಲವಲವಿಕೆಯಿಲ್ಲದೆ ಚಿಂತೆಯಲ್ಲಿದ್ದಂತೆ ಕೆಂಪಮ್ಮ ಹಿರಿಯರಿಗೆ ಕಂಡುಬಂದಳು. "ಯಾಕವ್ವಾ, ಏನಾಯಿತು? ನೀನು ಮೊದಲಿನಂತೆ ಇಲ್ಲ; ಏನೋ ಯೋಚನೆ ಮಾಡುತ್ತಿರುವಂತೆ

ಕಾಣುತ್ತಿದೆಯಲ್ಲಾ" ಎಂದು ನೋವು ಮತ್ತು ಗಾಬರಿಯಿಂದ ಕೇಳಲು ಪ್ರಾರಭಿಸಿದರು. ಕೆಂಪಮ್ಮ ಏನನ್ನೂ ಹೇಳಲಾಗದೇ, ನಗಲಾರದೇ, ಮತ್ತು ಅಳಲಾಗದೇ ಸುಮ್ಮನಿರುತ್ತಿದ್ದಳು. ಹಿರಿಯರು ಕೆಂಪಮ್ಮ ಹೇಳುವವರೆಗೂ ಬಿಡಲಿಲ್ಲ. ಕಡೆಗೆ ಅವರ ಒತ್ತಾಯಕ್ಕೆ ಬಾಯಿಬಿಟ್ಟಳು "ಆ ಊರ ಮುಖಂಡನ ಕೆಟ್ಟ ದೃಷ್ಟಿಯಿಂದ ನಾನು ಅಪವಿತ್ರಳಾಗಿದ್ದೇನೆ ಅನ್ನಿಸುತ್ತಿದೆ. ಆ ಕಾರಣದಿಂದ ಮನಸ್ಸು ಬಹಳಷ್ಟು ತೊಂದರೆಗೊಳಗಾಗಿದೆ; ನೆಮ್ಮದಿ ಇಲ್ಲದಂತಾಗಿದೆ. ನಾವೆಲ್ಲಾ ಎಷ್ಟು ಕಷ್ಟಪಟ್ಟು ದೇಶಾಂತರ ಬರಬೇಕಾಯಿತು. ನನ್ನಿಂದಾಗಿ ನಮ್ಮ ವಂಶಸ್ಥರ ಪರದಾಟ, ಕಷ್ಟಕಾರ್ಪಣ್ಯಗಳನ್ನು ಅನುಭವಿಸಬೇಕಾಯಿತು ಎಂಬ ಯೋಚನೆ ನನ್ನನ್ನು ಸದಾ ಬಾದಿಸುತ್ತಿದೆ. ನಾನು ಬದುಕಲು ನನ್ನ ಮನಸ್ಸು ಅವಕಾಶ ನೀಡುತ್ತಿಲ್ಲ. ದಯಮಾಡಿ ಅಗ್ನಿಕುಂಡವನ್ನು ಸಿದ್ಧಪಡಿಸಿ; ಅಗ್ನಿ ದೇವರಿಗೆ ಈ ದೇಹವನ್ನು ಅರ್ಪಿಸಿ ನಮ್ಮ ವಂಶಕ್ಕೆ ಒಳ್ಳೆಯದಾಗಲೂ ಮತ್ತು ಶಾಶ್ವತ ಪಾವಿತ್ರತೆ ಪಡೆದುಕೊಳ್ಳಲು ಅವಕಾಶ ಮಾಡಿಕೊಡಿ" ಎಂದು ಎಲ್ಲರನ್ನು ಕೇಳಿಕೊಂಡಳು. ತಮ್ಮ ಕಷ್ಟಕಾರ್ಪಣ್ಯಗಳು ಇನ್ನೇನು ಎಲ್ಲಾ ಮುಗಿದವು ಎಂದುಕೊಳ್ಳುವಷ್ಟರಲ್ಲಿ ಮತ್ತೆ ಆ ವಂಶಸ್ಥರು, ವಂಶದ ಕುಡಿಯನ್ನು ಕಳೆದುಕೊಳ್ಳುವ ಚಿಂತೆಗೆ ಮತ್ತು ನೋವಿಗೆ ಒಳಗಾದರು.

ತಮ್ಮೆಲ್ಲರಿಗೂ ಪ್ರೀತಿಪಾತ್ರಳಾದ ಕರುಳುಕುಡಿ ತಮ್ಮ ಎದುರುಗಡೆಯೇ ಅಗ್ನಿ ಪ್ರವೇಶ ಮಾಡಿ ಭಸ್ಮವಾಗುವುದನ್ನು ನೆನೆದು ದುಃಖಿತರಾದರು. ಯಾರುತಾನೇ ಅದನ್ನು ಸಹಿಸಿಯಾರು?. ಅಣ್ಣ-ತಮ್ಮಂದಿರ ಗೋಳಾಟ ಹೇಳ ತೀರದಂತಾಯಿತು. "ಭಗವಂತಾ, ಇದೇನು? ಒಂದಾದ ಮೇಲೆ ಒಂದರಂತೆ ಈ ರೀತಿಯ ನೋವುಗಳು ಅಪ್ಪಳಿಸುತ್ತಿವೆ" ಎಂದು ಎಲ್ಲರೂ ರೋಧಿಸತೊಡಗಿದರು. ಆಗ ಕೆಂಪಮ್ಮ, ಅಣ್ಣ-ತಮ್ಮಂದಿರನ್ನು ಸಂತೈಸುತ್ತಾ "ನೀವೆಲ್ಲಾ ಈ ರೀತಿ ಗೋಳಾಡುವುದು ತರವಲ್ಲ; ನಾನು ಈಗಾಗಲೇ ದೃಢ ನಿರ್ಧಾರ ಕೈಗೊಂಡಿದ್ದೇನೆ ಮತ್ತು ನನ್ನ ನಿರ್ಧಾರವು ಸರಿಯಾಗಿಯೇ ಇದೆ ಎಂದು ನನ್ನ ಅಂತಃಸಾಕ್ಷಿ ಹೇಳುತ್ತಿದೆ. ನಾನು ಮಹಾಸತಿಯಾದ ಮೇಲೆ ಕೊಮ್ಮೆ ಕುಲಸ್ಥರ ಮನೆದೇವತೆಯಾಗಿದ್ದುಕೊಂಡು ನಿಮ್ಮ ಪೂಜೆ ಪುರಸ್ಕಾರಗಳಿಗೆ ಓಗೊಟ್ಟು ವಂಶಸ್ಥರಿಗೆ ಶ್ರೀರಕ್ಷೆಯಾಗುತ್ತೇನೆ. ನಿಮ್ಮ ವಂಶದಲ್ಲಿ ಹುಟ್ಟುವ ಹೆಣ್ಣು ಮಕ್ಕಳಿಗೆ ಮೊದಲು ಕೆಂಪಮ್ಮ ಎಂದು ಕರೆಯಿರಿ. ಹಬ್ಬ ಹರಿದಿನಗಳಲ್ಲಿ ಮನೆಯ ಮದುವೆ, ನಾಮಕರಣ, ಸೀಮಂತ ಮುಂತಾದ ಶುಭ ಕಾರ್ಯಗಳು ನಡೆಯುವ ಹಿಂದಿನ ದಿನ ದೇವರ ಕಾರ್ಯಗಳನ್ನು ಶ್ರದ್ಧಾಭಕ್ತಿಯಿಂದ ಕಳಶವನ್ನಿಟ್ಟು ಪೂಜೆ ಮಾಡಿರಿ, ನಿಮ್ಮ ಸ್ಥಿತಿಗತಿಗಳು, ಬಾಳು ಬದುಕು ನನ್ನಂಥಾಗದೆ ನಿಮಗೆ ಎಲ್ಲಾ ರೀತಿಯಲ್ಲಿಯೂ ಒಳ್ಳೆಯದಾಗಲಿ ಎಂದು ಹರಸಿ ಕಾಪಾಡುತ್ತೇನೆ" ಎಂದು ದೇವತೆಯೇ ಮೈಮೇಲೆ ಬಂದಂತೆ ನುಡಿವಳು. ಯಾರೂ

ಏನೂ ಮಾಡಲಾಗದೆ ಅಸಹಾಯಕರಾಗಬೇಕಾಯಿತು. ಕೆಂಪಮ್ಮ ಅಗ್ನಿಕುಂಡ ಸಿದ್ಧಪಡಿಸಲು ತಿಳಿಸಿದಾಗ ಅದನ್ನು ಸಿದ್ಧಪಡಿಸಲೇಬೇಕಾಯಿತು. ಅಗ್ನಿಕುಂಡ ಸಿದ್ಧವಾಗಿ ಅಗ್ನಿಜ್ವಾಲೆಗಳು ಧಗಧಗನೆ ಮೇಲೆದ್ದವು. ನಂತರ ನೋಡು ನೋಡುತ್ತಲೇ ಕೆಂಪಮ್ಮ ಅಗ್ನಿ ದೇವತೆಗೆ ತನ್ನ ದೇಹವನ್ನು ಅರ್ಪಿಸಿದಳು. ತಮ್ಮ ಕಣ್ಣೆದುರಿಗೆ ತಮ್ಮ ವಂಶದ ಕುಡಿ ಅಗ್ನಿದೇವನ ಜ್ವಾಲೆಯಲ್ಲಿ ಉರಿದು ಭಸ್ಮವಾಗಿದ್ದನ್ನು ಕಂಡು ಬಂಧು-ಬಾಂಧವರು ಗೋಳಾಡಿದರು. ಅವರ ರೋಧನ ಮುಗಿಲು ಮುಟ್ಟಿತು. ಅನೇಕ ತಿಂಗಳುಗಳ ಕಾಲ ದುಗುಡ ಬಂಧು-ಬಾಂಧವರಲ್ಲಿ ಮೈ ತುಂಬಿಕೊಂಡಿತ್ತು. ದುಃಖ ಸಂಕಟಗಳಿಂದಲೇ ಅಗ್ನಿಕುಂಡದ ಬಳಿ ಮಹಾಸತಿ ಕೆಂಪಮ್ಮನ ಗದ್ದುಗೆಯನ್ನು ನಿರ್ಮಿಸಿ ಕಾಲಕಾಲಕ್ಕೆ ಪೂಜೆ ಪುನಸ್ಕಾರಗಳನ್ನು ನಡೆಸಿಕೊಂಡು ಬರಲು ಪ್ರಾರಂಭಿಸಿದರು. ಕೆಂಪಮ್ಮನ ಗದ್ದುಗೆ ಪವಿತ್ರ ಯಾತ್ರಾ ಸ್ಥಳವಾಯಿತು. ಕೊಮ್ಮೆಕುಲಸ್ಥರಲ್ಲಿ ಸಂಪ್ರದಾಯಸ್ಥರು ಈಗಲೂ ಹುಟ್ಟಿದ ಹೆಣ್ಣು ಮಕ್ಕಳಿಗೆ ಮೊದಲು ಕೆಂಪಮ್ಮ ಎಂದು ಹೆಸರು ಕಟ್ಟಿ ಕರೆಯುತ್ತಾರೆ. ಮನೆಯಲ್ಲಿ ಶುಭ ಕಾರ್ಯಗಳಾಗುವಾಗ, ಕೂದಲು ತೆಗೆಸುವಾಗ, ನವ ವಧೂವವರನ್ನು ಮನೆಯ ಹಿರಿಯರು ಶ್ರದ್ಧಾಭಕ್ತಿಗಳಿಂದ ಕೆಂಪಮ್ಮನ ಗದ್ದುಗೆಗೆ ಕರೆದುಕೊಂಡು ಹೋಗಿ ಪೂಜೆ ಪುನಸ್ಕಾರಗಳನ್ನು ಮಾಡಿಸುತ್ತಾರೆ. ಕೆಂಪಮ್ಮ ತಮ್ಮ ಕುಲದವರನ್ನು ರಕ್ಷಿಸುವ ಕೆಲದೇವತೆ ಎಂದೇ ಭಾವಿಸಿ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇಂದಿಗೂ ಮೊದಲ ಪೂಜೆ ಅವಳಿಗೇ ಸಲ್ಲುತ್ತದೆ.

ಕಾಲಕ್ರಮೇಣ ನಾಗಮಂಗಲದ ಸುತ್ತಮುತ್ತ ಕೊಮ್ಮೆ ಕುಲಸ್ಥರ ವಂಶವೃದ್ಧಿಯಾಗುತ್ತಾ ಬಂದಿತು. ಒಂದುಸಾರಿ ಚನ್ನಾಗಿ ಮಳೆ ಬೆಳೆಯಾದರೆ; ಇನ್ನೊಂದು ಸಾರಿ ಮಳೆ ಕೈಕೊಟ್ಟು ಬೆಳೆಯಾಗುತ್ತಿರಲಿಲ್ಲ. ಒಮ್ಮೆ ನಾಗಮಂಗಲ ಸುತ್ತಮುತ್ತ ಮಳೆ ಬೆಳೆ ಇಲ್ಲದೆ ಕ್ಷಾಮ-ಡಾಮರಗಳ ಭೀಕರತೆ ಉಂಟಾಯಿತು. ಕೆಲವರು ಕಂಗೆಡದೆ ಕಷ್ಟನಷ್ಟಗಳು ಹಸಿವು ಬಡತನಗಳನ್ನು ಅನುಭವಿಸುತ್ತಾ ಇನ್ನೆಲ್ಲಿಗೆ ಹೋಗುವುದೆಂದು ಭಾವಿಸಿ ಅಲ್ಲೇ ಉಳಿದರು. ಕ್ಷಾಮ-ಡಾಮರದ ಭೀಕರತೆಯಿಂದ ತತ್ತರಿಸಿದ ಇನ್ನೂ ಕೆಲವರು ಇನ್ನೆಷ್ಟು ದಿನ ಕಷ್ಟ ಬವಣೆಗಳನ್ನು ಅನುಭವಿಸುವುದು ಎಂದು ಯೋಚಿಸಿ ತೀರ್ಮಾನ ಕೈಗೊಂಡು ತಮ್ಮ ತಮ್ಮ ಕುಟುಂಬಗಳ ಸಹಿತ ಬೇರೆ ಬೇರೆ ಕಡೆಯ ಊರುಗಳಿಗೆ ವಲಸೆ ಹೋದರು. ಹೆಚ್ಚಿನ ಭಾಗ ಕೊಮ್ಮೆ ಕುಲಸ್ಥರು ವಿಶಾಲವಾದ ಪ್ರದೇಶಗಳು, ಹಳ್ಳ ಕೊಳ್ಳಗಳು, ಸಮೃದ್ಧ ಗಿಡಮರಗಳು, ಬೆಟ್ಟಗುಡ್ಡಗಳು ಮುಂತಾದ ಪ್ರಾಕೃತಿಕ ಸುಂದರ ಪ್ರದೇಶಗಳನ್ನು ಹೊಂದಿದ ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರದ ಸುತ್ತಮುತ್ತಲಿನ ಪ್ರದೇಶಗಳಿಗೆ ವಲಸೆ ಹೋಗಿ ನೆಲೆಸಿದರು.

ಬೇರೆ ಬೇರೆ ಪ್ರದೇಶಗಳಿಗೆ ಹಾಗೆ ವಲಸೆ ಹೋದ ಅಂತಹ ಕುಟುಂಬಗಳಲ್ಲಿ ಮಾದಯ್ಯಗೌಡರ ಪೂರ್ವಿಕರ ಕುಟುಂಬವೂ ಒಂದು. ಆ ಕುಟುಂಬವು ಈಗಿನ

ರಾಮನಗರ ಜಿಲ್ಲೆಯ ಚನ್ನಪಟ್ಟಣ ಟೌನಿಗೆ ಒಂದೂವರೆ ಮೈಲಿ ದೂರವಿರುವ ತಿಮ್ಮಸಂದ್ರ ಗ್ರಾಮಕ್ಕೆ ಹೋಗಿ ನೆಲೆಸಿತು; ವ್ಯವಸಾಯ, ಪಶುಸಂಗೋಪನೆಯಲ್ಲಿ ತೊಡಗಿತು. ಕುಟುಂಬದ ಪೂರ್ವಿಕರು ಕ್ರಮೇಣ ಕಷ್ಟಪಟ್ಟು ಕೆಲಸಮಾಡಿದರು. ಹೊಲ ಗದ್ದೆ ತೋಟಗಳನ್ನು ಅಭಿವೃದ್ಧಿಪಡಿಸಿಕೊಂಡರು. ಕಾಲಕ್ರಮೇಣ ಆ ಕುಟುಂಬವು ಅನುಕೂಲಸ್ಥ ಕುಟುಂಬವಾಯಿತು. ನಾವೆಲ್ಲಾ ಮೊದಲಿನಿಂದಲೂ ಇಲ್ಲಿದ್ದವರು; ಎಲ್ಲಿಂದಲೋ ಬಂದ ಇವರು ದಿನ ದಿನಕ್ಕೂ ಅಭಿವೃದ್ಧಿ ಕಾಣುತ್ತಿದ್ದಾರಲ್ಲಾ ಎಂದು ಕೆಲವು ಮೂಲ ನಿವಾಸಿಗಳು ಮಾತನಾಡಿಕೊಂಡರು. ಹೊಟ್ಟೆಕಿಚ್ಚುಪಟ್ಟುಕೊಂಡ ಅವರು ಸಣ್ಣಪುಟ್ಟ ಜಗಳಗಳ ಮೂಲಕ ಇವರ ನೆಮ್ಮದಿಗೆ ಭಂಗ ತರಲು ಪ್ರಾರಂಭಿಸಿದರು. ಆದರೂ ಗೌಡರ ಪೂರ್ವಿಕರು ಅಂಜದೆ ಮತ್ತು ಎದೆಗುಂದದೆ ಶ್ರಮವಹಿಸಿ ಕೆಲಸ ಮಾಡುತ್ತಿದ್ದರು. ಹೊಟ್ಟೆಕಿಚ್ಚಿನ ಜನರೊಡನೆ ಮಾತಿಗೆ ಮಾತು ಬೆಳೆಸದೆ ತಮ್ಮ ಹಿಂದಿನ ಕಷ್ಟಕಾರ್ಪಣ್ಯಗಳ ಅನುಭವದ ಆಧಾರದ ಮೇಲೆ ಜಗಳಗಳನ್ನು ಅಲ್ಲಲ್ಲಿಯೇ ನಿವಾರಿಸಿಕೊಳ್ಳುತ್ತಿದ್ದರು. ಜಗಳಕ್ಕೆ ಬಂದವರೊಡನೆ ಬಿರುಸು ಮಾತುಗಳನ್ನು ಆಡದೆ ಮೃದು ಮಾತುಗಳಿಂದ ಅವರ ಮನಸ್ಸನ್ನು ಪರಿವರ್ತನೆಗೊಳಿಸುತ್ತಿದ್ದರು. ಸಜ್ಜನಿಕೆ, ಬುದ್ಧಿ ಕೌಶಲ್ಯಗಳನ್ನು ಬಳಸಿಕೊಂಡು ಊರಿನ ಜನರೊಡನೆ ಸೌಹಾರ್ದಯುತವಾಗಿ ಬೆರೆತರು. ಆಸ್ತಿ-ಪಾಸ್ತಿ ಅಭಿವೃದ್ಧಿಪಡಿಸಿಕೊಂಡು ಸ್ಥಿತಿವಂತರಾದ ಇವರು ಊರಿನ ಗಣ್ಯರೆನಿಸಿದರು. ಇದರಿಂದ ಏಳೂರುಗಳ ಪಟೇಲಗಾರಿಕೆಯ ಗೌರವ ಶ್ರೀಮನ್ಮಹಾರಾಜರ ಆಡಳಿತದಿಂದ ಈ ಕುಟುಂಬಕ್ಕೆ ದೊರೆಯಾಯಿತು. ಪಟೇಲಗಾರಿಕೆ ದೊರೆತರೂ ಅಧಿಕಾರ ಬಲದ ದರ್ಪ ದೌಲತ್ತು ತೋರಿಸದೆ ಸಜ್ಜನಿಕೆಯಿಂದ ನಡೆದುಕೊಳ್ಳುತ್ತಾ ಸುತ್ತಮುತ್ತಲ ಹಳ್ಳಿಯ ಜನರ ಪ್ರೀತಿ ವಿಶ್ವಾಸ ಗಳಿಸಿಕೊಂಡು ಸತ್ಯ, ಧರ್ಮ, ನ್ಯಾಯ, ನೀತಿ, ಮತ್ತು ದೈವಶ್ರದ್ಧೆಯಿಂದ ಶ್ರಮವಹಿಸಿ ಕೆಲಸ ಮಾಡತೊಡಗಿದರು. ದೀನದಲಿತರಿಗೆ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ದೇವರು ಕರುಣಿಸಿದ್ದಾನೆ ಎಂದು ಭಾವಿಸಿ ಅಗತ್ಯವಿದ್ದವರಿಗೆ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪಟೇಲಗಾರಿಕೆಯ ಹೊಣೆಯನ್ನು ಚನ್ನಾಗಿ ನಡೆಸಿಕೊಂಡು ಬಂದು ಹೆಸರು ವಾಸಿಯಾದರು. ತಮ್ಮ ಕೆಲಸಕಾರ್ಯಗಳ ಮೂಲಕ, ಸ್ನೇಹ ಸಂಪನ್ನ ನಡೆನುಡಿಯ ಮೂಲಕ, ಪರಸ್ಪರ ಸಹಕಾರ ಮನೋಭಾವದ ಮೂಲಕ ಅಲ್ಲಿನ ಮೂಲನಿವಾಸಿಗಳ ಹೃದಯವನ್ನು ಗೆದ್ದು ಅವರನ್ನು ಒಲಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಕೊನೆಗೆ ಅಲ್ಲಿನ ಮುಖಂಡರೆನಿಸಿ, ಸಮಾಜೋದ್ಧಾರ ಕಾರ್ಯಗಳಲ್ಲಿ ನಿರತರಾಗುವುದರ ಮೂಲಕ ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದರು.

ಹೀಗೆ ಬಂದ ಕೊಮ್ಮೆಕುಲದ ವಂಶಸ್ಥರಲ್ಲಿ ಅಂಕೇಗೌಡರ ಕುಟುಂಬವೂ ಒಂದು. ಅವರ ತಂದೆ ಸಿದ್ದೇಗೌಡರು. ಸಿದ್ದೇಗೌಡರ ತಂದೆ ಮಾದೇಗೌಡರು. ಮಾದೇಗೌಡರು

ಯಾವುದೋ ಕಷ್ಟಕಾಲದಲ್ಲಿ ಸಾಲ ಮಾಡಿದ್ದರು. ಸಾಲದ ಕಾರಣದಿಂದ ತಂದೆ ಮಾದೇಗೌಡರು ಮತ್ತು ಮಗ ಸಿದ್ದೇಗೌಡರ ಮಧ್ಯೆ ವಿರಸದ ಮಾತುಗಳಾದವು. ಮಾದೇಗೌಡರು ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಒಳ್ಳೆಯ ವ್ಯವಸಾಯಗಾರರಾಗಿದ್ದರು. ಮಗ ಸಿದ್ದೇಗೌಡರಿಗೆ ನಾನು ಮಾಡಿದ ಸಾಲವು ಹೊರೆಯಾಗಬಾರದು ಎಂದು ಅವರು ತೀರ್ಮಾನಿಸಿ ರಾಮನಗರ ತಾಲ್ಲೂಕಿನ ಗುಡ್ಡಗಾಡು ಪ್ರದೇಶದಲ್ಲಿ ನೂರು ಎಕರೆ ದರಕಾಸ್ತು ಜಮೀನನ್ನು ಕೊಂಡುಕೊಂಡು ಅಲ್ಲಿ ವಿವಿಧ ರೀತಿಯ ಸಿರಿಧಾನ್ಯಗಳನ್ನು, ಜೊತೆಗೆ ರಾಗಿ, ತೊಗರಿ, ಹುರುಳಿ, ಹರಳು ಇವುಗಳನ್ನೆಲ್ಲ ಬೆಳೆದು ಮಾರಾಟಮಾಡಿ ತಾವು ಮಾಡಿಕೊಂಡಿದ್ದ ಎಲ್ಲಾ ಸಾಲಗಳನ್ನು ತೀರಿಸಿ ಋಣಮುಕ್ತರಾದರು.

ಅಂಕೇಗೌಡರಿಗೆ ಮಾದೇಗೌಡ ಎಂಬ ಒಬ್ಬ ತಮ್ಮ ಮತ್ತು ಕಾಡಮ್ಮ ಎಂಬ ಒಬ್ಬ ತಂಗಿ ಇದ್ದರು. ಕಾಡಮ್ಮನನ್ನು ಎಲೆಕೇರಿಗೆ ಕೊಟ್ಟು ಮದುವೆ ಮಾಡಿದ್ದರು. ತಮ್ಮ ಮಾದೇಗೌಡರಿಗೆ ಪುಟ್ಟಂಕಮ್ಮ ಮತ್ತು ಕೆಂಪಮ್ಮ ಎಂಬ ಹೆಸರಿನ ಇಬ್ಬರು ಹೆಣ್ಣು ಮಕ್ಕಳಿದ್ದರು. ಕುಟುಂಬವು ತುಂಬಾ ಆಸ್ತಿ ಪಾಸ್ತಿಗಳನ್ನು ಹೊಂದಿದ್ದು ಅದಕ್ಕೆ ವಾರಸುದಾರರಾಗಬೇಕಾದ ಗಂಡುಮಕ್ಕಳು ಬೇಕು ಎಂಬ ಕಾರಣದಿಂದ ಅಣ್ಣ ಅಂಕೇಗೌಡರು ಎಲೆಕೇರಿಯ ಪುಟ್ಟೇಗೌಡ ಎಂಬ ಹುಡುಗನನ್ನೂ; ತಮ್ಮ ಮಾದೇಗೌಡರು ಸಿದ್ದಲಿಂಗಪ್ಪ ಎಂಬ ಅರಳಾಳುಸಂದ್ರದ ಹುಡುಗನನ್ನೂ ಕಾನೂನು ಪ್ರಕಾರ ದತ್ತು ತೆಗೆದುಕೊಂಡರು. ಇದಾದ ಸ್ವಲ್ಪ ದಿನಗಳಲ್ಲಿ ತಮ್ಮ ಮಾದೇಗೌಡರಿಗೆ ಆರೋಗ್ಯ ಹದಗೆಟ್ಟಿತು. ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದುಃಖದಿಂದ "ಅಣ್ಣಾ, ನಾನು ಈ ಖಾಯಿಲೆಯಿಂದ ವಾಸಿಯಾಗಿ ಹಿಂದಕ್ಕೆ ಬರುತ್ತೇನೋ ಇಲ್ಲವೋ ಗೊತ್ತಿಲ್ಲ, ನಾವು ಸತ್ತ ನಂತರ ನಮಗೆ ಮತ್ತು ನಮ್ಮ ಮನೆ ಹಿರಿಯರಿಗೆ ದತ್ತು ಪುತ್ರರು ತಿಲತರ್ಪಣ ಕೊಟ್ಟರೆ ಸದ್ಗತಿ ದೊರೆಯುವುದಿಲ್ಲ. ಆದ್ದರಿಂದ ನೀನು ಇನ್ನೊಂದು ಹೆಣ್ಣನ್ನು ಮದುವೆಯಾಗಿ ವಂಶವನ್ನು ಉದ್ಧಾರಮಾಡಬೇಕು" ಎಂದು ಕೇಳಿಕೊಂಡರು. ತಮ್ಮನ ಸಲಹೆಯಂತೆ ಅಂಕೇಗೌಡರ ಕುಟುಂಬದ ಹಿರಿಯರು ಇವರಿಗೆ ಮದುವೆ ಮಾಡಲು ಹೆಣ್ಣು ಹುಡುಕುತ್ತಾ ಇದ್ದರು. ಕೊನೆಗೆ ಮೈಸೂರು-ಬೆಂಗಳೂರು ರಸ್ತೆಯ ಭೈರಾಪಟ್ಟಣದ ಹತ್ತಿರದ ಸಂಕಲಗೆರೆ ಎಂಬ ಊರಿನ ವ್ಯವಸಾಯಗಾರ ಕುನ್ನೇಗೌಡರ ಮನೆಯ ಹೆಣ್ಣನ್ನು ಮದುವೆಯಾದರು.

ಸಂಕಲಗೆರೆಯ ಕುನ್ನೇಗೌಡರಿಗೆ ಎಲ್ಲೇಗೌಡನೆಂಬ ಮಗನಿದ್ದನು. ಎಲ್ಲೇಗೌಡ ಹುಟ್ಟಿದ ಮೇಲೆ ಏಳೆಂಟು ವರ್ಷ ಕುನ್ನೇಗೌಡ ದಂಪತಿಗಳಿಗೆ ಮಕ್ಕಳಾಗಲಿಲ್ಲ. ಹೆಣ್ಣು ಮಗಳು ಇರಲಿ ಎಂಬ ಅಪೇಕ್ಷೆ ಅವರಿಗೆ ಉಂಟಾಯಿತು. ಹೆಣ್ಣು ಮಗುವನ್ನು ದತ್ತು ತೆಗೆದುಕೊಳ್ಳಲು

ಬೆಳಕೆರೆ ಗ್ರಾಮದ ಬಂಧುಗಳನ್ನು ಕೇಳಿದರು. ಅವರ ಆಸೆ ಅಲ್ಲಿ ನೆರವೇರಲಿಲ್ಲ. ಊರಿಗೆ ಹಿಂತಿರುಗಿ ಬರುತ್ತಿದ್ದಾಗ ದಾರಿಯಲ್ಲಿ ಒಬ್ಬ ಹೆಣ್ಣು ಮಗಳು ತನ್ನ ಗುಡಿಸಿಲಿನಲ್ಲಿ ಮಗುವಿನೊಂದಿಗೆ ವಾಸ ಮಾಡಿಕೊಂಡಿದ್ದಳು. ಆ ಹೆಣ್ಣು ಮಗಳು ಎಲ್ಲೇಗೌಡರ ಹೆಂಡತಿಯನ್ನು "ಯಾಕಕ್ಕಾ ಸಪ್ಪಗಿದ್ದೀರಿ? ಈ ಉರಿಬಿಸಿಲಿನಲ್ಲಿ ಒಬ್ಬಳೇ ಹೋಗುತ್ತಿದ್ದೀರಿ"? ಎಂದು ಕೇಳಿ ವಿಷಯ ತಿಳಿದುಕೊಂಡಳು. ಉದಾರತೆಯಿಂದ ತನ್ನ ಮಗುವನ್ನು ಚನ್ನಾಗಿ ಸಾಕಿಕೊಳ್ಳಕ್ಕಾ ಎಂದು ಕೊಟ್ಟಳು. ಎಲ್ಲೇಗೌಡ ದಂಪತಿಗಳು ಮುದ್ದಾದ ಕೆಂಪಗಿದ್ದ ಆ ಮಗುವಿಗೆ ಲಿಂಗಮ್ಮ ಎಂಬ ಹೆಸರಿಟ್ಟರು. ದೇವರು ನಮ್ಮ ಅಪೇಕ್ಷೆಯಂತೆ ಹೆಣ್ಣು ಮಗಳ ವರ ನೀಡಿದನಲ್ಲಾ ಎಂದು ಹರ್ಷಚಿತ್ತರಾದರು.

ಸಾಕುಮಗಳು ಲಿಂಗಮ್ಮನಿಗೆ ಆರು ವರ್ಷ ವಯಸ್ಸಾದ ಮೇಲೆ ದೊಡ್ಡಮಳ್ಳೂರಿನ ಹದಿಹರೆಯದ ಯಾಲಕ್ಕಿಗೌಡ ಎಂಬ ವರನಿಗೆ ಎಲ್ಲೇಗೌಡ ದಂಪತಿಗಳು ಮದುವೆ ಮಾಡಿದರು. ಯಾಲಕ್ಕಿಗೌಡ ಪ್ರಾಯದ ಹುಡುಗ; ಹೆಂಡತಿ ಲಿಂಗಮ್ಮ ಇನ್ನೂ ಚಿಕ್ಕವಳು. ಹೆಂಡತಿ ಪ್ರಾಯಕ್ಕೆ ಬರುವವರೆಗೂ ಪ್ರಾಯಕ್ಕೆ ಬಂದಿದ್ದ ಯಾಲಕ್ಕಿಗೌಡರು ಕಾಯಲಾಗದೆ ಚಕ್ಕೆರೆಯ ಶೇಕದಾರರ ತಂಗಿ ಕೆಂಪಮ್ಮನನ್ನು ಮದುವೆಯಾದರು. ಲಿಂಗಮ್ಮ ತನ್ನ ತವರು ಮನೆಯಲ್ಲೇ ಉಳಿದಳು. ಈ ಮಧ್ಯೆ ಕುಟುಂಬದ ಹಿರಿಯರು ಅಂಕೇಗೌಡರಿಗೆ ಸ್ವಂತ ಮಕ್ಕಳಿಲ್ಲದ ಕಾರಣವಾಗಿ ಅವರಿಗೆ ಎರಡನೆಯ ಮದುವೆಗಾಗಿ ಹುಡುಗಿಯನ್ನು ಹುಡುಕುತ್ತಿದ್ದರು. ಅಂಕೇಗೌಡರ ಮನೆ ಹಿರಿಯರು ಎಲ್ಲೇಗೌಡ ದಂಪತಿಗಳ ಜೊತೆ ಮಾತನಾಡಿ ತಮ್ಮ ಮಗಳು ಲಿಂಗಮ್ಮನನ್ನು ಅಂಕೇಗೌಡರಿಗೆ ಕೂಡಿಕೆ ಮಾಡಿಕೊಡಿ ಎಂದು ಕೇಳಿಕೊಂಡರು. ಎಲ್ಲರೂ ಸಂತೋಷದಿಂದ ಒಪ್ಪಿ ಕೂಡಿಕೆ ಮಾಡಿಕೊಟ್ಟರು. ಲಿಂಗಮ್ಮ ಮತ್ತು ಅಂಕೇಗೌಡರು ಪರಸ್ಪರ ಸತಿ-ಪತಿಗಳಾದರು.

ಅಂಕೇಗೌಡ ಮತ್ತು ಲಿಂಗಮ್ಮ ದಂಪತಿಗಳಿಗೆ ಮದುವೆಯಾದ ಎರಡು ವರ್ಷಗಳ ನಂತರ ಸಿದ್ದೇಗೌಡ(ಅಪ್ಪಾಜಿಗೌಡ)ಹುಟ್ಟಿದರು. ಇವರಾದ ನಂತರ ಗೌರಮ್ಮ, ಕೆಂಪಮ್ಮ ಮತ್ತು ಮಾದಯ್ಯಗೌಡರು ಹುಟ್ಟಿದರು. ಮಗಳು ಗೌರಮ್ಮನನ್ನು ಚಕ್ಕರೆ ಗ್ರಾಮದ ಗಡ್ಡಪ್ಪನವರಿಗೆ ಕೊಟ್ಟು ಮದುವೆ ಮಾಡಿದರು. ಅಂಕೇಗೌಡರ ತಂಗಿ ಕಾಡಮ್ಮನವರ ಮಗಳು ಸಂಜೀವಮ್ಮನನ್ನು ಬನ್ನೀಕುಪ್ಪೆ ದೊಡ್ಡ ಚೂಡೇಗೌಡರಿಗೆ ಮದುವೆ ಮಾಡಿದರು. ಅಂಕೇಗೌಡರ ದತ್ತು ಮಕ್ಕಳಾದ ಪುಟ್ಟೇಗೌಡರಿಗೆ ದೊಡ್ಡಮಳ್ಳೂರಿನಿಂದಲೂ ಮತ್ತು ಸಿದ್ದಪ್ಪನವರಿಗೆ ಅಂಕನಹಳ್ಳಿಯಿಂದಲೂ ಹೆಣ್ಣುಗಳನ್ನು ತಂದು ಮದುವೆ ಮಾಡಿದರು. ಅಂಕೇಗೌಡರ ತಮ್ಮ ಮಾದೇಗೌಡರ ಇಬ್ಬರು ಹೆಣ್ಣು ಮಕ್ಕಳಲ್ಲಿ ಪುಟ್ಟಂಕಮ್ಮನನ್ನು ಚಕ್ಕೆರೆಯ ಹುಡುಗನಿಗೂ ಮತ್ತು ಕೆಂಪಮ್ಮನನ್ನು ಮಂಗಳವಾರಪೇಟೆಯ ಕಂಚೀಗೌಡರ ಮಗನಿಗೆ ಕೊಟ್ಟು ಮದುವೆ ಮಾಡಿದರು.

ಅಂಕೇಗೌಡರ ಕಾಲಕ್ಕೂ ವಂಶಪರಂಪರೆಯಿಂದ ಬಂದಿದ್ದ ಪಟೇಲಗಾರಿಕೆ ಮುಂದುವರಿದಿತ್ತು. ಹಿರಿಯ ಮಗ ಅಪ್ಪಾಜಿಗೌಡರಿಗೆ ೧೭ ವರ್ಷಗಳಾದಾಗ ಸಂಕಲಗೆರೆಯ ಎಲ್ಲೇಗೌಡರ ದೊಡ್ಡ ಮಗಳು ಈರಮ್ಮನವರನ್ನು ಕೊಟ್ಟು ಮದುವೆ ಮಾಡಿದರು. ಎಲ್ಲೇಗೌಡರು ತಮ್ಮ ಎರಡನೆಯ ಮಗಳು ಚನ್ನಮ್ಮನನ್ನು ಅರಳಾಳುಸಂದ್ರದ ದೊಡ್ಡ ಪುಟ್ಟೇಗೌಡರಿಗೆ ಕೊಟ್ಟು ಮದುವೆ ಮಾಡಿದರು. ಮಗ ಪುಟೇಗೌಡರಿಗೆ ಮೊದಲ ಹೆಂಡತಿಯಿಂದ ಮಕ್ಕಳಾಗದ ಕಾರಣ ಕಾನಕಾನಹಳ್ಳಿಯ ಗುರುಕಾರರ ಮನೆಯ ಹೆಣ್ಣನ್ನು ತಂದು ಎರಡನೆಯ ಮದುವೆ ಮಾಡಿದರು.

ಅಂಕೇಗೌಡರ ಹಿರಿಯ ಮಗ ಅಪ್ಪಾಜಿಗೌಡರು ಸುಮಾರು ೧೨ ವರ್ಷಗಳ ಕಾಲ ನಾಟಕ ಕಂಪನಿಯಲ್ಲಿದ್ದು ಮೈಸೂರು ಸಂಸ್ಥಾನ, ಬಾಂಬೆ ಪ್ರೆಸಿಡೆನ್ಸಿ, ಮದ್ರಾಸ್ ಪ್ರೆಸಿಡೆನ್ಸಿಯ ತೆಲುಗು, ತಮಿಳು ಮಾತನಾಡುವ ಟೌನುಗಳಲ್ಲಿ ಆಡುತ್ತಿದ್ದ ನಾಟಕಗಳಲ್ಲಿ ಪಾರ್ಟುಮಾಡುತ್ತಿದ್ದರು. ಮಧ್ಯೆ ಮಧ್ಯೆ ಮಳೆಗಾಲ ಮತ್ತು ರಜೆಗಳನ್ನು ಪಡೆದುಕೊಂಡು ತಿಮ್ಮಸಂದ್ರದಲ್ಲಿ ದಿನಗಳನ್ನು ಕಳೆಯುತ್ತಿದ್ದಾಗ ತಮ್ಮ ಮಾದಯ್ಯಗೌಡರು ಚನ್ನಪಟ್ಟಣದಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸುವ ಹಂತಕ್ಕೆ ಬಂದಿದ್ದರು. ಮಾದಯ್ಯಗೌಡರು ಚನ್ನಾಗಿ ಓದುತ್ತಿದ್ದುದರಿಂದ ಬಂಧು-ಬಾಂಧವರು ಮತ್ತು ಕುಟುಂಬದವರೆಲ್ಲರೂ ಒಕ್ಕೊರಲಿನಿಂದ ಬಾಲಕ ಮಾದಯ್ಯಗೌಡ ಇನ್ನೂ ಮುಂದಕ್ಕೆ ಓದಿ ದೊಡ್ಡ ಮನುಷ್ಯನಾಗಲಿ ಎಂದು ತೀರ್ಮಾನಿಸಿದರು. ಅದರಂತೆ ಬಾಲಕ ಮಾದಯ್ಯಗೌಡರು ಮುಂದೆ ಬೆಂಗಳೂರಿಗೆ ಹೋಗಿ ಇಟರ್‌ಮೀಡಿಯಟ್ ಕಾಲೇಜಿಗೆ ಸೇರಲಿ ಎಂದು ತೀರ್ಮಾನವಾಯಿತು. ಬಾಲಕ ಮಾದಯ್ಯಗೌಡರು ಆಗ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಪಾಸಾಗಿದ್ದುದು ಇಡೀ ಊರಿನಲ್ಲಿಯ ಎಲ್ಲರನ್ನೂ ಸಂತೋಷಪಡಿಸಿತು. ಹೀಗೆ ಇರುವಾಗ ಅಂಕೇಗೌಡರ ಕುಟುಂಬಕ್ಕೆ ನಿಕಟವಾದ ಬಂಧು-ಮಿತ್ರರು ಒಂದು ದಿನ ಬಂದು ಅಪ್ಪಾಜಿಗೌಡರನ್ನು ಭೇಟಿಮಾಡಿ "ಇಷ್ಟು ವರ್ಷ ನೀವು ನಾಟಕ ಕಂಪನಿಯಲ್ಲಿದ್ದು ಪಾರ್ಟು ಮಾಡಿದ್ದು ಸಾಕು; ಹೇಗೂ ಸುತ್ತ ಹಳ್ಳಿಗಳಲ್ಲಿ ಒಳ್ಳೆಯ ಹೆಸರು ಮಾಡಿದ್ದೀರಿ. ಇನ್ನು ಮುಂದೆ ನಾಟಕ ಕಂಪನಿ ಬಿಟ್ಟು ಬಂದು ಮನೆಯ ಹಿರಿಯ ಮಗನಾಗಿ ಎಲ್ಲಾ ಜವಾಬ್ದಾರಿ ತೆಗೆದುಕೊಂಡು ಲಕ್ಷ್ಮಣನಂತಿರುವ ತಮ್ಮ ಮಾದಯ್ಯಗೌಡನನ್ನು ಬೆಂಗಳೂರಿಗೆ ಓದಲು ಕಳಿಸಿರಿ" ಎಂದು ಸಲಹೆ ನೀಡಿದರು. ತಂದೆ-ತಾಯಿಯವರ ಅಭಿಪ್ರಾಯವೂ ಅದೇ ಆಗಿತ್ತು.

ಅಪ್ಪಾಜಿಗೌಡರಿಗೂ ಅವರೆಲ್ಲಾ ಹೇಳಿದ್ದು ಸರಿ ಎನಿಸಿತು. ಅಪ್ಪಾಜಿಗೌಡರಿಗೆ ಲಕ್ಷ್ಮಣನಂತಿದ್ದ ತಮ್ಮ ಮಾದಯ್ಯಗೌಡರ ಬಗ್ಗೆ ಅಪರಿಮಿತವಾದ ಭ್ರಾತೃವಾತ್ಸಲ್ಯವಿತ್ತು.

ತಮ್ಮ ಮಾದಯ್ಯಗೌಡ ಇನ್ನೂ ಹೆಚ್ಚು ಓದಿ ದೊಡ್ಡ ಮನುಷ್ಯನಾಗಲಿ ಎಂದು ಅವರೂ ಹಾರೈಸಿದರು. ಈ ಸಮಯದಲ್ಲಿ ಅಪ್ಪಾಜಿಗೌಡರು ಎಲ್ಲರ ಮುಂದೆ ಒಂದು ಷರತ್ತನ್ನು ಇಟ್ಟರು. "ನಾನು ಇನ್ನೊಂದು ಮದುವೆ ಮಾಡಿಕೊಳ್ಳಲು ನೀವೆಲ್ಲಾ ಒಪ್ಪಿಗೆ ನೀಡಿದರೆ ಮಾತ್ರ ನಾನು ಊರಲ್ಲಿರುತ್ತೇನೆ ಮತ್ತು ಕುಟುಂಬದ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ" ಎಂದರು. ಸದ್ಯ ನಾಟಕ ಕಂಪನಿ ಬಿಟ್ಟು ಊರಲ್ಲಿ ಬಂದಿರಲು ಒಪ್ಪಿದನಲ್ಲ ಎಂದು ಹಿರಿಯರು ಸಮಾಧಾನಗೊಂಡು ಇನ್ನೊಂದು ಮದುವೆಯಾಗಲು ತಕ್ಷಣವೇ ಒಪ್ಪಿಗೆ ಕೊಟ್ಟರು. ಬೇರೆ ಬೇರೆ ಕಡೆ ಹೆಣ್ಣು ಹುಡುಕಿ, ಕೊನೆಗೆ ರಾಮನಗರ ತಾಲ್ಲೂಕು ಶ್ರೀರೇವಣಸಿದ್ದೇಶ್ವರ ಬೆಟ್ಟದ ತಪ್ಪಲಿನಲ್ಲಿ ಇರುವ ಅವ್ವೇರಹಳ್ಳಿ ವಿಷಕಂಠೇಗೌಡರ ಪುತ್ರಿ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾಗಿದ್ದ ದೇವಮ್ಮನೊಂದಿಗೆ ಅಪ್ಪಾಜಿಗೌಡರಿಗೆ ಮದುವೆ ಮಾಡಿದರು. ಇತ್ತ ತಮ್ಮ ಮಾದಯ್ಯಗೌಡರು ತಮ್ಮ ವಿದ್ಯಾರ್ಜನೆಯ ಕಡೆ ಗಮನಹರಿಸಿ ಎಲ್ಲರ ಮೆಚ್ಚುಗೆ ಗಳಿಸಿದರು. ಅಣ್ಣ ಅಪ್ಪಾಜಿಗೌಡರು ನಾಟಕ ಕಲೆಯಂತಹ ಕಲೆಯಲ್ಲಿ ಆಸಕ್ತರಾಗಿ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೆಸರು ಮಾಡಿದರೆ, ಅತ್ತ ಮಾದಯ್ಯಗೌಡರು ಓದಿನತ್ತ ತಮ್ಮ ಆಸಕ್ತಿಯನ್ನು ಬೆಳೆಸಿಕೊಂಡು ಬಂದರು. ಮಾದಯ್ಯಗೌಡರ ಬುದ್ಧಿಶಕ್ತಿ, ಅವರ ಹೃದಯವಂತಿಕೆ ಹಾಗೂ ನಡೆನುಡಿ, ಸೌಜನ್ಯ ಸ್ವಭಾವ, ಸ್ನೇಹ ವರ್ಗದವರಲ್ಲಷ್ಟೇ ಅಲ್ಲ; ಊರಿನವರ ಮನಸ್ಸನ್ನು ಸೂರೆಗೊಂಡಿತ್ತು. ಬಡವರ ಬಗೆಗೆ ನೊಂದವರ ಬಗೆಗೆ, ಅಸಹಾಯಕರ ಬಗೆಗೆ ಅವರು ತೋರುತ್ತಿದ್ದ ಮರುಕ, ಅವರ ಮಾನವೀಯ ಗುಣಗಳನ್ನು ಪ್ರದರ್ಶಿಸುತ್ತಿತ್ತು. ಅವರಲ್ಲಿ ಸಾಮಾಜಿಕ ಕಾಳಜಿ, ಮುಂದೆ ಅವರೊಬ್ಬ ಮುಖಂಡನಾಗಿ ಬೆಳೆಯುವ ಸೂಚನೆಯನ್ನು ಆಗಲೇ ಪ್ರದರ್ಶಿಸುತ್ತಿದ್ದವು. ಸುತ್ತ ಮುತ್ತಲಿನ ಗ್ರಾಮಸ್ಥರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡು ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಎರಡು ಬಾರಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಆರಿಸಿ ಬಂದು ಜನರಿಗೆ ಅನೇಕ ಉಪಯುಕ್ತ ಕೆಲಸಕಾರ್ಯಗಳನ್ನು ಮಾಡಿದರು.

❖

# ೩. ಬಾಲ್ಯ ಮತ್ತು ವಿದ್ಯಾಭ್ಯಾಸ

ಮಾದಯ್ಯಗೌಡರ ಪ್ರಾರಂಭಿಕ ವಿದ್ಯಾಭ್ಯಾಸ ತಿಮ್ಮಸಂದ್ರದಲ್ಲಿ ನಡೆಯಿತು. ಅದು ಅಕ್ಷರ ತಿದ್ದುವ ಪದ್ಧತಿಯ ಪ್ರಾಥಮಿಕ ವಿದ್ಯಾಭ್ಯಾಸ. ಗುರುಗಳು ವಿದ್ಯಾರ್ಥಿ ಮಕ್ಕಳಿಗೆ ಮರಳ ಮೇಲೆ ಬೆರಳಿನಿಂದ ತಿದ್ದಿಸಿ ಅಕ್ಷರ ಕಲಿಸುತ್ತಿದ್ದರು. ಮಕ್ಕಳು ಅಕ್ಷರ ಕಲಿತ ನಂತರ ಕಾಪಿ ಮಾಡುವುದನ್ನು ಮತ್ತು ಬರೆಯುವುದನ್ನು ಕಲಿಸುತ್ತಿದ್ದರು. ತಿದ್ದಿಸುವುದರ ಜೊತೆಗೆ ಆಗ ಚನ್ನಪಟ್ಟಣದ ಸುತ್ತಮುತ್ತ ದೊರೆಯುತ್ತಿದ್ದ ಮೈಸೂರು ವೃತ್ತಾಂತ, ಮೈಸೂರ್ ಸ್ಟಾರ್, ಕನ್ನಡ ಧುರೀಣ ಪತ್ರಿಕೆಗಳನ್ನು ಕಾಪಿ ಮಾಡಲು ಮಕ್ಕಳಿಗೆ ಗುರುಗಳು ಹಚ್ಚುತ್ತಿದ್ದರು. ಇದು ಆ ಕಾಲದ ಹೋಮ್‌ವರ್ಕ್ ಆಗಿತ್ತು. ಗೌಡರ ಪ್ರೌಢಶಿಕ್ಷಣ ಚನ್ನಪಟ್ಟಣದಲ್ಲಿ ಆಯಿತು; ಚನ್ನಪಟ್ಟಣದಲ್ಲಿ ಓದುತ್ತಿರುವಾಗ ತಿಟ್ಟಮಾರನಹಳ್ಳಿ ವೆಂಕಟಪ್ಪನವರು, ಎಚ್.ಕೆ.ವೀರಣ್ಣಗೌಡರು ಮುಂತಾದವರು ಇವರ ಸಹಪಾಠಿಗಳಾಗಿದ್ದರು. ಕೆ.ಎಚ್.ರಾಮಯ್ಯನವರು, ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ರವರ ಮತ್ತು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀಮಾಧವರಾವ್‌ರವರ ಆದೇಶದಂತೆ ಹಿಂದುಳಿದ ಜನಾಂಗದಲ್ಲಿ ಶಿಕ್ಷಣ ಮತ್ತು ನಾಗರೀಕ ಜೀವನದ ಬಗೆಗೆ ವಿಶೇಷ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲು ಮೈಸೂರು

ಸಂಸ್ಥಾನದಲ್ಲಿ ಪ್ರವಾಸ ಮಾಡಿದರು. ಆ ಸಂದರ್ಭದಲ್ಲಿ ವಿದ್ಯಾರ್ಥಿ ಮಾದಯ್ಯಗೌಡರು ಮತ್ತು ಅವರ ಸಹಪಾಠಿಗಳು ರಾಮಯ್ಯನವರ ಪ್ರಭಾವಕ್ಕೆ ಒಳಗಾದರು.

ಮೈಸೂರು ಸಂಸ್ಥಾನದಲ್ಲಿ ಕೆ.ಎಚ್.ರಾಮಯ್ಯನವರು ಗಣ್ಯವ್ಯಕ್ತಿಯಾಗಿದ್ದರು. ರಾಮಯ್ಯನವರು ಎಚ್.ಸಿ.ದಾಸಪ್ಪನವರಿಗೆ ಹೆಣ್ಣು ಕೊಟ್ಟ ಮಾವನವರು. ಶ್ರೀಮತಿಯಶೋಧರಮ್ಮನವರ ತಂದೆಯವರು. ಮದ್ರಾಸ್‌ನಲ್ಲಿ ಬಿ.ಎ., ಬಿ.ಎಲ್., ಓದಿದ್ದ ರಾಮಯ್ಯನವರು ಸಂಸ್ಥಾನದಲ್ಲಿ ಹೆಸರುವಾಸಿಯಾಗಿದ್ದರು. ಕೆಲವು ವರ್ಷಗಳ ನಂತರ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ಅವರ ಪ್ರೋತ್ಸಾಹದೊಂದಿಗೆ ಲಂಡನ್ನಿಗೆ ಹೋಗಿ ಬಾರ್-ಅಟ್-ಲಾ ಪದವಿ ಪಡೆದು ಬಂದಿದ್ದವರು. ಇಡೀ ಮೈಸೂರು ಸಂಸ್ಥಾನಕ್ಕೆ ಸಹಕಾರೀ ಸಂಘಗಳ ರಿಜಿಸ್ಟ್ರಾರ್‌ರವರಾಗಿದ್ದ ರಾಮಯ್ಯನವರು ತಮ್ಮ ಸರ್ಕಾರಿ ಸೇವೆಯ ಜೊತೆಗೆ ಸಾಮಾಜಿಕ ಸೇವಾ ಕಾರ್ಯಗಳಲ್ಲಿಯೂ ಆಸಕ್ತಿವಹಿಸಿದ್ದರು. ನೆರವು ಕೋರಿ ಬಂದ ಬಡ ವಿದ್ಯಾರ್ಥಿಗಳಿಗೆ ವಿವಿಧ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು. ಶ್ರೀಮನ್ಮಹಾರಾಜರ ಅಪೇಕ್ಷೆಯ ಮೇರೆಗೆ ಆ ಕಾಲದಲ್ಲಿ ಹಿಂದುಳಿದಿದ್ದ ಒಕ್ಕಲಿಗ ಜನಾಂಗದ ಅಭಿವೃದ್ಧಿ ಕಾರ್ಯದಲ್ಲಿ ವಿಶೇಷ ಆಸಕ್ತಿವಹಿಸಿದ್ದರು. ಗ್ರಾಮೀಣ ಪ್ರದೇಶದ ಬಡವಿದ್ಯಾರ್ಥಿಗಳ ಓದಿಗಾಗಿ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿ ಅವರ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡುವಲ್ಲಿ ಆಸಕ್ತರಾಗಿದ್ದರು. ಅಷ್ಟೇ ಅಲ್ಲ, ಒಕ್ಕಲಿಗರ ಸಂಘದ ಸ್ಥಾಪನೆ ಹಾಗೂ ಸಹಕಾರಿ ಸಂಘಗಳ ಸ್ಥಾಪನೆಯಲ್ಲಿಯೂ ರಾಮಯ್ಯನವರು ಮುಖ್ಯ ಪಾತ್ರವಹಿಸಿದ್ದರು.

ರಾಮಯ್ಯನವರು ಇಂಗ್ಲಿಷ್ ಮಹಿಳೆ ಡಾ.ಆನಿಬೆಸೆಂಟ್‌ರವರಿಂದ ಪ್ರಭಾವಿತರಾದವರು. ಆನಿಬೆಸೆಂಟ್‌ರ ನೇತೃತ್ವದ ಥಿಯೋಸಫಿಕಲ್ ಚಳುವಳಿಯಲ್ಲಿ ರಾಮಯ್ಯನವರು ತೊಡಗಿಕೊಂಡಿದ್ದರು. ಆನಿಬೆಸೆಂಟರು ಹತ್ತೊಂಬತನೆಯ ಶತಮಾನದ ಕೊನೆಯ ದಶಕದಲ್ಲಿ ಭಾರತಕ್ಕೆ ಬಂದರು. ಬಂದ ಮೇಲೆ ಸುಮಾರು ನಲವತ್ತು ವರ್ಷಗಳ ಕಾಲ ಹಿಂದೂ ಧರ್ಮದ ಪುನರುತ್ಥಾನ, ಸಮಾಜ ಸುಧಾರಣೆ, ಶಿಕ್ಷಣದ ಮುನ್ನಡೆ ಮತ್ತು ದೇಶದ ಸ್ವಾತಂತ್ರ್ಯ ಹೋರಾಟ ಮುಂತಾದ ಸೇವಾ ಕ್ಷೇತ್ರಗಳಲ್ಲಿ ಅವಿರತವಾಗಿ ಶ್ರಮಿಸಿ ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾದ ಸ್ಥಾನಗಳಿಸಿದರು. ರಾಜಾರಾಮ್ ಮೋಹನರಾಯ್ ಅವರಿಂದ ಪ್ರಾರಂಭವಾದ ಭಾರತದ ನವೋದಯ ಚಳುವಳಿಯು, ಸ್ವಾಮಿ ದಯಾನಂದ ಸರಸ್ವತಿ, ಶ್ರೀರಾಮಕೃಷ್ಣ ಪರಮಹಂಸರು, ಮತ್ತು ಸ್ವಾಮಿ ವಿವೇಕಾನಂದರ ಅಮೂಲ್ಯ ಕೊಡುಗೆಗಳಿಂದಾಗಿ ಮುನ್ನಡೆ ಸಾಧಿಸಿ, ಆನಿಬೆಸೆಂಟ್‌ರ ಥಿಯೋಸಫಿಕಲ್ ಚಳವಳಿಯ ದೆಸೆಯಿಂದ ಚೈತನ್ಯ ಪಡೆದುಕೊಂಡು, ಗಾಂಧೀಜಿಯವರ

ಮಹಾನ್ ಸಾಧನೆಯಿಂದ ಉತ್ತುಂಗ ಶಿಖರಕ್ಕೆ ಏರಿದುದನ್ನು ಭಾರತದ ಇತಿಹಾಸದ ಪುಟಗಳಲ್ಲಿ ನೋಡಬಹುದು. ಗಾಂಧೀಜಿಯವರು ಬಣ್ಣಿಸಿದಂತೆ ಆನಿಬೆಸೆಂಟರು ಸಲ್ಲಿಸಿದ ಸೇವೆಯ ನೆನಪು ಭಾರತ ಇರುವವರೆಗೂ ಅಮರವಾಗಿರುತ್ತದೆ.

ರಾಮಯ್ಯನವರು ಮಾದಯ್ಯ ಗೌಡರ ಸಾರ್ವಜನಿಕ ಚಟುವಟಿಕೆಗಳ ಕಾರ್ಯದಲ್ಲಿ ಗುರುಗಳಾಗಿದ್ದರು. ಹೀಗಾಗಿ ಗೌಡರ ಮೇಲೆ ಆನಿಬೆಸೆಂಟ್‌ರ ಥಿಯಾಸಫಿಕಲ್ ವಿಚಾರಗಳ ಗಾಢ ಪ್ರಭಾವ ಉಂಟಾಯಿತು. ಚನ್ನಪಟ್ಟಣವ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಗೌಡರಿಗೆ ಸಾರ್ವಜನಿಕ ಜೀವನವ ಪರಿಚಯ ಉಂಟಾಯಿತು. ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಶಿಕ್ಷಕರು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟ, ರಚನಾತ್ಮಕ ಕಾರ್ಯಕ್ರಮಗಳು ಮತ್ತು ದೇಶ ಸೇವೆಯ ಬಗೆಗೆ ಹೇಳಿದ್ದು, ಗಾಂಧೀಜಿಯವರ ಬಗೆಗೆ ಬಾಲಕ ಮಾದಯ್ಯ ಗೌಡರಿಗೆ ಅಭಿಮಾನ ಉಂಟಾಯಿತು. ಚನ್ನಪಟ್ಟಣದ ಹೈಸ್ಕೂಲಿನಲ್ಲಿ ಓದುವಾಗ ಸ್ಕೌಟ್ ಚಳುವಳಿಯ ಬಗೆಗೆ ವಿಶೇಷ ಆಸಕ್ತಿ ಬೆಳಸಿಕೊಂಡರು. ಸ್ಕೌಟ್‌ನಲ್ಲಿ ವಿಶೇಷ ತರಬೇತಿ ಪಡೆದು ಸ್ಕೌಟ್ ಟ್ರೂಪ್ ತೆಗೆದು ಕೆಲಸ ಮಾಡಿದರು. ಗೌಡರು ಈ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ವಿ.ವೆಂಕಟಪ್ಪನವರು, ಎಚ್.ಕೆ.ವೀರಣ್ಣಗೌಡರು, ಕೆ.ಸುಬ್ಬರಾವ್‌ರವರು ಮುಂತಾದ ಸಹಪಾಠಿಗಳೊಡನೆ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಗಾಂಧೀಜಿಯವರ ದೇಶಭಕ್ತಿ, ಸ್ವಾತಂತ್ರ್ಯದ ಮಹತ್ವ, ಸ್ವಾವಲಂಬನೆಯ ಅಗತ್ಯ, ಅಹಿಂಸೆಯ ವೈಶಿಷ್ಟ್ಯ ಇತ್ಯಾದಿ ವಿಷಯಗಳ ಬಗೆಗೆ ಪತ್ರಿಕೆಗಳಲ್ಲಿ ವರದಿಗಳು ಬರುತ್ತಿದ್ದವು. ಸಮಾಜ ಸೇವೆ, ದಲಿತೋದ್ಧಾರ, ಶಿಕ್ಷಣದ ಅಗತ್ಯ ಇವುಗಳ ಬಗೆಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಪತ್ರಿಕಾ ವರದಿಗಳು ಸಹಕಾರಿಯಾದವು. ಇದರಿಂದಾಗಿ ಮಾದಯ್ಯ ಗೌಡರಿಗೆ ಒಂದಲ್ಲಾ ಒಂದು ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸ್ಫೂರ್ತಿದೊರೆಯಿತು. ವಿ.ವೆಂಕಟಪ್ಪನವರು, ವೀರಣ್ಣಗೌಡರು, ಕೆ.ಸುಬ್ಬರಾವ್ ಮುಂತಾದ ಸಹಪಾಠಿಗಳೊಡನೆ ಪ್ರತಿ ಶನಿವಾರ ಮತ್ತು ಭಾನುವಾರ ಸಂಜೆ ವೇಳೆಯಲ್ಲಿ ಸುತ್ತ ಮುತ್ತಲಿನ ಹಳ್ಳಿಗಳಿಗೆ ಹೋಗಿ ಗ್ರಾಮಸ್ಥರನ್ನು ಕಂಡು ಸಭೆ ಸೇರಿಸಿ ಮಕ್ಕಳು ವಿದ್ಯಾಭ್ಯಾಸ ಮಾಡುವುದರಿಂದ ದೊರೆಯುವ ಅನುಕೂಲತೆಗಳು, ವೈಯಕ್ತಿಕ ಸ್ವಚ್ಛತೆ, ಗ್ರಾಮ ನೈರ್ಮಲ್ಯ ಮುಂತಾದ ಜನೋಪಯೋಗಿ ವಿಚಾರಗಳ ಬಗೆಗೆ ಜನರಿಗೆ ತಿಳಿಸಲು ಪ್ರಾರಂಭಿಸಿದರು. ಬಾಲಕ ಮಾದಯ್ಯ ಗೌಡರು ಮುಂದೆ ಜನಪ್ರತಿನಿಧಿಯಾಗಿ ಚುನಾಯಿತಗೊಂಡ ಸಂದರ್ಭದಲ್ಲಿ ಅವೆಲ್ಲವನ್ನೂ ಕಾರ್ಯರೂಪಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದರು.

ಕೆ.ಎಚ್.ರಾಮಯ್ಯನವರು ೧೯೦೬ರಲ್ಲಿ ಬೆಂಗಳೂರಿನ ದೊಡ್ಡಣ್ಣ ಸಭಾ ಮಂದಿರದಲ್ಲಿ ಒಕ್ಕಲಿಗರ ಮುಖಂಡರ ಸಮಾವೇಶವನ್ನು ಸಂಘಟಿಸಿದ್ದರು. ಆ ಸಮಾವೇಶದ ಫಲವಾಗಿ

ರಾಮಯ್ಯನವರ ನೇತೃತ್ವದಲ್ಲಿ ರಾಜ್ಯ ಒಕ್ಕಲಿಗರ ಸಂಘ ಪ್ರಾರಂಭಗೊಂಡಿತು. ಶಾಲಾ ಕಾಲೇಜುಗಳಿರುವ ಕಡೆ ಜನಾಂಗದ ಉಚಿತ ಊಟ, ವಸತಿ ನೀಡಲು ವಿದ್ಯಾರ್ಥಿನಿಲಯಗಳನ್ನು ತೆರೆಯುವುದು, ಜನಾಂಗದ ವಿದ್ಯಾರ್ಥಿ ಸಂಘಗಳ ಸ್ಥಾಪನೆಗೆ ಮತ್ತು ಜನಾಂಗದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಮಾಡಲು ಪ್ರೋತ್ಸಾಹ ನೀಡುವುದು ಮುಂತಾದ ವಿದ್ಯಾರ್ಥಿ ಕ್ಷೇಮಪಾಲನೆಗೆ ಸಂಬಂಧಪಟ್ಟ ಹಲವು ನಿರ್ಣಯಗಳನ್ನು ಸಂಘವು ತೆಗೆದುಕೊಂಡಿತು. ಆ ನಿರ್ಣಯಗಳ ಫಲವಾಗಿ ಬೆಂಗಳೂರಿನಲ್ಲಿ ಒಕ್ಕಲಿಗರ ವಿದ್ಯಾರ್ಥಿ ಸಂಘ ಸ್ಥಾಪನೆಯಾಯಿತು. ಆ ಸಂಘವು ಜನಾಂಗದ ಅನೇಕ ಬಡವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ವಿವಿಧ ರೀತಿಯಲ್ಲಿ ಸಹಾಯ ಮಾಡಲು ಪ್ರಾರಂಭಿಸಿತು.

ಬೆಂಗಳೂರಿನಲ್ಲಿ ಒಕ್ಕಲಿಗರ ವಿದ್ಯಾರ್ಥಿ ಸಂಘ ಸ್ಥಾಪನೆಯಾದ ನಂತರ ಚನ್ನಪಟ್ಟಣದಲ್ಲಿಯೂ ಒಕ್ಕಲಿಗರ ವಿದ್ಯಾರ್ಥಿ ಸಂಘ ಸ್ಥಾಪನೆ ಮಾಡಲು ಗೌಡರು, ವೆಂಕಟಪ್ಪನವರು, ವೀರಣ್ಣಗೌಡರು ಇನ್ನಿತರ ವಿದ್ಯಾರ್ಥಿಗಳು ಸೇರಿ ತೀರ್ಮಾನಿಸಿದರು. ಇವರೆಲ್ಲಾ ಚರ್ಚೆಮಾಡಿಕೊಂಡು ಆಗ ಚನ್ನಪಟ್ಟಣದ ಹೈಸ್ಕೂಲ್ ಹೆಡ್‌ಮಾಸ್ಟರ್ ಆಗಿದ್ದ ಟಿ.ಕೃಷ್ಣಮೂರ್ತಿಯವರನ್ನು ಭೇಟಿಮಾಡಿ "ನಾವೆಲ್ಲಾ ಒಕ್ಕಲಿಗರ ಸಂಘವನ್ನು ಸ್ಥಾಪಿಸಲು ಯೋಚಿಸಿ ಸಿದ್ಧತೆಮಾಡಿಕೊಳ್ಳುತ್ತಿದ್ದೇವೆ; ತಾವು ಆ ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿ ಒಕ್ಕಲಿಗರ ವಿದ್ಯಾರ್ಥಿ ಸಂಘವನ್ನು ತಾವೇ ಉದ್ಘಾಟಿಸಬೇಕಾಗಿ ತಮ್ಮನ್ನು ಕೋರುತ್ತೇವೆ" ಎಂದರು. ಹುಡುಗರ ಕೋರಿಕೆಗೆ ಕೃಷ್ಣಮೂರ್ತಿಯವರು ಸಂತೋಷದಿಂದ ಒಪ್ಪಿಗೆ ನೀಡಿ ಕಾರ್ಯಕ್ರಕ್ಕೆ ಆಗಮಿಸಿ ಒಕ್ಕಲಿಗರ ವಿದ್ಯಾರ್ಥಿ ಸಂಘವನ್ನು ಉದ್ಘಾಟನೆ ಮಾಡಿದರು.

ಒಕ್ಕಲಿಗರ ಸಂಘದ ಸ್ಥಾಪನೆಯ ಉದ್ದೇಶಗಳು ಈ ರೀತಿ ಇದ್ದವು: ವಾರಕ್ಕೊಮ್ಮೆ ಚರ್ಚಾಕೂಟಗಳನ್ನೇರ್ಪಡಿಸಿ, ಯಾರಾದರೊಬ್ಬರು ಅಧ್ಯಾಪಕರನ್ನು ಅಂತಹ ಚರ್ಚಾಕೂಟಗಳಿಗೆ ಅಧ್ಯಕ್ಷರನ್ನಾಗಿ ಆಹ್ವಾನ ನೀಡುವುದು. ಆ ಮೂಲಕ ವಿದ್ಯಾರ್ಥಿಗಳಲ್ಲಿ ಭಾಷಣ ಮಾಡುವ ಸಾಮಾರ್ಥ್ಯ ಮತ್ತು ವೇದಿಕೆಯ ಧೈರ್ಯವನ್ನು ಪಡೆದುಕೊಳ್ಳಲು ಸಹಾಯ ಮಾಡುವುದು. ಸಮಕಾಲೀನ ವಿಚಾರಗಳ ತಿಳುವಳಿಕೆ ಮಟ್ಟವನ್ನು ಹೆಚ್ಚಿಸುವುದು, ವಿದ್ಯಾರ್ಥಿಗಳಿಗೆ ಊಟ ವಸತಿಗಳನ್ನು ಹಾಸ್ಟೆಲ್ ಸ್ಥಾಪಿಸುವುದರ ಮೂಲಕ ದೊರಕಿಸಿಕೊಡುವುದು ಮುಂತಾದವುಗಳಾಗಿದ್ದವು. ಕೃಷ್ಣಮೂರ್ತಿಯವರ ಅಧ್ಯಕ್ಷತೆಯ ಚರ್ಚಾಕೂಟದಲ್ಲಿ ಮೊದಲನೆಯ ದಿನದ ಚರ್ಚೆಗೆ ಆರಿಸಿಕೊಂಡಿದ್ದ ವಿಷಯ "ಪ್ರೀತಿಸಿ ಮದುವೆ ಆಗಬೇಕೇ ಅಥವಾ ಮದುವೆಯಾಗಿ ಪ್ರೀತಿಸಬೇಕೆ" ಎಂಬುದಾಗಿತ್ತು.

ಒಕ್ಕಲಿಗರ ವಿದ್ಯಾರ್ಥಿ ಸಂಘ ಉದ್ಘಾಟನೆಯಾದ ಕೆಲವು ತಿಂಗಳಲ್ಲೇ ಅದು ಪ್ರಸಿದ್ಧಿಗೆ ಬಂದಿತು. ಈ ವಿದ್ಯಾರ್ಥಿಗಳ ಸಂಘದ ಸಮಾರಂಭಗಳಿಗೆ ಮೈಸೂರು ಸಂಸ್ಥಾನದ ವಿವಿಧೆಡೆಗಳಿಂದ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ನಾಯಕರು ಬರುತ್ತಿದ್ದರು. ಒಕ್ಕಲಿಗರ ವಿದ್ಯಾರ್ಥಿ ಸಂಘ ಉದ್ಘಾಟನೆಯಾದ ಕೆಲವು ತಿಂಗಳಲ್ಲೇ ಒಕ್ಕಲಿಗರ ವಿದ್ಯಾರ್ಥಿಗಳ ಹಾಸ್ಟಲ್ ಪ್ರಾರಂಭಿಸಬೇಕು ಎಂದು ವೆಂಕಟಪ್ಪನವರೂ, ವೀರಣ್ಣಗೌಡರೂ, ಮಾದಯ್ಯಗೌಡರು ಮುಂತಾದ ವಿದ್ಯಾರ್ಥಿ ನಾಯಕರು ಆಲೋಚನೆ ಮಾಡಿ ತೀರ್ಮಾನಕ್ಕೆ ಬಂದರು. ನಂತರ ಒಕ್ಕಲಿಗ ಜನಾಂಗದ ಮುಖಂಡರನ್ನು ಭೇಟಿ ಮಾಡಿ ವಿದ್ಯಾರ್ಥಿ ಹಾಸ್ಟೆಲ್ ಬಗ್ಗೆ ಚರ್ಚಿಸಿದರು. ಒಕ್ಕಲಿಗ ಜನಾಂಗದ ಬಹಳಷ್ಟು ಮುಖಂಡರು "ನೀವು ಚನ್ನಪಟ್ಟಣ ತಾಲ್ಲೂಕಿನ ಪೋಲಿಸ್ ಇನ್‌ಸ್ಪೆಕ್ಟರ್ ಎಂ.ಸಿ.ಮರಿಯಪ್ಪನವರನ್ನು ಭೇಟಿ ಮಾಡಿ; ಅವರಿಂದ ಹಾಸ್ಟೆಲ್ ಪ್ರಾರಂಭಿಸಲು ಬಹಳಷ್ಟು ಹಣಕಾಸಿನ ಅನುಕೂಲವಾಗುತ್ತದೆ". ಎಂಬ ಸಲಹೆ ನೀಡಿದರು. ಪೋಲಿಸ್ ಇನ್‌ಸ್ಪೆಕ್ಟರ್ ಆಗಿದ್ದ ಮರಿಯಪ್ಪನವರು ಪ್ರಭಾವಶಾಲಿಗಳಾಗಿದ್ದರು. ಅವರ ಮಾತು ಚನ್ನಪಟ್ಟಣ ಟೌನಿನಲ್ಲಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಚನ್ನಾಗಿ ನಡೆಯುತ್ತಿತ್ತು. ಹಾಸ್ಟೆಲ್ ಸ್ಥಾಪನೆಗೆ ಬೇಕಾದ ಹಣಸಂಗ್ರಹಣೆಯ ಸಾಮರ್ಥ್ಯವನ್ನು ಅವರು ಹೊಂದಿದ್ದರು. ಅದರಂತೆ ಹಾಸ್ಟೆಲ್ ಸ್ಥಾಪನೆಯ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ನಾಯಕರಾಗಿದ್ದ ವೆಂಕಟಪ್ಪನವರು, ವೀರಣ್ಣಗೌಡರು, ಮಾದಯ್ಯಗೌಡರು ಮತ್ತು ಇತರರು ಮರಿಯಪ್ಪನವರನ್ನು ಭೇಟಿ ಮಾಡಿ ವಿಷಯ ಪ್ರಸ್ತಾಪಿಸಿದರು. ಮರಿಯಪ್ಪನವರು "ನೀವು ಕೈಗೊಂಡಿರುವ ಕೆಲಸ ಒಳ್ಳೆಯದು; ನನ್ನ ಕೈಲಾದ ಹಣಕಾಸಿನ ಸಹಾಯ ಮತ್ತು ಸಹಕಾರವನ್ನು ನೀಡುತ್ತೇನೆ. ಒಕ್ಕಲಿಗ ಜನಾಂಗದ ಮಹಾಜನರ ಸಭೆ ಕರೆದು ಹಾಸ್ಟೆಲ್‌ಗೆ ಬೇಕಾದ ಹಣಕಾಸು ಕ್ರೋಢೀಕರಣ ಮಾಡೋಣ" ಎಂದು ತಿಳಿಸಿದರು. ಇದರಿಂದ ವಿದ್ಯಾರ್ಥಿ ನಾಯಕರಿಗೆ ಆನೆ ಬಲ ಬಂದಂತಾಯಿತು. ಜನಾಂಗದ ಮಹಾಜನರಿಗೆ ಸಭೆಗೆ ಹಾಜರಾಗಲು ಆಹ್ವಾನ ಕಳುಹಿಸಲಾಯಿತು. ಸಭೆ ನಡೆಯಲು ಎಲ್ಲಾ ಏರ್ಪಾಡುಗಳು ನಡೆದವು. ಆಹ್ವಾನದ ಮೇರೆಗೆ ಒಕ್ಕಲಿಗ ಮಹಾಜನರ ಸಭೆಗೆ ಕೆ.ಎಚ್.ರಾಮಯ್ಯನವರು, ಬೆಂಗಳೂರು ಒಕ್ಕಲಿಗ ಸಂಘದ ಅಧ್ಯಕ್ಷರಾಗಿದ್ದ ಬಿ.ಎಸ್.ಮಾರಪ್ಪನವರು, ಅವರ ತಮ್ಮ ಬಿ.ಎಸ್.ಮುನಿಸ್ವಾಮಪ್ಪ, ಬ್ಯಾರಿಸ್ಟರ್ ಬಿ.ನಾಗಪ್ಪನವರು, ಬ್ಯಾರಿಸ್ಟರ್ ರಾವ್ ಸಾಹೇಬ್, ಎಚ್.ಚನ್ನಯ್ಯನವರು, ಬ್ಯಾರಿಸ್ಟರ್ ವಿಜಯದೇವ ಮುಂತಾದ ಒಕ್ಕಲಿಗ ಸಮಾಜದ ನಾಯಕರು ಹಾಗೂ ಚನ್ನಪಟ್ಟಣದ ಅನುಕೂಲಸ್ಥ ಒಕ್ಕಲಿಗ ಜನಾಂಗದ ವರ್ತಕರು ಆಗಮಿಸಿದರು. ಬಿ.ಎಸ್.ಮಾರಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಚರ್ಚೆಗಳ ನಂತರ ವೆಂಕಟಪ್ಪನವರ ತಂದೆ ತಿಟ್ಟಮಾರನಹಳ್ಳಿ ಪಟೇಲ್ ವೆಂಕಟೇಗೌಡರು ಹಾಸ್ಟೆಲ್‌ನ

ಅಧ್ಯಕ್ಷರಾಗಿರಬೇಕೆಂದು ಸಭೆ ತೀರ್ಮಾನಿಸಿತು. ಎಂ.ಸಿ.ಮರಿಯಪ್ಪನವರ ಮನೆಯಲ್ಲಿ ಹಾಸ್ಟೆಲ್ ಪ್ರಾರಂಭಿಸಲಾಯಿತು. ಆಗ ತಾಲ್ಲೂಕು ಮಟ್ಟದಲ್ಲಿ ಎಲ್ಲಿಯೂ ಪ್ರೌಢಶಾಲೆಗಳಿರಲಿಲ್ಲ. ಚನ್ನಪಟ್ಟಣದಲ್ಲಿ ಅಂತಹ ಶಾಲೆಯೊಂದಿತ್ತು. ಆದುದರಿಂದ ಆಗಿನ ಮೈಸೂರು ಸಂಸ್ಥಾನದ ಬಹುತೇಕ ಎಲ್ಲಾ ಪ್ರಾಂತ್ಯಗಳಿಂದಲೂ ಹುಡುಗರು ವಿದ್ಯಾಭ್ಯಾಸ ಮಾಡಲು ಬಂದು ಈ ವಿದ್ಯಾರ್ಥಿನಿಲಯಕ್ಕೆ ಸೇರಲು ಪ್ರಾರಂಭಿಸಿದರು. ಹಾಸ್ಟೆಲ್‌ಗೆ ಬೇಡಿಕೆ ಹೆಚ್ಚಾಗಿದ್ದುದರಿಂದ ಕೋಟೆಯಲ್ಲಿ ವೆಂಕಟಪ್ಪನವರ ಚಿಕ್ಕಪ್ಪ ಅಬ್ಬೂರು ಪುಟ್ಟೇಗೌಡರಿಗೆ ಸೇರಿದ್ದ ಮನೆಯಲ್ಲಿ ಕೆಲವು ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸಲಾಯಿತು.

ಚನ್ನಪಟ್ಟಣದಲ್ಲಿ ಒಕ್ಕಲಿಗ ವಿದ್ಯಾರ್ಥಿಗಳ ಸಂಘ, ಒಕ್ಕಲಿಗ ವಿದ್ಯಾರ್ಥಿಗಳ ಹಾಸ್ಟೆಲ್ ಸ್ಥಾಪನೆಯಾದ ನಂತರ ಅವುಗಳ ಆಶ್ರಯದಲ್ಲಿ ವಾರ್ಷಿಕೋತ್ಸವಗಳು, ಚರ್ಚಾಕೂಟಗಳು, ಸಾಮಾಜಿಕ ಸೇವಾಕಾರ್ಯಗಳು, ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿತ್ತು. ಈ ಎಲ್ಲಾ ಕಾರ್ಯಕ್ರಮಗಳ ಯಶಸ್ಸುಗಳಿಂದ ಮಾದಯ್ಯಗೌಡರು, ವೆಂಕಟಪ್ಪನವರು, ವೀರಣ್ಣಗೌಡರು ಮುಂತಾದ ವಿದ್ಯಾರ್ಥಿ ಮುಖಂಡರು ಹುರುಪುಗೊಂಡರು. ಇವುಗಳ ಜೊತೆಗೆ ಇನ್ನೊಂದು ಶೈಕ್ಷಣಿಕ ಮತ್ತು ಬೌದ್ಧಿಕ ಕೆಲಸ ಮಾಡಬೇಕೆಂದು ಅವರೆಲ್ಲಾ ಆಲೋಚನೆ ಮಾಡಿ ಒಂದು ಮಾಸಪತ್ರಿಕೆಯನ್ನು ಪ್ರಕಟಿಸಿ ಹೊರ ತರಲು ತೀರ್ಮಾನ ಕೈಕೊಂಡರು. ವಿದ್ಯಾರ್ಥಿಗಳು ಪ್ರತಿವಾರವೂ ಏರ್ಪಡಿಸುತ್ತಿದ್ದ ಚರ್ಚಾಕೂಟಗಳಲ್ಲಿ ತಮ್ಮ ಮಾತುಗಾರಿಕೆ, ಭಾಷಣ ಮಾಡುವ ಕಲೆ ಮುಂತಾದ ಪ್ರತಿಭೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಅವಕಾಶವಿರುವಂತೆ ಬರವಣಿಗೆಯ ಕಲೆಯನ್ನೂ ಸಹ ಕಲಿತುಕೊಳ್ಳಲು ಉದ್ದೇಶಿತ ಮಾಸಪತ್ರಿಕೆ ನೆರವಾಗುತ್ತದೆ ಎಂದು ಮಾತಾನಾಡಿಕೊಂಡರು. ಮಾಸಪತ್ರಿಕೆಯ ಹೆಸರು "ಒಕ್ಕಲಿಗರ ವಿದ್ಯಾರ್ಥಿ" ಎಂದು ಇಡಬೇಕೆಂದು ತೀರ್ಮಾನಿಸಿದರು. ಆ ಪತ್ರಿಕೆಗೆ ಮಾದಯ್ಯಗೌಡರು ಸಂಪಾದಕರಾಗಬೇಕೆಂದು ತೀರ್ಮಾನ ಕೈಗೊಂಡರು. ಇವರಿಗೆ ಪತ್ರಿಕೆ ಹೊರ ತರಲು ಬೇಕಾದ ಸಹಾಯ ಮಾಡಲು ಎಚ್.ಕೆ.ವೀರಣ್ಣಗೌಡರನ್ನು ಉಪ ಸಂಪಾದಕರಾಗಿ ನೇಮಿಸಿದರು. ಈ ಮಾಸಪತ್ರಿಕೆಗೆ ಎಲ್ಲಾ ಸಿದ್ಧತೆ ಮಾಡಿಕೊಂಡು ಪ್ರಥಮ ಸಂಚಿಕೆಗೆ ಒಂದು ಸಂದೇಶ ಪಡೆದುಕೊಳ್ಳಲು ಹಾಗೂ ಹಣಕಾಸಿನ ನೆರವು ಪಡೆದುಕೊಳ್ಳಲು ಮಾರ್ಗದರ್ಶಕರಾಗಿದ್ದ ಕೆ.ಎಚ್.ರಾಮಯ್ಯನವರ ಬಳಿ ಇವರೆಲ್ಲಾ ಹೋದರು. ಎಲ್ಲವನ್ನೂ ಕೇಳಿ, ಪತ್ರಿಕೆಯ ಸ್ಥಾಪನೆಗೆ ಬೇಕಾದ ಸಿದ್ಧತೆಗಳನ್ನು ಪರಿಶೀಲಿಸಿ ಹುಡುಗರ ಕಡೆ ನೋಡಿದರು.

**ರಾಮಯ್ಯನವರು** : "ಪತ್ರಿಕೋದ್ಯಮದ ಪರಮ ಗುರಿ ಏನು?"

**ಹುಡುಗರು** : ಏನು ಹೇಳಲಾಗದೆ ಮೌನವಾಗಿದ್ದರು.

**ರಾಮಯ್ಯನವರು** : "ಪತ್ರಿಕೋದ್ಯಮ ಒಂದು ಆಗಾಧ ಶಕ್ತಿ. ಸತ್ಯ ಶೋಧನೆ ಮತ್ತು ಜನ ಸೇವೆ ಪತ್ರಿಕೋದ್ಯಮದ ಪರಮ ಗುರಿ, ಗೊತ್ತಾಯಿತೇ?".

ಹುಡುಗರು ರಾಮಯ್ಯನವರ ಮಾತಿಗೆ ವಿಧೇಯತೆಯಿಂದ ಒಪ್ಪಿಗೆ ಸೂಚಿಸುತ್ತಾ

**ಹುಡುಗರು** : "ಗೊತ್ತಾಯಿತು, ಸರ್" ಎಂದರು.

**ರಾಮಯ್ಯನವರು** : "ಪತ್ರಿಕೆಯನ್ನು ಯಾವುದೇ ವ್ಯಕ್ತಿಯು ಸ್ವಪ್ರತಿಷ್ಠೆಯನ್ನು ಮೆರೆಸಲು ದುರ್ಬಳಕೆ ಮಾಡಿಕೊಳ್ಳಬಾರದು. ಪತ್ರಿಕೆಯ ದುರುಪಯೋಗ ಅಪರಾಧ ಎಂದು ತಿಳಿಯಿರಿ".

ಹುಡುಗರು ಅತ್ಯಂತ ವಿಧೇಯತೆಯಿಂದ:

**ಹುಡುಗರು** : "ತಿಳಿಯಿತು ಸರ್, ತಾವು ತಿಳಿಸುದುದನ್ನು ಪರಿಪಾಲಿಸುತ್ತೇವೆ".

**ರಾಮಯ್ಯನವರು** : "ನೀವು ಯಾರಾದರೂ ಪತ್ರಿಕೆಗೆ ಬರೆಯುತ್ತೀರಾ?"

**ಮಾದಯ್ಯಗೌಡರು** : "ವೀರಣ್ಣಗೌಡ ಚನ್ನಾಗಿ ಭಾಷಣ ಮಾಡುತ್ತಾನೆ. ಈಗಾಗಲೇ ಲೇಖನಗಳನ್ನು ಬರೆದಿದ್ದಾನೆ, ಸರ್".

**ರಾಮಯ್ಯನವರು** : "ಒಳ್ಳೆಯದು. ಪತ್ರಿಕೆಯಲ್ಲಿ ಬರೆಯುವವರು ಜನರ ಒಳಿತನ್ನು ಗುರಿಯಾಗಿರಿಸಿಕೊಳ್ಳಬೇಕು. ಜನರ ಬದುಕಿನ ಮೌನ ಜೀವನಕ್ಕೆ 'ಮೌತ್ ಪೀಸ್' ಆಗಬೇಕು. ತಿಳಿಯಿತೇ?".

**ಹುಡುಗರು** : (ಅತ್ಯಂತ ವಿಧೇಯತೆಯಿಂದ) "ತಿಳಿಯಿತು, ಸರ್".

**ರಾಮಯ್ಯನವರು** : "ಪತ್ರಿಕೆಯ ಹೆಸರು ಏನು ಇಡಬೇಕೆಂದು ಯೋಚಿಸಿದ್ದೀರಿ?"

**ಹುಡುಗರು** : "ಒಕ್ಕಲಿಗ ವಿದ್ಯಾರ್ಥಿ, ಸರ್"

**ರಾಮಯ್ಯನವರು** : (ಪತ್ರಿಕೆಯ ಜಾತಿ ಹೆಸರಿನ ಬಗೆಗೆ ಅಸಮಾಧಾನಗೊಂಡು) "ಇದು ಜಾತಿ ಹೆಸರಾಗುತ್ತದೆ; ಬೇಡ. ಜಾತಿ ಹೆಸರಿನ ಬದಲು ಅದಕ್ಕಿಂತ ವಿಶಾಲವಾದ 'ಕರ್ನಾಟಕ ವಿದ್ಯಾರ್ಥಿ' ಎಂಬ ಹೆಸರು ಎಷ್ಟು ಶೋಭಾಯಮಾನವಾಗಿರುತ್ತೇ? ಅಪ್ಪ ಹಾಕಿದ ಆಲದ ಮರ ಎಂದು ಹೆಸರಿಗೆ ಅಂಟಿಕೊಳ್ಳಬೇಕೆ? ಉದಾರ ಭಾವನೆ ನಿಮ್ಮಲ್ಲಿ ಬೆಳೆಯಬೇಕಾದರೆ ಜಾತಿ, ಮತ, ಸ್ಥಳ ಭಾವನೆ ಹೋಗಬೇಕು. ಹೆಸರು ಬದಲಾಯಿಸಿ, ತಿಳಿಯಿತೇ?".

**ಹುಡುಗರು** : (ಅತ್ಯಂತ ವಿಧೇಯತೆಯಿಂದ) "ಆಗಲೀ ಸರ್, ಕರ್ನಾಟಕ ವಿದ್ಯಾರ್ಥಿ ಎಂಬ ಹೆಸರನ್ನೇ ಪತ್ರಿಕೆಗೆ ಇಡುತ್ತೇವೆ".

**ರಾಮಯ್ಯನವರು** : ಸಂಪಾದಕ ಮಂಡಳಿ ಬಗೆಗೆ ಯೋಚಿಸಿದ್ದೀರಾ?

**ವೀರಣ್ಣಗೌಡರು** : (ಅತ್ಯಂತ ವಿಧೇಯತೆಯಿಂದ ಸಂಪಾದಕ ಮಂಡಳಿಯ ಪಟ್ಟಿಯನ್ನು ರಾಮಯ್ಯನವರಿಗೆ ಕೊಟ್ಟು) ಮಾದಯ್ಯಗೌಡ ಸಂಪಾದಕನಾಗಿರುತ್ತಾನೆ. ನಾನು ಸಹಾಯಕ ಸಂಪಾದಕನಾಗಿರುತ್ತೇನೆ. ವೆಂಕಟಪ್ಪ ಮುಂತಾದವರು ಪತ್ರಿಕೆಗೆ ಸಹಾಯ ಮಾಡುತ್ತಾರೆ".

**ರಾಮಯ್ಯನವರು** : "ಪತ್ರಿಕೆಗೆ ನನ್ನ ಸಂದೇಶ ಕೇಳಿದ್ದೀರಿ. ಬರೆದುಕೊಳ್ಳಿ".

ವೀರಣ್ಣಗೌಡರು ಮುಂದೆ ಬಂದು ರಾಮಯ್ಯನವರ ಸಂದೇಶವನ್ನು ಬರೆದುಕೊಳ್ಳುತ್ತಾರೆ.

**ರಾಮಯ್ಯನವರು** : "ಪತ್ರಿಕೆಗೆ ಸಂಗ್ರಹಿಸಿರುವ ಲೇಖನಗಳನ್ನು ತೋರಿಸಿ". (ಮಾದಯ್ಯಗೌಡರು ಈಗಾಗಲೇ ಲೇಖನಗಳಿಗೆ ಪತ್ರ ಬರೆದು ಪ್ರತಿಷ್ಠಿತ ವಿದ್ವಾಂಸರಿಂದ ಸಂಗ್ರಹಿಸಿದ್ದ ಲೇಖನಗಳನ್ನು ಒಳಗೊಂಡ ಕವರ್‌ನ್ನು ಅತ್ಯಂತ ಗೌರವಪೂರ್ವಕವಾಗಿ ರಾಮಯ್ಯನವರಿಗೆ ನೀಡುತ್ತಾರೆ).

**ರಾಮಯ್ಯನವರು** : (ಲೇಖನಗಳ ಮೇಲೆ ಕಣ್ಣಾಡಿಸುತ್ತಾ) "ವೆರಿ ಗುಡ್. ವಿದ್ವಾಂಸರ ಲೇಖನಗಳನ್ನೇ ಸಂಗ್ರಹಿಸಿದ್ದೀರಿ; ಚನ್ನಾಗಿವೆ".

ಹುಡುಗರು ಈಗಾಗಲೇ ಪ್ರಿಂಟ್ ಮಾಡಿಸಿಕೊಂಡಿದ್ದ ಲೇಟರ್‌ಹೆಡ್, ರಶೀದಿ ಪುಸ್ತಕಗಳನ್ನು ತೆಗೆದಿಟ್ಟು, ರಾಮಯ್ಯನವರು ಸೂಚಿಸಿದ ಕರ್ನಾಟಕ ವಿದ್ಯಾರ್ಥಿ ಎಂಬ ಹೆಸರನ್ನು ಆ ಪತ್ರಿಕೆಗೆ ಇಟ್ಟುಕೊಂಡರು. ಪತ್ರಿಕೆಯಲ್ಲಿ ಒಳ್ಳೆಯ ಲೇಖನಗಳು ಪ್ರಕಟಗೊಂಡವು, ಪ್ರತಿಭಾನ್ವಿತ ವಿದ್ಯಾರ್ಥಿಗಳ ಲೇಖನಗಳಲ್ಲದೆ ಸಾಲಿರಾಮಚಂದ್ರರಾವ್, ಕಡೆಂಗೊಡ್ಲು ಶಂಕರಭಟ್ಟರು, ಮುಂತಾದ ಪ್ರಸಿದ್ಧ ಲೇಖಕರು ಕರ್ನಾಟಕ ವಿದ್ಯಾರ್ಥಿ ಮಾಸಿಕಕ್ಕೆ ಲೇಖನಗಳನ್ನು ಬರೆದುಕಳಿಸುತ್ತಿದ್ದರು. ಪತ್ರಿಕೆ ಮಾದಯ್ಯಗೌಡರ ಸಂಪಾದಕತ್ವದಲ್ಲಿ ಎರಡು ಮೂರು ವರ್ಷಗಳ ಕಾಲ ಬಹಳ ಚನ್ನಾಗಿ ನಡೆಯಿತು. ಮಾದಯ್ಯಗೌಡರು, ವೆಂಕಟಪ್ಪನವರು, ವೀರಣ್ಣಗೌಡರು ಅವರವರ ವಿದ್ಯಾಭ್ಯಾಸ ಮುಗಿಸಿಕೊಂಡ ಮೇಲೆ ಬೇರೆ ಬೇರೆ ಕಡೆ ಮುಂದಿನ ವಿದ್ಯಾಭ್ಯಾಸಕ್ಕೆ ಹೋಗಬೇಕಾಯಿತು. ಈ ಕಾರಣದಿಂದ ಪತ್ರಿಕೆಯ ಪ್ರಕಟಣೆ ನಿಂತು ಹೋಯಿತು. ವೀರಣ್ಣಗೌಡರು ಆಗ 'ಆಶಾ' ಎಂಬ ನೀಳ್ಗಥೆಯ ಪುಸ್ತಕವನ್ನು ಎಲ್ಲಾ ಚಂದದಾರರಿಗೂ ಉಚಿತವಾಗಿ ಕಳುಹಿಸಿದರು.

ಮಾದಯ್ಯಗೌಡರು ನಂತರ ಎಂಟ್ರೆನ್ಸ್ ಪರೀಕ್ಷೆ ಪಾಸಾಗಿ ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿಗೆ ಇಂಟರ್‌ಮೀಡಿಯಟ್ ಕೋರ್ಸ್ ಓದಲು ಹೋದರು. ಮದ್ದೂರಿನವರಾದ ಪುಟ್ಟಲಿಂಗಯ್ಯನವರು, ಎಚ್.ಕೆ.ವೀರಣ್ಣಗೌಡರು ಸಹಪಾಠಿಗಳಾಗಿದ್ದರು. ಪುಟ್ಟಲಿಂಗಯ್ಯ ಬಹಳ ಒಳ್ಳೆಯ ಮನೆತನದಿಂದ ಬಂದವರು. ವೀರಣ್ಣಗೌಡರು ಮತ್ತು ಮಾದಯ್ಯಗೌಡರಿಗೆ ಬಹಳ ಒಳ್ಳೆಯ ಸ್ನೇಹಿತರಾಗಿದ್ದರು. ಆ ಕಾಲದಲ್ಲಿ ಬಹಳಷ್ಟು ಗ್ರಾಮೀಣ ಯುವಕರಿಗೆ ಸಾಕಷ್ಟು ಶೈಕ್ಷಣಿಕ ವಾತಾವರಣ ಮನೆಯಲ್ಲಿ

ಇರುತ್ತಿರಲಿಲ್ಲವಾದ್ದರಿಂದ. ಅನೇಕರಿಗೆ ವಿದ್ಯೆ ತಲೆಗೆ ಹತ್ತುತ್ತಿರಲಿಲ್ಲ. ಪುಟ್ಟಲಿಂಗಯ್ಯನವರು ನಾಲ್ಕು ಬಾರಿ ಪರೀಕ್ಷೆಗೆ ಕಟ್ಟಿದ್ದರು. ಮನೆಯ ಹಿರಿಯರ ಬಲವಂತಕ್ಕೆ ಮತ್ತೆ ಮತ್ತೆ ಪರೀಕ್ಷೆಗೆ ಬರೆಯಲು ಬೆಂಗಳೂರಿಗೆ ಬರುತ್ತಿದ್ದರು. ವಾರಕ್ಕೆ ಮುಂಚೆ ಬಂದು ಗೌಡರ ಕೋಣೆಯಲ್ಲಿಯೇ ಉಳಿದುಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಾಗಿದ್ದ ವೀರಣ್ಣಗೌಡರು ಮತ್ತು ಮಾದಯ್ಯಗೌಡರು ಸದಾ ಓದುತ್ತಾ ಇರುತ್ತಿದ್ದರು. ಅದು ಪುಟ್ಟಲಿಂಗಯ್ಯನವರಿಗೆ ಸಹನೆಯಾಗುತ್ತಿರಲಿಲ್ಲ. ಓದುತ್ತಿದ್ದ ಇವರಿಬ್ಬರನ್ನೂ ಅವರು ಪದೇ ಪದೇ ಮಾತಿಗೆ ಎಳೆಯುತ್ತಿದ್ದರು. 'ಏ, ಬನ್ರೋ ಹೊರಗಡೆ ಹೋಗೋಣ, ಪಾರ್ಕಿಗೆ ಹೋಗೋಣ' ಅಂತ ಕರೆಯುತ್ತಿದ್ದರು. 'ಯಾವಾಗಲೂ ಓದ್ತಾ ಇರ್‍ತಾರೆ ಕುಡುಮಿಗಳು' ಎಂದು ಗೊಣಗುತ್ತಿದ್ದರು. ಬೇರೆ ಯಾವ ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗವಹಿಸದೇ ಯಾವಾಗಲೂ ಓದುತ್ತಿರುವ ವಿದ್ಯಾರ್ಥಿಗಳನ್ನು ಕುಡುಮಿಗಳೆಂದು ಕರೆಯುತ್ತಾರೆ. ಇಂಟರ್ ಪರೀಕ್ಷೆ ನಾಳೆ ಆರಂಭವಾಗಬೇಕಿತ್ತು. ಪುಟ್ಟಲಿಂಗಯ್ಯ ಸಂಜೆ ಗಾಬರಿಯಿಂದ ಓಡಿ ಬಂದರು.

**ಪುಟ್ಟಲಿಂಗಯ್ಯನವರು** : (ಆತಂಕದಿಂದ) 'ಕೇಳ್ರೋ, ನನ್ನ ಹಾಲ್ ಟಿಕೇಟ್ ಕಾಣುತ್ತಿಲ್ಲ, ಊರಲ್ಲೇ ಬಿಟ್ಟು ಬಂದ್ದುಬಿಟ್ಟೆ, ಈಗೇನು ಮಾಡೋದು?'

ಪುಟ್ಟಲಿಂಗಯ್ಯ ಕೈಕೈ ಹಿಚುಕಿಕೊಳ್ಳುತ್ತಾ ಹೇಳಿದರು. ವೀರಣ್ಣಗೌಡರಿಗೂ, ಮಾದಯ್ಯಗೌಡರಿಗೂ ಸ್ನೇಹಿತ ಪುಟ್ಟಲಿಂಗಯ್ಯನವರ ಸಂಕಷ್ಟ ಕಂಡು ಈಗ ಏನು ಮಾಡುವುದು ಎಂದು ಗಾಬರಿ ಮತ್ತು ಕನಿಕರಗೊಂಡರು. ಸಮಯ ಇರಲಿಲ್ಲ.

**ವೀರಣ್ಣಗೌಡರು** : "ಇನ್ನೇನು ಮಾಡುವುದು? ಪರೀಕ್ಷೆಗೆ ಹೋಗದಿದ್ದರೆ ಮತ್ತೊಂದು ವರ್ಷ ಹೋಗಿಬಿಡುತ್ತೆ; ರಾತ್ರಿ ರೈಲಿಗೆ ಹೋಗಿ ತಂದು ಬಿಡು".

**ಪುಟ್ಟಲಿಂಗಯ್ಯನವರು** : "ನೀವಿಬ್ಬರೂ ನನ್ನ ಜೊತೆಯಲಿ ಬರುವುದಾದರೆ ಹೋಗುತ್ತೇನೆ".

**ವೀರಣ್ಣಗೌಡರು ಮತ್ತು ಮಾದಯ್ಯಗೌಡರು** : "ಸರಿ, ಮೂವರೂ ಹೋಗೋಣ"

ಸ್ನೇಹಿತನ ಸಂಕಷ್ಟಕ್ಕೆ ಒದಗದಿದ್ದರೆ ಹೇಗೆಂದು ಪುಟ್ಟಲಿಂಗಯ್ಯನವರ ಜೊತೆ ಇಬ್ಬರೂ ಹೋಗಲು ತೀರ್ಮಾನಿಸಿದರು. ಸಂಜೆ ಏಳು ಗಂಟೆಗೆ ಮದ್ದೂರು ಕಡೆ ಹೋಗುವ ರೈಲಿತ್ತು. ಆ ರೈಲಲ್ಲಿ ಮದ್ದೂರಿಗೆ ಹೋಗಿ ಒಂದೂವರೆ ಮೈಲಿ ನಡೆದು ಹಳ್ಳಿಗೆ ಹೋಗಿ, ಹಾಲ್‌ಟಿಕೆಟ್ ತೆಗೆದು ಕೊಂಡು, ಅದೇ ರಾತ್ರಿ ರೈಲು ಹತ್ತಿ ಬೆಳಗಿನ ಜಾವ ಬೆಂಗಳೂರು ತಲುಪಬಹುದೆಂದು ಮಾತಾಡಿಕೊಂಡರು. ತಮಾಷೆ ನೋಡಿ. ಆದರೆ, ನಡೆದದ್ದೇ ಬೇರೆ. ಮದ್ದೂರು ಸ್ಟೇಷನ್‌ನಲ್ಲಿ ಇಳಿದು, ಊರಿಗೆ ಹೊರಟರೆ, 'ಇಲ್ಲ, ಬನ್ರೋ, ಹಾಲ್ ಟಿಕೇಟ್ ಬೆಂಗಳೂರಿನಲ್ಲೇ ಇದೆ'. ಎಂದರು ಪುಟ್ಟಲಿಂಗಯ್ಯನವರು.

ಸ್ನೇಹಿತರಿಬ್ಬರಿಗೂ ತುಂಬಾ ಸಿಟ್ಟು ಬಂತು. ಚನ್ನಾಗಿ ಬಯ್ದರು. ರಾತ್ರಿಯೆಲ್ಲಾ ಚಳಿಯಿಂದ, ಸೊಳ್ಳೆ ಕಡಿತದಿಂದ ಸ್ಟೇಷನ್‌ನಲ್ಲಿ ರೈಲಿಗಾಗಿ ಕಾಯುತ್ತಾ ಮುದುರಿ ಕುಳಿತು, ಬೆಳಗಿನ ಜಾವ ರೈಲು ಹತ್ತಿ ಬೆಂಗಳೂರು ಸೇರಿ ಪರೀಕ್ಷೆ ಬರೆದರು. ಗೌಡರು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಪಾಸಾಗಿ ಇಂಟರ್‌ಮೀಡಿಯಟ್ ಓದಲು ಸೇರಿದರು.

ಮಾದಯ್ಯಗೌಡರು, ವೀರಣ್ಣಗೌಡರು ಹಾಗೂ ವೆಂಕಟಪ್ಪನವರು ಈ ತ್ರಿಮೂರ್ತಿಗಳು ಸದಾ ಒಟ್ಟಿಗಿರುತ್ತಿದ್ದು ಸಮಾನಧರ್ಮಿಗಳಾಗಿದ್ದುದಷ್ಟೇ ಅಲ್ಲ, ಸಮಾನ ಮನಸ್ಕರಾಗಿ ಸಮಾಜಾಭಿವೃದ್ಧಿ ಕಾರ್ಯಗಳಲ್ಲಿ ಸದಾ ಪಾಲ್ಗೊಳ್ಳುತ್ತಿದ್ದರು. ಒಳ್ಳೆಯ ಕೆಲಸಕ್ಕೆ ಸದಾ ಮುಂದಾಗುತ್ತಿದ್ದರು. ಪುಟ್ಟಲಿಂಗಯ್ಯ ಅವರಂತಹ ಸ್ನೇಹವನ್ನು ಹೊಂದಿದ್ದು ಅವರ ಸ್ನೇಹಪೂರ್ವಕ ಉಪಟಳವನ್ನು ಸಹನೆಯಿಂದ ಸಹಿಸಿಕೊಂಡು ತಾಳ್ಮೆಯಿಂದಿರುತ್ತಿದ್ದುದು ಅವರೆಲ್ಲರ ಸ್ನೇಹತ್ವದ ವಿಶೇಷವಾಗಿತ್ತು. ಇಷ್ಟೆಲ್ಲಾ ಚಟುವಟಿಕೆಗಳ ಮಧ್ಯೆಯೂ ಯಾರೊಬ್ಬರೂ ತಮ್ಮ ವಿದ್ಯಾಭ್ಯಾಸವನ್ನು ಕಡೆಗಣಿಸಿದವರಲ್ಲ. ಮಾದಯ್ಯಗೌಡರಂತೂ ತಮ್ಮ ಮುಂದಿನ ಕಾನೂನು ಶಿಕ್ಷಣದ ಗುರಿಯನ್ನು ಇಟ್ಟುಕೊಂಡೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದ್ದರು.

ಇಂಟರ್‌ಮೀಡಿಯಟ್ ಕಾಲೇಜಿನ ಶಿಕ್ಷಣ ಮುಗಿಸಿದ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಬಿ.ಎ ಪದವಿ ಓದಲು ಸೇರಿಕೊಂಡರು. ಗೌಡರ ಗಾಡ್‌ಫಾದರ್ ರಾಮಯ್ಯನವರ ಆಶೀರ್ವಾದ, ಪ್ರೋತ್ಸಾಹ, ಸಹಕಾರ ಮುಂದುವರಿದಿದ್ದವು. ಸೆಂಟ್ರಲ್ ಕಾಲೇಜಿಗೆ ಸೇರಿಕೊಂಡ ನಂತರ ಪದವಿ ವಿದ್ಯಾರ್ಥಿ ಗೌಡರ ಕಾರ್ಯಕ್ಷೇತ್ರ ಬೆಳೆಯುತ್ತಾ ಹೋಯಿತು. ವಿವಿಧ ಸಂಘ ಸಂಸ್ಥೆಗಳ ಸದಸ್ಯರಾದರು. ಇಂಗ್ಲೀಷ್ ಮತ್ತು ಕನ್ನಡ ಚರ್ಚಾಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಕಾಲೇಜಿನಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ವಿವಿಧ ಪ್ರದೇಶಗಳಿಂದ ಬಂದಿದ್ದ ವಿವಿಧ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸ್ನೇಹ ದೊರೆಯಿತು. ಊರಿಗೆ ಆಗಿಂದಾಗ್ಗೆ ಪತ್ರಗಳನ್ನು ಬರೆಯುತ್ತಿದ್ದರು. ಊರಿನಿಂದಲೂ ಪತ್ರಗಳು ಬರುತ್ತಿದ್ದವು. ತರಗತಿಗಳಿಗೆ ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆಗಾಗ್ಗೆ ಬಂದೆರಗುತ್ತಿದ್ದ ಮನೆಯ ಸಣ್ಣಪುಟ್ಟ ಸಮಸ್ಯೆಗಳ ನೋವು ಬಾಧಿಸುತ್ತಿದ್ದರೂ ಪ್ರಾಧ್ಯಾಪಕರ ಪಾಠಗಳನ್ನು ಗಮನವಿಟ್ಟು ಕೇಳುತ್ತಿದ್ದರು. ಬಿ.ಎ ಓದುತ್ತಿದ್ದ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದುತ್ತಿದ್ದರು. ಗೌಡರ ವಿದ್ಯಾರ್ಥಿ ಜೀವನ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಿಕೆ ಒಂದಕ್ಕೊಂದು ಬೆಸೆದುಕೊಂಡಿದ್ದವು. ಬೆಂಗಳೂರಿನ ಥೀಯೊಸಿಫಿಕಲ್ ಸೊಸೈಟಿಗೆ ಗೌಡರು ತಪ್ಪದೆ ಹೋಗುತ್ತಿದ್ದರು. ಅಲ್ಲಿ ಅನೇಕ ಗಣ್ಯರು ಬಂದು ಉಪನ್ಯಾಸ ನೀಡುತ್ತಿದ್ದರು. ಪದವಿ ವಿದ್ಯಾರ್ಥಿ ಗೌಡರು ತಪ್ಪದೆ ಅಲ್ಲಿಗೆ ಹೋಗಿ ಉಪನ್ಯಾಸಗಳನ್ನು ಕೇಳುತ್ತಿದ್ದರು. ಗಣ್ಯರ ಭಾಷಣಗಳ ಮೂಲಕ

ಗೌಡರಿಗೆ ವೇದ, ಉಪನಿಷತ್ತು, ಪರಿಚಯ ಉಂಟಾಯಿತು. ಡಿವಿಜಿಯವರ ನೇತೃತ್ವದ ಗೋಖಲೆ ಸಾರ್ವಜನಿಕ ಸಂಸ್ಥೆಯ ಕಾರ್ಯಕ್ರಮಗಳಿಗೂ ಗೌಡರು ಹೋಗುತ್ತಿದ್ದರು. ಶ್ರೀರಾಮಕೃಷ್ಣ ಆಶ್ರಮದ ಸಂಪರ್ಕವು ಗೌಡರಿಗೆ ಇತ್ತು. ಮನೆಯ ಹಿರಿಯರ ಆಶೀರ್ವಾದಗಳು, ರಾಮಯ್ಯನವರ ಪ್ರೇರಪಣೆಗಳು, ತಮ್ಮ ಶಿಸ್ತಿನ ಜೀವನ, ಕ್ರಮವಾದ ಓದುವಿನಿಂದಾಗಿ ಗೌಡರು ಬಿ.ಎ., ಪದವಿ ಪಡೆದುಕೊಂಡರು. ಆ ದಿನ ತಂದೆ ತಾಯಿಗಳಿಗೆ, ಅಣ್ಣ ಅಕ್ಕಂದಿರುಗಳಿಗೆ, ಬಂಧು-ಬಾಂಧವರಿಗೆ ಆದ ಸಂತೋಷವನ್ನು ವರ್ಣಿಸಲಾಗದು. ಗೌಡರು ರಾಮಯ್ಯನವರನ್ನು ಭೇಟಿಯಾಗಿ ಬಿ.ಎ., ಪದವಿ ಪಾಸಾಗಿರುವುದನ್ನು ತಿಳಿಸಿದರು. ರಾಮಯ್ಯನವರು ವೆರಿ ಗುಡ್ ಎಂದು ಬೆನ್ನುತಟ್ಟಿ "ದೇವರು ಒಳ್ಳೆಯದು ಮಾಡಲಿ" ಎಂದು ಹರಸಿದರು. ಈ ಮೊದಲೇ ರಾಮಯ್ಯನವರು ಎಲ್.ಎಲ್.ಬಿ ಪದವಿ ಓದಲು ಗೌಡರಿಗೆ ತಿಳಿಸಿದ್ದರು. ಆಗ ಕಾನೂನು ಪದವಿ ಓದಲು ಮೈಸೂರು ಸಂಸ್ಥಾನದಲ್ಲಿ ಕಾನೂನು ಕಾಲೇಜು ಇರಲಿಲ್ಲ. ಇಡೀ ದೇಶಕ್ಕೆ ಮದ್ರಾಸ್, ಬಾಂಬೆ, ಮತ್ತು ಕೊಲ್ಕತ್ತದಲ್ಲಿ ಕಾನೂನು ವಿದ್ಯಾಭ್ಯಾಸ ಮಾಡಲು ಅವಕಾಶವಿತ್ತು. ನಂತರ ಘರಪುರೆಯವರ ಸತತ ಪ್ರಯತ್ನಗಳ ಕಾರಣದಿಂದಾಗಿ ಬಾಂಬೆ ಪ್ರೆಸಿಡೆನ್ಸಿಯ ಪುಣೆಯಲ್ಲಿ ಇಂಡಿಯಾ ಲಾ ಸೊಸೈಟಿ ಮೂಲಕ ಕಾನೂನು ಕಾಲೇಜು ಆಗಷ್ಟೇ ಪ್ರಾರಂಭವಾಯಿತು. "ದಿ ಹಿಂದೂ" ಪತ್ರಿಕೆಯಲ್ಲಿ ಕಾನೂನು ಕಾಲೇಜು ಪ್ರಾರಂಭವಾದ ಸುದ್ದಿ ಬಂದಿತ್ತು. ಗೌಡರು ಮುಂದೆ ಕಾನೂನು ಓದಲು ಎರಡು ಸ್ಥಳಗಳಲ್ಲಿ ಅವಕಾಶ ಉಂಟಾಯಿತು. ಮದ್ರಾಸ್ ಇಲ್ಲವೇ ಪುಣೆಗೆ ಹೋಗಬೇಕಾಗಿತ್ತು. ಮದ್ರಾಸ್ ಕಾನೂನು ಕಾಲೇಜು ಬಿ.ಎಲ್., ಎಂಬ ಹೆಸರಿನಲ್ಲಿ ಕಾನೂನು ಪದವಿ ನೀಡುತ್ತಿತ್ತು. ಪುಣೆಯ ಇಂಡಿಯಾನ್ ಲಾ ಸೊಸೈಟಿ ಕಾನೂನು ಕಾಲೇಜು ಎಲ್.ಎಲ್.ಬಿ., ಪದವಿಯನ್ನು ನೀಡುತ್ತಿತ್ತು.

ಮದ್ರಾಸ್ ಪ್ರೆಸಿಡೆನ್ಸಿಯ ರಾಜಧಾನಿ ಮದ್ರಾಸ್ ನಗರವಾಗಿತ್ತು. ಬಿ.ಎಲ್., ಓದಲು ಮದ್ರಾಸ್ ನಗರಕ್ಕೆ ಹೋದರೆ ವಿದ್ಯಾಭ್ಯಾಸದ ಖರ್ಚುವೆಚ್ಚಗಳು ಹೆಚ್ಚು. ಪುಣೆಯಲ್ಲಿ ಮದ್ರಾಸ್‌ಗಿಂತ ವ್ಯಾಸಂಗದ ಖರ್ಚುಗಳು ಕಡಿಮೆ. ಬಾಂಬೆ ಪ್ರೆಸಿಡೆನ್ಸಿಯ ರಾಜಧಾನಿ ಬಾಂಬೆಯಾಗಿತ್ತು. ಮದ್ರಾಸ್ ಮತ್ತು ಬಾಂಬೆ ನಗರಗಳಂತೆಯೇ ಪುಣೆನಗರವು ಸಹ ಹಲವು ವಿದ್ಯಾಸಂಸ್ಥೆಗಳನ್ನು ಒಳಗೊಂಡ ವಿದ್ಯಾ ನಗರವಾಗಿ ಅಭಿವೃದ್ಧಿಗೊಂಡಿತ್ತು. ಮದ್ರಾಸ್‌ಗಿಂತ ವ್ಯಾಸಂಗದ ಖರ್ಚುಗಳು ಪುಣೆಯಲ್ಲಿ ಕಡಿಮೆಯಾದುದರಿಂದ ರಾಮಯ್ಯನವರು ಗೌಡರಿಗೆ ಪುಣೆ ನಗರಕ್ಕೆ ಕಾನೂನು ವಿದ್ಯಾಭ್ಯಾಸಕ್ಕೆ ಹೋಗಲು ಸಲಹೆ ನೀಡಿದರು. ಅಲ್ಲಿನ ಗಣ್ಯರಿಗೆ ಕಾಲೇಜಿನಲ್ಲಿ ಮತ್ತು ಹಾಸ್ಟೆಲ್‌ನಲ್ಲಿ ಪ್ರವೇಶ ನೀಡಲು ಎರಡು ಪತ್ರಗಳನ್ನು ಕೊಟ್ಟು ಗೌಡರನ್ನು ಆಶೀರ್ವದಿಸಿ ಕಳಿಸಿಕೊಟ್ಟರು.

❖

## ೪. ಸ್ಕೌಟ್ ಚಳುವಳಿಯಲ್ಲಿ ಮಾದಯ್ಯಗೌಡರು

ಮಾದಯ್ಯಗೌಡರು ಚನ್ನಪಟ್ಟಣದ ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಸ್ಕೌಟಿನ ಕಾರ್ಯಕಲಾಪಗಳಲ್ಲಿ ಸೇವಾ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಮದ್ದೂರಿನ ವೀರಣ್ಣಗೌಡರು, ಮತ್ತು ತಿಟ್ಟಮಾರನಹಳ್ಳಿ ವೆಂಕಟಪ್ಪನವರು ವಿದ್ಯಾರ್ಥಿ ದೆಸೆಯಲ್ಲಿ ಗೌಡರ ಸ್ಕೌಟ್ ಚಟುವಟಿಕೆಗಳ ಸಹಪಾಠಿಗಳು. ಸ್ಕೌಟಿಂಗ್ ಚಳುವಳಿ ಆಗ ಒಂದು ಜಾಗತಿಕ ಶಿಸ್ತಿನ ಮತ್ತು ಸೇವೆಯ ಚಳುವಳಿಯಾಗಿ ಅಭಿವೃದ್ಧಿಯಾಗುತ್ತಾ ಬಂದಿತ್ತು. ಆ ಪ್ರಭಾವದಿಂದಾಗಿ ಮೈಸೂರು ಸಂಸ್ಥಾನದ ಬಹುತೇಕ ಎಲ್ಲಾ ಪೌಢಶಾಲೆಗಳಲ್ಲಿ ಸ್ಕೌಟಿಂಗ್‌ನ್ನು ಪ್ರಾರಂಭಿಸಲಾಗಿತ್ತು. ಗೌಡರು ಸ್ಕೌಟಿಂಗ್ ವಿದ್ಯಾರ್ಥಿಯಾಗಿದ್ದು, ಅವರ ಸಾರ್ವಜನಿಕ ಬದುಕಿಗೆ ತಳಹದಿಯಾಯಿತು. ಮುಂದಿನ ಅವರ ಶಿಸ್ತಿನ ಬದುಕಿಗೂ, ಆದರ್ಶಗಳ ಪಾಲನೆಗೂ ಅದು ನೆರವಾಯಿತು.

ಇಂಗ್ಲೆಂಡ್ ಸ್ಕೌಟಿಂಗ್‌ನ ಜನ್ಮಸ್ಥಳ; ಆಗಸ್ಟ್ ೧೯೦೭ರಲ್ಲಿ ಆ ದೇಶದಲ್ಲಿ ಸ್ಕೌಟಿಂಗ್ ಪ್ರಾರಂಭವಾಯಿತು. ಇದರ ಸಂಸ್ಥಾಪಕರು ಬೇಡೆನ್ ಪೋವೆಲ್(೧೮೫೭-೧೯೪೧). ಅವರ ಪೂರ್ಣ ಹೆಸರು ಲೆಫ್ಟಿನೆಂಟ್ ಜನರಲ್ ಲಾರ್ಡ್ ರಾಬರ್ಟ್ ಸ್ಟಿಫನ್‌ಸನ್. ಬೇಡೆನ್ ಪೋವೆಲ್ ಇಂಗ್ಲೆಂಡಿನ ಒಬ್ಬ ಸೈನ್ಯಾಧಿಕಾರಿಯಾಗಿದ್ದರು.

ಅವರನ್ನು ಬಿ.ಪಿ. ಎಂಬ ಅಡ್ಡ ಹೆಸರಿನಿಂದ ಸಂಕ್ಷಿಪ್ತವಾಗಿ ಕರೆಯಲಾಗುತ್ತಿತ್ತು. ಅವರು ಒಬ್ಬ ಶಿಸ್ತಿನ ಸಿಪಾಯಿಯಷ್ಟೇ ಆಗಿರದೆ, ಒಳ್ಳೆಯ ಬರಹಗಾರರಾಗಿದ್ದರು. ಅವರು ಬರೆದು ಪ್ರಕಟಿಸಿದ ಪುಸ್ತಕ "ಸ್ಕೌಟಿಂಗ್ ಫಾರ್ ಬಾಯ್ಸ್" ಎಂಬುದು ಜಗತ್ತಿನ ವಿವಿಧ ದೇಶಗಳಲ್ಲಿ ಸ್ಕೌಟಿಂಗ್ ಚಳುವಳಿ ಬೆಳೆವಣಿಗೆಯಾಗಲು ಪ್ರೇರೇಪಣೆ ಉಂಟುಮಾಡಿತು. ಲಾರ್ಡ್ ಬಿ.ಪಿ.ಯವರು ಜಗತ್ತಿನ ದಿ ಬಾಯ್ಸ್ ಸ್ಕೌಟ್ಸ್ ಆಸೋಸಿಯೆಸನ್‌ನ ಪ್ರಪ್ರಥಮ ಚೀಫ್ ಸ್ಕೌಟ್ ಎಂಬ ಹೆಗ್ಗಳಿಕೆ ಹೊಂದಿದ್ದರು. ಅವರು ದಿ ಗರ್ಲ್ಸ್ ಗೈಡ್ಸ್‌ನ ಸಂಸ್ಥಾಪಕರು ಕೂಡ ಆಗಿದ್ದರು.

ಭಾರತದಲ್ಲಿ ೧೯೦೯ರಲ್ಲಿ ಬೆಂಗಳೂರಿನ ಬಿಷಪ್‌ಕಾಟನ್ ಶಾಲೆಯಲ್ಲಿ ಪ್ರಪ್ರಥಮವಾಗಿ ಹುಡುಗರ ಸ್ಕೌಟ್ಸ್‌ನ ತಂಡ ಕಾಣಿಸಿಕೊಂಡಿತು. ಮೈಸೂರು ಸಂಸ್ಥಾನದಲ್ಲಿ ೧೯೧೭ರಲ್ಲಿ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರೋತ್ಸಾಹದೊಡನೆ ಸ್ಕೌಟ್ಸ್ ಪ್ರಾರಂಭಗೊಂಡಿತು. ಶ್ರೀಮನ್ಮಹಾರಾಜರು ಸಂಸ್ಥಾನದಾದ್ಯಂತ ಸ್ಕೌಟಿಂಗ್ ಪ್ರಾರಂಭಿಸಿ ಅಭಿವೃದ್ಧಿಪಡಿಸಲು ಅಮೇರಿಕಾದ ಫ್ರಾಂಕ್‌ಸಿ ಅರ್ವಿನ್ ಎಂಬುವವರನ್ನು ಆಹ್ವಾನಿಸಿ, ಸಂಸ್ಥಾನದ ಸ್ಕೌಟ್ ಡೈರೆಕ್ಟರ್ ಆಗಿ ನೇಮಕಮಾಡಿದರು. ೧೯೨೭ರಲ್ಲಿ ಬಾಯ್ಸ್ ಸ್ಕೌಟ್ಸ್ ಆಫ್ ಮೈಸೂರು ಮತ್ತು ದಿ ಗರ್ಲ್ಸ್‌ಗೈಡ್ಸ್ ಆಫ್ ಮೈಸೂರು ಪ್ರಾರಂಭವಾದವು. ಅರ್ವಿನ್‌ರು ಸಂಘಟಿಸಿದ್ದ ಸ್ಕೌಟ್ ಮಾಸ್ಟರ್ ಶಿಕ್ಷಣ ಶಿಬಿರದಲ್ಲಿ ಚನ್ನಪಟ್ಟಣ ಹೈಸ್ಕೂಲಿನ ವೆಂಕಟೇಶ್ವರನ್ ಎಂಬ ಅಧ್ಯಾಪಕರು ಸ್ಕೌಟ್ ಮಾಸ್ಟರ್ ತರಬೇತಿ ಪಡೆದುಕೊಂಡು ಬಂದಿದ್ದರು. ವೆಂಕಟೇಶ್ವರನ್‌ರವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ., ಡಿಗ್ರಿ ಪಡೆದುಕೊಂಡು ಬಂದಿದ್ದರು. ಗೌಡರು, ವೆಂಕಟಪ್ಪನವರು, ಸುಬ್ಬರಾಯರು, ವೀರಣ್ಣಗೌಡ ಮುಂತಾದ ವಿದ್ಯಾರ್ಥಿಗಳು ಚನ್ನಪಟ್ಟಣ ಹೈಸ್ಕೂಲಿನಲ್ಲಿ ಪ್ರಾರಂಭಿಸಿದ ಸ್ಕೌಟ್‌ಗೆ ಸೇರಿದರು. ಮಹಾತ್ಮಗಾಂಧೀ, ಜವಾಹರ್‌ಲಾಲ್ ನೆಹರೂ, ಆನಿಬೆಸೆಂಟ್ ಮುಂತಾದವರು ಸ್ಕೌಟ್ಸ್ ಮತ್ತು ಗೈಡ್ಸ್ ಬಗೆಗೆ ಮೆಚ್ಚಿಗೆಯ ಮಾತುಗಳನ್ನಾಡಿ ವಿದ್ಯಾರ್ಥಿಗಳು ಅದರಲ್ಲಿ ಸೇರಬೇಕೆಂದು ಕರೆಕೊಟ್ಟರು. ಇವರೆಲ್ಲರ ಪ್ರೇರಣೆಯಿಂದ ಮೈಸೂರು ಸಂಸ್ಥಾನವಲ್ಲಿ ಸ್ಕೌಟ್ ಬಹಳ ಬೇಗ ಅಸ್ತಿತ್ವಕ್ಕೆ ಬಂದು ಅಭಿವೃದ್ಧಿಯಾಗಲು ಸಹಾಯಕವಾಯಿತು.

ಒಂದು ಸಲ ಇನ್‌ಫ್ಲುಯೆಂಜಾ ಬಂದಿತು. ಅದು ಇಡೀ ದೇಶಕ್ಕೆ ಆವರಿಸಿತ್ತು. ಗೌಡರು ಆ ಸಮಯದಲ್ಲಿ ಚನ್ನಪಟ್ಟಣ ಹೈಸ್ಕೂಲಿನ ವಿದ್ಯಾರ್ಥಿ ಮತ್ತು ಸ್ಕೌಟ್ ಸ್ವಯಂಸೇವಕರಾಗಿದ್ದರು. ಮೊದಲು ಪ್ಲೇಗ್ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿತು. ಟೌನಿನ ಝಾಡಮಾಲಿಗಳ ಗುಡಿಸಲುಗಳಲ್ಲಿನ ಜನರಿಗೆ ಈ ರೋಗ ಮೊದ ಮೊದಲು

ಕಾಣಿಸಿಕೊಂಡಿತು; ನೋಡು ನೋಡುತ್ತಲೇ ಎಲ್ಲಾ ಕಡೆ ಹರಡಿಕೊಂಡುಬಿಟ್ಟಿತು. ಟೌನಿನ ಜನರೆಲ್ಲಾ ಹಳ್ಳಿಗಳಿಗೆ ಹೋಗಿದ್ದರು. ಪ್ಲೇಗಿನ ಗಲಾಟೆ ಇಳಿಮುಖವಾಗುತ್ತಲೇ ಇನ್‌ಫ್ಲುಯೆಂಜಾ ಹರಡಲಾರಂಭಿಸಿತು. ಜನರಿಗೆಲ್ಲಾ ಭಯ; ನಗುಮುಖ ಇಲ್ಲದಂತಾಯಿತು. ಎಲ್ಲಾ ಕಡೆ ಸಾವೇ ಸಾವು. ಬಹಳಷ್ಟು ಜನರು ಕಾಯಿಲೆಯಾಗಿ ಮಲಗಿದರು. ಆಗ ಚನ್ನಪಟ್ಟಣ ಟೌನಿನ ಸಾರ್ವಜನಿಕ ಆಸ್ಪತ್ರೆಯ ವೈದ್ಯರಾಗಿ ಡಾ.ಚೊಕ್ಕಂ ಅಯ್ಯಾಂಗಾರ್ ಎಂಬುವವರು ಕೆಲಸಮಾಡುತ್ತಿದ್ದರು. ಅವರು ಹೈಸ್ಕೂಲಿನ ಸ್ಕೌಟ್ ವಿದ್ಯಾರ್ಥಿಗಳನ್ನು ಪ್ಲೇಗ್ ರೋಗಗಳಿಗೆ ಔಷಧೋಪಚಾರದ ಸೇವಾ ಸಹಾಯ ಮಾಡಲು ಸಾಧ್ಯವೇ ಎಂದು ಕೇಳಿಕೊಂಡರು. ಸ್ಕೌಟ್ ವಿದ್ಯಾರ್ಥಿಗಳಾದ ಗೌಡರು, ವೀರಣ್ಣಗೌಡರು, ವೆಂಕಟಪ್ಪನವರು ಮುಂತಾದವರು ನಮಗೆಲ್ಲಿ ಅದು ಅಂಟಿಕೊಳ್ಳುತ್ತದೆಯೋ ಎಂದು ಭಯಭೀತರಾಗಿದ್ದರು. ಆದರೂ ಸೇವಾ ಮನೋಭಾವನ್ನು ಮೈಗೂಡಿಸಿಕೊಂಡಿದ್ದ ಅವರೆಲ್ಲರೂ ವೈದ್ಯರ ಕೋರಿಕೆಯನ್ನು ಒಪ್ಪಿಕೊಂಡರು. ಪ್ರತಿದಿನವೂ ವೈದ್ಯರು ಕೊಡುತ್ತಿದ್ದ ಔಷಧಿ, ಬ್ರೆಡ್ ಮತ್ತು ಹಾಲುಗಳನ್ನು ತೆಗೆದುಕೊಂಡು ಸೈಕಲ್‌ನಲ್ಲಿ ರೋಗಿಗಳ ಬಳಿಗೆ ಹೋಗುತ್ತಿದ್ದರು. ಅಲ್ಲಿ ಕಾಯಿಲೆಯಾದವರಿಗೆ ಔಷಧಿ ಕುಡಿಸಿ ಬ್ರೆಡ್ ಮತ್ತು ಹಾಲುಗಳನ್ನು ಕೊಟ್ಟು ಸೇವೆ ಮಾಡುತ್ತಿದ್ದರು. ಕಾಯಿಲೆಯಾದವರ ಹತ್ತಿರ ಮಲಗಬೇಡಿ; ದಿನಕ್ಕೆ ಮೂರು ನಾಲ್ಕು ಬಾರಿ ಬಾಯಿ ಮುಕ್ಕಳಿಸಿರಿ ಎಂದು ವೈದ್ಯರು ಸ್ಕೌಟ್ ವಿದ್ಯಾರ್ಥಿಗಳಿಗೆ ತಿಳಿಸಿದ್ದರು. ಕಾಯಿಲೆಯಾದವರಿಗೆ ಔಷಧಿ ಕುಡಿಸಿ ಅಲ್ಲಿಂದ ಹಿಂದಿರುಗಿದ ಮೇಲೆ ಗೌಡರು ಮತ್ತು ಇತರೆ ಸ್ಕೌಟ್ ವಿದ್ಯಾರ್ಥಿಗಳು ಹಾಕಿಕೊಂಡಿದ್ದ ಬಟ್ಟೆಗಳನ್ನು ವೈದ್ಯರ ಸಲಹೆಯಂತೆ ಬಿಸಿಲಿಗೆ ಹಾಕಿ, ನಂತರ ಸ್ನಾನ ಮಾಡುತ್ತಿದ್ದರು. ಬಯಲಿನಲ್ಲಿ ಹುಲ್ಲು ಹಾಸಿದ ಗಾಡಿಯ ಮೇಲೋ ಅಥವಾ ನೆಲದ ಮೇಲೋ ಇವರು ಮಲಗುತ್ತಿದ್ದರು. ಭಯದಿಂದ ಪದೇ ಪದೇ ಬಾಯಿ ಮುಕ್ಕಳಿಸುತ್ತಿದ್ದರು. ಆಗ ಕಾಯಿಲೆಯಿಂದ ಸತ್ತವರನ್ನು ಮಣ್ಣು ಮಾಡುವವರೇ ದಿಕ್ಕಿರಲಿಲ್ಲ. ಮೂರು ತಿಂಗಳು ಯಾರ ಮುಖದ ಮೇಲೂ ನಗೆ ಮೂಡಲಿಲ್ಲ. ಎಲ್ಲರ ಮನೆಯಲ್ಲಿಯೂ ಕಾಯಿಲೆ ಮತ್ತು ಸಾವಿನ ಸುದ್ದಿಯ ಮಾತುಗಳು ತುಂಬಿರುತ್ತಿದ್ದವು. ಸಾವಿನ ನರ್ತನಕ್ಕೆ ಎಲ್ಲರೂ ಗಡಗಡ ನಡುಗುತ್ತಿದ್ದರು.

ಫ್ರಾಂಕ್ ಅರ್ವಿನ್‌ರ ಅಧಿಕಾರದ ಅವಧಿ ಮುಗಿದ ನಂತರ ಶ್ರೀಕೆ.ಎಸ್.ಕಾಮತ್‌ರನ್ನು ಶ್ರೀಮನ್ಮಹಾರಾಜರು ಸ್ಕೌಟ್ ಡೈರೆಕ್ಟರ್ ಆಗಿ ನೇಮಿಸಿದರು. ಕಾಮತ್‌ರು ಈ ಮೊದಲು ಮದ್ರಾಸಿನಲ್ಲಿ ಆಡ್ವೋಕೇಟ್ ಆಗಿ ಪ್ರಾಕ್ಟೀಸ್ ಮಾಡುತ್ತಿದ್ದರು. ಕಾಮತ್‌ರು ಲಾರ್ಡ್ ಬಿ.ಪಿ.ಅವರ "ಸ್ಕೌಟಿಂಗ್ ಫಾರ್ ಬಾಯ್ಸ್" ಪುಸ್ತಕವನ್ನು ಎಲ್ಲಾ ವಿದ್ಯಾ ಸಂಸ್ಥೆಗಳಿಗೆ ಪೂರೈಸಿದರು. ಸ್ಕೌಟ್ ಮಾಸ್ಟರ್‌ಗಳು ಓದಿ ಸ್ಕೌಟಿಂಗ್ ವಿಚಾರಗಳನ್ನು ವಿದ್ಯಾರ್ಥಿಗಳಿಗೆ

ತಿಳಿಸುತ್ತಿದ್ದರು. ಸ್ಕೌಟ್ ಸ್ವಯಂ ಸೇವಕರ ಉಡುಪು ಆಗ ಬಿಳಿ ಟೋಪಿ, ಬಿಳಿ ಬನಿಯನ್, ನೀಲಿ ನಿಕ್ಕರ್ ಆಗಿತ್ತು. ಕೆಲವು ಕಡೆ ಖಾಕಿ ಪೇಟಕ್ಕೆ ಬದಲಾಗಿ ಬಿಳಿಪೇಟಾ, ಖಾಕಿ ಷರ್ಟ್‌ಗೆ ಬದಲಾಗಿ ಬಿಳಿ ಬನಿಯನ್, ಮತ್ತು ಖಾಕಿ ಚಡ್ಡಿಗಳಿಗೆ ಬದಲಾಗಿ ನೀಲಿ ನಿಕ್ಕರ್ ಇದ್ದವು.

ಗೌಡರು ಬೇಡನ್ ಪೊವೆಲ್‌ರವರ ಪುಸ್ತಕವನ್ನು ಮತ್ತು ಸ್ಕೌಟ್‌ಗೆ ಸಂಬಂಧಪಟ್ಟ ಇತರ ಪುಸ್ತಕಗಳನ್ನು ಓದುತ್ತಿದ್ದರು. ಸ್ಕೌಟ್‌ಗೆ ಸಂಬಂಧಪಟ್ಟ ಚಿತ್ರಗಳನ್ನು ನೋಡುತ್ತಿದ್ದರು. ಪ್ರತಿದಿನವೂ ಸ್ಕೌಟಿಂಗ್ ಅಭ್ಯಾಸವನ್ನು ಮಾಡುತ್ತಿದ್ದರೂ ಓದಿನಲ್ಲಿ ಎಂದೂ ಹಿಂದೆ ಬೀಳಲಿಲ್ಲ. ಯಾವುದೇ ವಿಷಯವನ್ನಾದರೂ ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದ ಗೌಡರು ಓದಿನಲ್ಲಿಯೂ ಅದೇ ನಿಷ್ಠೆಯನ್ನು ಹೊಂದಿದ್ದರು. ಸ್ಕೌಟಿಗೆ ಸಂಭಂಧಿಸಿದ ದೊರೆತ ಎಲ್ಲಾ ಪುಸ್ತಕಗಳನ್ನು ಸಂಗ್ರಹಿಸಿ ಮಾಹಿತಿ ಸಂಗ್ರಹಿಸಿಟ್ಟಿದ್ದರು. ಸ್ಕೌಟಿಂಗ್ ಅವರಿಗೆ ತಮ್ಮ ವಿದ್ಯಾಭ್ಯಾಸದಷ್ಟೇ ಪ್ರಮುಖವೆನಿಸಿತ್ತು. ಚನ್ನಪಟ್ಟಣದಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿದ ನಂತರ ಉನ್ನತ ಶಿಕ್ಷಣದ ಎಂಟ್ರೆನ್ಸ್ ಪರೀಕ್ಷೆ ತೆಗೆದುಕೊಂಡರು. ಎಂಟ್ರೆನ್ಸ್ ಪರೀಕ್ಷೆಗೆ ಕಷ್ಟಪಟ್ಟು ಓದಿ ಪಾಸಾದರು. ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಪ್ರವೇಶಾತಿ ಪಡೆದುಕೊಂಡರು.

ಅವರು ಸ್ಕೌಟ್ ವಿದ್ಯಾರ್ಥಿ ಆಗಿದ್ದಾಗ ಇಂಗ್ಲೆಂಡಿನಲ್ಲಿ ಸ್ಕೌಟ್ ವರ್ಲ್ಡ್ ಜಂಬೂರಿ ಸಂಘಟನೆ ಮಾಡಲಾಯಿತು. ಶಾಲೆಯ ಸ್ಕೌಟ್ ಮಾಸ್ಟರ್‌ಗಳೂ ಸ್ಕೌಟ್ ಸ್ವಯಂ ಸೇವಕರು ಅಲ್ಲಿಗೆ ಹೋಗಲು ಅವಕಾಶವಿರುವುದರ ಬಗೆಗೆ ಮೈಸೂರು ಸರ್ಕಾರದ ಸ್ಕೌಟ್ ಡೈರೆಕ್ಟರ್‌ರವರಿಂದ ಶಾಲೆಗೆ ಪತ್ರ ಬಂದಿತ್ತು. ಅಲ್ಲಿಗೆ ಹೋಗುವ ಸ್ಕೌಟ್ ಸ್ವಯಂ ಸೇವಕರು ರಿಜಿಸ್ಟ್ರೇಶನ್ ಫೀ ಕಟ್ಟಬೇಕಾಗಿತ್ತು. ಉಳಿದಂತೆ ಇತರೆಲ್ಲ ವೆಚ್ಚವನ್ನು ಸರ್ಕಾರವು ಭರಿಸಲು ಮುಂದೆ ಬಂದಿತ್ತು. ಆ ಕಾಲದಲ್ಲಿ ಹಣದ ಕೊರತೆ ಇದ್ದುದರಿಂದಗೌಡರು, ವೆಂಕಟಪ್ಪನವರು, ವೀರಣ್ಣಗೌಡರು ಅಲ್ಲಿಗೆ ಹೋಗಲು ಬಹಳ ಆಸೆ ಇದ್ದರೂ ಹೋಗಲಾಗಲಿಲ್ಲ. ಸ್ಕೌಟ್ ನಿಯಮಗಳು, ಡ್ರಿಲ್ ಮಾಡುವುದು, ಸಿಗ್ನಲಿಂಗ್, ಹ್ಯೂಮನ್ ಪಿರಿಮಿಡ್ಸ್, ದೊಣ್ಣೆ ವರಸೆ, ಲಜೀಂ, ಆಟಗಳ ಬಗೆಗೆ ತಿಳಿದುಕೊಂಡಿದ್ದು ಅವು ಅವರ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾಗಿ ಬೆಂಗಳೂರು ಜಿಲ್ಲೆಯ ಸ್ಕೌಟ್ ಕಮೀಷನ್ ಆಗಿ ನೇಮಕಗೊಳ್ಳಲು ಮತ್ತು ಸ್ಕೌಟ್‌ನ ಸೇವಾ ಕ್ಷೇತ್ರದಲ್ಲಿ ಸೇವೆ ಮಾಡಲು ನೆರವಾದವು. ಗೌಡರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸ್ಕೌಟ್ ಕಮೀಷನರ್ ಆಗಿದ್ದಾಗ ರಾಜ್ಯಮಟ್ಟದ ಜಂಬೂರಿಗಳನ್ನು ಸಂಘಟಿಸಿದರು. ಬೆಂಗಳೂರು ನಗರದ ರಾಷ್ಟ್ರಮಟ್ಟದ ಜಾಂಬೂರಿಗಳನ್ನು ಸಂಘಟಿಸಲು ಸಹಕಾರ ನೀಡಿದರು. ಬೆಂಗಳೂರು ಜಿಲ್ಲೆಯಲ್ಲಿ

ಸ್ಕೌಟ್ ವಿದ್ಯಾರ್ಥಿಗಳ ಸದಸ್ಯತ್ವದ ಸಂಖ್ಯೆಯನ್ನೂ ಮತ್ತು ಸ್ಕೌಟ್ಸ್ ಗೈಡ್ಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿದರು. ದೊಡ್ಡಬಳ್ಳಾಪುರದ ಬೆಸೆಂಟ್ ಶಿಬಿರಕ್ಕೆ ಬೆಂಗಳೂರು ಗ್ರಾಮಾಂತರ ಸ್ಕೌಟ್ಸ್‌ನಿಂದ ಸ್ಕೌಟ್ ಮಾಸ್ಟರ್ಸ್‌ಗಳನ್ನು ಮತ್ತು ವಿದ್ಯಾರ್ಥಿಗಳನ್ನು ಕಳುಹಿಸಿಕೊಟ್ಟಿದ್ದರು. ಸ್ಕೌಟ್ ಆಶ್ರಯದಲ್ಲಿ ಎನ್.ಸಿ.ಸಿ ಸೇವಾದಳದಂತಹ ಸೇವಾ ಸಂಘಟನೆಗಳು ಕಾರ್ಯಕ್ರಮಗಳನ್ನು ನಡೆಸಲು ಗೌಡರು ಅವಕಾಶ ಮಾಡಿಕೊಟ್ಟರು. ನಂತರ ಅನೇಕ ವರ್ಷಗಳಕಾಲ ಗೌಡರನ್ನು ಸ್ಕೌಟ್ ಕಾರ್ಯಕ್ರಮಗಳಿಗೆ ಉದ್ಘಾಟನೆಗಾಗಿ ಮತ್ತು ಉಪನ್ಯಾಸಗಳಿಗಾಗಿ ಆಹ್ವಾನಿಸಲಾಗುತ್ತಿತ್ತು. ಗೌಡರಿಗೆ ರಚನಾತ್ಮಕ ಕಾರ್ಯಕ್ರಮಗಳ ಅರಿವಿತ್ತು. ಅವರು ಒಳ್ಳೆಯ ಭಾಷಣಕಾರರೂ ಕೂಡ ಆಗಿದ್ದರು. ಉಪನ್ಯಾಸ ಮಾಡುವ ಕಲೆಯು ಅವರಿಗೆ ಚನ್ನಾಗಿ ಕರಗತವಾಗಿತ್ತು. ಆದರೆ ಅದು ಬರಿಯ ಅರ್ಥವಿಲ್ಲದ, ಸ್ವಾರಸ್ಯವಿಲ್ಲದ ಮಾತಾಗಿರುತ್ತಿರಲಿಲ್ಲ. ಸಮಯ, ಸಂದರ್ಭಗಳಿಂದ ಕೂಡಿದ ಅರ್ಥಗರ್ಭಿತ ಮಾತುಗಾರಿಕೆಯಾಗಿರುತ್ತಿತ್ತು; ಜೊತೆಗೆ ಪರಿಣಾಮಕಾರಿಯಾಗಿದ್ದು ಕೇಳುಗರ ಮನಸ್ಸನ್ನು ಸೂರೆಗೊಳ್ಳುವಂತಿರುತ್ತಿತ್ತು. ಇವಕ್ಕೆಲ್ಲ ಮುಖ್ಯ ಕಾರಣ ಅವರು ಆ ಬಗ್ಗೆ ಮೊದಲೇ ಮಾಡಿಕೊಳ್ಳುತ್ತಿದ್ದ ಸಿದ್ಧತೆ. ಸ್ಕೌಟಿನ ಬಗೆಗೆ ಅವರು ಮಾಡಿದ ಉಪನ್ಯಾಸ ಅದಕ್ಕೊಂದು ನಿದರ್ಶನ: "ರಾಜ್ಯದಲ್ಲಿನ ಪ್ರತಿಯೊಂದು ಮನೆಯಲ್ಲಿಯೂ ಸ್ಕೌಟ್ಸ್ ಮತ್ತು ಗೈಡ್ಸ್ ರೀತಿಯ ಶಿಸ್ತಿನ ಮಕ್ಕಳಿರಬೇಕು. ಸೌಟ್ಸ್ ಚಳುವಳಿಯು ರಾಷ್ಟ್ರದ ಅಭಿವೃದ್ಧಿಗೆ ಸೂಕ್ತವಾದುದಾಗಿದ್ದು ಇದು ರಾಷ್ಟ್ರದ ಎಲ್ಲಾ ಕಡೆಯಲ್ಲಿಯೂ ವಿಸ್ತಾರವಾದಷ್ಟೂ ರಾಷ್ಟ್ರದ ಅಭಿವೃದ್ಧಿಗೆ ಬಹಳಷ್ಟು ಸಹಾಯಕವಾಗುತ್ತದೆ. ಹೈಸ್ಕೂಲಿನಲ್ಲಿ ನಾನು ಓದುತ್ತಿದ್ದಾಗ ಸ್ಕೌಟ್ಸ್‌ನೊಂದಿಗಿನ ನನ್ನ ಸಂಪರ್ಕವು ನನಗೆ ಸಿಹಿಯಾದ ನೆನಪಾಗಿದೆ. ಮೂಲಭೂತವಾಗಿ ಸೌಟ್ಸ್‌ಚಳುವಳಿಯು ಯುವ ಜನಾಂಗದಲ್ಲಿ ಸಚ್ಚಾರಿತ್ರ್ಯವನ್ನು ಅಭಿವೃದ್ಧಿ ಪಡಿಸುವ ಚಳುವಳಿಯಾಗಿದೆ. ರಾಷ್ಟ್ರದ ಮತ್ತು ಇಡೀ ಜಗತ್ತಿನ ಪ್ರಜಾಪ್ರಭುತ್ವ ಸಮಾಜದ ವಿವಿಧ ಭಾರಗಳನ್ನು, ಒತ್ತಡಗಳನ್ನು ಹೊರುವ ಸಾಮರ್ಥ್ಯವನ್ನು ಹೊಂದುವ ಸತ್ಪ್ರಜೆಗಳನ್ನು ನಿರ್ಮಿಸುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ಮಹತ್ವ ಪೂರ್ಣ ಪಾತ್ರವಹಿಸುತ್ತದೆ" ಎಂದು ಗೌಡರು ತಮ್ಮ ಭಾಷಣಗಳಲ್ಲಿ ಹೇಳುತ್ತಿದ್ದರು. ರಾಜ್ಯದಲ್ಲಿ ಸ್ಕೌಟ್ ಚಳುವಳಿಯು ಈ ಪ್ರಮಾಣದಲ್ಲಿ ಬೆಳೆದು ಅಭಿವೃದ್ಧಿಗೊಳ್ಳಲು ಗೌಡರ ಸೇವೆಯೂ ಸಹ ಗಣನೀಯವಾದುದಾಗಿದೆ. ಗೌಡರು ವಿದ್ಯಾರ್ಥಿ ದಿಸೆಯಿಂದಲೂ ಶಿಸ್ತಿನ ಸಿಪಾಯಿಯಾಗಿದ್ದವರು. ಶಿಸ್ತು ಅವರ ಬದುಕಿನ ಒಂದು ಅವಿಭಾಜ್ಯ ಅಂಗವಾಗಿತ್ತು. ಬಾಲ್ಯದಲ್ಲಿ ಕಾಣಿಸಿಕೊಂಡ ಈ ಶಿಸ್ತು ಅವರ ಜೀವಿತದ ಕೊನೆಯವರೆವಿಗೂ ಅವರು ಹೊಕ್ಕ ಎಲ್ಲ ರಂಗಗಳಲ್ಲಿಯೂ ಹರಡಿತ್ತೆಂಬುದು ವಿಶೇಷ. ಇದಕ್ಕೆ ಪೂರಕವಾಗಿ

ಸ್ಕೌಟ್ ಅವರ ಜೀವನ ಪ್ರವೇಶಿಸಿದ್ದು ಅದಕ್ಕೆ ಮತ್ತಷ್ಟು ಮೆರಗನ್ನು ತಂದುಕೊಟ್ಟಿತ್ತು. ಗೌಡರು ಎಂದೂ ನಿಯಮ ಮೀರಿ ನಡೆದುಕೊಂಡವರಲ್ಲ. ಹಾಗೆಂದು ಕಠಿಣವಾಗಿ ವರ್ತಿಸುತ್ತಿದ್ದವರೂ ಅಲ್ಲ. ಅವರ ನಡೆ, ನುಡಿ ಎಲ್ಲವೂ ಶಿಸ್ತಿನ ಚೌಕಟ್ಟಿನೊಳಗೆ ಯಾರಿಗೂ ನೋವಾಗದಂತೆ ನಡೆದುಹೋಗುತ್ತಿತ್ತು. ಇದು ತೀರ ಕಷ್ಟದ ಕೆಲಸ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಅಂತಹುದನ್ನು ಮಾಡುವಾಗ, ಹಾಗೆ ನಡೆದುಕೊಳ್ಳುವ ಸಂದರ್ಭ ಒದಗಿ ಬಂದಾಗ ಗೌಡರು ಆ ಒಂದು ಸಂದರ್ಭದ ಅಥವಾ ಪರಿಸ್ಥಿತಿಯ ಅರಿವನ್ನು ಮಾಡಿಕೊಡುವುದರ ಮೂಲಕ ಅವರ ಮನವೊಲಿಸುತ್ತಿದ್ದರು. ಸ್ಕೌಟ್ಸ್ ಅವರಿಗೆ ಇಂತಹುದೆಲ್ಲವನ್ನು ಕಲಿಯಲು ನೆರವಾಗಿತ್ತು. ಜೊತೆಗೆ ಅವರಲ್ಲಿದ್ದ ಮಾನವೀಯ ಗುಣಗಳು ಇದನ್ನು ಅವರಿಗೆ ಚನ್ನಾಗಿಯೇ ಕಲಿಸಿದ್ದವು. ಅವರ ಬಳಿ ಬರುತ್ತಿದ್ದ ಎಷ್ಟೋ ಕೇಸ್‌ಗಳನ್ನು ಕೋರ್ಟ್ ಮೆಟ್ಟಲು ಏರುವುದಕ್ಕೆ ಮೊದಲೇ ಬಗೆಹರಿಸುತ್ತಿದ್ದುದುಂಟು. ಕೋರ್ಟ್ ಮೆಟ್ಟಿಲೇರಿ ಹಣ, ಸಮಯ, ನೆಮ್ಮದಿ ಎಲ್ಲವನ್ನು ಕಳೆದುಕೊಳ್ಳುವುದಕ್ಕಿಂತ ಮೊದಲೇ ಬುದ್ಧಿ ಕಲಿಯುವಂತೆ ಮಾಡುತ್ತಿದ್ದುದು ಇದಕ್ಕೆ ಸಾಕ್ಷಿ. ಅವರು ವಕೀಲರಾಗಿದ್ದಾಗ ಇಂತಹ ಹತ್ತು ಹಲವು ಕೇಸ್‌ಗಳನ್ನು ಹೀಗೆಯೇ ಬಗೆಹರಿಸಿ ಆ ಪಾರ್ಟಿಗಳಿಬ್ಬರನ್ನೂ ಬುದ್ಧಿ ಕಲಿಯುವಂತೆ ಮಾಡಿದ್ದಾರೆ. ನಂತರ ಅವರವರ ತಪ್ಪು ಅರಿವಾಗಿ ಗೌಡರನ್ನು ಅವರು ಕೊಂಡಾಡಿದ್ದೂ ಹೌದು. ಗೌಡರಲ್ಲಿದ್ದ ಸಾತ್ವಿಕಗುಣ ಅಂತಹುದು.

ಸ್ಕೌಟ್ಸ್‌ನ ಒಬ್ಬ ನಿಷ್ಠಾವಂತ ಕಾರ್ಯಕರ್ತರಾಗಿ ಗೌಡರು ಅದರ ಪ್ರಚಾರ ಮತ್ತು ಪ್ರಸಾರ ಕಾರ್ಯದಲ್ಲಿ ಬಹುಮುಖ್ಯ ಪಾತ್ರವಹಿಸಿ ಕರ್ನಾಟಕದಲ್ಲಿ ಸ್ಕೌಟ್ ಚಳುವಳಿ ಪ್ರಭಾವಶಾಲಿಯಾಗಿ ಉಳಿಯುವಂತೆ ನೋಡಿಕೊಂಡರಷ್ಟೇ ಅಲ್ಲದೆ ಅದರಿಂದ ತಾವೂ ಶಿಸ್ತಿನ ಪಾಠ ಕಲಿತಿದ್ದರ ಬಗೆಗೆ ಅವರಿಗೆ ಹೆಮ್ಮೆ ಎನಿಸಿತ್ತು. ಇತರರೂ ಅದರಿಂದ ಕಲಿಯುವಂತಾಗಲಿ, ಆಗಬೇಕು ಎಂಬುದು ಗೌಡರ ಮಹದಾಸೆಯಾಗಿತ್ತು. ಹಾಗಾಗಿ ಹಗಲಿರುಳೆನ್ನದೆ ಆ ಕಾರ್ಯದಲ್ಲಿ ನಿರತರಾಗಿದ್ದರು. ಯುವಕರನ್ನು ಹುರಿದುಂಬಿಸುವಲ್ಲಿ ಯಶಸ್ವಿಯಾಗಿದ್ದರು. ಸ್ಕೌಟಿಂಗ್ ಮೂಲಕ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ದೇಶಾಭಿವೃದ್ಧಿಯಾಗುತ್ತದೆಂಬ ಪ್ರಬಲವಾದ ನಂಬಿಕೆ ಅವರದ್ದಾಗಿತ್ತು.

❖

# ೫. ಬಾಂಬೆ ಪ್ರೆಸಿಡೆನ್ಸಿಯ ಪುಣೆಯಲ್ಲಿ ಕಾನೂನು ಪದವಿ

ಮಾದಯ್ಯಗೌಡರು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಪದವಿ ಪಡೆದುಕೊಂಡ ನಂತರ ಬಾಂಬೆ ಪ್ರೆಸಿಡೆನ್ಸಿಯ ಪುಣೆನಗರಕ್ಕೆ ಎಲ್.ಎಲ್.ಬಿ., ವಿದ್ಯಾಭ್ಯಾಸ ಮಾಡಲು ಹೋದರು. ಆಗ ಎಸ್.ನಿಜಲಿಂಗಪ್ಪನವರು ಇವರ ಸಹಪಾಠಿಗಳು. ಸ್ವಾತಂತ್ರ್ಯ ಹೋರಾಟದ ಮಾದಯ್ಯಗೌಡರ ಸಹಪಾಠಿ ಕೆ.ಸುಬ್ಬರಾಯರು ಸಹ ಎಲ್.ಎಲ್.ಬಿ., ಓದಲು ಆಗ ಪುಣೆಗೆ ಬಂದಿದ್ದರು. ಈ ಮೊದಲು ಮೈಸೂರು ಸಂಸ್ಥಾನದವರು ಕಾನೂನು ಶಿಕ್ಷಣ ಪಡೆಯಲು ಮದ್ರಾಸಿಗೆ ಹೋಗುತ್ತಿದ್ದರು. ಎಲ್.ಎಲ್.ಬಿ., ಎಂಬ ಪದವಿ ಕೊಡುವ ಕಾಲೇಜುಗಳ ಕಲ್ಪನೆ ಮೂಡಲು ಪ್ರಾರಂಭವಾಗಿ ಬಾಂಬೆ, ಮದ್ರಾಸ್ ಮತ್ತು ಕೊಲ್ಕತ್ತಗಳಲ್ಲಿ ಕಾನೂನು ಕಾಲೇಜುಗಳು ಪ್ರಾರಂಭವಾದವು. ನಂತರ ಪುಣೆಯಲ್ಲಿ ಒಂದು ಖಾಸಗಿ ಕಾನೂನು ಕಾಲೇಜು ಪ್ರಾರಂಭವಾಯಿತು. ಆ ಕಾಲೇಜಿನ ಹೆಸರು ಇಂಡಿಯನ್ ಲಾ ಸೊಸೈಟಿ ಕಾನೂನು ಕಾಲೇಜು. ಇಂಡಿಯನ್ ಲಾ ಸೊಸೈಟಿಯು, ಜೂನ್ ೧೯೨೪ರಲ್ಲಿ ಸೊಸೈಟೀಸ್ ರಿಜಿಸ್ಟ್ರೇಶನ್ ಕಾಯಿದೆ ೧೮೬೦ ಮತ್ತು ಬಾಂಬೆ ಪೋರ್ಟ್ ಟ್ರಸ್ಟ್ ಕಾಯಿದೆ ೧೯೫೦ರ ಅಡಿಯಲ್ಲಿ ಈ ಕಾನೂನು ಕಾಲೇಜನ್ನು ಪ್ರಾರಂಭಿಸಿತು. ಇಂಡಿಯಾನ್ ಲಾ ಸೊಸೈಟಿಯು ರಾಷ್ಟ್ರದ ಒಂದು ಪಾರಂಪರಿಕ ಸೊಸೈಟಿಯಾಗಿದ್ದು; ಇದು ೪ ಮಾರ್ಚ್ ೧೯೨೪ರಲ್ಲಿ

ಉದ್ಘಾಟನೆಗೊಂಡಿತು. ಉದ್ಘಾಟನಾ ಸಮಾರಂಭವನ್ನು ಡಾ.ಸರ್.ನಾರಾಯಣರಾವ್ ಗಣೇಶ್ ಚಂದಾವರ್ಕರ್‌ಅವರ ಬಂಗಲೆಯಲ್ಲಿ ಏರ್ಪಾಡು ಮಾಡಲಾಗಿತ್ತು. ಈ ಲಾ ಸೊಸೈಟಿಯ ಪ್ರಥಮ ಅಧ್ಯಕ್ಷರನ್ನಾಗಿ ಡಾ.ಸರ್.ನಾರಾಯಣರಾವ್ ಗಣೇಶ್ ಚಂದಾವರ್ಕರ್‌ಅವರನ್ನು ಮತ್ತು ಪ್ರಥಮ ಉಪಾಧ್ಯಕ್ಷರನ್ನಾಗಿ ಬಾಂಬೆ ಹೈಕೋರ್ಟ್‌ನ ಎಚ್.ಸಿ.ಕೋಯಜಿ ಅವರನ್ನು ಆಯ್ಕೆ ಮಾಡಲಾಯಿತು. ಪ್ರಥಮ ಕಾರ್ಯದರ್ಶಿಯಾಗಿ ಬಾಂಬೆ ಹೈಕೋರ್ಟ್‌ನ ಜೆ.ಆರ್.ನಾನಾಸಾಹೇಬ್ ಘರಪುರೆಯವರು ಮತ್ತು ಪ್ರಥಮ ಖಜಾಂಚಿಯಾಗಿ ಬಾಂಬೆ ಹೈಕೋರ್ಟ್‌ನ ಪಿ.ಬಿ.ಸಿಂಗ್ನೆಅವರು ಆಯ್ಕೆಯಾದರು. ಈ ಸಭೆಯ ತೀರ್ಮಾನದಂತೆ ೨೦ ಜೂನ್ ೧೯೨೪ರಲ್ಲಿ ಕಾನೂನು ಕಾಲೇಜು ಪ್ರಾರಂಭಿಸಲಾಯಿತು. ಆ ಕಾಲದ ಕಾನೂನು ವಿಷಯಗಳಲ್ಲಿ ಗಣ್ಯರಾಗಿದ್ದ ಅನೇಕರು ಈ ಕಾಲೇಜಿನ ವಿದ್ಯಾರ್ಥಿಗಳು. ಇಂಡಿಯಾನ್ ಲಾ ಸೊಸೈಟಿ ಅಧ್ಯಕ್ಷರಾಗಿದ್ದ ಬಾಂಬೆ ಹೈಕೋರ್ಟ್‌ನ ಸುಪ್ರಸಿದ್ಧ ವಕೀಲರೂ ಆಗಿದ್ದ ಸರ್.ನಾರಾಯಣರಾವ್ ಚಂದಾವರ್ಕರ್, ಜೆ.ಆರ್.ನಾನಾಸಾಹೇಬ್ ಘರ್‌ಪುರೆ, ರಾವ್ ಬಹದ್ದೂರ್ ಪಿ.ಬಿ.ಸಿಂಗ್ನೆ; ಬಾಂಬೆ ಬಾರ್ ಕೌನ್ಸಿಲ್ ಗಣ್ಯಸದಸ್ಯರಾಗಿದ್ದ ಎ.ಜಿ.ಸತಯೇ ಮತ್ತು ಎಸ್.ವೈ.ಅಭಯಂಕರ್; ಇಂಡಿಯನ್ ಲಾ ಸೊಸೈಟಿಯ ಮಹಿಳಾಸದಸ್ಯೆ ಶ್ರೀಮತಿ ಆನಂದಿಬಾಯಿ ಧವಳೆ, ಬರೋಡ ಸಂಸ್ಥಾನದ ಮಹಾರಾಣಿ ಚಿಮನಬಾಯಿ ಸಾಹೇಬ್, ಇಂದೋರ್ ಸಂಸ್ಥಾನದ ರಾಜಕುಮಾರಿ ಸೀತಾಬಾಯಿ ಸಾಹೇಬ್ ಭಾಗವತ್‌ರವರು ಐ.ಎಲ್.ಎಸ್.ಕಾಲೇಜಿನ ಸಂಸ್ಥಾಪಕರು. ಕಾಲೇಜು ಪ್ರಾರಂಭವಾದ ನಂತರ ಜೆ.ಆರ್.ನಾನಾಸಾಹೇಬ್ ಘರಪುರೆಯವರನ್ನು ಆ ಕಾನೂನು ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ಇಂಡಿಯನ್ ಲಾ ಸೊಸೈಟಿ ನೇಮಿಸಿತು. ಜೊತೆಗೆ, ಘರ್‌ಪುರೆಯವರನ್ನ ಇಂಡಿಯನ್ ಲಾ ಸೊಸೈಟಿಯ ಕಾರ್ಯದರ್ಶಿಯನ್ನಾಗಿಯೂ ಆಗ ಆಯ್ಕೆ ಮಾಡಲಾಯಿತು. ಎಸ್.ವಿ.ಚೌಧರಿ ಈ ಕಾಲೇಜಿನ ಪ್ರಥಮ ಕುಲಸಚಿವರಾಗಿ ನೇಮಕಕೊಂಡಿದ್ದರು. ಆಗ ಈ ಕಾನೂನು ಕಾಲೇಜು ಬಾಂಬೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಾಗಿತ್ತು. ಆಯಾಯ ವಿಷಗಳ ಬಗ್ಗೆ ಪಾಠ ಮಾಡಲು ಬಾಂಬೆ ನಗರದಿಂದ ಆ ಕಾಲದ ಪ್ರಸಿದ್ಧ ವಕೀಲರುಗಳು ಬರುತ್ತಿದ್ದರು. ಭಾರತದ ಪ್ರಪ್ರಥಮ ಚೀಫ್ ಜಸ್ಟೀಸ್ ಗಜೇಂದ್ರಗಡ್ಕರ್ ಈ ಕಾಲೇಜಿನ ಪ್ರತಿಷ್ಠಿತ ವಿದ್ಯಾರ್ಥಿಗಳಲ್ಲೊಬ್ಬರು. ಆ ಕಾಲದಲ್ಲಿ ಕಾನೂನು ಕಾಲೇಜು ಬಹಳ ಹೆಸರುವಾಸಿಯಾಗಿತ್ತು. ಮಾದಯ್ಯಗೌಡರು, ನಿಜಲಿಂಗಪ್ಪನವರು, ಕೆ.ಸುಬ್ಬರಾಯರು ಮುಂತಾದವರು ಈ ಕಾಲೇಜಿನಲ್ಲಿ ಓದಿದ ನಂತರ ಮೈಸೂರು ಸಂಸ್ಥಾನದಿಂದ ಕೆಂಗಲ್ ಹನುಮಂತಯ್ಯನವರು, ಎಚ್.ಹೊಂಬೇಗೌಡರು, ಕೆ.ಆರ್.ಮರುದೇವೇಗೌಡರು,

ವಿ.ಎಂ.ಲಿಂಗಯ್ಯ, ಕೆ.ಚಿಕ್ಕಲಿಂಗಯ್ಯ, ನಂಜುಂಡೇಗೌಡ, ಆರ್.ಜೀವರತ್ನಂ, ವೇದಾಂತ ದೇಶಿಕ ಅಯ್ಯಾಂಗಾರ್, ಡಿ.ಲಕ್ಷ್ಮೀಕಾಂತಅಯ್ಯಾಂಗಾರ್, ಡಿ.ಆರ್.ನರಸಿಂಹರಾವ್, ಸುಬ್ಬರಾಯಪ್ಪ, ಚಂದ್ರಶೇಖರ್ ಶೆಟ್ಟಿ, ನಂಜಪ್ಪಶೆಟ್ಟಿ, ರಂಗಶೆಟ್ಟಿ, ಬಿ.ಆರ್.ಪುಟ್ಟನಂಜಪ್ಪ, ಶ್ಯಾಮಯ್ಯಂಗಾರ್, ಅನ್ನದಾನಪ್ಪ, ಬಿ.ಚನ್ನಬಸಪ್ಪ ಮೊದಲಾದವರು ಈ ಕಾಲೇಜಿನಲ್ಲಿ ಎಲ್.ಎಲ್.ಬಿ ಓದಿದರು.

ಮದ್ರಾಸ್ ಸಿಟಿ, ಮದ್ರಾಸ್ ಪ್ರೆಸಿಡೆನ್ಸಿಯ ಕೇಂದ್ರ ಸ್ಥಾನವಾಗಿತ್ತು. ಮದ್ರಾಸ್‌ಗಿಂತ ಪುಣೆ ನಗರದಲ್ಲಿ ವಿದ್ಯಾಭ್ಯಾಸ ಮಾಡಲು ಖರ್ಚು ವೆಚ್ಚಗಳು ಕಡಿಮೆ ಇದ್ದವು. ಈ ಕಾರಣದಿಂದಾಗಿ ಮಾದಯ್ಯಗೌಡರು ಕಾನೂನು ಪದವಿ ವಿದ್ಯಾಭ್ಯಾಸ ಮಾಡಲು ಪುಣೆ ನಗರಕ್ಕೆ ಹೋದರು. ಆ ಸಮಯದಲ್ಲಿ ಅವರಿಗೆ ಹಣಕಾಸಿನ ತೊಂದರೆಗಳು ಆಗದಂತೆ ಹಣವನ್ನು ಅಣ್ಣ ಅಪ್ಪಾಜಿಗೌಡರು ಮತ್ತು ವಂಶದ ಇತರ ಹಿರಿಯರು ಸಹ ಕೆಲವೊಮ್ಮೆ ಅಗತ್ಯ ಸನ್ನಿವೇಶದಲ್ಲಿ ಮಾದಯ್ಯಗೌಡರಿಗೆ ತೊಂದರೆಯಾಗಬಾರದೆಂದು ಹಣ ಕಳಿಸುತ್ತಿದ್ದರು. ಅಣ್ಣ ಅಪ್ಪಾಜಿಗೌಡರು ಅನುಕೂಲವಾದಾಗ ತಮ್ಮನಿಗೆ ಹಣ ಕಳುಹಿಸಿದ ಹಿರಿಯರಿಗೆ ಹಣ ವಾಪಾಸು ಕೊಡುತ್ತಿದ್ದರು. ಹಣ ಹೊಂದಿಸಲು ಹಿಪ್ಪು ನೇರಳೆ ಸೊಪ್ಪು ಬೆಳೆದು, ರೇಷ್ಮೆ ಹುಳು ಕಷ್ಟ ಪಟ್ಟು ಸಾಕಿ ರೇಷ್ಮೆಗೂಡು ಮಾರಾಟ ಮಾಡಿ ಬಂದ ಹಣವನ್ನು ಪುಣೆಯಲ್ಲಿದ್ದ ಮಾದಯ್ಯಗೌಡರಿಗೆ ಕಳುಹಿಸಲಾಗುತ್ತಿತ್ತು. ಕೆಲವೊಮ್ಮೆ ರೇಷ್ಮೆ ಕೃಷಿಯಿಂದ ಬಂದ ಹಣ ಸಾಕಾಗದಿದ್ದರೆ ಅನುಕೂಲಸ್ಥರಿಂದ ಸಾಲ ಪಡೆದು ಮಾದಯ್ಯಗೌಡರಿಗೆ ಕಳಿಸಿಕೊಡುತ್ತಿದ್ದರು.

ಆಗ ಪುಣೆ ನಗರದಲ್ಲಿ ಕನ್ನಡದ ವಿದ್ಯಾರ್ಥಿಗಳಿಗೂ, ಮತ್ತು ಮರಾಠಿ ವಿದ್ಯಾರ್ಥಿಗಳಿಗೂ ಒಂದೇ ವಿದ್ಯಾರ್ಥಿನಿಲಯವಿತ್ತು. ಅದನ್ನು ಯೋಗಾಶ್ರಮವೆಂದು ಕರೆಯುತ್ತಿದ್ದರು. ಮುಂದೆ ಏಕೀಕೃತ ಕರ್ನಾಟಕದ ಮುಖ್ಯಮಂತ್ರಿಗಳು ನಂತರ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆದ ನಿಜಲಿಂಗಪ್ಪನವರು ಮಾದಯ್ಯಗೌಡರ ರೂಂ ಮೇಟ್ ಆಗಿದ್ದರು. ಇಬ್ಬರ ಗೆಳೆತನ ಚನ್ನಾಗಿತ್ತು. ಓದುವುದರಲ್ಲಿ ಇಬ್ಬರೂ ಚನ್ನಾಗಿದ್ದರು. ನಿಜಲಿಂಗಪ್ಪನವರ ನಗು ಮುಖವನ್ನೂ ಮತ್ತು ಸೌಮ್ಯ ಮೂರ್ತಿಯನ್ನು ನೋಡಿ ಮಾದಯ್ಯಗೌಡರು ಪುಣೆಗೆ ಓದಲು ಬಂದ ಪ್ರಾರಂಭದಲ್ಲಿಯೇ ನನಗೆ ಒಳ್ಳೆಯ ಗೆಳೆಯ ಸಿಕ್ಕಿದರು ಎಂದು ಸಂತೋಷ ಪಟ್ಟರು ಹಾಗೂ ತಮ್ಮಿಬ್ಬರ ಪುಣೆಯ ವಿದ್ಯಾರ್ಥಿ ಜೀವನದ ಒಡನಾಟದ ಬಗೆಗೆ ತಮ್ಮ ಅಣ್ಣ ಅಪ್ಪಾಜಿಗೌಡರಿಗೂ ಪತ್ರದಲ್ಲಿ ತಿಳಿಸಿದ್ದರು. ಹಾಸ್ಟೆಲ್‌ನಲ್ಲಿ ಮಾದಯ್ಯಗೌಡರು ನಿಜಲಿಂಗಪ್ಪನವರ ಮಾತಿಗೆ ಮತ್ತು ಸಲಹೆಗೆ ಯಾವಾಗಲೂ ಬೆಂಬಲ ಕೊಡುತ್ತಿದ್ದರು. ಅದೇ ರೀತಿ ಮಾದಯ್ಯಗೌಡರು ಹೇಳಿದುದನ್ನು

ನಿಜಲಿಂಗಪ್ಪನವರು ವಿಶ್ವಾಸದಿಂದ ಮಾಡುತ್ತಿದ್ದರು. ಮಾದಯ್ಯಗೌಡರ ಸಲಹೆಯನ್ನು ನಿಜಲಿಂಗಪ್ಪನವರು ತಿರಸ್ಕರಿಸುತ್ತಿರಲಿಲ್ಲ. ಕೊನೆಯವರೆವಿಗೂ ನಿಜಲಿಂಗಪ್ಪನವರು ಮತ್ತು ಮಾದಯ್ಯಗೌಡರು ಪರಸ್ಪರ ಪ್ರೀತಿ, ವಿಶ್ವಾಸ, ಗೌರವವನ್ನು ಇಟ್ಟುಕೊಂಡಿದ್ದರು.

ಆ ವಿದ್ಯಾರ್ಥಿನಿಲಯದಲ್ಲಿ ೨೫-೩೦ ಮೈಸೂರು ಸಂಸ್ಥಾನದ ಕನ್ನಡ ಮಾತಾಡುವ ವಿದ್ಯಾರ್ಥಿಗಳಿದ್ದರು. ಮರಾಠಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿನದಾಗಿತ್ತು. ಹುಡುಗು ಬುದ್ಧಿಯ ಕಾರಣದಿಂದಾಗಿ ಸಣ್ಣಪುಟ್ಟ ಕಾರಣಗಳಿಗೂ ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳು ಮತ್ತು ಮರಾಠಿ ವಿದ್ಯಾರ್ಥಿಗಳ ಗುಂಪುಗಳ ನಡುವೆ ಆಗಾಗ ಸಣ್ಣಪುಟ್ಟ ಜಗಳಗಳು ನಡೆಯುತ್ತಿದ್ದವು. ಕೆಲವೊಮ್ಮೆ ದೊಡ್ಡ ಪ್ರಮಾಣದ ಜಗಳಗಳೂ ನಡೆಯುತ್ತಿದ್ದವು. ಒಂದು ಸಾರಿ ಜಗಳವು ವಿಪರೀತಕ್ಕೆ ಹೋಗಿ ಊಟಕ್ಕೆ ಕುಳಿತುಕೊಳ್ಳುವ ಮಣೆಗಳೆಲ್ಲಾ ಹಾರಾಡಿದವು. ಆಗ ಜಗಳವನ್ನು ನೋಡಿದ ಒಬ್ಬ ಪ್ರಾಧ್ಯಾಪಕರು ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳೂ ಮತ್ತು ಮರಾಠಿ ವಿದ್ಯಾರ್ಥಿಗಳೂ ಒಂದೇ ಕಡೆ ಇದ್ದರೆ ಜಗಳವಾಗುತ್ತದೆ. ಇದು ಸರಿಯಲ್ಲ, ನೀವು ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳು ಬೇರೆ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ನಾನು ಇದಕ್ಕೆ ಸಹಾಯ ಮಾಡುತ್ತೇನೆ ಎಂದು ತಿಳಿಸಿದರು. ವೈಷಮ್ಯ ಮನಃಕ್ಷೋಭೆಗಳಲ್ಲಿ ಒಳ್ಳೆಯ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ವಿದ್ಯಾರ್ಥಿ ಜೀವನ ಹಾಳಾಗುತ್ತದೆ ಎಂಬುದನ್ನು ಮೈಸೂರು ವಿದ್ಯಾರ್ಥಿಗಳು ಅರಿತುಕೊಂಡರು. ಪ್ರಾಧ್ಯಾಪಕರ ಸಲಹೆಯನ್ನು ಒಪ್ಪಿಕೊಂಡ ಮೈಸೂರು ವಿದ್ಯಾರ್ಥಿಗಳು ದುಡ್ಡು ಹಾಕಿ ಬಾಡಿಗೆಗೆ ಒಂದು ಮನೆಯನ್ನು ಪಡೆದುಕೊಂಡು ಕನ್ನಡ ವಿದ್ಯಾರ್ಥಿನಿಲಯವನ್ನು ಪ್ರಾರಂಭ ಮಾಡಿದರು. ಮೈಸೂರಿನಿಂದ ಅಡಿಗೆ ಮಾಡಲು ಸುಬ್ಬಣ್ಣ ಎಂಬ ಅಡುಗೆಯವರು ಬಂದರು. ಸುಬ್ಬಣ್ಣ ಅವರು ಬಹಳ ಚನ್ನಾಗಿ ಅಡುಗೆ ಮಾಡುತ್ತಿದ್ದರು. ಸುಬ್ಬಣ್ಣನವರು ವಿದ್ಯಾರ್ಥಿಗಳಿಗಿಂತ ಬಹಳ ಶಿಸ್ತಿನಿಂದ ಕೂಡಿದ ಸ್ವಚ್ಛವಾದ ಬಟ್ಟೆಗಳನ್ನ ತೊಡುತ್ತಿದ್ದರು. ಅವರ ಅಡುಗೆ ಬಹಳ ರುಚಿಕರವಾಗಿರುತ್ತಿತ್ತು. ಅಡುಗೆ ಮನೆಯನ್ನು ಸಹ ಬಹಳ ಸ್ವಚ್ಛವಾಗಿ ಇಟ್ಟುಕೊಳ್ಳುತ್ತಿದ್ದರು. ಅವರ ಅಡುಗೆ ನಳಪಾಕವೆಂದರೂ ಸರಿಯೇ; ಅವರ ಅಡುಗೆಯ ರುಚಿ ಸವಿಯಲು ಪ್ರಾಧ್ಯಾಪಕರು ಸಹ ಬರುತ್ತಿದ್ದರು. ಅವರು ಅಡುಗೆ ಮಾಡುತ್ತಿದ್ದ ಖಡಿ ಎಂಬ ಸಾಂಬಾರು ಬಹಳ ಮೆಚ್ಚಿಗೆ ಪಡೆದಿತ್ತು. ಇದು ಒಂದು ರೀತಿಯ ಮಜ್ಜಿಗೆ ಸಾರು. ಖಡಿ ಮಾಡುವ ದಿನವನ್ನು ಈ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಮತ್ತು ಪುಣೆ ನಗರದ ಇತರೆ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳು ಖಡಿಯನ್ನು ಸವಿಯಲು ಕಾಯುತ್ತಿದ್ದರು. ಖಡಿ ಮಾಡಿದ ದಿವಸ ಬಹಳ ಜನ ಮರಾಠಿಗ ವಿದ್ಯಾರ್ಥಿಗಳು ಸಹ ಊಟಕ್ಕೆ ಬಂದು ಖಡಿಯನ್ನು

ಚಪ್ಪರಿಸಿಕೊಂಡು ಊಟ ಮಾಡುತ್ತಿದ್ದರು. ಊಟದ ನಂತರ ಹೋಗುವಾಗ ಸುಬ್ಬಣ್ಣನವರಿಗೆ ಮೆಚ್ಚುಗೆಯನ್ನ ವ್ಯಕ್ತಪಡಿಸಿ ಹೋಗುತ್ತಿದ್ದರು. ಈ ವಿದ್ಯಾರ್ಥಿನಿಲಯಕ್ಕೆ ವೆಂಕಟ ಸುಬ್ಬಯ್ಯ ಎನ್ನುವವರು ಗೌರವಾಧ್ಯಕ್ಷರಾಗಿದ್ದರು. ನಿಜಲಿಂಗಪ್ಪನವರು ಕಾರ್ಯದರ್ಶಿಯಾಗಿದ್ದರು. ಮಾದಯ್ಯಗೌಡರು, ನಿಜಲಿಂಗಪ್ಪನವರು ಬಹಳ ಆತ್ಮೀಯ ಸ್ನೇಹಿತರಾಗಿದ್ದರು. ಕನ್ನಡಿಗರ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಹಣ ಸಂಗ್ರಹ ಮಾಡುವಲ್ಲಿ ಮಾದಯ್ಯಗೌಡರು ಮತ್ತು ನಿಜಲಿಂಗಪ್ಪನವರ ಪಾತ್ರ ಹೆಚ್ಚಿನದಾಗಿತ್ತು. ಮಾದಯ್ಯಗೌಡರು, ನಿಜಲಿಂಗಪ್ಪನವರು ವ್ಯಾಸಂಗ ಮಾಡುವಾಗ ಆ ವಿದ್ಯಾರ್ಥಿನಿಲಯದಲ್ಲಿ ಯಾವುದೇ ರೀತಿಯ ಪಂಕ್ತಿಬೇಧ ಇರಲಿಲ್ಲ. ತಮ್ಮ ಪಠ್ಯೇತರ ಚಟುವಟಿಕೆಗಳ ವ್ಯವಸ್ಥೆಗಾಗಿ ಮೈಸೂರು ಸಂಘವನ್ನು ನಿಜಲಿಂಗಪ್ಪನವರು ಮಾದಯ್ಯಗೌಡರು ಮತ್ತು ಇತರರೂ ಚರ್ಚಿಸಿ ಸ್ಥಾಪಿಸಿಕೊಂಡರು. ಮಾದಯ್ಯಗೌಡರ ಸಲಹೆಯಂತೆ ನಿಜಲಿಂಗಪ್ಪನವರು ಆ ಸಂಘದ ಕಾರ್ಯದರ್ಶಿಗಳಾಗಿ ಆಯ್ಕೆ ಮಾಡಲಾಯಿತು. ಪಠ್ಯೇತರ ಚಟುವಟಿಕೆಗಳ ವ್ಯವಸ್ಥೆಯಲ್ಲಿ ಮಾದಯ್ಯಗೌಡರು ನಿಜಲಿಂಗಪ್ಪನವರಿಗೆ ಸಹಕರಿಸುತ್ತಿದ್ದರು. ಸಂಘದ ಚಟುವಟಿಕೆಗಳಲ್ಲಿ ಬೇರೆ ಬೇರೆ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಬಂದು ಸಂತೋಷ ಪಡುತ್ತಿದ್ದರು. ಸಿಂಹಘಡ ಮೊದಲಾದ ಪುಣೆ ನಗರದ ಸುತ್ತ ಮುತ್ತಲ ಪ್ರದೇಶದ ಪ್ರೇಕ್ಷಣೀಯ ಸ್ಥಳಗಳಿಗೆ ಈ ಸಂಘದ ಮೂಲಕ ಪ್ರವಾಸವನ್ನು ಏರ್ಪಡಿಸಲಾಗುತ್ತಿತ್ತು.

ಮಾದಯ್ಯಗೌಡರೂ, ನಿಜಲಿಂಗಪ್ಪನವರೂ, ಮೈಸೂರು ವಿದ್ಯಾರ್ಥಿನಿಲಯದ ಮತ್ತು ಮೈಸೂರು ಸಂಘದ ಆಸಕ್ತ ವಿದ್ಯಾರ್ಥಿಗಳು ಫರ್ಗುಸನ್ ಕಾಲೇಜಿನಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಸಭೆಗಳು, ಸಾಂಸ್ಕೃತಿಕ ಸಮಾರಂಭಗಳಿಗೆ ಹೋಗುತ್ತಿದ್ದರು. ಫರ್ಗುಸನ್ ಕಾಲೇಜು ಪುಣೆ ನಗರದ ಬಹಳ ಪ್ರತಿಷ್ಠಿತವಾದ ಕಾಲೇಜು. ಈ ಕಾಲೇಜು ಪುಣೆ ನಗರದ ಬೌದ್ಧಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿತ್ತು. ಫರ್ಗುಸನ್ ಕಾಲೇಜನ್ನು ಪುಣೆಯ ಪ್ರತಿಷ್ಠಿತ ಡೆಕ್ಕನ್‌ಎಜುಕೇಶನ್ ಸಂಘವು ೧೮೮೫ ರಲ್ಲಿ ಸ್ಥಾಪನೆ ಮಾಡಿತ್ತು. ಇಂಗ್ಲೀಷಿನ ನಿಸರ್ಗ ಕವಿ ವಿಲಿಯಂ ವರ್ಡ್ಸ್‌ವರ್ತ್‌ನ ಮೊಮ್ಮಗ ಜನವರಿ ೧೮೮೫ ರಲ್ಲಿ ಇದನ್ನು ಉದ್ಘಾಟನೆಯನ್ನು ಮಾಡಿದನು. ಡೆಕ್ಕನ್ ಎಜುಕೇಶನ್ ಸಂಘವನ್ನು ಭಾರತ ಸ್ವಾತಂತ್ರ್ಯ ಹೋರಾಟದ ಅಂದಿನ ಅಗ್ರಗಣ್ಯ ನಾಯಕರಾದ ಲೋಕಮಾನ್ಯ ಬಾಲಗಂಗಾಧರ ತಿಲಕ್, ಗೋಪಾಲ ಆಗರ್ಕರ್, ವಿಷ್ಣುಶಾಸ್ತ್ರಿ ಚಿಪುಣ್‌ಕರ್, ಮಾದವರಾವ್ ನಾಮ್ಜೋಶಿ ಮುಂತಾದವರು ಸೇರಿ ಅಂದಿನ ಬಾಂಬೆ ಪ್ರೆಸಿಡೆನ್ಸಿಯ ಗವರ್ನನರ್ ಸರ್.ಜೇಮ್ಸ್ ಫರ್ಗುಸನ್ ಅವರ ಪ್ರೋತ್ಸಾಹದೊಡನೆ ಸ್ಥಾಪನೆ ಮಾಡಿದರು. ಈ ಕಾಲೇಜಿಗೆ ಗವರ್ನನರ್‌ರ ಗೌರವಾರ್ಥವಾಗಿ ಫರ್ಗುಸನ್ ಕಾಲೇಜು ಎಂದು ನಾಮಕರಣ

ಮಾಡಿದರು.ಗಾಂಧೀಜಿಯವರ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆ, ಭಾರತ ರತ್ನ ಧೋಂಡೋ ಕೇಶವ ಕರ್ವೆ ಮುಂತಾದವರು ಇಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ವೀರ ಸಾರ್ವಕರ್, ಆಚಾರ್ಯ ಕೃಪಲಾನಿ, ರಾಮ ಗಣೇಶಗಡ್ಕರಿ, ಕಾಕಾ ಕಾಲೇಲ್ಕರ್, ಎಚ್.ವಿ. ಪಾಟಸ್ಕರ್, ಎನ್.ವಿ.ಗಾಡ್ಗಿಲ್, ಬಿ.ರಾಮಕೃಷ್ಣ ರಾವ್, ಆಚಾರ್ಯ ಅತ್ರೆ, ಪಿ.ಎಲ್.ದೇಶಪಾಂಡೆ, ವಿಜ್ಞಾನಿ ಡಾ.ಎಸ್.ಕೆ.ಜಾತ್ಕರ್, ಪಿ.ವಿ.ಸುಖಾತ್ಮೆ, ವಿಠಲ್ ರಾಮ್‌ಜೀ ಶಿಂಧೆ ಮುಂತಾದ ಸುಪ್ರಸಿದ್ಧ ಧುರೀಣರು ಈ ಕಾಲೇಜಿನಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳು. ದೇಶ ಬಾಂಧವರಲ್ಲಿ ರಾಷ್ಟ್ರೀಯ ಪ್ರಜ್ಞೆ ಗಾಢವಾಗಿ ಬೆಳೆದು ಬಂದ ಕಾಲವದು. ಪುಣೆಯ ಸುಪ್ರಸಿದ್ಧಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಆ ಪ್ರಾಂತ್ಯದ ಮರಾಠ ನಾಯಕ ಬಾಲಗಂಗಾಧರ ಟಿಳಕರು "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು; ಮತ್ತು ಅದನ್ನು ನಾನು ಪಡೆದೇ ಪಡೆಯುತ್ತೇನೆ" ಎಂಬ ಜನಪ್ರಿಯ ಘೋಷಣೆಯನ್ನು ಪುಣೆ ನಗರದಲ್ಲಿ ಮಾಡಿದ್ದರು. ಅಲ್ಲಿ ಸ್ವರಾಜ್ಯ ಚಳುವಳಿಯ ಭಾರೀ ಪ್ರಮಾಣದ ಅಲೆಗಳು ಅಪ್ಪಳಿಸುತ್ತಲೇ ಇದ್ದವು, ಪುಣೆ ಜ್ಞಾನ ಸಂಪಾದನೆಯ ಮತ್ತು ಪಾಂಡಿತ್ಯದ ಪಾರಂಪರಿಕ ನಗರ.ಧೀಮಂತ ವ್ಯಕ್ತಿಗಳ, ಸಮಾಜ ಸುಧಾರಕರ, ರಾಜಕೀಯ ಮುತ್ಸದಿಗಳ ಬಿರುಸಿನ ಕಾರ್ಯಚಟುವಟಿಕೆಗಳ ಕೇಂದ್ರವಾಗಿತ್ತು. ಬಾಲಗಂಗಾಧರ ಟಿಳಕ್, ಗೋಪಾಲ ಕೃಷ್ಣ ಗೋಖಲೆ, ಜಸ್ಟೀಸ್ ಮಹಾದೇವ ಗೋವಿಂದ ರ್‍ಯಾನಡೆ, ಭಂಡಾರ್‌ಕರ್, ತೆಲಾಂಗ್, ಆಪ್ಟೆ, ಬಿ.ಕೆ.ಆಗರ್‌ಕರ್ ಮುಂತಾದವರು ಜನರಲ್ಲಿ ಸ್ವರಾಜ್ಯ ಪಡೆಯುವ ರಾಷ್ಟ್ರ ಪ್ರೇಮದ ಕಿಚ್ಚನ್ನು ಹಚ್ಚುತ್ತಿದ್ದರು. ಸ್ವಾತಂತ್ರ್ಯ ಹೋರಾಟ ತಮ್ಮ ಆದ್ಯಕರ್ತವ್ಯ ಎಂದು ಭಾವಿಸಿ ಸಮಸ್ತ ಭಾರತೀಯರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮಕಬೇಕು ಎಂದು ಜನರಿಗೆ ಈ ನಾಯಕರು ಬಹಳ ಹಿಂದೆಯೇ ಇಲ್ಲಿ ಕರೆ ನೀಡಿದ್ದರು. ಸ್ವಾತಂತ್ರ್ಯ ಹೋರಾಟದ ಸಭೆಗಳು ಭಾಷಣಗಳು ಆಗ ಅಲ್ಲಿ ಕಾನೂನು ವಿದ್ಯಾರ್ಥಿಗಳಾಗಿದ್ದ ಮಾದಯ್ಯಗೌಡರು, ನಿಜಲಿಂಗಪ್ಪನವರಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಮೂಡಿಸಿದವು.ಆಗಲೇ ಮಾದಯ್ಯಗೌಡರು ಅಪಾರವಾದ ರಾಷ್ಟ್ರ ಪ್ರೇಮವನ್ನು ಮೈಗೂಡಿಸಿಕೊಂಡರು.

ಮೊದಲ ವರ್ಷದ ಎಲ್.ಎಲ್.ಬಿ ಪರೀಕ್ಷೆಗೆ ಬರೆಯಲು ಪುಣೆ ನಗರದಿಂದ ಬಾಂಬೆ ನಗರಕ್ಕೆ ವಿದ್ಯಾರ್ಥಿಗಳು ಹೋಗಿದ್ದರು. ಮಾದಯ್ಯಗೌಡರು, ನಿಜಲಿಂಗಪ್ಪನವರಿಗೆ ಬಾಂಬೆ ನಗರದ ಹವಾಮಾನ ವಿಚಿತ್ರ ಎನಿಸುತ್ತಿತ್ತು. ಬಾಂಬೆ ನಗರದಲ್ಲಿ ಮಳೆ ಬರುತ್ತಿದ್ದರು ಮೈಮೇಲೆ ಬೆವರು ಇಳಿಯುವಂತಹ ಧಗೆ ಇರುತ್ತಿತ್ತು. ಮೈಸೂರು ಸಂಸ್ಥಾನದ ಹವಾಮಾನದಲ್ಲಿ ಬೆಳೆದವರಿಗೆ ಬಾಂಬೆ ನಗರದ ಹವಾಮಾನವು ಇಲ್ಲಿಂದ ಹೋದವರಿಗೆ

ಶೆಕೆಯಿಂದ ಕಿರಿಕಿರಿ ಎನಿಸುತ್ತಿತ್ತು. ಬಾಂಬೆ ನಗರದ ಷೇರು ಮಾರುಕಟ್ಟೆಯ ಬಗೆಗೆ ಮಾದಯ್ಯಗೌಡರು, ನಿಜಲಿಂಗಪ್ಪನವರು ಮತ್ತು ಇತರ ಕನ್ನಡ ವಿದ್ಯಾರ್ಥಿಗಳು ಬಾಂಬೆ ಮಾರುಕಟ್ಟೆಗಳ ಬಗೆಗೆ ಪತ್ರಿಕೆಗಳಲ್ಲಿ ಓದುತ್ತಿದ್ದರು. ಕಿರಿಚಾಟ ಗದ್ದಲಗಳು ಆ ಕಿರಿಚಾಟ-ಗದ್ದಲಗಳು ಏನು ಎಂಬುದನ್ನು ತಿಳಿಯಲು ಷೇರು ಮಾರುಕಟ್ಟೆಗೆ ಮಾದಯ್ಯಗೌಡರೂ, ನಿಜಲಿಂಗಪ್ಪನವರೂ ಹೋಗುತ್ತಿದ್ದರು. ಆ ಗಲಾಟೆಗಳು ಗೌಜುಗಳ ವಾತಾವರಣದಲ್ಲಿ ಹೋಗಿ ಒಬ್ಬರಿಗೊಬ್ಬರು ಹೇಗೆ ಅರ್ಥ ಮಾಡಿಕೊಳ್ಳುತ್ತಾರೆ ಎಂದು ಮಾದಯ್ಯಗೌಡರಿಗೂ ಇತರೆ ಕನ್ನಡ ವಿದ್ಯಾರ್ಥಿಗಳಿಗೂ ಆಶ್ಚರ್ಯವೆನಿಸುತ್ತಿತ್ತು.

ಮಾದಯ್ಯಗೌಡರು, ನಿಜಲಿಂಗಪ್ಪನವರು ಬಹಳ ಶ್ರದ್ಧೆಯಿಂದ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡುತ್ತಿದ್ದರು.ಆ ಕಾಲದಲ್ಲಿ ಈ ಕಾಲದಂತೆ ಗೈಡ್‌ಗಳಾಗಲೀ ಸುಲಭವಾಗಿ ಅರ್ಥವಾಗುವ ಕಾನೂನು ಪುಸ್ತಕಗಳು ಪ್ರಕಟವಾಗಿರಲಿಲ್ಲ. ಕಠಿಣವಾದ ಇಂಗ್ಲೀಷ್ ಭಾಷೆಯ ಕಾನೂನು ಪುಸ್ತಕಗಳನ್ನ ಇವರು ಡಿಕ್ಷನರಿ ಇಟ್ಟುಕೊಂಡು ಕಠಿಣ ಶಬ್ಧಗಳಿಗೆ ಅರ್ಥ ತಿಳಿದುಕೊಂಡು ಓದುತ್ತಿದ್ದರು. ಕಾಲೇಜು ದಿನಾಚರಣೆಯಲ್ಲಿ ಟಿ.ಪಿ.ಕೈಲಾಸಂರವರ ಕನ್ನಡ ನಾಟಕವನ್ನು ಚನ್ನಾಗಿ ಅಭ್ಯಾಸ ಮಾಡಿ ಸಂಭಾಷಣೆಯನ್ನು ಬಾಯಿಪಾಠ ಮಾಡಿಕೊಂಡು ಪ್ರದರ್ಶನ ಮಾಡಿದ್ದರು. ಕೈಲಾಸಂರವರ 'ಕಿಟ್ಟುಪುಟ್ಟು' ನಾಟಕ ಆಗ ಮೈಸೂರು ಸಂಸ್ಥಾನದಲ್ಲಿ ಜನಪ್ರೀಯವಾಗಿ ವಿವಿಧೆಡೆ ಪ್ರದರ್ಶನಕೊಂಡಿತ್ತು. ಆ ನಾಟಕದಲ್ಲಿ ಬರುವ ಕಿಟ್ಟು ಎಂಬ ಪಾತ್ರವನ್ನು ನಿಜಲಿಂಗಪ್ಪನವರು ಮಾಡಿದ್ದರು. ಕಿಟ್ಟು ವ್ಯವಹಾರ ತಿಳಿಯದ ಪುಸ್ತಕದ ಹುಳು. ಮಾದಯ್ಯಗೌಡರು ಪುಟ್ಟುವಿನ ಪಾತ್ರವನ್ನು ಮಾಡಿದ್ದರು; ಪುಟ್ಟು ಓದುವುದರಲ್ಲಿ ಹಿಂದಾದರೂ ತಂದೆ-ತಾಯಿಯರ ವಿಧೇಯ ವಿನಯವಂತ ಮಗನಾಗಿದ್ದ. ಮಾದಯ್ಯಗೌಡರು, ನಿಜಲಿಂಗಪ್ಪನವರು ಒಳ್ಳೆಯ ವೇಷಭೂಷಣಗಳಲ್ಲಿ ಪಾತ್ರಗಳನ್ನು ತುಂಬಾ ಚನ್ನಾಗಿ ಅಭಿನಯಿಸಿ ನಾಟಕವನ್ನು ಯಶಸ್ವಿಗೊಳಿಸಿದರು. ತಿಂಗಳುಗಟ್ಟಲೇ ಈ ನಾಟಕದ ಇತರ ಪಾತ್ರಧಾರಿಗಳು ಸಹ ಸಂಭಾಷಣೆಯನ್ನು ಚನ್ನಾಗಿ ಬಾಯಿಪಾಠ ಮಾಡಿಕೊಂಡು ಚನ್ನಾಗಿ ಅಭಿನಯಿಸಿದರು. ಒಟ್ಟಾರೆ ನಾಟಕ ನೋಡುಗರ ಮೆಚ್ಚುಗೆಯನ್ನು ಗಳಿಸಿತು ಮತ್ತು ಜನಪ್ರಿಯವಾಯಿತು. ಮೈಸೂರು ಸಂಸ್ಥಾನದ ಹುಡುಗರ ನಾಟಕಗಳನ್ನು ನೋಡಲು ಸುತ್ತಮುತ್ತಲಿನ ಜನರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಬಹಳ ಆಸಕ್ತಿಯಿಂದ ನಾಟಕಗಳನ್ನ ನೋಡುತ್ತಿದ್ದರು. ನಾಟಕದ ಪ್ರದರ್ಶನ ನಡೆಯುವಾಗ ಕೆಲವರು ಶಿಳ್ಳೆ ಹಾಕುವುದು, ಪಾತ್ರಧಾರಿಗಳನ್ನು ಅಣಕಿಸುವುದು, ಒನ್ಸ್ ಮೋರ್ ಹಾಕುವುದನ್ನು ತಡೆಯಲು ಮತ್ತು ನಿಯಂತ್ರಿಸಲು ಧಾರವಾಡ, ಬೆಳಗಾವಿ ಕಡೆಯ ಗಟ್ಟಿಮುಟ್ಟಾದ ವಿದ್ಯಾರ್ಥಿಗಳನ್ನ ಅಲ್ಲಲ್ಲಿ ಬಿಟ್ಟಿರುತ್ತಿದ್ದರು. ಮಾದಯ್ಯಗೌಡರು,

ನಿಜಲಿಂಗಪ್ಪನವರು ಮತ್ತು ಇತರೆ ವಿದ್ಯಾರ್ಥಿಗಳು ತರಗತಿಗಳಿಗೆ ತಪ್ಪಿಸಿಕೊಳ್ಳದೇ ಹಾಜರಾಗುತ್ತಿದ್ದರು. ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳಿಗೆ ಗೈರುಹಾಜರಾದರೆ ಪರೀಕ್ಷೆ ತೆಗೆದುಕೊಳ್ಳುವ ಅವಕಾಶ ಇರುವುದಿಲ್ಲ ಎಂಬ ಭಯವು ವಿದ್ಯಾರ್ಥಿಗಳಿಗೆ ಇತ್ತು. ಮಾದಯ್ಯಗೌಡರು ನಿಜಲಿಂಗಪ್ಪನವರು ತುಂಬಾ ಆತ್ಮೀಯ ಸ್ನೇಹಿತರಾಗಿದ್ದರು. ನಿಜಲಿಂಗಪ್ಪನವರು ಚುರುಕಾದ ವಿದ್ಯಾರ್ಥಿಯಾಗಿದ್ದು ಪಟಪಟನೆ ಮಾತಾಡುತ್ತಿದ್ದರೆ, ಮಾದಯ್ಯಗೌಡರು ಗಂಭೀರ ಸ್ವಾಭಾವದವರು ಮತ್ತು ಮಾತುಕತೆ ಕಡಿಮೆ, ಆದರೆ ಬಹಳ ಆತ್ಮೀಯತೆಯಿಂದ ಸಹಪಾಠಿಗಳೊಡನೆ ಬೆರೆಯುತ್ತದ್ದರು.ಅಗತ್ಯ ಸನ್ನಿವೇಶದಲ್ಲಿ ಹಣದ ಅವಕಾಶವಿರುವ ಕಾಲೇಜಿನ ಸಹಪಾಠಿಗಳಿಗೆ ಹಣವನ್ನು ಸಾಲಕೊಟ್ಟು ನಂತರ ಹಿಂದಕ್ಕೆ ಪಡೆದುಕೊಳ್ಳುತ್ತಿದ್ದರು. ನಿಜಲಿಂಗಪ್ಪನವರು ಮಾದಯ್ಯಗೌಡರು ಇಬ್ಬರೂ ಇಂಗ್ಲೀಷ್, ಮರಾಠಿ, ಉರ್ದು, ಹಿಂದಿ ಭಾಷೆಯಲ್ಲಿ ಮಾತಾಡುವ ಕಲೆ ಗಳಿಸಿದ್ದರು. ಮಾದಯ್ಯಗೌಡರು ಮತ್ತು ನಿಜಲಿಂಗಪ್ಪನವರು ಸಹಪಾಠಿಗಳು ಆಗಿದ್ದರಿಂದ ತುಂಬಾ ಆತ್ಮೀಯತೆ ಮತ್ತು ಪರಸ್ಪರ ಏಕವಚನದಲ್ಲಿ ಮಾತಾನಾಡುವ ಆತ್ಮೀಯ ಸಲಿಗೆ ಇತ್ತು.ಒಬ್ಬರಿಗೊಬ್ಬರು ಪರಸ್ಪರ ಛೇಡಿಸುವುದು ಇದ್ದೇ ಇತ್ತು. ಹಾಸ್ಯ, ಛೇಡಿಸುವಿಕೆಯಲ್ಲಿ ನಿಜಲಿಂಗಪ್ಪನವರು ಮುಂದೆ ಇದ್ದರು; ನಿಜಲಿಂಗಪ್ಪನವರು ಹಾಸ್ಯ ಮಾಡಿದಾಗ ಮಾದಯ್ಯಗೌಡರು ಹಸನ್ಮುಖಿಯಾಗಿ ಪ್ರತಿಕ್ರಿಯಿಸುತ್ತಿದ್ದರು. ಮಾದಯ್ಯಗೌಡರಿಗೆ ಸಾಹಿತ್ಯ ಓದುವ ಅಭ್ಯಾಸ ಹೆಚ್ಚು. ಪುಸ್ತಕಗಳನ್ನು ಓದುತ್ತಾ ರೂಮಿನಲ್ಲಿರುತ್ತಿದ್ದರು. ನಿಜಲಿಂಗಪ್ಪನವರು ಟೆನ್ನಿಸ್ ಆಟದಲ್ಲಿ ಪ್ರಾವಿಣ್ಯತೆಯನ್ನು ಹೊಂದಿದ್ದರು.ತರಗತಿಗಳು ಮುಗಿದ ನಂತರ ಟೆನ್ನಿಸ್ ಹಾಡಲು ಹೋಗಿ ಬಿಡುತ್ತಿದ್ದರು. ಮಾದಯ್ಯಗೌಡರು, ದಷ್ಟಪುಷ್ಟವಾಗಿದ್ದ ಗೆಳೆಯ ನಿಜಲಿಂಗಪ್ಪ ಬಿಳಿಯ ಉಡುಪಿನಲ್ಲಿ ಬ್ಯಾಟ್ ಹಿಡಿದುಕೊಂಡು ಬರುತ್ತಿದ್ದ ಠೀವಿಯನ್ನು ಹಾಡಿನ ರೂಪದಲ್ಲಿ ಈ ರೀತಿ ಹೇಳುತ್ತಿದ್ದರಂತೆ :

**ನಿಜಲಿಂಗ ಪ್ರಭುವೆ**
**ಗಜದಂತೆ ಬರುವೆ**
**ಗದೆಯಂತೆ ಬ್ಯಾಟ್‌ಹಿಡಿದು**
**.................... ರಣರಂಗದಲ್ಲಿ**
**ಗೆದ್ದ ವೀರನಂತೆ ..............**
**ನಿನ್ನ ನಡಿಗೆಯ ವೇಗಕ್ಕೆ ಭೂತಾಯಿ**
**ನೊಂದು ಹೋದಳು!**

ಗೌಡರು ಗ್ರಾಮೀಣ ಪ್ರದೇಶದಿಂದ ಬಂದವರಾದ್ದರಿಂದ ಕೆರೆ ಕಟ್ಟೆಗಳಲ್ಲಿ ಈಜಲು ಕಲಿತ್ತಿದ್ದರು. ಪುಣೆಯಲ್ಲಿಯೂ ಸಹ ಬೇಸಿಗೆ ಕಾಲದಲ್ಲಿಯೂ ಈಜಲು ಹೋಗುತ್ತಿದ್ದರು. ನಿಜಲಿಂಗಪ್ಪನವರು, ಮಾದಯ್ಯಗೌಡರು ಒಂದು ರಜಾ ದಿನದಲ್ಲಿ ಪುಣೆಯ ಮಧ್ಯದ

ಕೊಳವೊಂದರಲ್ಲಿ ಒಂದೆರಡು ಗಂಟೆಗಳ ಕಾಲ ಚನ್ನಾಗಿ ಈಜಾಡಿ ಗಡ್ಡೆ ಹತ್ತಿ ವಸ್ತ್ರದಲ್ಲಿ ಮೈಕೈ ಹೊರಸಿಕೊಂಡು ಬಟ್ಟೆ ಹಾಕಿಕೊಂಡು ಹಾಸ್ಟೆಲ್‌ಗೆ ಹೊರಡುವುದರಲ್ಲಿದ್ದರು. ಅಷ್ಟರಲ್ಲಿ ಅಲ್ಲೇ ಇದ್ದ ಬೇರೆ ಯುವಕರ ಗುಂಪಿನ ಕಡೆಯವರಿಂದ ಯಾರೋ ಒಬ್ಬ ಹುಡುಗ ಕೊಳದಲ್ಲಿ ಸರಿಯಾಗಿ ಈಜು ಬಾರದೆ ತೆಲುತ್ತ ಮುಳುಗುತ್ತಾ ಆತಂಕಕ್ಕೆ ಒಳಗಾದನು ಕಂಡು ಹುಡುಗರು ಕೂಗಿಕೊಂಡರು. ನೀರಿನಲ್ಲಿ ಮುಳುಗಿ ಹೋಗುವವನ್ನು ಮೇಲಕ್ಕೆ ಎತ್ತಲು ಅನೇಕರು ಭಯ ಪಡುತ್ತಾರೆ. ಕಾರಣ ಮುಳುಗುವವನು ತಮ್ಮನ್ನು ನೀರಿನಲ್ಲಿ ಎಳೆದುಕೊಂಡುಬಿಡುತ್ತಾನೆ ಎಂಬ ಭಯವಿರುತ್ತದೆ. ನೀರಿನಲ್ಲಿ ಮುಳುಗುವವರನ್ನು ಮೇಲಕ್ಕೆ ಎತ್ತುವುದು ಸಹ ಒಂದು ರಕ್ಷಣ ಕಲೆ. ಮಾದಯ್ಯಗೌಡರ ಗೆಳೆಯ ನಿಜಲಿಂಗಪ್ಪನವರು ಆ ರಕ್ಷಣಾ ಕಲೆಯ ಬಗೆಗೆ ತಿಳಿದಿದ್ದರು. ಮಾದಯ್ಯಗೌಡರು ಮತ್ತು ಇತರರು ನೋಡು ನೋಡುತ್ತಲೇ ನಿಜಲಿಂಗಪ್ಪನವರು ನೀರಿಗೆ ಧುಮುಕಿ ಮುಳುಗುತ್ತಿದ್ದ ಹುಡುಗನ ತಲೆಗೂದಲು ಹಿಡಿದೆಳೆದುಕೊಂಡು ಮಾದಯ್ಯಗೌಡರು ಮತ್ತು ಇತರರ ಸಹಾಯದೊಂದಿಗೆ ಮೇಲಕ್ಕೆತ್ತಿ ರಕ್ಷಿಸುತ್ತಾರೆ. ಈ ಘಟನೆಯಿಂದ ಮೈಸೂರು ಸಂಸ್ಥಾನದಿಂದ ನಿಜಲಿಂಗಪ್ಪನವರು, ಮಾದಯ್ಯಗೌಡರು ಪುಣೆಯ ವಿದ್ಯಾರ್ಥಿವಲಯದಲ್ಲಿ ಹೆಸರು ಪಡೆಯುತ್ತಾರೆ.

ಮಾದಯ್ಯಗೌಡರು, ನಿಜಲಿಂಗಪ್ಪನವರು ಶಂಕರಪೋಳಿಯನ್ನು ಕೇಳಿದ್ದು, ನೋಡಿದ್ದು, ಸವಿದಿದ್ದು, ಪುಣೆ ನಗರದಲ್ಲೇ. ಒಮ್ಮೆ ಪುಣೆಯಿಂದ ಊರಿಗೆ ಬರುವಾಗ ಹುಬ್ಬಳ್ಳಿಯಲ್ಲಿ ಇಳಿದು ಊಟ ಮಾಡಿದರು. ೮, ೧೦ ಅಂಗುಲ ಎತ್ತರದ ಮೂರು ಕಾಲಿನ ಮಣೆ ಅಥವಾ ಅಡ್ಡಣಿಗೆಯ ಮೇಲೆ ಗಂಗಳ ಇಟ್ಟು ಊಟಕ್ಕೆ ರೊಟ್ಟಿ ಕೊಟ್ಟಿದ್ದರು.ಗಟ್ಟಿ ಮೊಸರು ಚಟ್ನಿ ಪುಡಿಗಳು ಕಾಯಿ ಪಲ್ಯಗಳು ಊಟದ ಜೊತೆ ಇರುತ್ತಿದ್ದವು.ಅನ್ನ, ಸಾರು, ಉಪ್ಪಿನಕಾಯಿ ಸಹ ಇರುತ್ತ ಇದ್ದವು. ಎರಡು ಆಣೆಗೆ ಎರಡು ಊಟ. ಮಾದಯ್ಯಗೌಡರು, ನಿಜಲಿಂಗಪ್ಪನವರು ಊಟ ಮಾಡಿದ್ದು ಬಸಪ್ಪನ ಖಾನಾವಳಿ ಎಂದು ಅದು ಈಗಲು ಹುಬ್ಬಳ್ಳಿಯಲ್ಲಿದೆ.

❖

# ೬. ಸ್ವಾತಂತ್ರ್ಯ ಹೋರಾಟಗಾರ ಮಾದಯ್ಯಗೌಡರು

ಮಾದಯ್ಯಗೌಡರು ಚನ್ನಪಟ್ಟಣದ ಪ್ರೌಢಶಾಲೆಯಲ್ಲಿ ಓದುವಾಗ ಅಧ್ಯಾಪಕರ ಮೂಲಕ ಭಾರತ ರಾಷ್ಟ್ರೀಯವಾದಿ ಡಾ.ಅನಿಬೆಸೆಂಟರ ಬಗೆಗೆ ತಿಳಿದು ಅವರ ಬರಹಗಳನ್ನು ಓದಿ ಪ್ರಭಾವಿತರಾದರು. ಅನಿಬೆಸೆಂಟರು ಥಿಯೋಸಫಿಕಲ್ ಸೊಸೈಟಿ ಸೇರಿ ಲಂಡನ್ನಿನಲ್ಲಿ ಕಾರ್ಯಕ್ರಮವನ್ನು ಉಪಕ್ರಮಿಸಿದಾಗ ವಿದ್ಯಾರ್ಥಿಯಾಗಿದ್ದ ಯುವಕ ಮೋಹನ್ ದಾಸ್ ಕರಮಚಂದ್ ಗಾಂಧೀ ಲಂಡನ್ನಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೆ ವಿದ್ಯಾಭ್ಯಾಸ ಮಾಡುತ್ತಿದ್ದರು. ಅನಿಬೆಸೆಂಟರ ಪ್ರಭಾವಕ್ಕೊಳಗಾದ ಭಾರತೀಯರಲ್ಲಿ ಗಾಂಧೀಜಿ ಮೊದಲಿಗರು ಎಂದರೆ ತಪ್ಪಾಗಲಾರದು. ಹಾಗೆ ನೋಡಿದರೆ ಥಿಯೋಸಫಿಕಲ್ ಸೊಸೈಟಿಗೂ ಮತ್ತು ಜಗತ್ತಿನ ಬಹು ದೊಡ್ಡ ಹಾಗೂ ಚಾರಿತ್ರಿಕವಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಡುವೆ ಬಹಳ ಹಿಂದಿನಿಂದಲೂ ಸಂಬಂಧವಿದೆ. ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಂಬಿಕೆ ಇದ್ದ ಥಿಯೋಸಫಿಕಲ್ ಸೊಸೈಟಿಯ ಸದಸ್ಯರು ಸೇರಿ ೧೮೮೫ರಲ್ಲಿ ಕಾಂಗ್ರೆಸ್ ಪಕ್ಷವನ್ನು ಆರಂಭಿಸಿದರು. ಲಂಡನ್ನಿನಲ್ಲಿ ಥಿಯೋಸಫಿಕಲ್ ಸೊಸೈಟಿಯ ಸದಸ್ಯರ ಸ್ನೇಹದಿಂದಲೇ ಬ್ಯಾರಿಸ್ಟರ್ ವಿದ್ಯಾರ್ಥಿ ಗಾಂಧೀ ಪ್ರಪ್ರಮಥಮವಾಗಿ ಶ್ರೀಮದ್ಭಗವದ್ಗೀತೆಯನ್ನು ಓದಲು ಪ್ರಾರಂಭ ಮಾಡಿದ್ದರು ಎಂಬ

ವಿಚಾರ ಅವರ ಆತ್ಮಕಥೆಯಲ್ಲಿ ಬರೆಯಲಾಗಿದೆ. ಅಮೇರಿಕ ಮತ್ತು ಯೂರೋಪ್ ರಾಷ್ಟ್ರಗಳಲ್ಲಿ ಹಿಂದೂ ಧರ್ಮದ ಗ್ರಂಥಗಳನ್ನು ಅದರಲ್ಲೂ ಮುಖ್ಯವಾಗಿ ಉಪನಿಷತ್ ಮತ್ತು ಶ್ರೀಮದ್ಭಗವದ್ಗೀತೆಯನ್ನು ವಿವಿಧ ಭಾಷೆಗಳಿಗೆ ಭಾಷಾಂತರ ಮಾಡಿ ಭಾರತದ ಉನ್ನತ ಧಾರ್ಮಿಕ ಮತ್ತು ದಾರ್ಶನಿಕ ಪರಂಪರೆಯನ್ನು ಪಾಶ್ಚಿಮಾತ್ಯರಿಗೆ ಪರಿಚಯ ಮಾಡಿಕೊಟ್ಟ ಮಹತ್ವಪೂರ್ಣ ಸಾಧನೆ ಥಿಯೋಸಫಿಕಲ್ ಸೊಸೈಟಿಯದು. ದಕ್ಷಿಣ ಆಫ್ರೀಕಾದಿಂದ ವಾಪಾಸ್ಸಾದ ಗಾಂಧೀಜಿ ರಾಷ್ಟ್ರದ ಜನಕೋಟಿಯನ್ನು ಹುರಿದುಂಬಿಸಿ ಕಾಂಗ್ರೆಸ್ಸಿನ ಮೂಲಕ ಬ್ರಿಟಿಷರ ವಿರುದ್ಧ ಶಾಂತಿಯುತ ಮತ್ತು ಅಹಿಂಸಾತ್ಮಕ ಹೋರಾಟವನ್ನು ನಡೆಸಿ ಸಬಲಗೊಳಿಸಿದರು. ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತವನ್ನು ಸ್ವತಂತ್ರಗೊಳಿಸಲು ಈ ಕಾಂಗ್ರೆಸ್ಸಿನ ಮೂಲಕವೇ ಸತತವಾಗಿ ಹೋರಾಡಿ ಜಯಗಳಿಸಿದರು.

ಭಾರತದಲ್ಲಿ ಆನಿಬೆಸೆಂಟ್‌ರು ಥಿಯೋಸಫಿಕಲ್ ಸಂಘದ ಖಾಯಂ ಅಧ್ಯಕ್ಷರಾಗಿದ್ದರು. ಬಿ.ಪಿ.ವಾಡಿಯಾ, ಜಾರ್ಜ್ ಸಿಡ್ನಿ ಅರುಂಡೇಲ್, ಜಿನರಾಜ ದಾಸ್, ಲೆಡ್ ಬೀಟರ್, ಮುಂತಾದವರು ಥಿಯೋಸಫಿಕಲ್ ಸೊಸೈಟಿಯ ಪದಾಧಿಕಾರಿಗಳಾಗಿದ್ದರು. ಮದ್ರಾಸ್ ಹೈಕೋರ್ಟ್‌ನ ಚೀಫ್ ಜಸ್ಟೀಸ್ ಆಗಿದ್ದ ಸರ್.ಸದಾಶಿವ ಅಯ್ಯರ್, ರಾಮಚಂದ್ರ ಅಯ್ಯರ್ ಮುಂತಾದ ಗಣ್ಯರು ಮದ್ರಾಸ್ ಸಿಟಿಯ ಅಡಿಯಾರಿನಲ್ಲಿ ಥಿಯೋಸಫಿಕಲ್ ಸೊಸೈಟಿಯ ಆಶ್ರಯದಲ್ಲಿ ಭಾಷಣ ಮಾಡುತ್ತಿದ್ದರು. ಪತ್ರಿಕೆಗಳಲ್ಲಿ ಇವೆಲ್ಲಾ ವರದಿಯಾಗುತ್ತಿದ್ದವು. ಥಿಯೋಸಫಿಕಲ್ ಸೊಸೈಟಿ ಸಮಾಜಕ್ಕೆ ಅನುಕೂಲವಾಗುವಂತಹ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳಲು ಯುವಕರನ್ನು ಪ್ರೇರೆಪಿಸುತ್ತಿತ್ತು. ಮಹಾತ್ಮಾ ಗಾಂಧೀ, ಮಹಾಮನವ ಮದನ ಮೋಹನ ಮಾಳವೀಯ, ಪಂಡಿತ್ ಜವಹರ್‌ಲಾಲ್ ನೆಹರೂ ಮುಂತಾದ ರಾಷ್ಟ್ರನಾಯಕರು ಥಿಯೋಸಫಿಕಲ್ ಸೊಸೈಟಿ ಬಗೆಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದರು. ಇದರಿಂದ ಬಾಲ್ಯದಿಂದಲೇ ಮಾದಯ್ಯಗೌಡರಿಗೆ ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿತ್ತು. ಆಗ ಚನ್ನಪಟ್ಟಣ, ರಾಮನಗರ, ಮಂಡ್ಯ ಸುತ್ತಮುತ್ತ ಮೈಸೂರು ವೃತ್ತಾಂತ ಪತ್ರಿಕೆ, ಮೈಸೂರ್ ಸ್ಟಾರ್, ಕನ್ನಡ ಧುರೀಣ ಪತ್ರಿಕೆಗಳು ಅಲ್ಲಿ ಇಲ್ಲಿ ಸಿಗುತ್ತಿದ್ದವು. ನಂತರ ನ್ಯೂ ಇಂಡಿಯಾ ಪತ್ರಿಕೆಯೂ ಅವರಿಗೆ ಅಲ್ಲಿ ಇಲ್ಲಿ ಬಿಡಿ ಬಿಡಿಯಾಗಿ ಸಿಗುತ್ತಿದ್ದವು. ಎಂಟ್ರೆನ್ಸ್ ಪರೀಕ್ಷೆಯಲ್ಲಿ ಮಾದಯ್ಯಗೌಡರು ಉತ್ತೀರ್ಣರಾಗಿ ಸೆಂಟ್ರಲ್ ಕಾಲೇಜಿನಲ್ಲಿ ಓದಲು ಸೇರಿದರು. ಬೆಂಗಳೂರಿಗೆ ಹೋದ ಮೇಲೆ ರಾಷ್ಟ್ರೀಯ ವಿಚಾರಗಳ ಅರಿವು ಇವರಿಗೆ ಹೆಚ್ಚು ಹೆಚ್ಚು ದೊರೆಯುತ್ತಾ ಹೋಯಿತು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಚಟುವಟಿಕೆಗಳಿಂದ ಇವರು ಬಹಳಷ್ಟು ಪ್ರಭಾವಿತಗೊಂಡರು. ಮದ್ರಾಸ್‌ನಿಂದ ಬರುತ್ತಿದ್ದ "ದಿ ಹಿಂದೂ" ಇಂಗ್ಲೀಷ್ ಪತ್ರಿಕೆ,

ಮಹಾತ್ಮ ಗಾಂಧೀಜಿಯವರ "ಹರಿಜನ", "ಯಂಗ್‌ಇಂಡಿಯಾ" ನಿಯತಕಾಲಿಕೆಗಳನ್ನು ಓದುತ್ತಿದ್ದರು. ಹಲವು ಮುಖಂಡರು ಧರಿಸುತ್ತಿದ್ದ ಖಾದೀ ಬಟ್ಟೆಗಳನ್ನು ನೋಡಿ ಇವರೂ ಸಹ ಖಾದೀ ಬಟ್ಟೆಗಳನ್ನು ಧರಿಸಲು ಪ್ರಾರಂಭಿಸಿದರು. ಗಾಂಧೀಜಿ ಖಿಲಾಫತ್ ಚಳುವಳಿಯ ಸಂಘಟನೆಗಾಗಿ ರಾಷ್ಟ್ರದಾದಂತ್ಯ ಪ್ರವಾಸ ಮಾಡುತ್ತಾ ಬಂದು ದಂಡು ರೈಲ್ವೆ ನಿಲ್ದಾಣದ ಮುಂದೆ ಇದ್ದ ದೊಡ್ಡ ಮಾವಿನ ತೋಪಿನ ಹತ್ತಿರದ ಈದ್ಗಾ ಮೈದಾನದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿ ಆ ದಿನವೇ ವಾಪಸ್ಸಾದರು. ಈ ಸಾರ್ವಜನಿಕ ಸಭೆಗೆ ಸುರಿಯುತ್ತಿದ್ದ ಮಳೆಯಲ್ಲಿ ನೆನೆದುಕೊಂಡೇ ವಿದ್ಯಾರ್ಥಿ ಮಾದಯ್ಯಗೌಡರು ಹೋಗಿದ್ದರು. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ನಿಜಲಿಂಗಪ್ಪನವರು ಸಹ ಈ ಸಭೆಗೆ ಹೋಗಿದ್ದರು. ಖಿಲಾಫತ್ ಚಳುವಳಿಯ ಅಂಗವಾಗಿ ಬಿರುದುಗಳನ್ನು ಕೈಬಿಡುವುದು, ಶಾಸನ ಸಭೆಗಳಿಗೆ ಬಹಿಷ್ಕಾರ ಹಾಕುವುದು, ಸರ್ಕಾರಿ ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ನಿರ್ಗಮಿಸುವುದು ಮತ್ತು ನ್ಯಾಯಾಲಯಗಳಿಗೆ ವಕೀಲರು ಬಹಿಷ್ಕಾರ ಹಾಕುವುದು ಮುಂತಾದ ಕಾರ್ಯಕ್ರಮಗಳನ್ನು ದಂಡಿನ ಪ್ರದೇಶದ ಹಿಂದೂಗಳು ಮತ್ತು ಮುಸಲ್ಮಾನರು, ವಿದ್ಯಾರ್ಥಿಗಳು ಮುಂತಾದ ಸಾರ್ವಜನಿಕರ ಮುಂದೆ ಇಟ್ಟರು. ಗಾಂಧೀಜಿಯ ಕರೆಗೆ ಓಗೊಟ್ಟು ಅನೇಕರಂತೆ ವಿದ್ಯಾರ್ಥಿ ಮಾದಯ್ಯಗೌಡರು ಈ ಚಳುವಳಿಯಲ್ಲಿ ಭಾಗವಹಿಸಿದರು. ಆ ಸಮಯದಲ್ಲಿ ಬೆಂಗಳೂರಿನಲ್ಲಿ ಓದುತ್ತಿದ್ದ ಗೌಡರೂ, ನಿಜಲಿಂಗಪ್ಪನವರೂ, ನಿಟ್ಟೂರು ಶ್ರೀನಿವಾಸರಾಯರು ನಾಲ್ಕಾಣೆ ಸದಸ್ಯರಾದರು.

ಆ ಕಾಲಕ್ಕೆ ಬೆಂಗಳೂರಿಗೆ ಭೇಟಿ ನೀಡಿದ ಕೃಷ್ಣರಾವ್ ಮುದವೀಡಕರ್, ಗೋಪಾಲರಾವ್ ಗುತ್ತಲ, ಗಾನಾಲ ರಾಮಮೂರ್ತಿ, ಸತ್ಯಮೂರ್ತಿ, ಚಕ್ರವರ್ತಿ ರಾಜಗೋಪಾಲಚಾರಿ ಮುಂತಾದ ಗಣ್ಯನಾಯಕರ ಭಾಷಣಗಳನ್ನು ಕೇಳಲು ಹೋಗುತ್ತಿದ್ದರು. ಮಾದಯ್ಯಗೌಡರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿರುವಾಗ ಪತ್ರಿಕೆಗಳಲ್ಲಿ ಬರುತ್ತಿದ್ದ ಗಾಂಧೀಜಿಯವರ ಹೇಳಿಕೆಗಳನ್ನು, ಹೋರಾಟಗಳನ್ನು, ರಚನಾತ್ಮಕ ಕಾರ್ಯಕ್ರಮಗಳನ್ನು ಬಹಳ ಆಸಕ್ತಿಯಿಂದ ಓದುತ್ತಿದ್ದರು. ಗಾಂಧೀಜಿಯವರು ಆಗಲೇ ರಾಷ್ಟ್ರದ ಜನಕೋಟಿಯ ಮೇಲೆ ಅಂತಹ ದೇಶ ಪ್ರೇಮದ ಮೋಡಿಯನ್ನು ಉಂಟುಮಾಡಿದ್ದರು. ಸೆಂಟ್ರಲ್ ಕಾಲೇಜಿನಿಂದ ಬಿ.ಎ., ಪದವಿ ಪಡೆದ ನಂತರ ಗೌಡರು ಪುಣೆಗೆ ಎಲ್.ಎಲ್.ಬಿ ಓದಲು ಹೋದರು. ಅಲ್ಲಿ ನಿಜಲಿಂಗಪ್ಪನವರೂ, ಕೆ.ಸುಬ್ಬರಾಯರು ಗೌಡರ ಸಹಪಾಠಿಗಳಾದರು. ಈ ಮಧ್ಯೆ ಡಾ.ಎನ್.ಎಸ್. ಹರ್ಡೀಕರ್‌ಅವರ ನೇತೃತ್ವದಲ್ಲಿ ಇವರೆಲ್ಲಾ ಭಾರತೀಯ ಸೇವಾದಳದ ಸ್ವಯಂ ಸೇವಕ ಶಿಕ್ಷಣದ ಬಗೆಗೆ ಅರಿವನ್ನು ಮೂಡಿಸಿಕೊಂಡರು.

ಗಾಂಧೀಜಿ ೧೯೨೧ರ ಅಸಹಕಾರ ಚಳುವಳಿಯ ನಂತರ ೧೯೨೨ರಲ್ಲಿ ದಸ್ತಗಿರಿ ಮಾಡಲ್ಪಟ್ಟು ಜೈಲು ಶಿಕ್ಷೆಗೆ ಒಳಗಾಗಿದ್ದರು. ಜೊತೆಗೆ ಅವರಿಗೆ ಆರು ವರುಷಗಳ ಕಠಿಣವಾದ ಶಿಕ್ಷೆಯನ್ನು ವಿಧಿಸಲಾಗಿತ್ತು. ೧೯೨೪ರ ಫೆಬ್ರವರಿ ತಿಂಗಳಲ್ಲಿ ಅವರ ಆರೋಗ್ಯದಲ್ಲಿ ವ್ಯತ್ಯಾಸ ಕಂಡಾಗ ಬಿಡುಗಡೆ ಮಾಡಿದರು. ಅದೇ ಕೊನೇ ಭಾಗದಲ್ಲಿ ಕರ್ನಾಟಕದ ಬೆಳಗಾವಿಯಲ್ಲಿ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನ ನಡೆಯಿತು. ಈ ಮಹಾಧಿವೇಶನಕ್ಕೆ ಗಾಂಧೀಜಿಯವರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿತ್ತು. ಪುಣೆಯಲ್ಲಿ ಕಾನೂನು ಶಿಕ್ಷಣ ಅಭ್ಯಾಸ ಮಾಡುತ್ತಿದ್ದ ಮಾದಯ್ಯಗೌಡರು ಬೆಳಗಾವಿ ಕಾಂಗ್ರೇಸ್ ಅಧಿವೇಶನಕ್ಕೆ ಹೋಗಿದ್ದರು. ಆ ಕಾಂಗ್ರೆಸ್ ಅಧಿವೇಶನದಲ್ಲಿ ವಿದ್ಯಾರ್ಥಿಗಳಾಗಿದ್ದ ಎಸ್.ನಿಜಲಿಂಗಪ್ಪನವರು, ಕೆ.ಸುಬ್ಬರಾವ್ ಮತ್ತು ಇತರ ಮೈಸೂರು ಸಂಘದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬೆಳಗಾವಿ ಕಾಂಗ್ರೆಸ್ ಅಧಿವೇಶನವನ್ನು ಗಂಗಾಧರರಾವ್ ದೇಶಪಾಂಡೆಯವರ ಉಸ್ತುವಾರಿಯಲ್ಲಿ ಅಪೂರ್ವವಾಗಿ ಏರ್ಪಡಿಸಲಾಗಿತ್ತು. ಅಧಿವೇಶನದ ಸ್ಥಳಕ್ಕೆ ವಿಜಯನಗರ ಎಂದು ಹೆಸರಿಡಲಾಗಿತ್ತು. ಊಟದ ವ್ಯವಸ್ಥೆ, ನೈರ್ಮಲ್ಯ ವ್ಯವಸ್ಥೆ ಹೀಗೆ ಅಧಿವೇಶನದ ಏರ್ಪಾಡುಗಳೆಲ್ಲಾ ಸಮರ್ಪಕವಾಗಿಯೂ ಮತ್ತು ಅಚ್ಚುಕಟ್ಟಾಗಿಯೂ ಇದ್ದವು. ಗಾಂಧೀಜಿ ಮತ್ತು ಇತರೆಲ್ಲಾ ಮುಖಂಡರು ಅಧಿವೇಶನದ ವ್ಯವಸ್ಥೆಯ ಬಗೆಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಅಧಿವೇಶನದ ಸಂದರ್ಭದಲ್ಲೇ ಸಾಂಸ್ಕೃತಿಕ ಸಮ್ಮೇಳನ, ಸಮಾಜ ಸುಧಾರಣಾ ಮೇಳ, ಅಸ್ಪೃಶ್ಯತಾ ನಿವಾರಣಾ ಸಮ್ಮೇಳನ, ವಿದ್ಯಾರ್ಥಿಗಳ ಸಮ್ಮೇಳನ ನಡೆದವು. ವಿದ್ಯಾರ್ಥಿಗಳ ಸಮ್ಮೇಳನದಲ್ಲಿ ಮಾದಯ್ಯಗೌಡರೂ, ನಿಜಲಿಂಗಪ್ಪನವರೂ, ಸುಬ್ಬರಾವ್ ಇನ್ನಿತರ ವಿದ್ಯಾರ್ಥಿಗಳು ಶ್ರದ್ಧೆ ಮತ್ತು ಆಸಕ್ತಿಯಿಂದ ಭಾಗವಹಿಸಿದ್ದರು. ಶ್ರೀರೆಡ್ಡಿಯವರು ಈ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗಾಂಧೀಜಿಯವರು “ಯಂಗ್ ಇಂಡಿಯಾ” ಪತ್ರಿಕೆಯಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. ಶ್ರೀರೆಡ್ಡಿಯವರು ವಿದ್ಯಾರ್ಥಿಗಳ ಬಿಡುವಿನ ವೇಳೆಯನ್ನು, ರಜಾದಿನಗಳನ್ನು ಉಪಯೋಗಿಸಿಕೊಳ್ಳುವ ಒಂದು ಯೋಜನೆ ಸಿದ್ಧ ಪಡಿಸಿದ್ದರು. ವರ್ಷಕ್ಕೆ ೨೮ ಸಂಜೆಗಳನ್ನು ವಿದ್ಯಾರ್ಥಿಗಳು ದೇಶಕ್ಕೆ ನೀಡಬೇಕು ಎಂಬ ಅಂಶ ಆ ಯೋಜನೆಯಲ್ಲಿ ಸೇರಿತ್ತು. ಒಬ್ಬೊಬ್ಬರು ನಾಲ್ಕು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಸೇವೆ ಸಲ್ಲಿಸಬೇಕು. ಗ್ರಾಮಗಳಿಗೆ, ಜನರಿಗೆ ಉಪಯೋಗವಾಗುವ ವಿವಿಧ ವಿಷಯಗಳ ಮೇಲೆ ಭಾಷಣಮಾಲೆ ನಡೆಯಬೇಕು. ವಿದ್ಯಾರ್ಥಿಗಳ ಬಿಡುವಿನ ವೇಳೆಯನ್ನು ಖಾದೀ ಪ್ರಚಾರಕ್ಕಾಗಿ ಉಪಯೋಗಿಸಬೇಕು. ಇದಕ್ಕಿಂತ ಹೆಚ್ಚಿನದಾಗಿ ವಿದ್ಯಾರ್ಥಿಗಳೂ, ವಕೀಲರೂ, ದಿನವೂ ಒಂದು ಗಂಟೆ ನೂಲಬೇಕು. ಖಾದೀ ಧರಿಸಬೇಕು.

ಇತ್ಯಾದಿ ಮಾಹಿತಿಯನ್ನು ನೀಡಿ ಅವರಲ್ಲಿ ಉತ್ಸಾಹ, ಅಭಿಮಾನ, ಹಾಗೂ ಸ್ಪೂರ್ತಿಯನ್ನು ತುಂಬಲಾಯಿತು.

ನಾಗಪುರ ಜೈಲಿನಲ್ಲಿದ್ದಾಗಲೇ ಡಾ.ನಾ.ಸು.ಹರ್ಡೀಕರ್‌ರವರಿಗೆ ಸೇವಾದಳ ಸ್ಥಾಪಿಸುವ ಆಲೋಚನೆಯುಂಟಾಗಿ ಮುಂದೆ ರಾಷ್ಟ್ರದಲ್ಲೆಲ್ಲಾ ಪ್ರವಾಸ ಮಾಡಿ, ಎಲ್ಲಾ ಪ್ರಾಂತ್ಯಗಳ ಬೆಂಬಲ ಗಳಿಸಿ ಹಿಂದೂಸ್ಥಾನಿ ಸೇವಾದಳ ಸ್ಥಾಪಿಸಿದರು. ರಾಷ್ಟ್ರದಾದ್ಯಂತ ಸಾವಿರಾರು ತರುಣರು ಇದಕ್ಕೆ ಸೇರಿದರು. ಕಾಕಿನಾಡ ಕಾಂಗ್ರೆಸ್ ಅಧಿವೇಶನದಲ್ಲಿ ಸೇವಾದಳಕ್ಕೆ ಬಹಳಷ್ಟು ಪ್ರೋತ್ಸಾಹ ದೊರೆಯಿತು. ಬೆಳಗಾವಿ ಕಾಂಗ್ರೇಸ್ ಸೇವಾದಳದ ಪರ್ವಕಾಲ. ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಮಾದಯ್ಯಗೌಡರಿಗೆ, ನಿಜಲಿಂಗಪ್ಪನವರಿಗೆ, ಕೆ.ಸುಬ್ಬರಾಯರಿಗೆ ಸೇವಾದಳದ ಪರಿಚಯ ಚನ್ನಾಗಿ ಆಯಿತು. ಅದರ ಆದರ್ಶಗಳು, ಸೇವಾಕಾರ್ಯ, ದೇಶಾಭಿಮಾನ, ದೇಶಭಕ್ತಿ ಮುಂತಾದವು ಮಾದಯ್ಯಗೌಡರಲ್ಲಿ ಪ್ರಭಾವ ಬೀರಿ ಸ್ಫೂರ್ತಿ ನೀಡಿದುವೆಂದೇ ಹೇಳಬಹುದು. ಅವರ ಗೆಳೆಯರ ಬಳಗವೂ ಇದರಿಂದ ಪ್ರಭಾವಿತವಾಯಿತು.

ಬೆಳಗಾವಿ ಕಾಂಗ್ರೇಸ್ಸಿನ ಅಖಿಲ ಭಾರತ ಅಧಿವೇಶನದ ಭವ್ಯತೆಯ ಚಿತ್ರಗಳು ಮಾದಯ್ಯಗೌಡರಲ್ಲಿ ಅಪಾರ ದೇಶಪ್ರೇಮ ಮೂಡಿಸಿದವು. ಆ ಮಹಾಧಿವೇಶನದಲ್ಲಿ ಹರ್ಡೀಕರ್ ನೇತೃತ್ವದಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ಅಲ್ಲಿ ಮಹಾತ್ಮಗಾಂಧಿ, ಮದನ ಮೋಹನ ಮಾಳವೀಯರು ಮಾಡಿದ ಭಾಷಣಗಳು; ಸ್ವಾಮಿ ಶ್ರದ್ಧಾನಂದರ ವ್ಯಕ್ತಿತ್ವ ಮಾದಯ್ಯಗೌಡರ ಮೇಲೆ ಬಹಳಷ್ಟು ಪ್ರಭಾವ ಬೀರಿದವು. ಸ್ವಾಮಿ ಶ್ರದ್ಧಾನಂದರೇ ಗಾಂಧೀಜಿಯವರನ್ನು ತಮ್ಮ ಗುರುಕುಲ ಕಾಂಗ್ರಿ ಕ್ಯಾಂಪಸ್‌ನ ಕಾರ್ಯಕ್ರಮದ ಭಾಷಣದಲ್ಲಿ ಮೊದಲ ಬಾರಿಗೆ "ಮಹಾತ್ಮಾ" ಎಂದು ಕರೆದಿದ್ದರು. ಮದನಮೋಹನ ಮಾಳವೀಯರು ಆ ಕಾರ್ಯಕ್ರಮದ ಸಭೆಯಲ್ಲಿದ್ದರು. ಮಾಳವೀಯರು ಗಾಂಧೀಜಿಯವರಿಗೆ "ಮಹಾತ್ಮಾ" ಎಂಬ ಪರಿಭಾಷೆಯು ಸರಿಯಾಗಿ ಹೊಂದುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು. ಮಹಾತ್ಮಾ ಗಾಂಧೀಯವರು ಈ ಮೊದಲು ಮದನಮೋಹನ ಮಾಳವೀಯರ ಆಹ್ವಾನದ ಮೇರೆಗೆ ಬನರಸ್ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಹೋಗಿ ಅಧ್ಯಾಪಕರನ್ನು ಮತ್ತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದರು.

ಗೌಡರು ಪುಣೆಯಲ್ಲಿ ಎಲ್.ಎಲ್.ಬಿ ಡಿಗ್ರಿ ಪಡೆದ ನಂತರ ಊರಿಗೆ ಬಂದು ರಾಮನಗರದಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ವಕೀಲಿ ವೃತ್ತಿಯ ಜೊತೆಜೊತೆಗೇ ಮಹಾತ್ಮಾ ಗಾಂಧೀಜಿಯವರ ಕರೆಯ ಮೇರೆಗೆ ಸ್ವಾತಂತ್ರ್ಯ ಹೋರಾಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ೧೯೩೦ರ ಚಳುವಳಿ ಕಾಲದಲ್ಲಿ ಅಂಕೋಲ, ಸಿದ್ಧಾಪುರ ಚಳುವಳಿಗಳಿಗೆ ನೆರವಾಗಲು ಸಾಧ್ಯವಾದಷ್ಟು ಜನರಿಂದ ಹಣ

ಸಂಗ್ರಹಿಸಿ ಕಳುಹಿಸುತ್ತಿದ್ದರು. ೧೯೩೦ರಿಂದಲೇ ಪ್ರತಿ ಶನಿವಾರ ಮಿತ್ರರು ಸೇರಿ ರಾಮನಗರದಲ್ಲಿ ರಾಷ್ಟ್ರಧ್ವಜ ವಂದನೆ ನಡೆಸುತ್ತಿದ್ದರು. ಆಗ ಸರ್ಕಾರದ ಅಧಿಕಾರಿಗಳು ಈ ಬಗ್ಗೆ ಏನೂ ಕ್ರಮ ಕೈಗೊಳ್ಳಲಿಲ್ಲ. ಕಾರಣ ಕಾಂಗ್ರೆಸ್ ಸೇವಾಕರ್ತರನ್ನು ಬಂಧಿಸಿದರೆ ಅವರು ವೃಥಾ ದೊಡ್ಡವರಾಗುತ್ತಾರೆ ಎಂಬ ಭಾವನೆಯನ್ನು ಸರ್ಕಾರದ ಅಧಿಕಾರಿಗಳು ಹೊಂದಿದ್ದರು.

ಗೌಡರು ಕಾಂಗ್ರೆಸ್ಸಿಗೆ ಸೇರಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದಾಗ ಮನೆಯಲ್ಲಿ ಒಂದು ಚಿಕ್ಕ ಘಟನೆ ನಡೆಯಿತು. ಅಪ್ಪಾಜಿಗೌಡರ ಹಿರಿಯ ಮಗ ಪ್ರಾರಂಭದಲ್ಲಿ ತಾನು ಯಾವ ಉದ್ಯೋಗ ಕೈಗೊಂಡು ದುಡಿದು ಹಣ ಸಂಪಾದಿಸಬೇಕು ಎಂಬ ಯೋಚನೆಯಲ್ಲಿದ್ದು, ಕೆಲವು ಕಾಲ ಅವರಿಗೆ ತಕ್ಷಣಕ್ಕೆ ಏನೂ ಹೊಳೆಯಲಿಲ್ಲ. "ಉದ್ಯೋಗ ಪುರುಷ ಲಕ್ಷಣಂ" ಎಂದು ಅವರಿಗೆ ಹಿರಿಯರು ಹೇಳುತ್ತಿದ್ದರು. ಕಡೆಗೆ ಏನಾದರೂ ಉದ್ಯೋಗ ಮಾಡಬೇಕೆಂದು ಅವರು ತೀರ್ಮಾನ ಮಾಡಿಕೊಂಡು ಪಕ್ಕದೂರಿನ ತೆಂಗಿನ ತೋಟಗಳಲ್ಲಿ ಸೇಂದಿ ಸಂಗ್ರಹಣೆಯ ಕಂಟ್ರಾಕ್ಟರ್ ಹತ್ತಿರ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡರು. ಕೆಲವು ದಿನಗಳಲ್ಲೇ ಅಪ್ಪಾಜಿಗೌಡರಿಗೆ ಅವರಿವರಿಂದ ಆ ವಿಷಯ ತಿಳಿದು ಬಂದು ಪೇಚಾಡಿಕೊಂಡರು. "ತಮ್ಮ ಮಾದಯ್ಯ ಕಾಂಗ್ರೆಸ್ ಚಳುವಳಿಯಲ್ಲಿ ಸೇರಿದ್ದಾನೆ. ಪಾನ ನಿರೋಧ ಗಾಂಧೀ ತತ್ವದ ಪ್ರಮುಖ ಕಾರ್ಯಕ್ರಮ. ಅಂತಹುದರಲ್ಲಿ ದೊಡ್ಡವನು ಹೆಂಡದ ಕಂಟ್ರಾಕ್ಟರ್ ಬಳಿ ಗುಮಾಸ್ತನ ಕೆಲಸಕ್ಕೆ ಸೇರಿದ್ದಾನೆ. ನಮ್ಮನ್ನು ಊರವರು ಮತ್ತು ಕಾಂಗ್ರೆಸ್ ಮುಖಂಡರು ಈ ಬಗ್ಗೆ ಕೇಳಿದರೆ ನಮ್ಮ ಮನೆತನದ ಗೌರವ ಹಾಳಾಗುತ್ತೆ. ಇದೇನಿದು?, ಅಂಕೇಗೌಡರ ಮನೆಯವರು ಹೇಳುವುದೊಂದು; ಮಾಡುವುದೊಂದು ಎಂದು ಜನರು ಆಡಿಕೊಳ್ಳುವುದಲ್ಲವೇ?" ಎಂದು ಮನೆಯಲ್ಲಿ ಬಹಳ ಸಿಟ್ಟು ಮಾಡಿಕೊಂಡು ಕೂಗಾಡಿದರು. ಎಲ್ಲವನ್ನೂ ಅರ್ಥಮಾಡಿಕೊಂಡ ಮನೆಯ ಹಿರಿಯರು ಹುಡುಗನಿಗೆ ಬುದ್ಧಿ ಹೇಳಿದರು. ಸ್ವಲ್ಪ ದಿನಗಳ ನಂತರ ಪಶ್ಚಾತ್ತಾಪಗೊಂಡ ಹಿರಿಯ ಮಗ ಹೆಂಡದ ಕೆಲಸಕ್ಕೆ ಹೋಗುವುದನ್ನು ಬಿಟ್ಟನು. ಅಣ್ಣ ಅಪ್ಪಾಜಿಗೌಡರು ಮತ್ತು ತಮ್ಮ ಗೌಡರ ನಡುವೆ ಇದ್ದ ಭ್ರಾತೃತ್ವದ ರಾಮ ಲಕ್ಷ್ಮಣ ವಾತ್ಸಲ್ಯಮಯ ಸಂಬಂಧವು ಈ ರೀತಿ ಬಹಳ ಚನ್ನಾಗಿತ್ತು. ಜೊತೆಗೆ, ಕುಟುಂಬದ ಎಲ್ಲರೂ ಸ್ವಾತಂತ್ರ್ಯ ಹೋರಾಟಕ್ಕೆ ಮನಃಪೂರ್ವಕವಾಗಿ ಪ್ರೋತ್ಸಾಹ ನೀಡಿದ್ದನ್ನು ತಿಳಿಸುತ್ತದೆ.

ಒಮ್ಮೆ ಮೈಸೂರು ಕಾಂಗ್ರೆಸ್ ಪರವಾಗಿ ಟಿ.ಸಿದ್ದಲಿಂಗಯ್ಯನವರು ಮತ್ತು ಸರ್ದಾರ್ ಕೆ.ಎ.ವೆಂಕಟ್ಟರಾಮಯ್ಯನವರು ಬಂದು ಮಾದಯ್ಯಗೌಡರವರನ್ನೂ, ಕೆ.ಸುಬ್ಬರಾವ್ ಹಾಗೂ ರಾಮನಗರ ತಾಲ್ಲೂಕಿನ ಇನ್ನಿತರ ಮುಂಚೂಣಿ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿಮಾಡಿದರು. ಇವರಲ್ಲಿ ಯಾರನ್ನು ತಾಲ್ಲೂಕಿನ ಕಾಂಗ್ರೆಸ್ ಅಧ್ಯಕ್ಷರನ್ನಾಗಿ

ಮಾಡಬೇಕೆಂದು ಚರ್ಚಿಸಿದರು. ಗಣ್ಯರು, ಮಾದಯ್ಯಗೌಡರು ಅಥವಾ ಸುಬ್ಬರಾವ್ ಈ ಇಬ್ಬರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಲು ತೀರ್ಮಾನಿಸಿದರು. ಮಾದಯ್ಯಗೌಡರ ವಕೀಲಿ ವೃತ್ತಿ ಚೆನ್ನಾಗಿ ನಡೆಯುತ್ತಿತ್ತು. ಮನೆಯಲ್ಲಿ ಬಂಧು-ಬಾಂಧವರ ಮಕ್ಕಳು ಓದುತ್ತಿದ್ದರು. ಆಗ ಮಾದಯ್ಯಗೌಡರು ನಾನೇ ಅಧ್ಯಕ್ಷನಾಗುತ್ತೇನೆ ಎಂದು ಕೇಳಿದ್ದರೆ ಗಣ್ಯರು ಒಪ್ಪುತ್ತಿದ್ದರು. ಸುಬ್ಬರಾವ್‌ರವರು, ಮಾದಯ್ಯಗೌಡರ ಆಪ್ತ ಗೆಳೆಯರು; ಸಜ್ಜನರು ಮತ್ತು ನಿಷ್ಠಾವಂತ ಗಾಂಧೀವಾದಿಗಳು. ಅಷ್ಟೇ ಅಲ್ಲ; ಅವರು ಪುಣೆಗೆ ಎಂ.ಎ, ಎಲ್.ಎಲ್.ಬಿ ಓದಲು ಹೋದಾಗ ನಾ.ಸು.ಹರ್ಡೀಕರ್ ನೇತೃತ್ವದಲ್ಲಿ ಸ್ವಯಂಸೇವಕ ಶಿಕ್ಷಣ ಹಾಗೂ ಮಿಲಿಟರಿ ತರಬೇತಿ ಪಡೆದಿದ್ದವರು. ಜೊತೆಗೆ ಸರ್ದಾರ್ ವೆಂಕಟರಾಮಯ್ಯನವರ ಸಮೀಪ ಬಂಧುಗಳು ಆಗಿದ್ದರು. ಸುಬ್ಬರಾವ್‌ಅವರ ದೇಶಪ್ರೇಮ, ಶ್ರಮದ ಬದುಕು, ಸೇವಾನಿಷ್ಠೆಗಳನ್ನು ಪರಿಗಣಿಸಿ ಸರ್ವಸಮ್ಮತವಾಗಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ತಾಲ್ಲೂಕಿನಲ್ಲಿ ಗೌಡರು ಮತ್ತು ಇತರ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಕಟ್ಟುವ ಕೆಲಸವನ್ನು ಮುಂದುವರಿಸಿದರು. ಟಿ.ಸಿದ್ದಲಿಂಗಯ್ಯನವರು, ಕೆ.ಸಿ.ರೆಡ್ಡಿಯವರು, ಎಚ್.ಸಿ.ದಾಸಪ್ಪನವರು, ಕೆ.ಟಿ.ಭಾಷ್ಯಂ, ಕೆಂಗಲ್ ಹನುಮಂತಯ್ಯನವರಂತಹ ಕಾಂಗ್ರೆಸ್ ನಾಯಕರು ತಾಲ್ಲೂಕಿನ ಕಾಂಗ್ರೆಸ್ ಕಾರ್ಯಕ್ರಮಗಳಿಗೆ ಬಂದು ಭಾಗವಹಿಸುತ್ತಿದ್ದರು. ಗಾಂಧೀಜಿಯವರ ಕರೆಯಂತೆ ಕಾಂಗ್ರೆಸ್ ಸಂದೇಶವನ್ನು ಎಲ್ಲಾ ಹಳ್ಳಿಗಳಲ್ಲಿನ ಜನರಿಗೆ ತಿಳಿಯಪಡಿಸಲು ಓಡಾಡಿದರು. ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ, ಪಕ್ಷದ ಧ್ಯೇಯೋದ್ದೇಶಗಳನ್ನು ಜನರಿಗೆ ತಲುಪಿಸುವಲ್ಲಿನ ಇವರ ಪ್ರಾಮಾಣಿಕ ದುಡಿಮೆ ಎಲ್ಲರ ಗಮನ ಸೆಳೆದಿತ್ತು.

ಸುಭಾಷ್ ಚಂದ್ರಬೋಸ್‌ಅವರ ಅಧ್ಯಕ್ಷತೆಯಲ್ಲಿ ಹರಿಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟ ಮಾಡಲು ಸ್ವತಂತ್ರ ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ನಿರ್ಣಯ ತೆಗೆದುಕೊಳ್ಳಲಾಯಿತು. ಸುಭಾಷ್‌ಚಂದ್ರ ಬೋಸ್‌ರವರು ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ಸರ್ಕಾರಿ ಅಧಿಕಾರಿಗಳು, ವರ್ತಕರು. ಎಲ್ಲರೂ ಧೀರರಾಗಿ ತ್ಯಾಗಮಾಡಿ ಹೋರಾಟ ಮಾಡಬೇಕೆಂದೂ, ಭಾರತ ಮಾತೆಯ ಗುಲಾಮಗಿರಿಯನ್ನು ತೊಲಗಿಸಲು ಮುನ್ನುಗ್ಗಬೇಕೆಂದೂ ರಣಕಹಳೆ ಊದಿ ದೇಶಬಾಂಧವರಲ್ಲಿ ಹುಮ್ಮಸ್ಸು ಸೃಷ್ಟಿಸಿದರು. ಈ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್‌ನ್ನು ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸ್ಥಾಪನೆ ಮಾಡಲಾಯಿತು. ಇದಕ್ಕೆ ಪೂರ್ವಭಾವಿಯಾಗಿ ಉದ್ದೇಶಿತ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಸಭೆ ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ

ಚಿತ್ರದುರ್ಗದ ಅನಂತಯ್ಯಶೆಟ್ಟಿ ಹಾಸ್ಟೆಲ್‌ನಲ್ಲಿ ನಡೆಯಿತು. ಎಸ್.ನಿಜಲಿಂಗಪ್ಪನವರು, ವಾಸುದೇವರಾವ್ ಮುಂತಾದವರು ಅಂದಿನ ಸಭೆಯನ್ನು ಸಂಘಟಿಸಿದ್ದರು. ಈ ಸಭೆಗೆ ಅನೇಕ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಆಗಮಿಸಿದ್ದರು. ಅಂದಿನಿಂದಲೇ ಕಾಂಗ್ರೆಸ್ಸಿನ ಪ್ರಚಾರ ಮೈಸೂರು ಸಂಸ್ಥಾನದಲ್ಲಿ ಭರದಿಂದ ಸಾಗಿತು.

ಮೈಸೂರಿನಲ್ಲಿ ಮಿರ್ಲೆ ಲಕ್ಷ್ಮೀನಾರಾಯಣಪ್ಪನವರ ಮನೆಯಲ್ಲಿ ಮಾರ್ಚ್ ೧೯೩೭ರ ಒಂದು ದಿನ ಸೇಲಂನ ಕಾಂಗ್ರೆಸ್ ಮುಖಂಡ ಎಸ್.ವೆಂಕಟಪ್ಪ ಚಟ್ಟಿಯಾರ್‌ಅವರಿಂದ ರಾಷ್ಟ್ರೀಯ ಕಾಂಗ್ರೆಸ್ಸಿನ ಶಾಖೆಯಾಗಿ ಮೈಸೂರು ಕಾಂಗ್ರೆಸ್ಸಿನ ಉದ್ಘಾಟನೆಯನ್ನು ಟಿ.ಸಿದ್ಧಲಿಂಗಯ್ಯನವರು, ಎಚ್.ಸಿ.ದಾಸಪ್ಪನವರು, ಸಾಹುಕಾರ್ ಚನ್ನಯ್ಯನವರು, ವೀರಣ್ಣಗೌಡರು ಮುಂತಾದ ಕಾಂಗ್ರೆಸ್ ಮುಖಂಡರು ಸೇರಿ ಮಾಡಿಸಿದರು. ಆ ಸಂದರ್ಭದಲ್ಲಿ ಬಾಳೆಮಂಡಿ ನಂಜನಗೂಡು ಎ. ಶಿವಣ್ಣನವರು, ಕೆ.ಪುಟ್ಟಸ್ವಾಮಿ, ಪಾಲಹಳ್ಳಿ ಸೀತಾರಾಮಯ್ಯನವರು, ಗುಂಡಪ್ಪನವರು, ಮುಂತಾದವರು ಭಾಗವಹಿಸಿದ್ದರು. ಏಪ್ರಿಲ್‌ನಲ್ಲಿ ಮೈಸೂರು ಕಾಂಗ್ರೆಸ್‌ನ ಮೊದಲ ಸಮ್ಮೇಳನವನ್ನು ಶಿವಪುರದಲ್ಲಿ ಅಥವಾ ಬೇರೆ ಕಡೆ ನಡೆಸಲು ತೀರ್ಮಾನವಾಗಿ ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನ ಪ್ರಪ್ರಥಮ ಅಧ್ಯಕ್ಷರನ್ನಾಗಿ ಟಿ.ಸಿದ್ಧಲಿಂಗಯ್ಯನವರನ್ನು ಆಯ್ಕೆ ಮಾಡಲಾಗಿತ್ತು. ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನವನ್ನು ಅಂತಿಮವಾಗಿ ಮದ್ದೂರು ಬಳಿ ಇರುವ ಶಿವಪುರದಲ್ಲಿ ಕರೆಯಲು ನಾಯಕರು ತೀರ್ಮಾನ ಕೈಗೊಂಡರು. ಈ ಸಮ್ಮೇಳನ ನಡೆಸುವ ನಿರ್ಣಯವನ್ನು ಕಾರ್ಯಾಚರಣೆಗೆ ತರಲು ತನ್ನ ಬೌದ್ಧಿಕ ಮತ್ತು ಆರ್ಥಿಕ ಶಕ್ತಿಯನ್ನೆಲ್ಲಾ ದೇಶಸೇವೆಗೆ ಮೀಸಲಿಡಲು ನಿರ್ಧರಿಸಿ ಮುಂದೆ ಬಂದವರು ಸಾಹುಕಾರ್ ಚನ್ನಯ್ಯನವರು.

ಹರಿಪುರ ಕಾಂಗ್ರೆಸ್ ಅಧಿವೇಶನಕ್ಕೆ ಬಂದಿದ್ದ ಸಾಹುಕಾರ್ ಚನ್ನಯ್ಯನವರು ಅಂಥದ್ದೇ ಒಂದು ರಾಷ್ಟ್ರಕೂಟವನ್ನು ಅದ್ದೂರಿಯಾಗಿ ನಡೆಸಲು ಬಹಳ ಉತ್ಸುಕರಾಗಿದ್ದರು. ಅವರಿಗೆ ಮೈಸೂರಿನ ಜಮ್ನಾಲಾಲ್ ಬಜಾಜ್ ಎಂಬ ಬಿರುದನ್ನು ಎಚ್.ಸಿ.ದಾಸಪ್ಪನವರು, ಟಿ.ಸಿದ್ಧಲಿಂಗಯ್ಯನವರು ಮುಂತಾದವರು ಪ್ರೀತಿಯಿಂದ ಸ್ನೇಹಪೂರ್ವಕವಾಗಿ ಕೊಟ್ಟಿದ್ದರು. ಅವರು ಮೈಸೂರು ಕಾಂಗ್ರೆಸ್ಸಿನ 'ಕಿಂಗ್ ಮೇಕರ್', 'ನಜರ್‌ಬಾದ್ ನವಾಬರು' ಎಂಬ ವಿಶೇಷಣಗಳಿಂದಲೂ ಕರೆಯಲ್ಪಡುತ್ತಿದ್ದರು. ಸಾಹುಕಾರ್ ಚನ್ನಯ್ಯನವರು ಮೈಸೂರು ಕಾಂಗ್ರೆಸ್ಸಿನ ಏಳಿಗೆಯಲ್ಲಿ ಆಧಾರ ಸ್ತಂಭಗಳಲ್ಲಿ ಒಬ್ಬರೆನಿಸಿದ್ದರು. ಅವರು ಶ್ರೀಮಂತ ಮನೆತನದಲ್ಲಿ ಹುಟ್ಟಿ ವ್ಯಾಪಾರ ವ್ಯವಸಾಯಗಳಲ್ಲಿ ಮಗ್ನರಾಗಿದ್ದರು. ಎಚ್.ಸಿ.ದಾಸಪ್ಪನವರ ಪ್ರೇರೇಪಣೆಯಿಂದ ಖಾಯಂ ಆಗಿ ಸ್ವಾತಂತ್ರ್ಯ ಹೋರಾಟಕ್ಕೆ ಬಂದರು. ನಂತರದ ದಿನಗಳಲ್ಲಿ ಕಾಂಗ್ರೆಸ್ ಮೈಸೂರು ರಾಜ್ಯದಲ್ಲಿ ಬೆಳೆಯಲು ತಮ್ಮದೇ ಆದ ಕೊಡುಗೆ

ನೀಡಿದರು. ಸಾಹುಕಾರ್ ಚನ್ನಯ್ಯರವರನ್ನು ಶಿವಪುರ ಕಾಂಗ್ರೆಸ್ಸಿನ ಸ್ವಾಗತಾಧ್ಯಕ್ಷರನ್ನಾಗಿ ಮಾಡಲಾಯಿತು. ಇವರ ಜೊತೆಗೆ ಶಿವಪುರ ಕಾಂಗ್ರೆಸ್ಸಿನ ಕಾರ್ಯದರ್ಶಿಗಳೆಂದು ಎ.ಜಿ.ಬಂದೀಗೌಡರನ್ನು ಮತ್ತು ಎಚ್.ಕೆ.ವೀರಣ್ಣಗೌಡ; ಎಚ್.ಸಿ.ದಾಸಪ್ಪ, ಶಿವಪುರದ ತಿರುಮಲೇಗೌಡ, ಎಸ್.ರಂಗರಾಮಯ್ಯನವರನ್ನು ಉಪಾಧ್ಯಕ್ಷರುಗಳೆಂದೂ; ಕೊಪ್ಪದ ಜೋಗಿಗೌಡರನ್ನು ಖಜಾಂಚಿಯೆಂದೂ; ಎಂ.ಎನ್.ಜೋಯಿಸರು ಜನರಲ್ ಆಫೀಸರ್ ಕಮಾಂಡಿಂಗ್‌ಎಂದೂ ಮೈಸೂರಿನಲ್ಲಿ ಎಚ್.ಕೆ.ವೀರಣ್ಣಗೌಡರು ಪ್ರಕಟಿಸಿದರು. ಮಾದಯ್ಯಗೌಡರು ಈ ಎಲ್ಲಾ ಪದಾಧಿಕಾರಿಗಳ ಜೊತೆ ಕೈಜೋಡಿಸಿದರು. ಸ್ವಾಗತ ಸಮಿತಿಯ ಕಛೇರಿ ಕೆಲಸ ನಿರ್ವಹಿಸಲು ವಿ.ಎಸ್.ನಾರಾಯಣರಾವ್‌ಅವರ ಸಲಹೆಯಂತೆ ಚಿಕ್ಕಬಳ್ಳಾಪುರದ ಸಂಪಗಿ ರಾಮಯ್ಯ ಹಾಗೂ ಸಂಪತ್‌ಕುಮಾರ್‌ರವರನ್ನು ಕರೆಸಿಕೊಳ್ಳಲಾಯಿತು. ಶಿವಪುರದ ತಿರುಮಲೇಗೌಡರ ಮನೆಯ ಮಹಡಿಯ ಮೇಲೆ ಅಧಿವೇಶನದ ಸಿದ್ಧತೆಗಳನ್ನು ಮಾಡಿಕೊಳ್ಳಲಾಯಿತು.

ಮೈಸೂರು ಸಂಸ್ಥಾನದ ಬೇರೆ ಬೇರೆ ಪ್ರದೇಶದ ಮತ್ತು ಬಾಂಬೆ ಪ್ರೆಸಿಡೆನ್ಸಿಯ ಕನ್ನಡ ಪ್ರದೇಶಗಳ ಭಾಗದ ಕಾಂಗ್ರೆಸ್ ಕಾರ್ಯಕರ್ತರು ಶಿವಪುರ ಅಧಿವೇಶನಕ್ಕೆ ಎಷ್ಟು ಸಾಧ್ಯವೋ ಅಷ್ಟು ಹಣ ಸಂಗ್ರಹಿಸಿ ತಂದರು. ಸ್ವಾಗತಸಮಿತಿಯ ಸದಸ್ಯರಾಗಿದ್ದ ಮಾದಯ್ಯಗೌಡರು, ಚಿತ್ರದುರ್ಗದಿಂದ ಎಸ್.ನಿಜಲಿಂಗಪ್ಪನವರು, ಮತ್ತು ಇತರ ಊರುಗಳಿಂದ ಇನ್ನಿತರ ಮುಖಂಡರು ಜನರಿಂದ ಚಂದಾ ಹಣಸಂಗ್ರಹಿಸಿ ಶಿವಪುರದ ಅಧಿವೇಶನಕ್ಕೆ ನೆರವಾದರು. ರಾಮನಗರ ತಾಲ್ಲೂಕಿನಿಂದ ಮಾದಯ್ಯಗೌಡರು, ಕೆ.ಸುಬ್ಬರಾವ್, ಗಿರಿಯಪ್ಪನವರು, ಸಿ.ಎಂ.ವೆಂಕಟ್ಟನವರು, ಈಶ್ವರ್‌ರಾವ್ ಮುಂತಾದ ಅನೇಕ ಕಾಂಗ್ರೆಸ್ ಮುಖಂಡರು ಶಿವಪುರದ ಅಧಿವೇಶನಕ್ಕೆ ಸ್ವಯಂಸೇವಕರಾಗಿ, ಸ್ವಯಂಸೇವಕ ತಂಡದ ಮುಖಂಡರಾಗಿ, ಕಾರ್ಯಕಾರೀ ಸಮಿತಿಯ ಸದಸ್ಯರಾಗಿ, ಸತ್ಯಾಗ್ರಹಿಗಳಾಗಿ, ಚಳುವಳಿಗಾರರಾಗಿ, ಸಕ್ರಿಯವಾಗಿ ಭಾಗವಹಿಸಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಚೈತನ್ಯ ಮೂಡಿಸಿದರು. ಈ ಅಧಿವೇಶನಕ್ಕೆ ಹೋಗುವಾಗ ಬೀದಿಗಳಲ್ಲಿ ರಾಷ್ಟ್ರಗೀತೆಯನ್ನು ಹಾಡುತ್ತಾ ರೈಲ್ವೆ ನಿಲ್ದಾಣಕ್ಕೆ ಹೋದರು. ಷಟ್ಲ್ ರೈಲು ಹತ್ತಿ ಶಿವಪುರಕ್ಕೆ ಪ್ರಯಾಣ ಬೆಳಸಿದರು. ದಾರಿಯುದ್ದಕ್ಕೂ "ಭಾರತ್ ಮಾತಾಕೀ ಜೈ; ಮಹಾತ್ಮಾ ಗಾಂಧೀಕೀ ಜೈ" ಎಂಬ ಜೈಕಾರಗಳನ್ನು ಕೂಗುತ್ತಿದ್ದರು. ಕಾಂಗ್ರೆಸ್ ಶಿಬಿರಕ್ಕೆ ಹೋಗುವಾಗಲೂ ಜನಗಣಮನವನ್ನೂ, ವಂದೇ ಮಾತರಂನ್ನೂ, ಧ್ವಜಗೀತೆಗಳನ್ನೂ ಹಾಡುತ್ತಿದ್ದರು.

ಶಿವಪುರದಲ್ಲಿ ೧೦.೦೪.೧೯೩೮ರಲ್ಲಿ ಅಧಿವೇಶನ ಗೊತ್ತಾಗಿದ್ದು; ಧ್ವಜಾರೋಹಣ ಮೊವಲ ಕಾರ್ಯಕ್ರಮ. ಅಧ್ಯಕ್ಷರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಶಿವಪುರ

ಕಾಂಗ್ರೆಸ್ ಎಂದರೆ ಬಿಳಿ ಟೋಪಿಗಳ ಸಾಗರವೇ ಆಗಿತ್ತು. ೪೦ ರಿಂದ ೫೦ ಸಾವಿರ ಜನ ಸೇರಿದ್ದರು. ಶಿವಪುರದ ಬೀದಿಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯನವರ ಮೆರವಣಿಗೆಯನ್ನು ವಿಜೃಂಭಣೆಯಿಂದ ನಡೆಸಲಾಯಿತು. ಅಧಿವೇಶನದ ದಿನ ಬೆಳಿಗ್ಗೆ ರಾಷ್ಟ್ರಧ್ವಜಾರೋಹಣದೊಂದಿಗೆ ಕಾಂಗ್ರೆಸ್ ಅಧಿವೇಶನ ಆರಂಭವಾಗಬೇಕಿತ್ತು. ಈ ಮೊದಲೇ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಜಿ.ಎಂ.ಮೇಕ್ರಿಯವರು ಮದ್ದೂರು ಸುತ್ತಳತೆ ಮೂರು ಮೈಲಿಗಳೊಳಗೆ ಒಂದು ತಿಂಗಳ ಕಾಲ ಮೆರವಣಿಗೆ, ಜನಜಂಗಳಿಯ ಯಾವ ಸಭೆ ಸಮಾರಂಭಗಳನ್ನು ನಡೆಸಕೂಡದೆಂದೂ, ಮತ್ತು ಧ್ವಜಾರೋಹಣ ಮಾಡಕೂಡದೆಂದೂ ಆಜ್ಞೆಯನ್ನು ಸೆಕ್ಷನ್ ೧೪೪ರ ಅಡಿಯಲ್ಲಿ ಜಾರಿ ಮಾಡಿದ್ದರು.

ಟಿ.ಸಿದ್ದಲಿಂಗಯ್ಯ, ಎಂ.ಎನ್.ಜೋಯಿಸ್, ಕೆ.ಟಿ.ಭಾಷ್ಯಂ, ಎಚ್.ಸಿ.ದಾಸಪ್ಪ, ಎಚ್.ಕೆ.ವೀರಣ್ಣಗೌಡ, ಕೆಂಗಲ್ ಹನುಮಂತಯ್ಯ, ಕೆ.ಸಿ.ರೆಡ್ಡಿ, ಎಚ್.ಟಿ.ಗುಂಡಪ್ಪಗೌಡ, ವಿ.ವೆಂಕಟಪ್ಪ, ಡಿ.ಎಚ್.ಚಂದ್ರಶೇಖರಯ್ಯ, ಎಚ್.ಸಿದ್ದಯ್ಯ, ತಗಡೂರು ರಾಮಚಂದ್ರರಾವ್, ಡಿ.ಎಸ್.ಮಲ್ಲಪ್ಪ, ಬಳ್ಳಾರಿ ಸಿದ್ದಮ್ಮ, ಯಶೋಧರಾ ದಾಸಪ್ಪ, ಸುನಂದಾಬಾಯಿ, ನರಸಿಂಹ ಅಯ್ಯಾಂಗಾರ್, ಪಾರ್ವತಮ್ಮ, ಜಯಮ್ಮ, ಬಳ್ಳಾರಿ ಸಿದ್ದಮ್ಮ, ತಾಯಮ್ಮ ವೀರಣ್ಣಗೌಡ, ಎಚ್.ಎಸ್.ದೊರೆಸ್ವಾಮಿ, ಸಾಹುಕಾರ್ ಚನ್ನಯ್ಯ, ಶ್ರೀನಿವಾಸ, ಅಗ್ರಹಾರದ ಬಂದೀಗೌಡರು, ತಿರುಮಲೇಗೌಡರು, ಮಾದಯ್ಯಗೌಡರು ಸ್ವಾಗತ ಸಮಿತಿಯ ಇತರೆಲ್ಲರೂ ಹಾಜರಿದ್ದರು. ಅಪಾರ ಜನಸ್ತೋಮ ಸೇರಿತು. ಸಿದ್ಧಲಿಂಗಯ್ಯನವರು ಸರ್ಕಾರದ ಆಜ್ಞೆಯನ್ನು ಉಲ್ಲಂಘನೆ ಮಾಡಿ ಧ್ವಜಾರೋಹಣ ಮಾಡಲು ದಾರ ಎಳೆದದ್ದೇ ತಡ ಪೋಲಿಸರು ಅವರನ್ನು ಅರೆಸ್ಟ್ ಮಾಡಿದರು. ಸ್ವಯಂಸೇವಕ ದಳದ ಮುಖ್ಯಸ್ಥರಾಗಿದ್ದ ಎಂ.ಎನ್.ಜೋಯಿಸರು ಧೈರ್ಯದಿಂದ ಧ್ವಜವನ್ನು ಏರಿಸಿಯೇ ಬಿಟ್ಟರು. ನೆರೆದಿದ್ದ ಸಾವಿರಾರು ಸಂಖ್ಯೆಯ ಜನರು ಉಲ್ಲಾಸದಿಂದ ಜೈಘೋಷ ಮಾಡಿದರು. ಇಡೀ ಜನಸ್ತೋಮ ದೇಶಪ್ರೇಮದಿಂದ ನಿಂತಿರಲು ಸುನಂದಮ್ಮನವರು ಸುಶ್ರಾವ್ಯವಾಗಿ ಬಂಕಿಮ ಚಂದ್ರರ ವಂದೇ ಮಾತರಂ ಗೀತೆ ಹಾಡಿದರು. ತಾವು ಭಾಗವಹಿಸುತ್ತಿದ್ದ ಸಭೆ ಸಮಾರಂಭಗಳಲ್ಲಿ ರಾಷ್ಟ್ರಧ್ವಜದ ಘನತೆ ಗೌರವ ಎತ್ತಿ ಹಿಡಿದ ಈ ಚೊಚ್ಚಲು ಪ್ರಸಂಗವನ್ನೂ, ಅಲ್ಲಿ ಸಮಾವೇಶಗೊಂಡಿದ್ದ ೪೦,೦೦೦-೫೦,೦೦೦ದಷ್ಟು ಜನಸಮೂಹ ತೋರಿದ ಶಿಸ್ತು, ಸಂಯಮ, ಮತ್ತು ದೇಶಭಕ್ತಿ ಚಿರಸ್ಮರಣೀಯವಾದುದು. ಇಡೀ ರಾತ್ರಿ ಧ್ವಜದ ರಕ್ಷಣೆಗಾಗಿ ಸತ್ಯಾಗ್ರಹಿಗಳು ಧ್ವಜ ಸ್ತಂಭದ ಬಳಿ ಕುಳಿತಿರುತ್ತಿದ್ದರು. ಧ್ವಜ ಸತ್ಯಾಗ್ರಹ ಮುಂದುವರಿದಿದ್ದು; ಕೆ.ಟಿ.ಭಾಷ್ಯಂ, ಎಚ್.ಸಿ.ದಾಸಪ್ಪ, ಎಚ್.ಸಿದ್ಧಯ್ಯ ಮುಂತಾದ ನಾಯಕರು ಮುಂದಿನ ದಿನಗಳಲ್ಲಿ ಸರದಿಯ ಮೇಲೆ ಧ್ವಜಾರೋಹಣ ಮಾಡಿ ದಸ್ತಗಿರಿಯಾದರು. ಶಿವಪುರ ಕಾಂಗ್ರೆಸ್ ಧ್ವಜ ಸತ್ಯಾಗ್ರಹ

ಸಂದರ್ಭದಲ್ಲಿ ಮಾದಯ್ಯಗೌಡರು, ವೆಂಕಟಪ್ಪನವರು, ತಾಳಕೆರೆ ಸುಬ್ರಮಣ್ಯಂ, ಚಕ್ಕೆರೆಚನ್ನಪ್ಪ ಶ್ರೀನಿವಾಸಯ್ಯ, ಆರ್.ಅಯ್ಯಾಂಗಾರ್, ಎಲ್.ಕೆ.ಕೃಷ್ಣಸ್ವಾಮಿ, ಸುಬ್ಬರಾವ್ ಮುಂತಾದವರನ್ನು ದಸ್ತಗಿರಿ ಮಾಡಿ ಜೈಲಿನಲ್ಲಿಡಲಾಯಿತು. ಆ ಸಂದರ್ಭದಲ್ಲಿ ವೆಂಕಟಪ್ಪರವರನ್ನು, ಕೆ.ಸಿ.ರೆಡ್ಡಿಯವರನ್ನು, ಎಚ್.ಸಿ.ದಾಸಪ್ಪರವರನ್ನು ಮೈಸೂರು ಜೈಲಿನಲ್ಲಿಟ್ಟರು. ಅಲ್ಲಿಂದ ಮುಂದೆ ಶಿವಮೊಗ್ಗ ಜೈಲಿಗೆ ಕರೆದುಕೊಂಡು ಹೋಗಿ ಕಡೆಗೆ ಮೂವರನ್ನು ಬೇರೆ ಬೇರೆ ಕಡೆ ಕರೆದುಕೊಂಡು ಹೋದರು. ವೆಂಕಟಪ್ಪರವರನ್ನು ಹಾಸನ ಜೈಲಿನಲ್ಲಿಟ್ಟರು.

ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು, ಶ್ರೀಮದ್ಯುವರಾಜ ಕಂಠೀರವ ನರಸಿಂಹ ರಾಜ ಒಡೆಯರು, ಮಿರ್ಜಾ ಇಸ್ಮೈಲ್‌ಅವರು ಮತ್ತು ಮೇಖ್ರಿಯವರು ಒಟ್ಟಿಗೇ ಓದಿದವರು. ಎಲ್ಲರೂ ಒಳ್ಳೆಯವರೇ; ಸುಸಂಸ್ಕೃತರು. ಮೈಸೂರು ಸಂಸ್ಥಾನಕ್ಕೆ ಒಳ್ಳೆಯದನ್ನೇ ಬಯಸಿದವರು. ಮಿರ್ಜಾರವರು ಮೈಸೂರು ಸಂಸ್ಥಾನದ ದಿವಾನರಾಗಿದ್ದರು. ಆಗ ಮೇಖ್ರಿಯವರು ಜಿಲ್ಲಾಧಿಕಾರಿಯಾಗಿದ್ದರು. ಶಿವಪುರದ ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ನಡೆವ ಸಂಭಾಷಣೆ ಹೀಗಿದೆ:

**ಮಿರ್ಜಾಇಸ್ಮೈಲ್** : "ಮೇಖ್ರಿ, ಶಿವಪುರ ಧ್ವಜ ಸತ್ಯಾಗ್ರಹ ಪ್ರಾರಂಭವಾದಾಗ ಗೋಳೀಬಾರ್ ಮಾಡಿಸು. ಒಂದೆರಡು ಜನ ಸತ್ತರೆ ಸಾಯಲಿ. ಜನರಿಗೆ ಬುದ್ಧಿ ಬರುತ್ತದೆ. ಸತ್ಯಾಗ್ರಹವನ್ನು ತಾವಾಗಿಯೇ ನಿಲ್ಲಿಸುತ್ತಾರೆ".

"ಮೇಖ್ರಿ: "ಗೋಳೀಬಾರ್ ಮಾಡಿಸುವುದು, ಬಿಡುವುದು ಜಿಲ್ಲಾಧಿಕಾರಿಯ ಅಧಿಕಾರ. ಅದು ನನ್ನ ಕೈಯಲ್ಲಿದೆ. ನನಗೆ ಗೋಳೀಬಾರ್ ಮಾಡಿಸುವುದು ಸ್ವಲ್ಪವೂ ಇಷ್ಟವಿಲ್ಲ".

ಮೇಖ್ರಿಯವರು ಮತ್ತು ಮಿರ್ಜಾರವರು ಆತ್ಮೀಯರಾಗಿದ್ದುದರಿಂದ ಒಬ್ಬ ಜಿಲ್ಲಾಧಿಕಾರಿ, ಶ್ರೀಮನ್ಮಹಾರಾಜರ ನಂತರದ ಅತ್ಯುನ್ನತ ಹುದ್ದೆಯಲ್ಲಿ ಇದ್ದ ದಿವಾನರ ವಿರುದ್ಧ ಈ ರೀತಿಯಾಗಿ ಮಾತನಾಡಲು ಸಾಧ್ಯವಾಗಿತ್ತು.

ಶಿವಪುರ ಧ್ವಜ ಸತ್ಯಾಗ್ರಹ ಅತ್ಯಂತ ಯಶಸ್ವಿಯಾಯಿತು. ಈ ಕಾರಣದಿಂದ ಕೊನೆಗೂ ಮೈಸೂರು ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ಮಣಿಯಬೇಕಾಯಿತು. ಮುಂದೆ ಗಾಂಧೀಜಿಯವರು, ಸರ್ದಾರ್ ವಲ್ಲಭಾಯ್ ಪಟೇಲ್ ಮತ್ತು ಆಚಾರ್ಯ ಕೃಪಲಾನಿಯವರನ್ನು, ಮೈಸೂರು ಸಂಸ್ಥಾನಕ್ಕೆ ಕಳುಹಿಸಿ ಶ್ರೀಮನ್ಮಹಾರಾಜರ ಸರ್ಕಾರಕ್ಕೂ ಮತ್ತು ಮೈಸೂರು ಕಾಂಗ್ರೆಸ್ಸಿಗೂ ಒಂದು ಒಡಂಬಡಿಕೆ ಮಾಡಿಸಲಾಯಿತು. ರಾಷ್ಟ್ರಧ್ವಜವನ್ನು ಹಾರಿಸುವ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಲಾಂಛನವಾದ ಗಂಡಬೇರುಂಡ ಧ್ವಜವನ್ನೂ ಹಾರಿಸಬೇಕೆಂಬ ಒಪ್ಪಂದಕ್ಕೆ ಬರೆಯಲಾಯಿತು. ಈ ಒಪ್ಪಂದದ ಆಧಾರದ ಮೇಲೆ ವೆಂಕಟಪ್ಪನವರನ್ನೂ, ದಾಸಪ್ಪರವರನ್ನೂ, ಕೆ.ಸಿ.ರೆಡ್ಡಿರವರನ್ನೂ ಮತ್ತು ಇನ್ನಿತರ ಮುಖಂಡರುಗಳನ್ನು ಜೈಲಿನಿಂದ ಬಿಡುಗಡೆಗೊಳಿಸಲಾಯಿತು.

ಮೈಸೂರು ಕಾಂಗ್ರೆಸ್ ಆಶ್ರಯದಲ್ಲಿ ಸಂಸ್ಥಾನದ ವಿವಿಧ ಕಡೆ ಧ್ವಜಾರೋಹಣ ಕಾರ್ಯಕ್ರಮಗಳನ್ನು ನಡೆಸಲಾಯಿತು. ಬ್ರಿಟಿಷ್ ಅಧಿಕಾರಿಗಳ ದಬ್ಬಾಳಿಕೆಗಳ ವಿರುದ್ಧ ಸತ್ಯಾಗ್ರಹಗಳು, ಕಾಂಗ್ರೆಸ್ ಪ್ರಚಾರ ಯಾತ್ರೆಗಳು, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್‌ಗಳು, ಈಚಲು ಮರಗಳನ್ನು ಕಡಿಯುವುದು, ಮುಂತಾದ ಚಳುವಳಿಗಳು ಮುಂದುವರೆದವು. ಮಾದಯ್ಯಗೌಡರು, ಆರ್.ಶ್ರೀನಿವಾಸಯ್ಯ, ಚಕ್ಕೆರೆಚನ್ನಪ್ಪ ಮುಂತಾದ ಮುಖಂಡರು ಆಗ ಚನ್ನಪಟ್ಟಣ, ರಾಮನಗರ ಸುತ್ತಮುತ್ತ ಇಂತಹ ಚಳುವಳಿಗಳನ್ನು, ಸತ್ಯಾಗ್ರಹಗಳನ್ನು ಸಂಘಟಿಸುತ್ತಾ ಜೊತೆ ಜೊತೆಯಲ್ಲಿ ಕಾಂಗ್ರೆಸ್‌ನ ಕೆಲಸವನ್ನೂ ಉತ್ಸಾಹ ಮತ್ತು ಶ್ರದ್ಧೆಯಿಂದ ಮಾಡುತ್ತಿದ್ದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರೆಸ್ಸಿನವರ ಹತ್ತಿರ ಅಷ್ಟೇನೂ ದುಡ್ಡು ಕಾಸು ಇರುತ್ತಿರಲಿಲ್ಲ. ಹಸಿವು ನೀರಡಿಕೆಗಳಿಗೆ ಲೆಕ್ಕವಿರಲಿಲ್ಲ. ವಿಶ್ರಾಂತಿ ಸಾಕಷ್ಟು ಆಗುತ್ತಿರಲಿಲ್ಲ. ಎಷ್ಟೋ ಹೊತ್ತಿಗೆ ಊಟ; ಎಷ್ಟೋ ಹೊತ್ತಿಗೊ ನಿದ್ರೆ; ಮತ್ತು ಯಾವುದಕ್ಕೂ ಹೊತ್ತಿಲ್ಲ–ಗೊತ್ತಿಲ್ಲ. ಈಗಿನ ಮುಖಂಡರಂತೆ ದೊಡ್ಡ ಹೋಟೆಲ್‌ಗಳಿಗೆ ಹೋಗಿ ಬೇಕಾದ ಊಟ ತಿಂಡಿ–ತಿನಿಸುಗಳನ್ನು ತಿನ್ನಲು ದುಡ್ಡು ಇರುತ್ತಿರಲಿಲ್ಲ. ಊಟ–ತಿಂಡಿಗಳಿಗೆ ದುಡ್ಡು ಇಲ್ಲದೆ ಕಷ್ಟವಾಗುತ್ತಿತ್ತು. ಕೆಲವೊಮ್ಮೆ ರಾತ್ರಿ ಹೊತ್ತು ಊಟವಿಲ್ಲದೆ ಮಲಗಬೇಕಾಗುತ್ತಿತ್ತು. ಅನೇಕ ಸಾರಿ ದೇಶಪ್ರೇಮಿ ಜನರು ಕೊಟ್ಟ ಅಲ್ಪ ಸ್ವಲ್ಪ ಹಣದ ಮೇಲೆಯೇ ಹೊಟ್ಟೆ ತುಂಬಿಸಿಕೊಳ್ಳಬೇಕಾಗುತ್ತಿತ್ತು. ಮಾದಯ್ಯಗೌಡರು ಅದಷ್ಟು ಕಡಿಮೆ ಹಣ ಖರ್ಚು ಮಾಡಲು ಪ್ರಾರಂಭಿಸಿದರು. ಬೆಂಗಳೂರಿನ ಅರಳೆಪೇಟೆಯಲ್ಲಿ ಕಾಂಗ್ರೆಸ್ ಆಫೀಸ್ಸಿದ್ದಾಗ ತಮ್ಮ ಸ್ನೇಹಿತ ನಿಜಲಿಂಗಪ್ಪನವರನ್ನು ಬೇಟಿ ಮಾಡಲು ಹೋಗುತ್ತಿದ್ದರು. ಹೋಟೆಲಿಗೆ ಹೋಗಿ ಊಟ ಮಾಡಲು ಅವರಿಗೆ ಸಾಧ್ಯವಾಗುತಿರಲಿಲ್ಲ. ಎರಡೋ ಮೂರೋ ಪ್ಯಾಕೇಟ್ ಮೊಸರನ್ನ; ಕೆಲವೊಮ್ಮೆ ಚಿತ್ರಾನ್ನ ತರಿಸಿಕೊಂಡು ಊಟ ಮಾಡುತ್ತಿದ್ದರು. ಹೋಟೆಲ್‌ನ ರೂಂ ಹಿಡಿದು ಮಲಗಲು ಬಾಡಿಗೆ ಕೊಡಲು ದುಡ್ಡು ಇರುತ್ತಿರಲಿಲ್ಲ. ಕಾಂಗ್ರೆಸ್ ಪ್ರಚಾರದ ಸಮಯದಲ್ಲಿ ಸ್ವಾತಂತ್ರ್ಯದ ಬಗೆಗೆ ಜನರಲ್ಲಿ ಜಾಗೃತಿ ಮೂಡಿಸಲು ಬರೀ ತಿರುಗಾಟ ಮಾಡಬೇಕಾಗುತ್ತಿತ್ತು. ಗಾಂಧೀಜಿಯವರ ಕರೆಯ ಮೇರೆಗೆ ಬ್ರಿಟಿಷ್ ಸರ್ಕಾರದ ವಿರುದ್ಧ ಮಾಡುತ್ತಿದ್ದ ಚಳುವಳಿಗಳಲ್ಲಿ ಕೆಲವು ಊರುಗಳಲ್ಲಿ ಯಾರ ಮನೆಗಾದರೂ ಹೋದರೆ ಆ ಮನೆಯವರು ಸಂತೋಷದಿಂದ ಹೊಟ್ಟೆ ತುಂಬಾ ಊಟ ಬಡಿಸುತ್ತಿದ್ದರು. ತಿಂಡಿ–ತಿನಿಸು ಕೊಡುತ್ತಿದ್ದರು, ದೇವರಂತೆ ಕಾಣುತ್ತಿದ್ದರು. ಮಹಾತ್ಮಾ ಗಾಂಧೀಜಿಯವರ ದೇಶಪ್ರೇಮದ ಮೋಡಿ ಮತ್ತು ಪ್ರಭಾವಲಯವೇ ಅಂತಹುದು. ಕಾರ್ಯಕರ್ತರಂತೆ ಪಕ್ಷದ ಮುಖಂಡರೂ ಹಗಲಿರುಳೆನ್ನದೆ,

ಊಟ ನಿದ್ರೆಯಿಲ್ಲದೆ ಶ್ರಮವಹಿಸಿ ದುಡಿಯುತ್ತಿದ್ದರು. ಇದರಲ್ಲಿ ಮಾದಯ್ಯಗೌಡರ ದೇಶಪ್ರೇಮ, ಸ್ವಾತಂತ್ರ್ಯಪ್ರೇಮ ಎದ್ದು ಕಾಣುತ್ತಿತ್ತು.

ನಗರ ಪಟ್ಟಣಗಳಲ್ಲದೇ ಹಳ್ಳಿ-ಹಳ್ಳಿಗಳಲ್ಲಿಯೂ ಸಾಮಾನ್ಯ ಜನರವರೆಗೂ ಗಾಂಧೀಜಿಯವರ ಪ್ರಭಾವ ಗಾಢವಾಗಿ ಪ್ರಚಾರಗೊಂಡಿತು. ಇತರ ಬಹುಪಾಲು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರಂತೆ ಮಾದಯ್ಯಗೌಡರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಆಗ ತಿಂಗಳಿಗೆ ಸಾವಿರಾರು ರೂಪಾಯಿ ಗಳಿಸುತ್ತಿದ್ದರು. ತಮ್ಮ ಲಾಭದಾಯಕವಾದ ವಕೀಲ ವೃತ್ತಿ, ಮನೆ ಸಂಸಾರ ತೊರೆದು ಗಾಂಧೀಜಿಯವರ ದೇಶ ಸೇವೆ ಕರೆಗೆ ಓಗೊಟ್ಟು ಊರೂರು ತಿರುಗಿ ದೇಶ ಸೇವೆ ಮಾಡಿದರು. ಇದರಿಂದ ಮಾದಯ್ಯಗೌಡರನ್ನು ಕಂಡರೆ ತಾಲ್ಲೂಕಿನ ಸುತ್ತಮುತ್ತಲಿನ ಜನರು ಅಭಿಮಾನದಿಂದ ಕಾಣುತ್ತಿದ್ದರು. ಅಗತ್ಯ ಸನ್ನಿವೇಶಗಳಲ್ಲಿ ತಮ್ಮ ಕೆಲಸ ತಾವೇ ಮಾಡಿಕೊಳ್ಳುತ್ತಿದ್ದರು. ತಮ್ಮ ಜೊತೆಗೆ Hold-all ತೆಗೆದುಕೊಂಡು ಕಾಂಗ್ರೇಸ್ ಕಾರ್ಯಕರ್ತರ ಜೊತೆ ಯಾರ ಮನೆಯಲ್ಲಾದರೂ ಎಷ್ಟು ಹೊತ್ತಿಗಾದರೂ ಉಂಡು ಮಲಗುತ್ತಿದ್ದರು. ಮಹಾತ್ಮಾ ಗಾಂಧೀಜಿಯವರಂತೆ ಭಾರತ ಮಾತೆಗೆ ಸಂಪೂರ್ಣ ನಿಷ್ಠೆ ಹೊಂದಿದ್ದ ಗೌಡರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದು ಅಳಿಲು ಸೇವೆ ಮಾತ್ರ ಎಂಬ ವಿನಯವನ್ನು ತೋರಿದರು. ಭಾರತದ ವಿಮೋಚನೆ ಜೀವನದ ಪರಮ ಗುರಿಯಾಗಿಟ್ಟುಕೊಂಡರು. ಟಿ.ಸುಬ್ರಮಣ್ಯಂ, ಕೆ.ಟಿ.ಭಾಷ್ಯಂ, ಎಚ್.ಸಿದ್ದಯ್ಯ, ಎಚ್.ಕೆ.ವೀರಣ್ಣಗೌಡರು, ಕೆ.ಸಿ.ರೆಡ್ಡಿಯವರು, ಎಚ್.ಸಿ.ದಾಸಪ್ಪನವರು, ಎಸ್.ನಿಜಲಿಂಗಪ್ಪನವರು, ಹರ್ಡೀಕರ್ ಮಂಜಪ್ಪನವರು, ಕೆಂಗಲ್ ಹನುಮಂತಯ್ಯನವರು ಅವರೆಲ್ಲಾ ಬಹಳ ಚನ್ನಾಗಿ ದೇಶಪ್ರೇಮ, ಸ್ವಾತಂತ್ರ್ಯ ಪಡೆಯುವಿಕೆ, ದೇಶದ ಅಭಿವೃದ್ಧಿ, ಸಾಮಾಜಿಕ ಸಾಮರಸ್ಯ, ಕುಟುಂಬ ವಾತ್ಸಲ್ಯ ಮುಂತಾದ ಒಳ್ಳೆಯ ವಿಚಾರಗಳ ಬಗೆಗೆ ಬಹಳ ಸೊಗಸಾಗಿ ಭಾಷಣ ಮಾಡುತ್ತಿದ್ದರು. ಈ ಮುಖಂಡರ ಭಾಷಣ ಕೇಳುತ್ತಿದ್ದ ಜನ ಸಾಮಾನ್ಯರು ಎವೆಯಿಕ್ಕದೆ ನೋಡುತ್ತಾ ಅಲುಗಾಡದೆ ಭಾಷಣ ಕೇಳುತ್ತಿದ್ದರು. ಚಪ್ಪಾಳೆಯ ಸುರಿಮಳೆ ಆಗುತ್ತಿತ್ತು. ಮಾದಯ್ಯಗೌಡರು ನಿಧಾನವಾಗಿ ಎಷ್ಟು ಅವಶ್ಯಕವೋ ಅಷ್ಟು ಮಾತನಾಡಿ ಈ ಗಣ್ಯರಿಗೆ ಭಾಷಣ ಮಾಡಲು ಸಮಯಾವಕಾಶ ನೀಡುತ್ತಿದ್ದ ಸಂಯಮಿಯಾಗಿದ್ದರು.

೧೯೪೦ರಲ್ಲಿ ಶಾಸನ ಸಭೆಯ ಚುನಾವಣೆಗಳು ನಡೆದವು. ಜನರ ಒಲವು ಸಂಪೂರ್ಣವಾಗಿ ಕಾಂಗ್ರೆಸ್ಸಿನ ಕಡೆ ಇದ್ದುದ್ದರಿಂದ ಚುನಾವಣೆಗೆ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿದ್ದ ೧೩೩ ಉಮೇದುವಾರರ ಪೈಕಿ ೧೧೯ ಮಂದಿ ಆಯ್ಕೆಯಾದರು. ಆಗ ಸರ್‌ಮಿರ್ಜಾಇಸ್ಮಾಯಿಲ್‌ರವರು ದಿವಾನರಾಗಿದ್ದರು. ದಿವಾನರಿಗೂ ಮತ್ತು ಕಾಂಗ್ರೆಸ್ ಮಧ್ಯೆ ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಬಹಳಷ್ಟು

ಉಂಟಾದವು. ವಿವಿಧ ಕಾರಣಗಳಿಂದ ಮಿರ್ಜಾರವರು ಸ್ವಯಂ ನಿವೃತ್ತಿ ಪಡೆದುಕೊಂಡ ನಂತರ ಎನ್.ಮಾಧವರಾವ್ ಮೈಸೂರು ಸಂಸ್ಥಾನದ ದಿವಾನರಾದರು. ಅಷ್ಟರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಯಿತು. ಕ್ರಿಪ್ಸ್ ಸಂಧಾನ ಮುರಿದು ಬಿದ್ದ ಮೇಲೆ ರಾಷ್ಟ್ರೀಯ ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿ ಘೋಷಣೆ ಮಾಡಿತು. ಈ ಎರಡು ಪದದ ನಿರ್ಣಯ ಬ್ರಿಟಿಷ್‌ರ ಎದೆಗೆ ನೇರವಾಗಿ ಇಟ್ಟ ಮದ್ದುಗುಂಡಿನಂತೆ ಪರಿಣಾಮಕಾರಿಯಾಯಿತು. ಈ ಚಳುವಳಿಯಲ್ಲೂ ಮಾದಯ್ಯಗೌಡರು, ಕೆ.ಸುಬ್ಬರಾವ್, ವಿ.ವೆಂಕಟಪ್ಪ, ಕೆಂಗಲ್ ಹನುಮಂತಯ್ಯ ಮುಂತಾದ ಧುರೀಣರೊಂದಿಗೆ ಹಿಂದಿನಂತೆಯೇ ಸರ್ವ ಸಮರ್ಪಣ ಭಾವಯಿಂದ ಪಾಲ್ಗೊಂಡರು.

ಗಾಂಧೀಜಿ ಮೊದಲುಗೊಂಡು ಬಹಳಷ್ಟು ರಾಷ್ಟ್ರನಾಯಕರ ಬಂಧನವಾಯಿತು. ಕಾಂಗ್ರೆಸ್ ನ್ಯಾಯಬಾಹಿರ ಸಂಸ್ಥೆ ಎಂದು ಪರಿಗಣಿಸಲ್ಪಟ್ಟಿತು. ಚಳುವಳಿಗೆ ಮಾರ್ಗದರ್ಶನ ನೀಡುವವರು ಯಾರೂ ಇಲ್ಲದಂತಾಯಿತು. ಮೈಸೂರು ಸಂಸ್ಥಾನದಲ್ಲಿ ಚಳುವಳಿಯನ್ನು ಚುರುಕುಗೊಳಿಸಲು ಸರ್ದಾರ್‌ವೆಂಕಟರಾಮಯ್ಯ, ಎ.ಜೆ.ರಾಮಚಂದ್ರರಾಯರು ತೀರ್ಮಾನಿಸಿದರು. ೧೯೪೨ರಲ್ಲಿ ವೆಂಕಟಪ್ಪನವರ ಊರಾದ ತಿಟ್ಟಮಾರನಹಳ್ಳಿಯಲ್ಲಿ ಮೈಸೂರು ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವನ್ನು ನೆಹರೂ ನಗರದಲ್ಲಿ ನಡೆಸಲು ಮಾದಯ್ಯಗೌಡರು, ಎಚ್.ಕೆ.ವೀರಣ್ಣಗೌಡರು, ಕೆ.ಸುಬ್ಬರಾವ್, ಸಿ.ವೆಂಕಟಪ್ಪ, ಎಂ.ಎನ್.ಈಶ್ವರ್‌ರಾವ್, ವಿ.ಗಿರಿಯಪ್ಪ, ಬಸವಲಿಂಗೇಗೌಡರು, ಮೂಡಲಗಿರಿಯಯ್ಯ, ಬಿ.ನಂಜಪ್ಪ, ಇವರೆಲ್ಲಾ ತೀರ್ಮಾನಿಸಿದರು. ಅದರಂತೆ ಆ ಅಧಿವೇಶನಕ್ಕೆ ವಿ.ವೆಂಕಟಪ್ಪನವರು ಸ್ವಾಗತಾಧ್ಯಕ್ಷರಾದರು. ತಾಳಕೆರೆ ಸುಬ್ರಮಣ್ಯಂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಮೈಸೂರು ಕಾಂಗ್ರೆಸ್ಸಿನ ಅನೇಕ ಧುರೀಣರು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಶಿವಪುರದ ಸತ್ಯಾಗ್ರಹದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಭಾಗವಹಿಸಿದ ಸಂದರ್ಭದಲ್ಲಿ ಯಶೋಧರಮ್ಮ-ದಾಸಪ್ಪ ದಂಪತಿಗಳ ಮಕ್ಕಳಾದ ರಾಮದಾಸ್ ಮತ್ತು ತುಳಸೀದಾಸ್ ಇನ್ನೂ ಚಿಕ್ಕವರು. ಅಲ್ಲಿ ಹರಿಯುತ್ತಿದ್ದ ಕಾಲುವೆಗಳಲ್ಲಿ ಪೇಪರ್ ದೋಣಿಗಳನ್ನು ನೀರಿನ ಮೇಲೆ ಹರಿಸುತ್ತಾ ಆಟವಾಡುತ್ತಿದ್ದರು. ರಾಮದಾಸ್ ಈ ಮಧ್ಯೆ ಓಡಿ ಬಂದು ಗೌಡರನ್ನು ಪ್ರಶ್ನಿಸುತ್ತಿದ್ದರಂತೆ. "ನಮ್ಮಮ್ಮನ್ನ ಪೋಲಿಸ್ರು ಬಂದು ಹಿಡಕ್ಕೊಂಡು ಹೋಗ್ತಾರಾ?, ಜೈಲಿಗೆ ಹಾಕ್ತಾರಾ?" ಎಂದು. ಮುಗ್ಧತೆಯಿಂದ ಮತ್ತೆ ಮತ್ತೆ ಪ್ರಶ್ನಿಸುತ್ತಿದ್ದ ಹುಡುಗನಿಗೆ ಗೌಡರು ಸಮರ್ಪಕವಾದ ಉತ್ತರ ನೀಡಿ ಸಮಾಧಾನ ಪಡಿಸುತ್ತಿದ್ದರು. ತುಳಸೀದಾಸಪ್ಪನವರು ಗೌಡರನ್ನು ಬಹಳಷ್ಟು ನೆನಪಿಸಿ ಕೊಳ್ಳುತ್ತಿದ್ದರು. ಗೌಡರ ಮಗಳು ಡಾ.ಸರಸ್ವತಿ ರಾಜೇಂದ್ರರ ಬಳಿ ತಮ್ಮ ಬಾಲ್ಯದ ದಿನಗಳಲ್ಲಿ ಕಂಡ ಗೌಡರ ಸೇವಾ ಮನೋಭಾವದ ಬಗೆಗೆ ಪ್ರೀತಿಪೂರ್ವಕವಾಗಿ ಹೇಳುತ್ತಿದ್ದರು.

ಮೈಸೂರು ಕಾಂಗ್ರೆಸ್ಸಿನ 'ಕಿಂಗ್ ಮೇಕರ್' ಎಂಬ ವಿಶೇಷಣದಿಂದ ಕರೆಯಲ್ಪಡುತ್ತಿದ್ದ ಸಾಹುಕಾರ್ ಚನ್ನಯ್ಯನವರ ಆಪ್ತ ವಲಯದಲ್ಲಿಯೂ ಗೌಡರು ಸೇರಿದ್ದರು. ಚಾಣಾಕ್ಷರಾಗಿದ್ದ ಅವರು ದಕ್ಷ ರಾಜಕಾರಣಿಯಾಗಿದ್ದರು. ಅವರಿಗೆ ಬಹಳಷ್ಟು ಯುವಕರು ಹಿಂಬಾಲಕರಾಗಿದ್ದರು. ವಿದ್ಯಾರ್ಥಿನಿಲಯಗಳಿಗೆ, ವಿದ್ಯಾರ್ಥಿ ಸಂಘಗಳಿಗೆ, ಬಡ ವಿದ್ಯಾರ್ಥಿಗಳಿಗೆ ಬಹಳಷ್ಟು ಹಣ ಸಹಾಯ ಮಾಡಿದ್ದರು. ಚನ್ನಯ್ಯನವರು ತಮ್ಮದೇ ಮಾತು ನಡೆಯಬೇಕು ಎಂಬ ಚಲದಂಕಮಲ್ಲರಾಗಿದ್ದರು. ತಮ್ಮ ಕೆಲಸಗಳನ್ನು ಹೇಗೋ ಸಾಧಿಸಿಯೇ ಬಿಡುತ್ತಿದ್ದರು. ಕೆ.ಸಿ.ರೆಡ್ಡಿ, ಕೆ.ಟಿ.ಭಾಷಂ, ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯನವರು ಇನ್ನಿತರ ಕಾಂಗ್ರೇಸ್ ಮುಖಂಡರು ಉನ್ನತ ಶಿಕ್ಷಣ ಪಡೆದವರಾಗಿದ್ದು, ಅನುಭವಿಗಳಾಗಿದ್ದರೂ, ಒಂದು ಕಾಲದಲ್ಲಿ, ಚನ್ನಯ್ಯನವರ ಎದುರಿಗೆ ನಿಲ್ಲಲು ಹಿಂದೇಟು ಹಾಕುತ್ತಿದ್ದರು. ಗೌಡರಿಗೆ ೧೯೫೨ರ ಪ್ರಥಮ ಲೋಕ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಗೆ ಟಿಕೇಟ್ ನೀಡಲು ಅಂದಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀಎಚ್.ಸಿ.ದಾಸಪ್ಪನವರಿಗೆ, ಕಾಂಗ್ರೇಸ್ ಮುಖಂಡರಾಗಿದ್ದ ಕೆ.ಸಿ.ರೆಡ್ಡಿ, ಕೆ.ಟಿ.ಭಾಷಂ, ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯನವರಿಗೆ ತಿಳಿಸಿದ್ದರು. ಗೌಡರು ಲೋಕ ಸಭಾ ಸದಸ್ಯರಾಗಿಯೂ ಆಯ್ಕೆಯಾದರು.

ಗಾಂಧೀಜಿಯವರ ಕರೆಯಂತೆ, ಇತರ ದೇಶಪ್ರೇಮಿ ವಕೀಲರಂತೆ ಗೌಡರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅನೇಕರಿಗೆ ಕೋರ್ಟಿನಲ್ಲಿ ಶಿಕ್ಷೆಯಾಯಿತು. ವಕೀಲ ವೃತ್ತಿಯ ಪರವಾನಗಿಯನ್ನು ಸರ್ಕಾರವು ಹಿಂದಕ್ಕೆ ಪಡೆಯಲು ಯೋಚಿಸಿತು. ಗೌಡರು ಜೈಲಿಗೆ ಹೋದಾಗಿನಿಂದ ವಕೀಲಿ ವೃತ್ತಿ ನಿಧಾನವಾಯಿತು. ವಕೀಲ ವೃತ್ತಿಯನ್ನು ನಿಲ್ಲಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದಾಗ ವಕೀಲ ವೃತ್ತಿಯಲ್ಲಿ ಸಂಪಾದನೆ ಮಾಡಿ ಇಟ್ಟುಕೊಂಡಿದ್ದ ಹಣ ದಿನ ದಿನವೂ ಕರಗುತಿತ್ತು. ಮನೆಗೆ ಬಂಧು-ಬಾಂಧವರ ಆಗಮನ, ವಂಶದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು, ಸ್ವಾತಂತ್ರ್ಯ ಹೋರಾಟಗಾರರ ಕೈ ಖರ್ಚುಗಳಿಗೆ ನೆರವು ನೀಡುತ್ತಿದ್ದಂತೆ ಹಣ ದಿನದಿಂದ ದಿನಕ್ಕೆ ಕರಗುತ್ತಾ ಹೋಯಿತು. ಆ ಸಮಯದಲ್ಲಿ ಅಣ್ಣ ಅಪ್ಪಾಜಿಗೌಡರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ತಮ್ಮನಿಗೆ ತ್ರಿಕರಣ ಶುದ್ಧಿಯಿಂದ ಪ್ರೋತ್ಸಾಹ ನೀಡಿದರು. ತಮ್ಮನ ತ್ಯಾಗಮಯ ಜೀವನಕ್ಕೆ ಹೆಮ್ಮೆಪಟ್ಟರು.

೧೯೪೨ರ ಚಳುವಳಿಯ ಫಲವಾಗಿ ಬ್ರಿಟಿಷರು ಇನ್ನು ಭಾರತವನ್ನು ಆಳುವುದು ಸಾಧ್ಯವಿಲ್ಲವೆಂದು ತಿಳಿದುಕೊಂಡರು. ೧೯೪೭ ಆಗಸ್ಟ್ ೧೫ರಂದು ಭಾರತೀಯರಿಗೆ ಸ್ವಾತಂತ್ರ್ಯ ನೀಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಹ ಕೆಲವು ರಾಜರುಗಳು

ಆಳುತ್ತಿದ್ದ ಆಶ್ರಿತ ಸಂಸ್ಥಾನಗಳಲ್ಲಿ ತಮ್ಮ ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟುಕೊಡಲು ಸಿದ್ಧರಾಗಲಿಲ್ಲ. ಇದನ್ನು ಮನಗಂಡ ಮೈಸೂರು ಕಾಂಗ್ರೆಸ್ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಸೆಪ್ಟಂಬರ್ ೧೯೪೭ರಲ್ಲಿ ಮೈಸೂರು ಚಲೋ ಚಳುವಳಿ ಆರಂಭಿಸಿತು. ಜೈಲುಗಳೆಲ್ಲ ಸತ್ಯಾಗ್ರಹಿಗಳಿಂದ ತುಂಬಿ ಹೋದವು. ಶ್ರೀಮನ್ಮಹಾರಾಜರ ಸರ್ಕಾರ ಕಾಂಗ್ರೆಸ್ಸಿನೊಡನೆ ಸಂಧಾನಕ್ಕೆ ಬಂದಿತು. ನಂತರ ಮೈಸೂರು ಜನತೆಯ ಪ್ರತಿನಿಧಿಗಳಾದ ಶ್ರೀಕೆ.ಸಿ.ರೆಡ್ಡಿಯವರಿಗೆ ಅಧಿಕಾರ ಹಸ್ತಾಂತರ ಮಾಡಿ ತಮ್ಮ ಸರ್ಕಾರವನ್ನು ವಿಸರ್ಜನೆಗೊಳಿಸಿದರು.

ಹೀಗೆ ಶಿವಪುರ ಧ್ವಜ ಸತ್ಯಾಗ್ರಹದಿಂದ ಆರಂಭಿಸಲಾದ ಮೈಸೂರು ಕಾಂಗ್ರೆಸ್ ಅನೇಕ ಹೋರಾಟಗಳನ್ನು ನಡೆಸಿ ಅಂತಿಮವಾಗಿ ೧೯೪೭ನೇ ಅಕ್ಟೋಬರ್ ತಿಂಗಳಲ್ಲಿ ಪ್ರಜಾರಾಜ್ಯವನ್ನು ಸ್ಥಾಪಿಸಿತು. ಈ ಗೆಲುವಿನ ಹಿಂದೆ ಮಾದಯ್ಯಗೌಡರಂತಹ ಅನೇಕ ಹೋರಾಟಗಾರರ ತ್ಯಾಗ ಬಲಿದಾನಗಳು ಇವೆ. ಮಾದಯ್ಯಗೌಡರು ಸಾಕಷ್ಟು ವರಮಾನವನ್ನು ತಂದು ಕೊಡುತ್ತಿದ್ದ ವಕೀಲಿ ವೃತ್ತಿಯನ್ನು ನಿಲ್ಲಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಅವರ ತ್ಯಾಗಮಯ ಬದುಕು ಅನುಕರಣೀಯವಾದುದಾಗಿದೆ.

ಮಾದಯ್ಯಗೌಡರು ಅಪ್ಪಟ ಕಾಂಗ್ರೆಸಿಗರಾಗಿ ನಿಷ್ಠೆಯಿಂದ ಸಾಮಾನ್ಯ ಕಾರ್ಯಕರ್ತರಂತೆ ಕೆಲಸ ಮಾಡುತ್ತ ಬಂದವರು. ಯಾವ ಉನ್ನತ ಪದವಿಗಾಗಲಿ, ಸ್ಥಾನಮಾನಗಳಿಗಾಗಲಿ ಆಸೆ ಪಡದೆ ದೇಶಭಕ್ತಿ ಹಾಗೂ ಸ್ವಾತಂತ್ರ್ಯ ಪ್ರೇಮದಿಂದ ಶ್ರಮಿಸಿದವರು. ಅವರ ಸರಳತೆ, ಸೌಜನ್ಯ, ಯಾವುದಕ್ಕೂ ಆಸೆಪಡದ ಮನೋವೃತ್ತಿ ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರಗು ತಂದುಕೊಟ್ಟಿತ್ತು. ಜನ ಸಾಮಾನ್ಯರು ಅವರನ್ನು ಪ್ರೀತಿ ಗೌರವಗಳಿಂದ ಕಾಣುವಂತೆಯೇ, ಪಕ್ಷದ ಮುಖಂಡರೂ ಅವರನ್ನು ಅಷ್ಟೇ ಪ್ರೀತಿ ಗೌರವಗಳಿಂದ ನೋಡಿಕೊಳ್ಳುತ್ತಿದ್ದರು. ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ, ಸ್ವಾತಂತ್ರ್ಯಪ್ರಿಯ ಹೋರಾಟಗಾರರಾಗಿ ಅವರು ವಹಿಸಿದ ಪಾತ್ರ ಅವಿಸ್ಮರಣೀಯ.

❖

## ೭. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಮಾದಯ್ಯಗೌಡರು

ಕನ್ನಡ ನವೋದಯದ ಆಚಾರ್ಯ, ಕನ್ನಡದ ಕಣ್ವ ಪ್ರೊ.ಬಿ.ಎಂ.ಶ್ರೀಕಂಠಯ್ಯನವರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರಥಮ ಅಧ್ಯಕ್ಷರಾಗಿದ್ದರು. ಬಿ.ಎಂ.ಶ್ರೀ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದವರು. ನಂತರ ಇದೇ ವಿಶ್ವವಿದ್ಯಾನಿಲಯದ ಕುಲಸಚಿವರಾದರು. ಬಿ.ಎಂ.ಶ್ರೀಯವರು ಧಾರವಾಡದ ಜನತಾ ಕಾಲೇಜಿನ ಪ್ರಿನ್ಸಿಪಾಲರಾಗಿ ಹೋದ ನಂತರ, ಶ್ರೀಎಸ್.ಬಾಲಕೃಷ್ಣಯ್ಯನವರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಎರಡನೆಯ ಅಧ್ಯಕ್ಷರಾದರು. ಬಾಲಕೃಷ್ಣಯ್ಯನವರಿಗೆ ಜೂನ್ ೧೯೪೪ರ ಸಮಯದಲ್ಲಿ ರಾಜ್ಯದ ಹೈಕೋರ್ಟ್‌ನಲ್ಲಿ ದೊರೆತ ಆಡಳಿತ ಹುದ್ದೆಯ ಕಾರಣದಿಂದ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದರು. ಆಗ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದವರು ಉನ್ನತ ಶಿಕ್ಷಣ ಪಡೆದಿದ್ದ ಸ್ವಾತಂತ್ರ್ಯ ಹೋರಾಟಗಾರ ಟಿ.ಮಾದಯ್ಯಗೌಡರು. ಗೌಡರು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಚನ್ನಾಗಿ ಅರಿತು ಕೊಂಡಿದ್ದವರು. ಗ್ರಾಮೀಣಾಭಿವೃದ್ಧಿ ಹಾಗೂ ಅದಕ್ಕೆ ಪೂರಕವಾಗಿ ಬೇಕಾಗಿದ್ದ ಶಿಕ್ಷಣದ ಮಹತ್ವವನ್ನು ಅರಿತಿದ್ದವರು. ಈ ಎಲ್ಲಾ ಕಾರಣಗಳಿಂದ

ಸ್ವಾಭಾವಿಕವಾಗಿ ರಾಜ್ಯ ಸರ್ಕಾರವು ಮಾದಯ್ಯಗೌಡರನ್ನು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆಗ ವಯಸ್ಕರ ಶಿಕ್ಷಣ ಸಮಿತಿಯ ಮುಖ್ಯಕಾರ್ಯನಿರ್ವಹಣಾ ಅಧಿಕಾರಿಯಾಗಿ ಟಿ.ವಿ.ಕೃಷ್ಣರಾವ್‌ರವರನ್ನು ಸರ್ಕಾರ ನೇಮಿಸಿತು. ನ.ಭದ್ರಯ್ಯನವರು ಸಮಿತಿಯ ಕಾರ್ಯದರ್ಶಿಗಳಾಗಿದ್ದರು. ಗೌಡರು ಮೈಸೂರಿನಲ್ಲಿಯೇ ವಾಸಕ್ಕೆ ಮನೆ ಮಾಡಿಕೊಳ್ಳುವುದಕ್ಕೆ ಹಣಕಾಸಿನ ವ್ಯವಸ್ಥೆ ಇತ್ತು. ಆದರೆ ಗೌಡರು ರಾಮನಗರದಿಂದ ಮೈಸೂರಿಗೆ ರೈಲಿನಲ್ಲಿ ಬರುತ್ತಿದ್ದರು. ಆಗ ಗೌಡರ ಮನೆ ರಾಮನಗರದ ಮೈಸೂರು-ಬೆಂಗಳೂರು ಮೆಯಿನ್ ರೋಡಿನ ಸಾಲಿನಲ್ಲಿತ್ತು. ಪ್ರತಿ ದಿನವೂ ಸಮಿತಿಯ ಕಛೇರಿಗೆ ಸಕಾಲದಲ್ಲಿ ಬಂದು ಸಂಜೆಯವರೆವಿಗೂ ಇದ್ದು ಕೆಲಸ ಮಾಡುತ್ತಿದ್ದರು. ಆಗ ವಯಸ್ಕರ ಶಿಕ್ಷಣ ಸಮಿತಿಯ ಕಛೇರಿಯು ಕೃಷ್ಣಮೂರ್ತಿಪುರಂನ ಬಲ್ಲಾಳ್ ಹೋಟೆಲ್ ಹತ್ತಿರದ ಸರ್ಕಲ್ ಬಳಿ ಇತ್ತು. ಆ ಕಟ್ಟಡವು ಈಗಲೂ ಅಲ್ಲಿದೆ. ಗೌಡರು ೧೯೪೮ ರಿಂದ ೧೯೫೫ ರವರೆಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿದರು. ಈ ಮಧ್ಯೆ ಬೆಂಗಳೂರು(ದಕ್ಷಿಣ) ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಲೋಕಸಭೆ ಸದಸ್ಯರಾಗಿ ಆಯ್ಕೆಯಾದರೂ ರಾಜ್ಯ ಸರ್ಕಾರವು ವಯಸ್ಕರ ಶಿಕ್ಷಣ ಸಮಿತಿಯ ಕೆಲಸ ಕಾರ್ಯಗಳು ಸುಸೂತ್ರವಾಗಿ ಮುಂದುವರಿಯಲು ಗೌಡರನ್ನೇ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಮುಂದುವರಿಸಿತು.

ಮಾದಯ್ಯಗೌಡರು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದ ಕಾಲವನ್ನು ಇತಿಹಾಸದಲ್ಲಿ ಸುವರ್ಣಕಾಲವೆಂದೇ ದಾಖಲಾಗಿದೆ. ಬಿ.ಎಂ.ಶ್ರೀಯವರಿಗೂ ಮತ್ತು ಮಾದಯ್ಯಗೌಡರಿಗೂ ಮಹಾರಾಜ ಕಾಲೇಜಿನ ಕನ್ನಡ ಸಂಘದ ಮೂಲಕ ಪರಸ್ಪರ ಪರಿಚಯವಿತ್ತು. ಬಿ.ಎಂ.ಶ್ರೀಯವರು ವಿದ್ಯೆಯ ಮಹತ್ವದ ಬಗೆಗೆ ಹೇಳುತ್ತಿದ್ದ ವಿಚಾರಗಳನ್ನು ಮಾದಯ್ಯಗೌಡರು ತುಂಬಾ ಆಸಕ್ತಿಯಿಂದ ಕೇಳುತ್ತಿದ್ದರು. ಬಿ.ಎಂ.ಶ್ರೀಯವರು ೧೯೪೨ರ ಪ್ರಜಾಪ್ರತಿನಿಧಿ ಸಭೆಯ ಸೇರ್ಪಡೆ ಸಂದರ್ಭದಲ್ಲಿ ವಿದ್ಯೆಯ ಮಹತ್ವವನ್ನು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದ್ದರು: "ವಿದ್ಯೆ ಇಲ್ಲದವನು ಪಶುವೆಂತಲೂ ವಿದ್ಯೆಯಿಂದ ಅಮೃತವನ್ನು ಉಣ್ಣಬಹುದೆಂತಲೂ, ಯಾವುದೂ ಜ್ಞಾನಕ್ಕೆ ಸರಿಸಮಾನವಿಲ್ಲವೆಂತಲೂ ಹಿರಿಯರು ಹೇಳಿದ್ದಾರೆ. ಜ್ಞಾನಕ್ಕೆ ವಿದ್ಯೆಯೂ ವಿದ್ಯೆಗೆ ಓದು ಬರಹವು ತಳಹದಿ... ಸಮಿತಿಯವರು ಈ ರೀತಿ-ನೀತಿಗಳನ್ನು ಏರ್ಪಡಿಸಿ, ಅಕ್ಷರಮಾಲೆಯ ಪಟ, ಓದುವ ಮೊದಲ ಪುಸ್ತಕಗಳು, ವಯಸ್ಕರ ತಿಳುವಳಿಕೆಯ ಪುಸ್ತಕಮಾಲೆ, ಪುಸ್ತಕ ಭಂಡಾರ ಮುಂತಾದ ಪ್ರಕಟಣ ಕಾರ್ಯವನ್ನು ಕೈಗೊಂಡಿರುತ್ತಾರೆ... ನಾಡಹಿರಿಯರೆ, ತಮ್ಮ ಸಹಾನುಭೂತಿ, ಸಹಾಯ, ಸಲಹೆಗಳಿಂದ ಅಗಾಧವೂ, ಅಪಾರವೂ

ಆದ ಆದರೆ ಅತ್ಯಗತ್ಯವಾದ ನಮ್ಮ ಕಾರ್ಯದಲ್ಲಿ ನಮಗೆ ಧೈರ್ಯವೂ–ಮಾರ್ಗದರ್ಶನವೂ ಉಂಟಾಗುವುದೆಂಬ ನಂಬಿಕೆಯಿಂದ ಈ ಸಮ್ಮೇಳನ ಕರೆದಿರುತ್ತೇವೆ...ವಿದ್ಯಾವಂತರಾದ ಪ್ರಜೆಗಳ ಮೇಲೆ ಪ್ರಜಾಪ್ರಭುತ್ವ ನಿಂತಿದೆ ಎಂಬುದನ್ನು ಅರಿತವರು ಅದು ಬರಿಯ ಬಲವಲ್ಲ, ಬರಿಯ ಬಹುಮತರೇ ಅಲ್ಲ, ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಲ್ಲಾಳುಗಳ ಆಳ್ವಿಕೆ". ಬಿ.ಎಂ.ಶ್ರೀಯವರ ವಿದ್ಯೆಯ ಮಹತ್ವದ ಈ ಮಾತುಗಳಿಂದ ಅನಕ್ಷರಸ್ಥರಿಗೆ ಸಾಕ್ಷರತೆಯ ಅಗತ್ಯ ಎಷ್ಟು ಎಂಬುದನ್ನು ಅರಿಯಬಹುದಾಗಿದೆ. ಮಾದಯ್ಯಗೌಡರು ತಾವು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದಾಗ ಬಿ.ಎಂ.ಶ್ರೀಯವರ ಈ ಮೇಲೆ ತಿಳಿಸಿದ ಮಾತುಗಳನ್ನು ತಮ್ಮ ಭಾಷಣಗಳಲ್ಲಿ ಉದ್ಧರಿಸುತ್ತಿದ್ದರು.

ಬಿ.ಎಂ.ಶ್ರೀ ಕಾಲದಲ್ಲಿ ವಯಸ್ಕರ ಶಿಕ್ಷಣಕ್ಕೆ ಬರುತ್ತಿದ್ದ ಧನಸಹಾಯ ಪ್ರಾರಂಭದಲ್ಲಿ ೧೬,೦೦೦ ರೂಪಾಯಿಗಳಾಗಿದ್ದು, ನಂತರ ಧನ ಸಹಾಯವನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಯಿತು. ಅದು ಬ್ರಿಟಿಷರ ಆಳ್ವಿಕೆಯ ಕಾಲ; ಹಣಕಾಸು ಸುಲಭವಾಗಿ ಸಿಗುತ್ತಿರಲಿಲ್ಲ. ಬಿ.ಎಂ.ಶ್ರೀಯವರ ಅಧಿಕಾರಾವಧಿಯಲ್ಲಿ "ಬೆಳಕು" ಎಂಬ ವಾರಪತ್ರಿಕೆ ಪ್ರಕಟವಾಗುತ್ತಿದ್ದು, ಮಾದಯ್ಯಗೌಡರು ಆ ಪತ್ರಿಕೆಯ ಪ್ರಾರಂಭಿಕ ಚಂದಾದಾರರಲ್ಲೊಬ್ಬರು. ಬಾಲಕೃಷ್ಣಯ್ಯನವರ ಕಾಲದಲ್ಲಿ ರಚಿಸಲಾದ ವಿವಿಧ ಉಪಸಮಿತಿಗಳ ಸದಸ್ಯರಾಗಿ ಮಾದಯ್ಯಗೌಡರು ಕೆಲಸ ಮಾಡಿದ್ದರು. ಆ ಉಪಸಮಿತಿಗಳಲ್ಲಿ ತೀ.ನಂ.ಶ್ರೀ., ಬಿ.ಕುಪ್ಪುಸ್ವಾಮಿ, ಕೆ.ಎಸ್.ಆಚಾರ್ಯ, ಪ್ರೊ.ಅಬ್ದುಲ್ ಖಾದರ್‌ಸರ್ವರಿ, ಥಿಯೋಡಾರ್ ಮಾಣಿಕಲಾಲ್, ರಹಮತುನ್ನೀಸಾ ಬೇಗಮ್, ಗುಲಾಂಅಹಮದ್, ಕೆ.ಪಟ್ಟಾಭಿರಾಮಯ್ಯ, ಎ.ಎನ್.ಮೂರ್ತಿರಾವ್, ಎಸ್.ವಿ.ಶ್ರೀನಿವಾಸರಾವ್, ನ.ಭದ್ರಯ್ಯ, ವಿ.ಸೀತಾರಾಮಯ್ಯ, ಎಂ.ಆರ್.ಲಕ್ಷ್ಮಮ್ಮ, ಕೆ.ವಿ.ರಾಘವಾಚಾರ್, ನಾ.ಕಸ್ತೂರಿ, ಎಂ.ಎನ್.ಸೀತಮ್ಮ, ಜಿ.ಪಿ.ರಾಜರತ್ನಂ, ಶಿವರಾಮಕಾರಂತ, ನಟೇಶಮೊದಲಿಯಾರ್, ಓ.ಕೆ.ನಂಬಿಯಾರ್, ಡಾ.ಎಂ.ಸಿದ್ಧಲಿಂಗಯ್ಯ, ಕೆ.ವಿಶ್ವೇಶ್ವರಗೌಡ, ಜಿ.ಎಸ್.ಕುರುಪಾದ್, ಕುವೆಂಪು, ಎಸ್.ಬಿ.ಜೋಷಿ, ಎ.ಎನ್.ನರಸಿಂಹಯ್ಯ, ಡಾ.ಎಂ.ಎಚ್.ಕೃಷ್ಣ ಮುಂತಾದವರು ಇದ್ದರು.

ಬಾಲಕೃಷ್ಣಯ್ಯನವರ ಕಾಲದಲ್ಲಿ ನಡೆಯುತ್ತಿದ್ದ ೧೨ ಕಲಿಕಾ ಕೇಂದ್ರಗಳಲ್ಲಿ ಸಾಕ್ಷರತಾ ಕಾರ್ಯಕ್ರಮ, ಗ್ರಂಥಾಲಯ ಸೇವೆ, ಜನತಾಶಿಕ್ಷಣ, ಚಲನಚಿತ್ರ ಪ್ರದರ್ಶನ, ವಿದ್ಯಾಪೀಠಗಳ ರೂಪು ರೇಷೆಗಳ ತಯಾರಿಕೆ ಮುಂತಾದ ವಯಸ್ಕರ ಶಿಕ್ಷಣ ಅಭಿವೃದ್ಧಿಯ ಕಾರ್ಯಗಳಲ್ಲಿ ಮಾದಯ್ಯಗೌಡರು ಬಾಲಕೃಷ್ಣಯ್ಯನವರಿಗೆ ನೆರವಾಗಿದ್ದರು. ಬಾಲಕೃಷ್ಣಯ್ಯನವರ ಕಾಲದಲ್ಲಿ

ಆರಂಭವಾದ "ಪುಸ್ತಕ ಪ್ರಪಂಚ" ವಾರ ಪತ್ರಿಕೆಗೆ ಚಂದಾಹಣ ನೀಡಿದ ಮಾದಯ್ಯಗೌಡರು ತಮ್ಮ ಬಂಧು ಬಾಂಧವರು ಮತ್ತು ಸ್ನೇಹಿತರನ್ನು ಪುಸ್ತಕ ಪ್ರಪಂಚಕ್ಕೆ ಚಂದಾದಾರರನ್ನಾಗಿ ಮಾಡಿಸಿ "ಪುಸ್ತಕ ಪ್ರಪಂಚ" ಪ್ರಗತಿಗೊಳ್ಳಲು ನೆರವಾದರು. ಆ ಕಾಲದಲ್ಲಿ ವಯಸ್ಕರ ಶಿಕ್ಷಣ ಸಮಿತಿಯಿಂದ ವಿವಿಧ ಸಾಹಿತಿಗಳಿಂದ ಬರಹಗಾರರಿಂದ ಬರೆಯಿಸಿದ ೩೦ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡವು. ಮಾದಯ್ಯಗೌಡರು ಆ ಪುಸ್ತಕಗಳನ್ನು ಕೊಂಡುಕೊಳ್ಳುವುದರ ಜೊತೆಗೆ ಬೇರೆಯವರೂ ಕೊಂಡುಕೊಂಡು ವಯಸ್ಕರಶಿಕ್ಷಣ ಸಮಿತಿ ಪ್ರಕಟಣೆಗಳಿಗೆ ಪ್ರೋತ್ಸಾಹ ದೊರಕಿಸಿಕೊಟ್ಟರು.

ಮಾದಯ್ಯಗೌಡರು ಪ್ರಾರಂಭದಿಂದಲೂ ಕಲಾಭಿಮಾನಿಗಳು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ವಿವಿಧ ಸಂದರ್ಭಗಳಲ್ಲಿ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಗ್ರಾಮಕಲೆಗಳ ಬಗೆಗೆ ಮಾದಯ್ಯಗೌಡರಂತೆ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದ ಬಾಲಕೃಷ್ಣಯ್ಯನವರಿಗೂ ಬಹಳ ಅಭಿಮಾನವಿತ್ತು. ವಯಸ್ಕರ ಶಿಕ್ಷಣ ಸಮಿತಿಯ ಮೂಲಕ ಮಾದಯ್ಯಗೌಡರು, ಬಾಲಕೃಷ್ಣಯ್ಯ, ಶಿವರಾಮಕಾರಂತರೊಂದಿಗೆ ಕೈಜೋಡಿಸಿ ಸೂತ್ರದ ಗೊಂಬೆ, ಬಯಲಾಟ, ಜನಪದ ಗೀತೆಗಳು ಮುಂತಾದ ಕಾರ್ಯಕ್ರಮಗಳ ಮೂಲಕ ಅವುಗಳು ನಾಡಿನಲ್ಲಿ ಪುನರುಜ್ಜೀವನಗೊಳ್ಳಲು ನೆರವಾಗುತ್ತಿದ್ದರು.

ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಮಾದಯ್ಯಗೌಡರು ೧೯೪೮ ರಿಂದ ೧೯೫೫ ರವರೆಗೆ ಸೇವೆಸಲ್ಲಿಸಿದರು. ಈ ಅವಧಿಯಲ್ಲಿ ಇವರ ಸ್ನೇಹಿತರಾಗಿದ್ದ ಕೆ.ಸಿ.ರೆಡ್ಡಿಯವರು, ಕಡಿದಾಳ್ ಮಂಜಪ್ಪನವರು, ಬಿ.ಡಿ.ಜತ್ತಿಯವರು, ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾದರು. ಬಿ.ಎಂ.ಶ್ರೀ.ಯವರ ವಿದ್ಯೆಯ ವಿಚಾರಧಾರೆ, ಬಾಲಕೃಷ್ಣಯ್ಯನವರ ಜೊತೆಗೂಡಿ ಮಾಡಿದ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ಮಾದಯ್ಯಗೌಡರಿಗೆ ಈ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಒದಗಿಸಿಕೊಟ್ಟಿದ್ದವು. ವಯಸ್ಕರ ಶಿಕ್ಷಣ ಸಮಿತಿ ಈ ವೇಳೆಗಾಗಲೇ ಭದ್ರ ಬುನಾದಿಯನ್ನು ಹೊಂದಿತ್ತು. ವಯಸ್ಕರ ಶಿಕ್ಷಣ ಸಮಿತಿಯು ದೇಶವಿದೇಶಗಳಲ್ಲಿ ಹೆಸರುಗಳಿಸಲು ಅವಕಾಶವಾಯಿತು. ಯುನೆಸ್ಕೋ ಸಂಸ್ಥೆಯು ಮತ್ತು ಡೆನ್ಮಾರ್ಕ್ ದೇಶವು ಮಾದಯ್ಯಗೌಡರ ಮುಖಂಡತ್ವ ಮತ್ತು ಕಾರ್ಯ ವೈಖರಿಯನ್ನು ಮೆಚ್ಚಿಕೊಂಡು ಹಣಕಾಸು ಮತ್ತು ಹಣಕಾಸೇತರ ನೆರವು ನೀಡಲು ಪ್ರಾರಂಭಿಸಿದವು.

ಬಾಲಕೃಷ್ಣಯ್ಯನವರು ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾಗಿದ್ದ ಸಮಯದಲ್ಲಿ ತ್ರಿವೇಂಡ್ರಮ್‌ನಲ್ಲಿ ಸಂಘಟನೆಗೊಂಡಿದ್ದ All India Adult Education Conference (೧೯೪೬)ನಲ್ಲಿ ಭಾಗವಹಿಸಲು ಹೋಗುವಾಗ ಮಾದಯ್ಯಗೌಡರನ್ನು ತಮ್ಮ ಜೊತೆಗೆ

ಕರೆದುಕೊಂಡು ಹೋಗಿದ್ದರು. ಆ ಸಮ್ಮೇಳನದಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದ ಪರಿಣತರನೇಕರು ವಯಸ್ಕರ ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರಬಂಧಗಳನ್ನು ಮಂಡಿಸಿದರು. ವಿವಿಧ ಗೋಷ್ಠಿಗಳಲ್ಲಿ ಸಂಪನ್ಮೂಲ ಗಣ್ಯರು ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ವಿದ್ವತ್‌ಪೂರ್ಣ ಭಾಷಣಗಳನ್ನು ಮಾಡಿದರು. ಗೌಡರು ಒಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿ, ಆ ಗೋಷ್ಠಿಯಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದರು. ಆ ಸಮ್ಮೇಳನದಲ್ಲಿ ವಯಸ್ಕರ ಶಿಕ್ಷಣಕ್ಕೆ ಸಂಬಂಧಪಟ್ಟ ವಿದ್ವತ್ ಪೂರ್ಣ ಲೇಖನಗಳನ್ನು ಒಳಗೊಂಡಿದ್ದ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಗೌಡರು ಅಧ್ಯಕ್ಷರಾದ ವೇಳೆಗಾಗಲೇ ನಾಡಿನ ವಯಸ್ಕರ ಶಿಕ್ಷಣ ಸಮಿತಿ ದೇಶ ವಿದೇಶಗಳಲ್ಲಿ ಒಳ್ಳೆಯ ಹೆಸರು ಮಾಡಲಾರಂಭಿಸಿತ್ತು. ಇದರಿಂದ ಸಮಿತಿಗೆ ವಿವಿಧೆಡೆಯಿಂದ ನೆರವು ಬರಲಾರಂಭಿಸಿತು. ಮುಖ್ಯವಾಗಿ ಯುನೆಸ್ಕೋ ಸಂಸ್ಥೆ ಮತ್ತು ಡೆನ್ಮಾರ್ಕ್ ದೇಶದ ನೆರವು ವಯಸ್ಕರ ಶಿಕ್ಷಣ ಸಮಿತಿಯತ್ತ ಬರುವಲ್ಲಿ ಮಾದಯ್ಯಗೌಡರ ಮುಖಂಡತ್ವ ಮತ್ತು ಅವರ ಸತತ ಪ್ರಯತ್ನಗಳು ಕಾರಣವಾದವು.

ಈ ಮೊದಲು ಮಾದಯ್ಯಗೌಡರು ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕಾರಿ ಮಂಡಲಿಗೆ ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾಗಿ ಕೆಲಸ ಮಾಡಿದ್ದರು. ಮತ್ತೊಮ್ಮೆ ಕಾರ್ಯಕಾರಿ ಮಂಡಳಿಗೆ ಚುನಾಯಿತ ಸದಸ್ಯರಾಗಿ ಆಯ್ಕೆಗೊಂಡರು. ರಾಷ್ಟ್ರದ ವಿವಿಧೆಡೆ ಸಂಘಟಿಸಿದ್ದ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಾಗಾರಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ಆಹ್ವಾನಿತರಾಗಿ ಭಾಗವಹಿಸಿದ್ದರು.

ಗೌಡರ ಅಧ್ಯಕ್ಷಾವಧಿಯಲ್ಲಿ ವಿವಿಧೆಡೆಯಿಂದ ಹೆಚ್ಚಿನ ನೆರವು ದೊರೆತಿದ್ದರಿಂದ ಸಾಕ್ಷರತಾ ಕಾರ್ಯಕ್ರಮ, ಗ್ರಂಥಾಲಯ ಸೇವೆ, ಚಲನಚಿತ್ರ ಪ್ರದರ್ಶನ, ಗ್ರಾಮಕಲೆಗಳ ಪುನರುಜ್ಜೀವನ ಕ್ಷೇತ್ರಗಳಲ್ಲಿ ಸಮಿತಿಯಿಂದ ಬಹಳಷ್ಟು ಕೆಲಸಗಳಾದವು. ಮೈಸೂರು ವಿಶ್ವವಿದ್ಯಾನಿಲಯದ ಆಡಳಿತದ ಸಹಕಾರದಿಂದ ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಬಳಸಿಕೊಂಡು ಗ್ರಾಮ ಪುನರುಜ್ಜೀವನ ಮತ್ತು ಅಕ್ಷರ ಪ್ರಚಾರ ಕಾರ್ಯಕ್ರಮಗಳನ್ನು ಗ್ರಾಮ ಗ್ರಾಮಗಳಲ್ಲಿ ಶ್ರದ್ಧೆಯಿಂದ ಮುಂದುವರಿಸಿಕೊಂಡು ಬಂದರು. ಗ್ರಾಮೀಣ ಪ್ರದೇಶಗಳ ವಯಸ್ಕರ ಮಹಿಳೆಯರಿಗೆ ಶಿಕ್ಷಣ ಕೊಡಿಸಲೂ ಗೌಡರು ಬಹಳ ಶ್ರಮಿಸಿದರು. ಅದಕ್ಕಾಗಿ ಕುಟುಂಬದ ಹೆಣ್ಣುಮಕ್ಕಳಿಂದ ಹಳ್ಳಿಯ ಹೆಂಗಸರಿಗೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದುದೊಂದು ವಿಶೇಷವೇ ಆಗಿತ್ತು. ಅವರಲ್ಲಿದ್ದ ಪ್ರತಿಭೆಯನ್ನು ಗುರುತಿಸಿ, ಸೋಬಾನೆ ಪದಗಳು, ಭತ್ತ ಕುಟ್ಟುವ ಮತ್ತು ಬೀಸೋಕಲ್ಲಿನ ಪದಗಳು ಮುಂತಾದವನ್ನು ಹಾಡಿಸಿ ಅವುಗಳನ್ನು ಬರೆಯಿಸಿ ಇಟ್ಟುಕೊಂಡಿದ್ದರು. ಆ ಸಮಯದಲ್ಲಿ ೬೦-೭೦

ವರ್ಷದ ವಯಸ್ಕರ ಮಹಿಳೆಯರು ಅಕ್ಷರ ತಿದ್ದುತ್ತಿದ್ದರು. ಸ್ಲೇಟು-ಬಳಪ ಹಿಡಿಯಲು ನಾಚುತ್ತಿದ್ದವರು ಸಣ್ಣ ಸಣ್ಣ ಪುಸ್ತಕಗಳನ್ನು ಓದುವ ಮಟ್ಟಕ್ಕೆ ಬಂದರು. ಸಂಬಂಧಪಟ್ಟವರಿಗೆ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅನುಸರಿಸಬೇಕಾದ ಬೋಧನಾ ವಿಧಾನ ಮತ್ತು ವಯಸ್ಕರರಿಗೆ ತರಗತಿಗಳನ್ನು ನಡೆಸುವ ಬಗೆಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಿದರು. ವಯಸ್ಕರ ಶಿಕ್ಷಣ ಸಮಿತಿಯ ಜನಪ್ರಿಯ ಮತ್ತು ಪ್ರತಿಷ್ಠಿತ ಪತ್ರಿಕೆಗಳಾದ 'ಬೆಳಕು' ಮತ್ತು 'ಪುಸ್ತಕ ಪ್ರಪಂಚ' ಪತ್ರಿಕೆಗಳ ಪ್ರಸಾರವು ಗೌಡರ ಕಾಲದಲ್ಲಿ ಹೆಚ್ಚಾಯಿತು, ಜಿ.ಹನುಮಂತರಾಯರು ಪುಸ್ತಕ ಪ್ರಪಂಚ ಪತ್ರಿಕೆಯ ಪ್ರಥಮ ಪ್ರಧಾನ ಸಂಪಾದಕರಾಗಿದ್ದರು. ಎ.ಎನ್.ಮೂರ್ತಿರಾವ್‌ರವರು, ಗೊರೂರು ರಾಮಸ್ವಾಮಿ ಅಯ್ಯಾಂಗಾರ್‌ರವರು ಈ ಪತ್ರಿಕೆಯ ಸದಸ್ಯರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಮಾದಯ್ಯಗೌಡರ ಅಧಿಕಾರಾವಧಿಯಲ್ಲಿ ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಲ್ಲಿ ನೆಲೆಸಿದ್ದ ಕನ್ನಡಿಗರು ಈ ಪತ್ರಿಕೆಗಳ ಚಂದಾದಾರರಾದರು.

ವಿ.ಸೀತಾರಾಮಯ್ಯ, ಎಸ್.ಮಂಜುನಾಥ್, ಮಾನಪ್ಪ, ಸ್ವಾಮಿ ವಿಶ್ವಾನಂದ, ಶಿವರಾಮಕಾರಂತ, ಎಂ.ವಿ.ಕೃಷ್ಣಸ್ವಾಮಿ, ಭರತ್‌ರಾಜ್‌ಸಿಂಗ್, ಎಸ್.ವಿ.ಶ್ರೀನಿವಾಸರಾವ್, ನ.ಭದ್ರಯ್ಯ, ವಾಸುದೇವ, ವಿ.ರಾಘವೇಂದ್ರರಾವ್, ಎಚ್.ವೈ.ಶಾರದಾಪ್ರಸಾದ್, ಬಾದರಾಯಣಮೂರ್ತಿ, ಸಿದ್ದವನಳ್ಳಿ ಕೃಷ್ಣಶರ್ಮ, ಎಸ್.ವಿ.ಕೃಷ್ಣಮೂರ್ತಿ, ಬಿ.ಪಿ.ರಾಧಾಕೃಷ್ಣ ಎಂ.ರಾಮಸ್ವಾಮಿ, ಎಚ್.ಎಂ.ಶಂಕರಸಾರಾಯಣರಾವ್ ಇವರುಗಳ ಕೃತಿಗಳ ಮರು ಮುದ್ರಣವನ್ನು ಮಾದಯ್ಯಗೌಡರ ಕಾಲದಲ್ಲಿ ಮಾಡಲಾಯಿತು. ಪ್ರೊ.ಜೀ.ಶಂ.ಪರಮಶಿವಯ್ಯನವರ "ಉಕ್ಕಿನ ಮನುಷ್ಯ"; ಪ್ರಭಾಕರ್‌ರವರ "ಮಲೇರಿಯಾ"; ಕೆ.ವಿ. ಸುಬ್ಬಣ್ಣನವರ "ಜೇನು ಸಾಕುವ ಬಗೆ"; ಕೆ.ಆರ್.ಲಿಂಗಪ್ಪನವರ "ಮಲೆನಾಡಿನಲ್ಲಿ ಮದುವೆ" ಕೃತಿಗಳು ಮಾದಯ್ಯಗೌಡರ ಅಧಿಕಾರಾವಧಿಯಲ್ಲಿ ಹೊಸದಾಗಿ ಮರು ಮುದ್ರಣಗೊಂಡವು.

ಮಹಾಕವಿ ಕುವೆಂಪು ಅವರ "ಜನಪ್ರಿಯ ವಾಲ್ಮೀಕಿ ರಾಮಾಯಣ" ಮಾದಯ್ಯಗೌಡರ ಅಧಿಕಾರಾವಧಿಯಲ್ಲಿ ಬಿಡುಗಡೆಗೊಂಡಿದ್ದು ಅವರಿಗೆ ಅಪಾರ ಸಂತೋಷವನ್ನುಂಟು ಮಾಡಿತ್ತು. ಈ ಹಿಂದೆ ಬಾಲಕೃಷ್ಣಯ್ಯನವರ ಕೋರಿಕೆಯ ಮೇರೆಗೆ ದಾನಿ ಧರ್ಮಪ್ರಕಾಶ ಎಚ್.ಎಸ್.ವೆಂಕಾಜಿರಾಯರು ೫೦೦೦ ರೂಪಾಯಿಗಳನ್ನು ವಯಸ್ಕರ ಶಿಕ್ಷಣ ಸಮಿತಿಗೆ ಈ ಕೃತಿಯ ಪ್ರಕಟಣೆಗಾಗಿ ದೇಣಿಗೆ ನೀಡಿದ್ದರು. ಅಷ್ಟರಲ್ಲಿ ಬಾಲಕೃಷ್ಣಯ್ಯನವರು ಹೈಕೋರ್ಟ್‌ನಲ್ಲಿ ದೊರೆತ ಹುದ್ದೆಗೆ ಹೋಗಿದ್ದರಿಂದ ಕುವೆಂಪುರವರ "ಜನಪ್ರಿಯ ವಾಲ್ಮೀಕಿ ರಾಮಾಯಣ" ಆಗ ಪ್ರಕಟಗೊಂಡಿರಲಿಲ್ಲ. ಮಾದಯ್ಯಗೌಡರಿಗೆ ಈ ಕೃತಿಯ

ಬಿಡುಗಡೆಯ ಸಂತೋಷದ ಅವಕಾಶ ದೊರೆಯಿತು. ಈ ಕೃತಿಯ ಬಿಡುಗಡೆ ಸಮಾರಂಭ ಬಹಳ ಅದ್ದೂರಿಯಾಗಿದ್ದು ನಾಡಿನ ಎಲ್ಲಾ ಪತ್ರಿಕೆಗಳೂ ಈ ಸಮಾರಂಭದ ವರ್ಣರಂಜಿತ ವರದಿ ಮಾಡಿದ್ದವು. ಗಾಂಧೀ ಜಯಂತಿಯಂದು ಏರ್ಪಡಿಸಿದ್ದ ಸಮಾರಂಭಕ್ಕೆ ಅಂದಿನ ಮುಖ್ಯಮಂತ್ರಿ ಶ್ರೀ ಕೆ. ಚಂಗಲರಾಯರೆಡ್ಡಿಯವರು ಬಿಡುವಿಲ್ಲದಿದ್ದರೂ ಬಿಡುವುಮಾಡಿಕೊಂಡು ಆಗಮಿಸಿ ಕೃತಿ ಬಿಡುಗಡೆ ಮಾಡಿ ಮಹಾಕವಿಗಳನ್ನು ಗೌರವಿಸಿದರು. ಆ ಸಮಾರಂಭದಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಗೌಡರು ಸಲ್ಲಿಸುತ್ತಿರುವ ಸೇವೆಯನ್ನು ಇನ್ನಿಲ್ಲದಂತೆ ಶ್ಲಾಘಿಸಿದರು. "ಜನಪ್ರಿಯ ವಾಲ್ಮೀಕಿ ರಾಮಾಯಣ" ಕೃತಿಯ ಬಿಡುಗಡೆ ವಯಸ್ಕರ ಶಿಕ್ಷಣ ಸಮಿತಿಯ ಒಂದು ಮೈಲಿಗಲ್ಲೆನಿಸಿತು. ಇಂದಿಗೂ ಆ ಕೃತಿಯು ತನ್ನ ಮಹತ್ವವನ್ನು ಉಳಿಸಿಕೊಂಡಿದೆ.

ಆದಿಕವಿ ವಾಲ್ಮೀಕಿಮಹರ್ಷಿಗಳ ಸಂಸ್ಕೃತ "ರಾಮಾಯಣ"ವನ್ನು ಕನ್ನಡ ಭಾಷೆಗೆ ಸಾಮಾನ್ಯರಿಗೂ ಅರ್ಥವಾಗುವ ಭಾಷೆಯಲ್ಲಿ ಅನುವಾದ ಮಾಡುವುದು ಸುಲಭದ ಕೆಲಸವಲ್ಲ. ಮಹಾಕವಿ ಕುವೆಂಪು ಅವರು ವಯಸ್ಕರ ಶಿಕ್ಷಣ ಸಮಿತಿಯ ಕೋರಿಕೆ ಮೇರೆಗೆ ಆ ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಕ್ಕಾಗಿ ಮಾದಯ್ಯಗೌಡರು ಕುವೆಂಪುರವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. "ಕುವೆಂಪುರವರ ಈ ಜನಪ್ರಿಯ ರಾಮಾಯಣ ಕೃತಿ ಕನ್ನಡ, ಭಾರತೀಯ ಸಾಹಿತ್ಯಕಷ್ಟೇ ಅಲ್ಲದೇ ಇಡೀ ಜಗತ್ತಿನ ಸಾಹಿತ್ಯಕ್ಕೆ ವಿಚಾರ ಕ್ರಾಂತಿಯ ಬೆಳಕು ನೀಡುತ್ತದೆ. ಕುವೆಂಪುರವರು ವಿಶ್ವಮಾನವತ್ವ ಸಾರಿದ ಮಹಾನ್ ಸಾಹಿತಿ. ಕುವೆಂಪುರವರು ಸಾಹಿತ್ಯ ದಿಗ್ಗಜ; ಎಲ್ಲಾ ರೀತಿಯ ಸಾಹಿತ್ಯ ಪ್ರಕಾರಗಳಲ್ಲಿಯೂ ವಿಶಿಷ್ಟವಾದ ಸಾಹಿತ್ಯ ಕೃಷಿ ಮಾಡಿ ಎಲ್ಲರೂ ಮೆಚ್ಚುವ ಕೆಲಸ ಮಾಡಿದ್ದಾರೆ. ಇವರ ವ್ಯಕ್ತಿತ್ವ, ಸರಳತೆ, ಸೃಜನಶೀಲತೆ ಎಲ್ಲರಿಗೂ ಅನುಕರಣೀಯವಾಗಿದೆ. ವಯಸ್ಕರ ಶಿಕ್ಷಣ ಸಂಸ್ಥೆಗೆ ಜನಪ್ರಿಯ ರಾಮಾಯಣ ಕೃತಿಯನ್ನು ಬರೆಯುವ ಮೂಲಕ ಸುಲಭವಾಗಿ ಎಲ್ಲರಿಗೂ ರಾಮಾಯಣ ಅರ್ಥವಾಗುವಂತೆ ಮಾಡಿದ್ದಾರೆ. ಅದರಲ್ಲಿ ಬರುವ ಎಲ್ಲಾ ಪಾತ್ರಗಳಿಗೂ ತಮ್ಮದೇ ಆದ ಸಾಹಿತ್ಯಕ ಶೈಲಿಯಲ್ಲಿ ಜೀವಂತಿಕೆ ನೀಡಿದ್ದಾರೆ. ಈ ಮಹಾಕವಿಯ ಬಗೆಗೆ ಕೇವಲ ಪದಗಳಲ್ಲಿ ಹೇಳಿ ಮುಗಿಸಲು ಸಾಧ್ಯವಿಲ್ಲ. ಇಡೀ ಜಗತ್ತಿಗೆ ಮಾನವತ್ವದ ಸಂದೇಶ ನೀಡಿದ ಮಹಾಕವಿಗಳಿವರು" ಎಂದು ಮಾದಯ್ಯಗೌಡರು ಆ ಕೃತಿ ಬಿಡುಗಡೆ ಸಮಾರಂಭದ ಆಶಯ ಭಾಷಣದಲ್ಲಿ ತಿಳಿಸಿದರು. ಗೌಡರು ಕುವೆಂಪುರವರ "ಜನಪ್ರಿಯ ವಾಲ್ಮೀಕಿ ರಾಮಾಯಣ" ಕೃತಿಯ ಮೊದಲನೆಯ ಮುದ್ರಣಕ್ಕೆ ಬರೆದ ಮುನ್ನುಡಿ ರೂಪದ ಅರಿಕೆಯನ್ನು ಈ ಕೆಳಗೆ ಯತಾವತ್ತಾಗಿ ಕೊಡಲಾಗಿದೆ.

"ಅಕ್ಟೋಬರ್ ತಿಂಗಳ ಎರಡನೆಯ ದಿನ ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಎಂತಹ ಪವಿತ್ರ ದಿನ! ಭಾರತದ ಸ್ವಾತಂತ್ರ್ಯ ಶಿಲ್ಪಿ, ಭಾರತದ ದಿವ್ಯ ಜ್ಯೋತಿ ಪೂಜ್ಯ ಮಹಾತ್ಮಾ ಗಾಂಧೀಜಿ ಈ ಭೂಮಿಯಲ್ಲಿ ಅವತರಿಸಿದ ಮಂಗಳ ಮಹಾ ದಿನ! ಆ ದಿನವನ್ನು ಯಾವ ಭಾರತೀಯ ತಾನೆ ಮರೆತಾನು? ಭಗವತ್ಸಂಕಲ್ಪದಿಂದ ಈ ನಮ್ಮ ಸಮಿತಿಯ ಚರಿತ್ರೆಯಲ್ಲಿಯೂ ಆ ದಿನವೇ ಮಹಾದಿನವಾಗಿದೆ. ಏಕೆಂದರೆ ಅಂದೇ ಬಹು ಜನರ ಬಹು ದಿನಗಳ ಬಯಕೆ ಈಡೇರುತ್ತಿದೆ".

"ಈಗ್ಗೆ ಹತ್ತು ವರ್ಷಗಳಿಂದ ಸಮಿತಿಯ ಆಶ್ರಯದಲ್ಲಿ ಅನೇಕ ವಯಸ್ಕರ ತರಗತಿಗಳು ನಡೆದಿವೆ, ನಡೆಯುತ್ತಿವೆ. ಜೊತೆಯಲ್ಲಿಯೇ ಅನೇಕ ಗ್ರಾಮ ಪುಸ್ತಕಭಂಡಾರಗಳು ಪ್ರಾರಂಭವಾಗಿ ಅಭಿವೃದ್ಧಿಯಾಗುತ್ತಿವೆ. ಆದರೆ ಅಕ್ಷರಸ್ಥರಾದ ವಯಸ್ಕರಿಗೆ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳನ್ನಾಗಲಿ ಇತರ ಪುಸ್ತಕಗಳನ್ನಾಗಲಿ ಓದಲು ಕೊಟ್ಟಾಗ ಅವರಲ್ಲಿ ಅನೇಕರು "ಸ್ವಾಮಿ, ಯಾವು ಯಾವುದೋ ಪುಸ್ತಕ ಕೊಡುತ್ತಿದ್ದೀರಿ. ಓದು ಬರೆಹ ಕಲಿತ ಮೇಲೆ ರಾಮಾಯಣ ಭಾರತಗಳನ್ನು ಓದದಿದ್ದರೆ ಏನು ಪ್ರಯೋಜನ?" ಎಂದು ಕುತೂಹಲದಿಂದ ಹೇಳತೊಡಗಿದರು. ಅವರು ಓದಿ ಗ್ರಹಿಸಬಲ್ಲ ಸರಳವಾದ ಕನ್ನಡದಲ್ಲಿ ವಾಲ್ಮೀಕಿ ರಾಮಾಯಣವಾಗಲಿ ವ್ಯಾಸರ ಮಹಾಭಾರತವಾಗಲಿ ಸಿಕ್ಕುತ್ತಿರಲಿಲ್ಲ. ಈ ಅರಕೆಯನ್ನು ತುಂಬಿಕೊಡುವ ಸಲುವಾಗಿ ವಾಲ್ಮೀಕಿ ರಾಮಾಯಾಣವನ್ನು ಮೊದಲು ಪ್ರಕಟಿಸಬೇಕೆಂದು ಸಮಿತಿ ಆಲೋಚಿಸಿತು".

"ಆಲೋಚನೆಯೇನೋ ಒಳ್ಳೆಯದೆ ಸರಿ ಆದರೆ ಹಣವಿಲ್ಲದೆ ಅದು ಕಾರ್ಯಗತವಾಗುವಂತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ಸಾಹಿತ್ಯಾಭಿಮಾನಿಗಳಾದ ರಾಜರೂ ಶ್ರೀಮಂತರೂ ಗ್ರಂಥಗಳ ಪ್ರಕಟಣೆಗೆ ಕೈಹಿಡಿಯದೆ ದುಡ್ಡು ಸುರಿಯುತ್ತಿದ್ದರು. ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ದಾನಚಿಂತಾಮಣಿಯೂ ವೈರಾಗ್ಯ ಲಕ್ಷ್ಮಿಯೂ ಆದ ಅತ್ತಿಮಬ್ಬೆಯೆಂಬ ಜೈನಸ್ತ್ರೀ ಕವಿಚಕ್ರವರ್ತಿ ಪೊನ್ನನ 'ಶಾಂತಿಪುರಾಣ'ದ ಸಹಸ್ರ ಪ್ರತಿಗಳನ್ನು ನಕಲು ಮಾಡಿಸಿ ಜನರಿಗೆ ಹಂಚಿ ಪುಣ್ಯಗಳಿಸಿದಳಂತೆ! ಆದರೆ ಆ ಯುಗ ಬೇರೆ, ಈ ಯುಗ ಬೇರೆ. ಇಂದು ಮಾನವನ ದೃಷ್ಟಿಧ್ಯೇಯಗಳು, ನಿರಂತರ ಸಾಹಸ ಪ್ರಯತ್ನಗಳು, ದುಷ್ಕಾರ್ಯ ಸತ್ಕಾರ್ಯಗಳು ಸದ್ಯದ ಪ್ರತಿಫಲವನ್ನು ಅಪೇಕ್ಷಿಸುವವಾಗಿವೆ. ಆದರೂ ಇಂತಹ ಸಮಾಜದಲ್ಲಿ ಶ್ರೀಮಾನ್ ಎಲ್.ಎಸ್.ವೆಂಕಾಜಿರಾಯರಂತಹ 'ದಾನಚಿಂತಾಮಣಿ'ಗಳು ಇಲ್ಲದೆ ಇಲ್ಲ. ಸಮಿತಿ ತನ್ನ ಬಯಕೆಯನ್ನು ರಾಯರಿಗೆ ತಿಳಿಸಿದ ಕೂಡಲೇ ಆವರು 'ಐದು ಸಾವಿರ ರೂಪಾಯಿ ಕೊಡುತ್ತೇನೆ. ಈ ಪುಣ್ಯ ಕಾರ್ಯವನ್ನು ಸಮಿತಿ ಕೈಗೊಳ್ಳಲಿ' ಎಂದು ಸಂತೋಷದಿಂದ ತಿಳಿಸಿದರು. ಬಹುಜನರ

ಬಯಕೆ ಈಡೇರಲು ನೆರವು ನೀಡಿದ ರಾಯರು ನಿಜವಾಗಿಯೂ ಧರ್ಮ ಪ್ರಕಾಶಕರೆ ಸರಿ!".

"ಹಣ ಅಣಿಯಾಯಿತು ಆದರೆ ಭರತಖಂಡದ ಆದಿಕವಿ ವಾಲ್ಮೀಕಿ ಮಹರ್ಷಿಯ ಸಂಸ್ಕೃತ ರಾಮಾಯಣವನ್ನು ಕನ್ನಡದಲ್ಲಿ ಕನ್ನಡಿಗರಿಗೆ ಪ್ರಿಯವಾಗುವಂತೆ ಬರೆಯುವುದು ಸುಲಭವಲ್ಲ. ವಲ್ಮೀಕ ಎಂದರೆ ಹುತ್ತ. ತಪಸ್ಸಿಗೆ ಕುಳಿತಾಗ ಮೈಮೇಲೆ ಹುತ್ತ ಬೆಳೆದು ಆಮೇಲೆ ಹೊರಗಡೆ ಬಂದುದರಿಂದ ಅವನಿಗೆ ವಾಲ್ಮೀಕಿ ಎಂಬ ಹೆಸರು ಬಂದಿತಂತೆ! ರಾಮಾಯಾಣ ಸೃಷ್ಟಿ ಅಂತಹ ತಪಶ್ಶಕ್ತಿಗೆ ಮಾತ್ರ ಸಾಧ್ಯ. ಶ್ರೀಕುವೆಂಪು ಅವರ ಹೆಸರನ್ನು ಕೇಳದವರಿಲ್ಲ. ಎಳೆಯರಿಂದ ಹಿಡಿದು ಹಿರಿಯರ ತನಕ, ಪಾಮರದಿಂದ ಹಿಡಿದು ಪಂಡಿತರ ತನಕ, 'ದಾಸ'ರಿಂದ ಹಿಡಿದು ದಾರ್ಶನಿಕರ ತನಕ ಅವರ ಕೃತಿಗಳನ್ನು ಓದದವರಿಲ್ಲ, ಓದಿಸಿ ಕೇಳದವರಿಲ್ಲ; ಓದಿ, ಕೇಳಿ ಆನಂದಪರವಶರಾಗದವರಿಲ್ಲ. ಲೋಕತಂತ್ರವನ್ನೂ ಮಾನವಸ್ವಭಾವವನ್ನೂ ಸೂಕ್ಷ್ಮವಾಗಿ ಅರಿತ ಅವರು ರಸಯೋಗಿ; ಸಾಧನೆಯಿಂದ ಗುರುಕೃಪೆಗೆ ಪಾತ್ರರಾದವರು. ಮಾನವ ಸಮಾಜದ ಸಂಕುಚಿತ ಸಂಪ್ರದಾಯದ ನಿಯಮಾವಳಿಗಳಿಗೆ ವಶವಾಗದೆ, ಋತುದರ್ಶನದ ಆದರ್ಶ ಲೋಕದಲ್ಲಿ ಯಾರಿಗೂ ಅಂಜದೆ, ಬಾಗದೆ, ಸ್ವೇಚ್ಛೆಯಾಗಿ ವಿವರಿಸುತ್ತ ಸೋದರಮಾನವರ ಉದ್ಧಾರವನ್ನು ಎಡೆಬಿಡದೆ ಬಯಸುತ್ತಿರುವ ವಿಶ್ವಕವಿ, ಲೋಕಹಿತೈಷಿ ಅವರು; "ಶ್ರೀಕುವೆಂಪುವ ಸೃಜಿಸಿದೀ ಮಹಾ ಛಂದಸಿನ ಮೇರುಕೃತಿ, ಮೇಣ್ ಜಗದ್ಭವ್ಯ ಶ್ರೀರಾಮಾಯಾಣ ದರ್ಶನ" ಮಹಾಕಾವ್ಯವನ್ನು ರಚಿಸಿದ ಕನ್ನಡ ಸಾಹಿತ್ಯ ಕ್ಷೇತ್ರದ ಶಕಪುರಷರು. ಇಂತಹ ಕವಿವರ್ಯರನ್ನು ಎರಡು ವಾಕ್ಯಗಳಲ್ಲಿ ಪರಿಚಯ ಮಾಡಿ ಕೊಡುವುದೆಂದರೆ ಪ್ರಪಂಚವನ್ನು ಬೆಳಗುವ ಸೂರ್ಯನನ್ನು ಇಬ್ಬನಿ ಪ್ರತಿ ಬಿಂಬಿಸಿದಂತಾಗುತ್ತದೆ. ಸಮಿತಿ ಕೈಗೊಂಡ ಈ ಮಹತ್ಕಾರ್ಯದಲ್ಲಿ ಅವರ ನೆರವು ದೊರೆತುದು ನಮ್ಮೆಲ್ಲರ ಪುಣ್ಯ".

"ಜನಪ್ರಿಯ ರಾಮಾಯಾಣ"ದ ಕರಡುಪ್ರತಿ ಸಿದ್ಧವಾದ ಕೂಡಲೆ ಅದನ್ನು ಜನಸಾಮಾನ್ಯರಲ್ಲಿ ಓದಬೇಕೆಂದು ಸಮಿತಿ ಅಪೇಕ್ಷಿಸಿತು. ನಂಜನಗೂಡು ವಿದ್ಯಾಪೀಠದ ಆಶ್ರಯದಲ್ಲಿ ದಿನವೂ ಸಂಜೆ ಈ ಕಾರ್ಯಕ್ರಮವನ್ನು ನಡೆಸುವ ಏರ್ಪಾಡಾಯಿತು. ವಿದ್ಯಾಪೀಠದ ಆಚಾರ್ಯರಾಗಿದ್ದ ಶ್ರೀಎಸ್.ವಿ.ಶ್ರೀನಿವಾಸರಾಯರು ಈ ವಿಷಯದಲ್ಲಿ ಶ್ರೀಕುವೆಂಪು ಅವರಿಗೆ ಒಂದು ಕಾಗದ ಬರೆದರು. ಅವರಿಂದ ಬಂದ ಸ್ವಾರಸ್ಯವಾದ ಪ್ರತ್ಯುತ್ತರವಿದು":

"ಅಧ್ಯಾಯ ವಿಭಾಗಗಳನ್ನು ಆದಷ್ಟು ಸಣ್ಣವಾಗಿರುವಂತೆ ನೋಡಿಕೊಂಡಿದ್ದೇನೆ. ಅಲ್ಲದೆ ಅತಿ ಸರಳತೆಯ ಸೌಲಭ್ಯವೂ ಅತಿ ಪಾಂಡಿತ್ಯದ ಕ್ಲಿಷ್ಟತೆಯಂತೆಯೇ 'ಅವಜ್ಞೆ'ಗೆ ಗುರಿಯಾಗುತ್ತದೆಂದು ಎಣಿಸಿ ಅಲ್ಲಲ್ಲಿ ಮೂಲ ರಾಮಾಯಾಣದ ರಸವತ್ತಾದ ಪದ ಮತ್ತು ಪದಪುಂಜ ಪ್ರಯೋಗಗಳನ್ನು ಹೆಚ್ಚು ಬದಲಾಯಿಸದೆ ಹಾಗೆಯೇ ಇಟ್ಟಿದ್ದೇನೆ. ಹಳ್ಳಿಗನಿಗೂ ಮನಸ್ಸಿನ ಸಾಹಸವಿಲ್ಲದಿದ್ದರೆ ರುಚಿಸುವುದಿಲ್ಲ. ಆಲಿಸುವ ಗ್ರಾಮಸ್ಥರನ್ನು ಕೇಳಿ, ಅವರ ಅಭಿಪ್ರಾಯಗಳಲ್ಲಿ ಏನಾದರೂ ಗ್ರಾಹ್ಯವಾಗಬಹುದಾದುದು ಇದ್ದರೆ ಅದನ್ನು ನನಗೆ ತಿಳಿಸಿ.......ನೀವು ಓದಿದ ಮೇಲೆ ಅದು ಉಂಟುಮಾಡುವ ಪರಿಣಾಮವನ್ನು ಆಶೆಯಿಂದ ನಿರೀಕ್ಷಿಸುತ್ತೇನೆ. ಏಕೆಂದರೆ ವಯಸ್ಕರಿಗಷ್ಟೇ ಅದು; ಆ ಜನರೇ ನಿಕಷ." ಶ್ರೀ ಶ್ರೀನಿವಾಸರಾಯರು ಈ ಗ್ರಂಥವನ್ನು ಓದಿ ಹೇಳಿದರು; ವಿದ್ಯಾಪೀಠಕ್ಕೆ ಶಿಕ್ಷಣ ಪಡೆಯಲು ಬಂದಿದ್ದ ವಿದ್ಯಾರ್ಥಿಗಳೂ, ವಿದ್ಯಾಪೀಠಕ್ಕೆ ಹತ್ತಿರದಲ್ಲಿರುವ ಪರಶುರಾಮಪುರದ ಗ್ರಾಮಸ್ಥರೂ ಕೇಳಿ ಆನಂದಿಸಿದರು".

"ರಾಮಾಯಾಣ ಶ್ರಿರಾಮನ ಕತೆ ಮಾತ್ರವಲ್ಲ, ಶ್ರೀರಾಮದರ್ಶನದ ಕತೆಯೂ ಅಹುದು. ಶ್ರೀರಾಮ ನಾಮಸಂಸ್ಮರಣ ಮಾತ್ರದಿಂದ ಅರಣ್ಯದ ಹಿಂಸಾಜಂತುವಾಗಿದ್ದ ಬೇಡ ಉದ್ದಾಮ ತಪಸ್ವಿಯಾಗಿ, ಭರತಖಂಡದ ಆದಿ ಕವಿಯಾಗಿ ಲೋಕದ ಆರಾಧನೆಗೆ ಪಾತ್ರನಾದವನು. ಶ್ರೀರಾಮನ ಖಡ್ಗಾಘಾತಕ್ಕೆ ಗುರಿಯಾದ ದೈತ್ಯರು ದೇವತೆಗಳಾದವರು. ಭಗವತ್ಸಂಕಲ್ಪ ಯಾವ ಯಾವ ರೂಪದಲ್ಲಿ ಯಾವ ಯಾವ ಆಕಾರದಲ್ಲಿ ಆವಿರ್ಭವಿಸುವುದೋ ಹೇಳಲಾಗುವುದಿಲ್ಲ. ಕೃತರೂಪದಲ್ಲಿಯೂ ಅವತರಿಸಬಹುದೆಂದು ಶ್ರೀಕುವೆಂಪು ಅವರ ಮತ. ಆದುದರಿಂದಲೇ ಗೀತಾಚಾರ್ಯ":

**ಯದ್ಯದ್ ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ..**
**ತತ್ತ ದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಮ್ !!**

**-- ಭಗವದ್ಗೀತೆ**

ಎಂದು ನುಡಿದಿದ್ದಾನೆ. "ಜಗತ್ತಿನಲ್ಲಿ ಯಾವ ಯಾವ ವಸ್ತುಗಳು ಶ್ರೇಷ್ಠವಾಗಿಯೂ ಐಶ್ವರ್ಯಯುಕ್ತವಾಗಿಯೂ, ಬಹುಸತ್ತ್ವ ಯುಕ್ತವಾಗಿಯೂ ಇರುವುವೋ ಅವೆಲ್ಲವೂ ನನ್ನ ವಿಶೇಷಾಂಶಗಳೇ" ಎಂಬುದೆ ಅದರ ಭಾವ. ಶ್ರೀಮದ್ರಾಮಾಯಣವೂ ಅಂತಹದೊಂದೆಂಬ ಅವತಾರವೆ ಸರಿ. ಭರತಖಂಡದ ಸಂಸ್ಕೃತಿ ಬೇರೆ ಅಲ್ಲ, ಶ್ರೀಮದ್ರಾಮಾಯಣ ಬೇರೆ ಅಲ್ಲ. ಹಿಂದಿನಿಂದ ಈ ರಾಮಾಯಾಣ ನಮ್ಮ ಜನತೆಯನ್ನು ಉದ್ಧರಿಸುತ್ತ ಬಂದಿದೆ, ಇನ್ನು ಮುಂದೆಯೂ – ಅದರಲ್ಲಿಯೂ ಈ ವಿಜ್ಞಾನ ಯುಗದಲ್ಲಿ– ಅದು ದುರಾಶೆ ಕಳವಳದಿಂದ ಬಳಲಿ ಬೆಂಡಾಗುತ್ತಿರುವ ಮಾನವನನ್ನು ಉದ್ಧರಿಸಬೇಕಾಗಿದೆ; ಜನ್ಮದ ಕಿಲ್ಬಿಷವನ್ನು ರಾಮನಾಮ ತೊಳೆದು ಪಾವನ

ಮಾಡಬೇಕಾಗಿದೆ. ರಾಮನಾಮವೆಂಬ ಪಾವಕನಿಗೆ ಸಿಕ್ಕಿದ ಪಾಪವೆಲ್ಲವೂ ವಿನಾಶ ಹೊಂದುವುದು ನಿಜ. ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯ ಭಜನ ಮಂದಿರದಲ್ಲಿಯೂ ಈ ರಾಮ ಸಂಕೀರ್ತನೆ ಇಂದಿಗೂ ಕೇಳಿಬರುತ್ತಿದೆ. ಈ ಪರಿಸ್ಥಿತಿಯಿರುವ ತನಕ ನಮ್ಮ ಸಂಸ್ಕೃತಿಗೆ ಅಳಿವಿಲ್ಲ, ನಮ್ಮ ನಾಡಿಗೆ ಚ್ಯುತಿಯಿಲ್ಲ, ನಮ್ಮ ಜನಾಂಗ ನಿರಾಶೆಯಿಂದಿರಬೇಕಾಗಿಲ್ಲ".

"ನಮ್ಮ ನಾಡಿಗೆ ರಾಮಾಯಾಣದ ಅವಶ್ಯಕತೆ ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಇಂತಹದೊಂದು ಕೃತಿಯನ್ನು ಬೆಳಕಿಗೆ ತರುವ ಸಾಹಸ ಹಿರಿಯದು; ಆ ಕಾರ್ಯದಲ್ಲಿ ಭಾಗವಹಿಸುವುದರಿಂದ ಬರುವ ಪುಣ್ಯ ಮಿಗಿಲಾದುದು. ಇಂತಹ ಪವಿತ್ರ ಕಾರ್ಯಕ್ಕೆ ನೆರವಾದ ಶ್ರೀಕುವೆಂಪು ಅವರಿಗೂ, ಧರ್ಮಪ್ರಕಾಶ ಶ್ರೀ ಎಲ್.ಎಸ್.ವೆಂಕಾಜಿರಾಯರಿಗೂ, ಸುಂದರವಾದ ಚಿತ್ರಗಳನ್ನು ಬರೆದುಕೊಟ್ಟ ಶ್ರೀ ಮ.ಈ. ಗುರು ಅವರಿಗೂ, ಅತ್ಯಲ್ಪಕಾಲದಲ್ಲಿ ಇಷ್ಟು ಅಂದವಾಗಿ ಮುದ್ರಿಸಿಕೊಟ್ಟಿರುವ ವೆಸ್ಲಿ ಪ್ರೆಸ್ಸಿನವರಿಗೂ ಈ ಸಮಿತಿಯ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಈ ಗ್ರಂಥದ ಪ್ರಕಟನೋತ್ಸವ ಸಮಾರಂಭವನ್ನು ನೆರವೇರಿಸಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕೆ. ಚಂಗಲರಾಯರೆಡ್ಡಿಯವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು".

"ಈ ಕೃತಿ ಕರ್ಣಾಟಕದ ಮನೆಯನ್ನು ಬೆಳಗಿ ತೊಳಗಲಿ ! ಆಂಜನೇಯ ಲಕ್ಷ್ಮಣ ಸಮೇತರಾದ ಸೀತಾರಾಮರಿಗೆ ಜಯವಾಗಲಿ"!

ಗಾಂಧೀಜಯಂತಿ — ಟಿ. ಮಾದಯ್ಯಗೌಡ

೨-೧೦-೧೯೫೦ — ಅಧ್ಯಕ್ಷರು

"ಜನಪ್ರಿಯ ವಾಲ್ಮೀಕಿ ರಾಮಾಯಣ" ಕೃತಿಯು ಪ್ರಕಟಗೊಂಡ ಕೇವಲ ಒಂದೂವರೆ ವರುಷಕ್ಕೆ ಅದರ ಎಲ್ಲಾ ಪ್ರತಿಗಳು ಮಾರಾಟಗೊಂಡವು. ಹರ್ಷಗೊಂಡ ಮಾದಯ್ಯಗೌಡರು ಮತ್ತೆ ಕೃತಿಯನ್ನು ಮರು ಪ್ರಕಟಿಸಿದರು. ಆ ಎರಡನೆಯ ಮುದ್ರಣದ ಮುನ್ನುಡಿ ರೂಪದ ಅರಿಕೆಯನ್ನು ಈ ಕೆಳಗೆ ಕೊಡಲಾಗಿದೆ:

"ಜನಪ್ರಿಯ ವಾಲ್ಮೀಕಿ ರಾಮಾಯಣ ಸುಮಾರು ಮೂರುವರೆ ವರ್ಷಗಳ ಹಿಂದೆ ಅಚ್ಚಾಯಿತು. ಅದರ ಪ್ರತಿಗಳು ಒಂದು ವರ್ಷದ ಹಿಂದಯೇ ಮುಗಿದು ಹೋಗಿ ಕರ್ಣಾಟಕದ ಎಲ್ಲ ಎಡೆಗಳಿಂದ ಅದನ್ನು ಮತ್ತೆ ಅಚ್ಚು ಹಾಕಿಸಬೇಕೆಂಬ ಒತ್ತಾಯ ಕಂಡುಬಂದುದರಿಂದ ಎಡರನೆಯ ಮುದ್ರಣವನ್ನು ಕೈಗೊಳ್ಳಲಾಯಿತು. ಈ ಗ್ರಂಥದ ಹೆಸರು ಅಕ್ಷರಶಃ ನಿಜವೆನ್ನುವುದಕ್ಕೆ ಇದೇ ಪ್ರಬಲ ಸಾಕ್ಷಿ. ಶ್ರೀಕುವೆಂಪು ಅವರು ಈ ಗ್ರಂಥದ ಮೊದಲಲ್ಲಿ "ನಮ್ಮ ಜನದ ಬಾಳು ಮೇಲೆ ಮೇಲೆ ಎಷ್ಟು ಕೆಟ್ಟಂತೆ ಕಾಣುತ್ತಿದ್ದರೂ

ಅದರ ಅಂತರಾಳದಲ್ಲಿ ಪೂರ್ವಿಕರ ಪುಣ್ಯದ ತಪಃಪ್ರಭಾವದ ನಂದಾದೀಪ ನಂದದೆ ಮಿನುಗುತ್ತಿದೆ ಎಂದು ತೋರುತ್ತದೆ. ಇಲ್ಲದಿದ್ದರೆ ಅಕ್ಷರ ಕಲಿತವರು ಕಾಸಿನ ಕಾದಂಬರಿಗಳನ್ನೂ ರೋಮಾಂಚನಕರವಾದ ನವೀನ ಚಲಚ್ಚಿತ್ರ ಶೃಂಗಾರ ಕಥಾನಕಗಳನ್ನೂ ಅಪೇಕ್ಷಿಸುವ ಬದಲು – ಅಥವಾ ಅಪೇಕ್ಷಿಸುವದರ ಜೊತೆಗೆ ಎಂದಾದರೂ ಚಿಂತೆಯಿಲ್ಲ– ರಾಮಾಯಣ ಮಹಾಭಾರತಗಳಂತಹ ಹಳೆಯ 'ಕಗ್ಗದ ಪುರಾಣ ಕಥೆ'ಗಳನ್ನು ಬಯಸುತ್ತಿದ್ದಾರೇ?" ಎಂದು ಹೇಳಿರುವ ಮಾತು ಸಂಪೂರ್ಣ ಸತ್ಯವೆಂದು ಈ ಶೀಘ್ರ ಪ್ರಕಟಣೆಯಿಂದ ವ್ಯಕ್ತವಾಗುತ್ತದೆ. ಭಾರತೀಯರ ಉತ್ಥಾನಕ್ಕೂ ಉದ್ಧಾರಕ್ಕೂ ನೆರವಾಗಿ, ಭರತಖಂಡದ ಐಕ್ಯತೆಯನ್ನು ಸದಾ ಸಾಧಿಸುತ್ತಿರುವ ಇಂಥ ಪವಿತ್ರ ಗ್ರಂಥದ ಪ್ರಕಟಣೆಗಿಂತ ಉತ್ತಮವಾದ ಬೇರೆ ಕಾರ್ಯವನ್ನು ವ್ಯಕ್ತಿಯಾಗಲಿ ಸಂಸ್ಥೆಯಾಗಲಿ ಸಾಧಿಸಲು ಸಾಧ್ಯವೇ? ಮೈಸೂರು ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿ ಅಂಥ ಪವಿತ್ರ ಕಾರ್ಯವನ್ನು ನೆರವೇರಿಸುವ ಭಾಗ್ಯವನ್ನು ಪಡೆದಿರುವುದೊಂದು ಸಂತೋಷದ ಮತ್ತು ಹೆಮ್ಮೆಯ ಸಂಗತಿ. ಇಂಥ ಭಾಗ್ಯ ಸಮಿತಿಗೆ ಪದೇ ಪದೇ ಒದಗಲನುಕೂಲವಾಗುವಂತೆ ಮಹಾಜನರು ಸದಾ ಪ್ರೋತ್ಸಾಹಿಸುತ್ತಿರಲಿ"!.

೩೦–೦೫–೫೪ ಟಿ. ಮಾದಯ್ಯಗೌಡ

ಅಧ್ಯಕ್ಷರು

ಹೀಗೆ "ಜನಪ್ರಿಯ ವಾಲ್ಮೀಕಿ ರಾಮಾಯಣ"ದ ಎರಡು ಮುದ್ರಣಗಳಿಗೆ ಗೌಡರು ಬರೆದ ಮುನ್ನುಡಿ ಮೌಲಿಕವಾದುದಾಗಿತ್ತು. ಅಕ್ಷರಸ್ಥರಾಗುತ್ತಿದ್ದ ವಯಸ್ಕರರಿಗೆ ಬಹಳ ಉಪಯೋಗಕ್ಕೆ ಬಂತು.

ಮಾದಯ್ಯಗೌಡರು ಮಹಾಕವಿ ಕುವೆಂಪು ಅವರನ್ನು ನವಸಾಕ್ಷರಗಾರರಿಗೆ ಒಂದು ಸರಳ ಭಾಷೆಯ ಮತ್ತೊಂದು ಕೃತಿಯೊಂದನ್ನು ಬರೆದುಕೊಡಲು ವಿನಯಪೂರ್ವಕವಾಗಿ ಕೋರಿದಾಗ "ಆಗಲಿ, ಬರೆದುಕೊಡುತ್ತೇನೆ" ಎಂದ ಕುವೆಂಪುರವರು "ಪುಟ್ಟಾಚಾರಿಯ ಕಾಡುಕೋಳಿ" ಎಂಬ ಕೃತಿಯನ್ನು ಅಕ್ಷರಸ್ಥರಾಗುತ್ತಿದ್ದ ವಯಸ್ಕರರಿಗೆ ಸರಳವಾಗಿ ಅರ್ಥವಾಗುವಂತೆ ಸಕಾಲದಲ್ಲಿ ಬರೆದುಕೊಟ್ಟರು. ಈ ಕೃತಿಯೂ ಮಾದಯ್ಯಗೌಡರ ಕಾಲದಲ್ಲಿ ಪ್ರಕಟಗೊಂಡಿತು.

ಕುವೆಂಪು ಅವರನ್ನು ಕಾರ್ಯಕ್ರಮಗಳಿಗೆ ಒಪ್ಪಿಸುವುದು ಕಷ್ಟಕರವಾಗಿತ್ತು. ಕುವೆಂಪು ಮತ್ತು ಮಾದಯ್ಯಗೌಡರ ಮಧ್ಯೆ ಪರಸ್ಪರ ಗೌರವಾದರಗಳಿದ್ದವು. ಹಾಗಾಗಿ ನಂಜನಗೂಡು ವಿದ್ಯಾಪೀಠದಲ್ಲಿ ಏರ್ಪಡಿಸಿದ್ದ ಶಿಬಿರಾರ್ಥಿಗಳ ಘಟಿಕೋತ್ಸವಕ್ಕೆ ಮಾದಯ್ಯಗೌಡರ ಆಹ್ವಾನದ ಮೇರೆಗೆ ಕುವೆಂಪುರವರು ಆಗಮಿಸಿ ಘಟಿಕೋತ್ಸವ ಭಾಷಣ ಮಾಡಿದರು.

ಕುವೆಂಪು ಅವರು ಘಟಿಕೋತ್ಸವದ ಕಾರ್ಯಕ್ರಮಕ್ಕೆ ಬಂದುದು ಮಾದಯ್ಯಗೌಡರಿಗೆ ಬಹಳ ಸಂತೋಷವನ್ನುಂಟುಮಾಡಿತ್ತು.

ಮಾದಯ್ಯಗೌಡರು ಬೆಂಗಳೂರು ಬಸವನಗುಡಿಯ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಮುಖ್ಯಸ್ಥರಾಗಿದ್ದ ಮಂಕುತಿಮ್ಮ ಕಗ್ಗದ ದಾರ್ಶನಿಕ ಡಿ.ವಿ.ಜಿಯವರ ಬಗೆಗೆ ಅಪಾರ ಗೌರವ ಹೊಂದಿದ್ದರು. ಅವರ ಪುಸ್ತಕಗಳನ್ನು ಪ್ರಕಟಿಸಲು ಡಿವಿಜಿಯವರು ಕೇಳಿದಾಗ ಗೌಡರು ವಯಸ್ಕರ ಶಿಕ್ಷಣ ಸಂಸ್ಥೆಯ ಮೂಲಕ ಪ್ರಕಟಿಸಿದರು. 'ಬಾಳಿಗೊಂದು ನಂಬಿಕೆ' ವಯಸ್ಕರ ಶಿಕ್ಷಣ ಸಂಸ್ಥೆಯ ಮೂಲಕ ಪ್ರಕಟಗೊಂಡ ಸುಂದರ, ವೈಚಾರಿಕ, ಮತ್ತು ಆಧ್ಯಾತ್ಮಿಕ ಕೃತಿ. ಮಾನವ ಜೀವನದ ಆದರ್ಶವ್ಯಕ್ತಿ ಶ್ರೀಆಂಜನೇಯಸ್ವಾಮಿ ಎಂದು ಡಿವಿಜಿಯವರು 'ಬಾಳಿಗೊಂದು ನಂಬಿಕೆ' ಕೃತಿಯಲ್ಲಿ ತೋರಿಸಿದ್ದಾರೆ. ಆ ಕೃತಿಯಲ್ಲಿನ ವಿಚಾರಗಳನ್ನು ಹಿಂದೆ ಡಿವಿಜಿಯವರು ಆಗಾಗ ಕೆಲವು ಹಳ್ಳಿಗಳಲ್ಲಿ ನೀಡಿದ ವಿಶೇಷ ಉಪನ್ಯಾಸಗಳಲ್ಲಿ ನಿರೂಪಿಸಿದ್ದರು. ಆ ಭಾಷಣಗಳನ್ನು ಕೇಳಿದ ವಿದ್ಯಾವಂತ ಗ್ರಾಮಾಸ್ಥರು ಡಿವಿಜಿಯವರನ್ನು ಅಭಿನಂದಿಸಿ ಪ್ರೋತ್ಸಾಹಿಸಿದರು. ಆ ಉಪನ್ಯಾಸಗಳ ಆಧಾರದ ಮೇಲೆ ಡಿ.ವಿ.ಜಿಯವರು ಅವರ ಸ್ವಂತ ನಂಬಿಕೆಯನ್ನು ಒಂದು ಪ್ರಬಂಧವೋ ಅಥವಾ ಪುಸ್ತಕ ರೂಪದಲ್ಲಿಯೋ ಸಮಗ್ರವಾಗಿಯೂ ಕಾರಣ ವಿವರಣೆಯೊಡನೆಯೂ ರೂಪಗೊಳಿಸಬೇಕೆಂಬ ಆಲೋಚನೆ ಅವರಿಗೆ ಬಹಳ ದಿನಗಳಿಂದ ಮನಸ್ಸಿನಲ್ಲಿತ್ತು. ಆ ಕೆಲಸವನ್ನು 'ಬಾಳಿಗೊಂದು ನಂಬಿಕೆ' ಎಂಬ ಪುಸ್ತಕದಲ್ಲಿ ರೂಪಗೊಳಿಸಿ ಮಾದಯ್ಯಗೌಡರಿಗೆ ತಿಳಿಸಿ ಆ ಪುಸ್ತಕಕ್ಕೆ ಒಂದು ಮುನ್ನುಡಿಯನ್ನು ಬರೆದು ಕೊಡಲು ಕೇಳಿದರು. ಮಾದಯ್ಯಗೌಡರು ಸಂತೋಷದಿಂದ ಆ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಕೊಟ್ಟು ಆ ಪುಸ್ತಕವನ್ನು ವಯಸ್ಕರ ಶಿಕ್ಷಣ ಸಮಿತಿ ಮೂಲಕವೇ ಪ್ರಕಟಣೆಮಾಡಿ ಡಿವಿಜಿಯವರಿಗೆ ಮನ್ನಣೆ ತೋರುವುದರ ಜೊತೆಗೆ, ಅವರ ಮೂಲ್ದೋಶಕ್ಕೆ ಸಾಧನ ಸಹಾಯವನ್ನು ಒದಗಿಸಿದರು. ಗೌಡರು ಆ ಪುಸ್ತಕಕ್ಕೆ ಬರೆದ ಅರಿಕೆಯನ್ನು ಯತಾವತ್ತಾಗಿ ಈ ಕೆಳಗೆ ಕೊಡಲಾಗಿದೆ:

"ಈ ದಿನ ಭಾರತ ಸ್ವಾತಂತ್ರ್ಯದ ವರ್ಷದ ಹೆಚ್ಚು. ಅದು ಒಂದು ಉತ್ಸವದ ಅಡಂಬರವಾಗಿ ಉಳಿಯದೆ ಜನರಲ್ಲಿ ಹೊಸ ಉತ್ಸಾಹ ತುಂಬುವ ಅವಕಾಶವಾಗಬೇಕು. ನಮ್ಮಲ್ಲಿ ದೇಶಾಭಿಮಾನ, ಜನರಲ್ಲಿ ಗೌರವ, ಸಾಕಷ್ಟು ಎದ್ದು ತೋರುತ್ತಿಲ್ಲ. ಇನ್ನೂರು ವರ್ಷಗಳ ದಾಸ್ಯ ಜನರ ಮನಸ್ಸನ್ನು ದುರ್ಬಲಮಾಡಿದೆ".

"ಜನರ ಅಂತಶ್ಶಕ್ತಿ ಹೆಚ್ಚಿ ಅವರ ಮುಖಗಳಲ್ಲಿ ಸ್ವಾತಂತ್ರ್ಯದ ಹೊಸ ಕಳೆ ಎದ್ದು ಕಾಣಬೇಕಾದರೆ ತಮ್ಮ ಬಾಳನ್ನು ದೊಡ್ಡದುಮಾಡಿಕೊಳ್ಳಲು ಅವರಿಗೆ ಆಸೆಬೇಕು; ಬಾಳಿನಲ್ಲಿ

ಹಿರಿಯ ನಂಬಿಕೆ ಬೇಕು. ಅಂಥ ಒಂದು ನಂಬಿಕೆಯನ್ನು ಶ್ರೀಡಿ.ವಿ.ಗುಂಡಪ್ಪನವರ ಈ ಪುಸ್ತಕ ಕೊಡಬಲ್ಲದು".

"ಆಂಜನೇಯ ಗುಡಿಯಿಲ್ಲದ ಊರಿಲ್ಲ, ಹಳ್ಳಿಯಿಲ್ಲ. ಆದರೆ ಅನೇಕ ಕಡೆ ಆ ಗುಡಿಗಳು ಪಾಳು ಬಿದ್ದಿವೆ. ಪಾಳು ಬೀಳದೆ ಇರುವ ಕಡೆ ಆಂಜನೇಯನಿಗೆ ಪೂಜೆ ಉತ್ಸವಗಳು ಇಲ್ಲ: ಅವೂ ಇದ್ದ ಕಡೆ ನಮ್ಮ ಪೂಜೆ ಬರಿಯ ಅರ್ಥವಿಲ್ಲದ ಆಚಾರಗಳಾಗಿ ಉಳಿದಿದೆ. ರಾಮ ಮಂದಿರಗಳು ಜೂಜುಕಟ್ಟೆಯಾಗಿವೆ; ಇಲ್ಲವೆ ತಾಳ ಮದ್ದಲೆಗಳ ಗದ್ದಲ ಸ್ಥಳಗಳಾಗಿವೆ".

"ಮಾನವ ಜೀವನದ ಆದರ್ಶವ್ಯಕ್ತಿ ಆಂಜನೇಯಮೂರ್ತಿಯೆಂದು ಲೇಖಕರು ಈ ಪುಸ್ತಕದಲ್ಲಿ ತೋರಿಸಿದ್ದಾರೆ. ಆಂಜನೇಯನಲ್ಲಿ ನಮಗಿರುವ ಭಕ್ತಿ ಈ ತಿಳುವಳಿಕೆಯಿಂದ ತುಂಬಿ, ಅವನ ಪೂಜೆ ಸಾರ್ಥಕವಾಗಲಿ. ಆ ಪೂಜೆ ನಮ್ಮನ್ನು ಕರ್ತವ್ಯನಿಷ್ಠರನ್ನಾಗಿ ಮಾಡಲಿ".

"ಬಾಳಿಗೊಂದು ನಂಬಿಕೆ" ಎಂಬ ಈ ಕೃತಿಯನ್ನು ವಯಸ್ಕರ ಶಿಕ್ಷಣ ಸಮಿತಿಯಿಂದ ಪ್ರಕಟಣೆಮಾಡಿ ಸೂಕ್ತ ಸಂಭಾವನೆಯನ್ನು ಡಿವಿಜಿಯವರಿಗೆ ನೀಡಲಾಯಿತು. ಅದರ ಜೊತೆಗೆ ವಯಸ್ಕರ ಶಿಕ್ಷಣ ಸಮಿತಿಯ ಗ್ರಂಥಾಲಯಗಳಿಗೆ ಕೊಂಡುಕೊಳ್ಳುವುದರ ಮೂಲಕ ಪುಸ್ತಕವು ಮಾರಾಟವಾಗಲು ಪ್ರೋತ್ಸಾಹ ನೀಡಲಾಯಿತು. ಇನ್ನೂ ಅನೇಕ ಗಣ್ಯ ಸಾಹಿತಿಗಳ ಮತ್ತು ಉದಯೋನ್ಮುಖ ಸಾಹಿತಿಗಳ ಕೃತಿಗಳು ಗೌಡರ ಕಾಲದಲ್ಲಿ ಪ್ರಕಟಗೊಂಡವು.

ಮಾದಯ್ಯಗೌಡರ ಅಧಿಕಾರಾವಧಿಯಲ್ಲಿಯೇ ಎರಡನೆಯ ವಿದ್ಯಾಪೀಠವು ಹಾಸನ ಜಿಲ್ಲೆಯ ಯಗಚಿ ನದಿ ದಂಡೆಯಲ್ಲಿ ಪ್ರಾರಂಭವಾಯಿತು. ಮೊದಲನೆಯ ವಿದ್ಯಾಪೀಠವು ನಂಜನಗೂಡಿನಲ್ಲಿ ಬಾಲಕೃಷ್ಣಯ್ಯನವರ ಅಧಿಕಾರಾವಧಿಯಲ್ಲಿ ಆರಂಭವಾಗಿತ್ತು. ಬಾಲಕೃಷ್ಣಯ್ಯ, ನ.ಭದ್ರಯ್ಯ, ವಿಶ್ವೇಶ್ವರ ಗೌಡರಂತಹ ಗಾಂಧೀವಾದಿಗಳ ಶ್ರದ್ಧಾಪೂರ್ವಕ ಸೇವೆಗಳ ಫಲವಾಗಿ ನಂಜನಗೂಡು ವಿದ್ಯಾಪೀಠವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿತು. ಶ್ರೀಮನ್ಮಹಾರಾಜರು ಈ ವಿದ್ಯಾ ಪೀಠಕ್ಕೆ ಭೂಮಿಯನ್ನು ನೀಡಿದ್ದರು. ಮಾದಯ್ಯಗೌಡರ ಕಾಲದ ಯಗಚಿನದಿ ದಂಡೆಯ ವಿದ್ಯಾಪೀಠಕ್ಕೆ ದಾನಿಗಳಾದ ಡಾ.ಸಂಪತ್ತು ಅವರು ಹದಿನಾಲ್ಕು ಎಕರೆಗಳಷ್ಟು ಜಮೀನನ್ನು ದಾನ ನೀಡಿದ್ದರು.

ಮಾದಯ್ಯಗೌಡರ ಅಧಿಕಾರಾವಧಿಯಲ್ಲಿ ಅನೇಕ ವಯಸ್ಕರ ಶಿಕ್ಷಣ ಸಂಬಂಧೀ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಶಿಕ್ಷಣದ ಬಗೆಗೆ ವಯಸ್ಕರರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದರು. ಕನ್ನಂಬಾಡಿಯಲ್ಲಿ ನವೆಂಬರ್ ೨೨, ೧೯೪೯ ರಿಂದ ಡಿಸೆಂಬರ್ ೪,

೧೯೪೯ ರವರೆಗೆ ಯುನೆಸ್ಕೋ ಸಹಕಾರದೊಂದಿಗೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಿದ್ದರು. ಡಿಸೆಂಬರ್ ೧೯೫೩ರಲ್ಲಿ ಮೈಸೂರು ಸಮೀಪದ ಆಲೋಕದಲ್ಲಿ ಯುನೆಸ್ಕೋ ತರಬೇತಿ ಶಿಬಿರ ಏರ್ಪಡಿಸಿದ್ದರು. ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಅವು ಚನ್ನಾಗಿ ಕೆಲಸ ಮಾಡಲು ಗಮನ ನೀಡಿದರು.

ಮಾದಯ್ಯಗೌಡರು ಅಧ್ಯಕ್ಷರಾಗಿದ್ದ ಸಮಯದಲ್ಲಿ ವಯಸ್ಕರ ಶಿಕ್ಷಣ ಸಮಿತಿಯು ಜಾನಪದ ಉಳಿವಿಗೆ ಹೆಚ್ಚು ಗಮನ ಹರಿಸಿತು. ಸೂತ್ರದಬೊಂಬೆ, ಬಯಲಾಟ, ಜನಪದಗೀತೆ ಮುಂತಾದ ಜಾನಪದ ಕ್ರೀಡೆಗಳು, ಗ್ರಾಮೀಣ ಕಲೆಗಳ ಪುನರುಜ್ಜೀವನಗೊಳ್ಳಲು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರು. ವಯಸ್ಕರ ಶಿಕ್ಷಣ ಸಮಿತಿಯ ಸಿಬ್ಬಂದಿಯನ್ನು ಬಳಕೆ ಮಾಡಿಕೊಂಡು ಎಲ್ಲೆಲ್ಲಿ ಯಾವ ಯಾವ ಗ್ರಾಮೀಣ ಕಲೆಗಳು ಇವೆ ಎಂಬುದನ್ನು ತಿಳಿದುಕೊಂಡು ಅಲ್ಲಿ ಅವು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೊಳ್ಳಲು ಪ್ರೋತ್ಸಾಹ ನೀಡಿದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಸೂತ್ರದಗೊಂಬೆ ಆಡಿಸುವವರು ಇದ್ದಾರೆ ಎಂಬುದು ತಿಳಿದ ಮಾದಯ್ಯಗೌಡರು ಅವರಿಗೆ ಸಮಿತಿಯಿಂದ ವಿವಿಧ ರೀತಿಯಲ್ಲಿ ನೆರವು ನೀಡಿದರು. ಅಲ್ಲಿನ ಸೂತ್ರದ ಬೊಂಬೆಯ ಕಲಾವಿದರನ್ನು ಎಸ್.ವಿ.ಕೃಷ್ಣಮೂರ್ತಿರಾವ್ ಅವರೊಂದಿಗೆ ದೆಹಲಿಗೆ ಕರೆದುಕೊಂಡು ಹೋಗಿ ಪ್ರದರ್ಶನ ನೀಡಲು ನೆರವು ನೀಡಿದರು. ಆ ಪ್ರದರ್ಶನದಕ್ಕೆ ಗೌಡರ ವಿಶೇಷ ಆಹ್ವಾನದ ಮೇರೆಗೆ ಅಂದಿನ ಉಪರಾಷ್ಟ್ರಪತಿಗಳಾಗಿದ್ದ ಡಾ.ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ಆಗಮಿಸಿ ಸೂತ್ರದ ಬೊಂಬೆಯಾಟವನ್ನು ನೋಡಿ ಮೆಚ್ಚುಗೆ ಸೂಚಿಸಿದ್ದರು.

ಮಾದಯ್ಯಗೌಡರು ಸಮಿತಿಯ ಅಧ್ಯಕ್ಷರಾಗಿದ್ದಾಗ ಡೆನ್ಮಾರ್ಕ್ ದೇಶದ ವಯಸ್ಕರ ಶಿಕ್ಷಣ ತಜ್ಞರ ಸಂಪರ್ಕಗಳಿಸಿದರು. ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಭಾರತ ಸರಕಾರದ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ವಯಸ್ಕರ ಶಿಕ್ಷಣತಜ್ಞ ಡಬ್ಲ್ಯೂ.ಜಿ.ಈಗಲ್‌ಟನ್ ಅವರನ್ನು ಜೊತೆಗೆ ಕರೆದುಕೊಂಡು ಡೆನ್ಮಾರ್ಕ್ ದೇಶಕ್ಕೆ ಹೋಗಿ ಬಂದರು. ಅವರು ಡೆನ್ಮಾರ್ಕ್ ದೇಶಕ್ಕೆ ನೀಡಿದ ಭೇಟಿಯು ಯುರೋಪ್ ರಾಷ್ಟ್ರಗಳಲ್ಲಿ ನಮ್ಮ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳನ್ನು ಪರಿಚಯ ಮಾಡಿಸುವಲ್ಲಿ ಬಹಳಷ್ಟು ನೆರವಾಯಿತು. ಉತ್ತರೋತ್ತರವಾಗಿ ವಯಸ್ಕರ ಶಿಕ್ಷಣ ಸಮಿತಿಗೆ ಡೆನ್ಮಾರ್ಕ್ ದೇಶದ ಶಿಕ್ಷಣ ಇಲಾಖೆಯ ನೆರವು ಪಡೆದು ಕೊಳ್ಳುವಲ್ಲಿ ಬಹಳಷ್ಟು ನೆರವಾಯಿತು. ಅಲ್ಲಿನ ವಯಸ್ಕರ ಶಿಕ್ಷಣ ಸಂಸ್ಥೆಗಳ ಮತ್ತು ತಜ್ಞರ ಪರಿಚಯ ಉಂಟಾಗಿದ್ದರಿಂದ ಇಲ್ಲಿನ ವಯಸ್ಕರ ಶಿಕ್ಷಣ ಸಮಿತಿಯ ಸಿಬ್ಬಂದಿ ಅಲ್ಲಿಗೆ ಹೋಗಿ ವಯಸ್ಕರ ಶಿಕ್ಷಣ ಸಮಿತಿ ಕ್ಷೇತ್ರದಲ್ಲಿ ವಿಶೇಷ ತರಬೇತಿ ಪಡೆದುಕೊಂಡು ಬರಲು ಅನುಕೂಲ ದೊರೆಯುವಂತಾಯಿತು.

ಎಸ್.ರಜತಾದ್ರಿ, ಬಿ.ವಿ.ಸತ್ಯನಾರಾಯಣ, ರಾಮಚಂದ್ರ, ಕೃಷ್ಣಮೂರ್ತಿ ಇನ್ನೂ ಮುಂತಾದವರನ್ನು ಡೆನ್ಮಾರ್ಕ್ ದೇಶಕ್ಕೆ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ತರಬೇತಿಗೆ ಕಳುಹಿಸಿ ಕೊಡಲಾಯಿತು. ಅವರು ಡೆನ್ಮಾರ್ಕ್ ದೇಶದಲ್ಲಿ ತರಬೇತಿ ಪಡೆದುಕೊಂಡು ಬಂದ ನಂತರ ವಯಸ್ಕರ ಶಿಕ್ಷಣ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳಾದರು. ಮಾತ್ರವಲ್ಲ, ಅವರು ರಾಜ್ಯದಲ್ಲಿ ವಯಸ್ಕರ ಶಿಕ್ಷಣವು ಚನ್ನಾಗಿ ಅಭಿವೃದ್ಧಿಗೊಳ್ಳಲು ಮತ್ತು ಹೊಸ ತಲೆಮಾರಿನ ಸಂಪನ್ಮೂಲ ವ್ಯಕ್ತಿಗಳನ್ನು ಬೆಳೆಸಲು ನೆರವಾದರು.

ಡೆನ್ಮಾರ್ಕ್ ದೇಶದ ಹಾಗೂ ಯುನೆಸ್ಕೋ ವಿವಿಧ ದೇಶಗಳಲ್ಲಿ ವಯಸ್ಕರ ಶಿಕ್ಷಣ ಅಭಿವೃದ್ಧಿಗೆ ನೆರವು ನೀಡುವ ಯೋಜನೆಗಳ ಅಡಿಯಲ್ಲಿ ಮಾದಯ್ಯಗೌಡರು ಯುನೆಸ್ಕೋದ ಗಿಫ್ಟ್ ಕೂಪನ್ ಯೋಜನೆ ಮೂಲಕ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಗೆ ಹಣಕಾಸು ನೆರವು ಪಡೆದುಕೊಳ್ಳಲು ಕ್ರಮ ಕೈಗೊಂಡರು. ಡೆನ್ಮಾರ್ಕ್ ದೇಶದ ವಯಸ್ಕರ ಶಿಕ್ಷಣರ ತಜ್ಞರ ಸಂಪರ್ಕದ ಫಲವಾಗಿ ಮುಂದೆ ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಸಿಬ್ಬಂದಿ ತರಬೇತಿ ಕೇಂದ್ರ ಸ್ಥಾಪಿಸಲು ಅನುಕೂಲವಾಯಿತು. ಅಲ್ಲದೆ, ಡೆನ್ಮಾರ್ಕ್ ದೇಶದ ಇಂಟರ್‌ನ್ಯಾಷನಲ್ ಕಮಿಟಿ ಆಫ್ ಫೋಕ್ ಹೈಸ್ಕೂಲ್ ಅಸೋಸಿಯೇಶನ್‌ನ ಸಂಪರ್ಕದಿಂದಾಗಿ ಅದರ ಹಣಕಾಸು ಮತ್ತು ತಾಂತ್ರಿಕ ನೆರವು ದೊರೆಯಿತು. ಇದರಡಿಯಲ್ಲಿ ವಿವಿಧ ವರ್ಗದ ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ ತರಬೇತಿ, ಪುನರ್ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲು ಸಹಾಯಕವಾಯಿತು. ಈ ನಿಟ್ಟಿನಲ್ಲಿ ಗೌಡರು ಹೆಚ್ಚು ಶ್ರಮವಹಿಸಿ ಕೆಲಸಮಾಡಿದರು.

ಚಲನಚಿತ್ರ ಪ್ರದರ್ಶನ, ವಯಸ್ಕರ ಶಿಕ್ಷಣ ಸಮಿತಿಯ ಪ್ರಮುಖ ಕಾರ್ಯಕ್ರಮ ಗಳಲ್ಲೊಂದು. ಚಲನಚಿತ್ರ ಪ್ರದರ್ಶನದ ಮೂಲಕ ವಯಸ್ಕರ ಶಿಕ್ಷಣ ನೀಡುವುದು ಗ್ರಾಮೀಣ ಪ್ರದೇಶದಲ್ಲಿ ವಯಸ್ಕರರನ್ನು, ಯುವಕರನ್ನು ಆಕರ್ಷಣೆ ಮಾಡಲು ಬಹಳಷ್ಟು ನೆರವಾಯಿತು. ಆ ಮಾಧ್ಯಮದ ಮಹತ್ವವನ್ನು ಗೌಡರು ಚನ್ನಾಗಿ ಅರಿತಿದ್ದರು. ಗೌಡರ ಅವಧಿಯಲ್ಲಿ ಚಲನಚಿತ್ರ ಪ್ರದರ್ಶನಗಳ ಮುಂದುವರಿಕೆಯೊಂದಿಗೆ ಇನ್ನೂ ಕೆಲವು ಹೊಸ ಚಲನಚಿತ್ರಗಳನ್ನು ಚಿತ್ರೀಕರಣ ಮಾಡಲಾಯಿತು. ಚಲನಚಿತ್ರಗಳನ್ನು ವಯಸ್ಕ ಶಿಕ್ಷಣ ಸಮಿತಿಯ ಪ್ರಚಾರ ಕಾರ್ಯಗಳಿಗೆ ಸಂಪರ್ಕ ಸೇತುವೆಗಳಾಗಿ ಬಳಕೆ ಮಾಡಿಕೊಳ್ಳಲಾಯಿತು. ವಯಸ್ಕರರಿಗೆ ಶಿಕ್ಷಣ ಏಕೆ ಬೇಕೆಂಬುದರ ಪ್ರಾಮುಖ್ಯತೆಯನ್ನು ತಿಳಿಸಿಕೊಡಲು 'ಈರ-ಬೀರಿ' ಎಂಬ ಚಲನಚಿತ್ರವನ್ನು ನಿರ್ಮಿಸಲಾಯಿತು. ರಾಜ್ಯದ ಅಭಿವೃದ್ಧಿ ಸಾಧನೆಗಳನ್ನು ತಿಳಿಸಿಕೊಡಲು 'ನಮ್ಮ ಮೈಸೂರು' ಎಂಬ ಚಲನಚಿತ್ರವನ್ನು ನಿರ್ಮಿಸಲಾಯಿತು. ಈ ಎರಡು ಚಲನಚಿತ್ರಗಳನ್ನು ನಾಡಿನ ವಿವಿಧೆಡೆ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳ ಜೊತೆಗೆ ಪ್ರದರ್ಶನ ಮಾಡಲಾಯಿತು. ಎಲ್ಲಾ ಕಡೆ ಚಲನಚಿತ್ರಗಳನ್ನು ನೋಡಲು ಗ್ರಾಮೀಣ ಜನರು ವಿಶೇಷವಾಗಿ ಮಕ್ಕಳು ಕಿಕ್ಕಿರಿದು ಸೇರುತ್ತಿದ್ದರು. ಶಿಕ್ಷಣಕ್ಕೆ

ಅಗತ್ಯವಿರುವ ಚಲನಚಿತ್ರ ಸಾಧನಗಳನ್ನು ತಯಾರಿಸುವ ಕ್ಷೇತ್ರದಲ್ಲಿ ತರಬೇತಿ ಕೊಡಲು ಭಾರತೀಯ ವಯಸ್ಕರ ಶಿಕ್ಷಣ ಸಂಘವು ಯುನೆಸ್ಕೋ, ಭಾರತ ಸರ್ಕಾರ, ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಡನೆ ಗೌಡರ ಸಂಚಾಲಕತ್ವದಲ್ಲಿ ಒಂದು ವಿಚಾರ ಸಂಕಿರಣವನ್ನು ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಮೈಸೂರಿನಲ್ಲಿ ಏರ್ಪಡಿಸಲಾಗಿತ್ತು.

ಭಾರತದ ವಯಸ್ಕರ ಶಿಕ್ಷಣ ಸಂಘಟನೆಯು ಸಾಮಾಜಿಕ ಶಿಕ್ಷಣದ ಮನರಂಜನಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ವಿಚಾರ ಗೋಷ್ಠಿಗಳನ್ನು ಜಬ್ಬಲ್‌ಪುರ್, ಇಂದೂರ್, ದೆಹಲಿ ಮತ್ತು ಬಿಕ್ರಮ್ ಪಟ್ಟಣಗಳಲ್ಲಿ ಏರ್ಪಡಿಸಿತ್ತು. ಆ ನಂತರದ ವಿಚಾರ ಸಂಕಿರಣವನ್ನು ಮೈಸೂರು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಸಂಘಟಿಸಲಾಗಿತ್ತು. ಆಗ ಗೌಡರು ಭಾರತದ ವಯಸ್ಕರ ಶಿಕ್ಷಣ ಸಂಘದ ಉಪಾಧ್ಯಕ್ಷರೂ ಸಹ ಆಗಿದ್ದರು. ಈ ವಿಚಾರ ಗೋಷ್ಠಿಯ ಸ್ವಾಗತ ಭಾಷಣವನ್ನು ಮಾದಯ್ಯಗೌಡರು ಮಾಡಿದರು. ಈ ವಿಚಾರ ಗೋಷ್ಠಿಯಲ್ಲಿ ರಾಷ್ಟ್ರದ ವಿವಿಧೆಡೆಯ ವಯಸ್ಕರ ಶಿಕ್ಷಣ ತಜ್ಞರು/ಕಾರ್ಯಕರ್ತರು/ಸಂಪನ್ಮೂಲ ವ್ಯಕ್ತಿಗಳು/ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಮೈಸೂರು ರಾಜ್ಯದ ಅಂದಿನ ರಾಜಪ್ರಮುಖರಾಗಿದ್ದ ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್‌ರವರು ಆಗಮಿಸಿ ವಿಚಾರ ಗೋಷ್ಠಿಯನ್ನು ಉದ್ಘಾಟನೆ ಮಾಡಿದರು. ಈ ವಿಚಾರ ಸಂಕಿರಣದಲ್ಲಿ ಯಕ್ಷಗಾನ, ಬಯಲಾಟ, ಜಾನಪದ ಗೀತೆಗಳು, ಗ್ರಾಮೀಣ ಕ್ರೀಡೆಗಳ ವಿಚಾರಗಳು ಚರ್ಚೆಗೆ ಬಂದವು. ವಿವಿಧ ಯಕ್ಷಗಾನ ನಾಟಕಗಳು ಬಯಲಾಟಗಳ ಪ್ರದರ್ಶನಗಳು ನಡೆದು ರಾಷ್ಟ್ರದ ವಿವಿಧೆಡೆಯಿಂದ ಬಂದು ಭಾಗವಹಿಸಿದವರ ಮನತಣಿಸಿದವು. ವಯಸ್ಕರ ಶಿಕ್ಷಣ ಸಮಿತಿಯು–ಸಾಕ್ಷರತಾ ತರಗತಿಗಳು, ಗ್ರಾಮೀಣ ಗ್ರಂಥಾಲಯಗಳು, ವಿದ್ಯಾಪೀಠಗಳು, ಸಾಮಾನ್ಯ ಶಿಕ್ಷಣ ಘಟಕಗಳು, ವಯಸ್ಕರ ಶಿಕ್ಷಣ ಪ್ರಕಟಣೆಗಳು, ವಯಸ್ಕರ ಶಿಕ್ಷಣ ಚಲನಚಿತ್ರಗಳು, ಬೆಳಕು, ಪುಸ್ತಕ ಪ್ರಪಂಚ ಪತ್ರಿಕೆಗಳ ಪ್ರಕಟಣೆ, ವಿಚಾರ ಸಂಕಿರಣಗಳ ಸಂಘಟನೆ, ವಯಸ್ಕರ ಶಿಕ್ಷಣ ತರಬೇತಿ ಮುಂತಾದ ಕ್ಷೇತ್ರಗಳಲ್ಲಿನ ಗೌಡರ ಸೇವೆಯು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯ ಇತಿಹಾಸದಲ್ಲಿ ವಿಶೇಷ ಸ್ಥಾನಪಡೆದಿವೆ.

ಗೌಡರ ಕಾರ್ಯದಕ್ಷತೆ ಅಸದಳವಾದುದು. ಗ್ರಾಮೀಣ ಜನರ ಬಗ್ಗೆ ಅವರಿಗಿದ್ದ ಕಾಳಜಿ, ಗ್ರಾಮೀಣಾಭಿವೃದ್ಧಿಯಾಗದೆ ದೇಶದ ಅಭಿವೃದ್ಧಿ ಆಗದು ಎಂಬುದರ ಬಗ್ಗೆ ಅವರಿಗಿದ್ದ ಅಚಲವಾದ ನಂಬಿಕೆ ಇದಕ್ಕೆ ಕಾರಣವಾಗಿತ್ತು. ಹಾಗಾಗಿ ಎಲ್ಲ ರೀತಿಯಿಂದಲೂ ವಯಸ್ಕರ ಶಿಕ್ಷಣಕ್ಕೆ ಅವರು ಹೆಚ್ಚಿನ ಗಮನಹರಿಸಿದರು. ಇದಕ್ಕಾಗಿ ವಿದೇಶಿ ನೆರವನ್ನು ಹಲವು ರೀತಿಯಲ್ಲಿ ಪಡೆಯಲು ಪ್ರಯತ್ನ ನಡೆಸಿದರು. ಕೇವಲ ಶಿಕ್ಷಣಕ್ಕಷ್ಟೇ ಅಲ್ಲದೆ ಗ್ರಾಮೀಣಾಭಿವೃದ್ಧಿಗೆ ಬೇಕಾದ ಎಲ್ಲ ಬಗೆಯ ಶಿಕ್ಷಣವನ್ನು ಕೊಡಿಸಲು ಗೌಡರು ಮಾಡಿದ ಪ್ರಯತ್ನ ಪ್ರಶಂಸಾರ್ಹವಾದದ್ದು.

❖

# ೮. ಮಾದಯ್ಯಗೌಡರ ವಕೀಲಿ ವೃತ್ತಿ ಮತ್ತು ಸಾಂಸಾರಿಕ ಬದುಕು

ಮಾದಯ್ಯಗೌಡರು ಬಾಂಬೆ ಪ್ರೆಸಿಡೆನ್ಸಿಯ ಪುಣೆಯಲ್ಲಿ ಕಾನೂನು ವಿದ್ಯಾಭ್ಯಾಸವನ್ನು ೧೯೨೫-೨೬ನೆ ಶೈಕ್ಷಣಿಕ ವರ್ಷದಲ್ಲಿ ಮುಗಿಸಿಕೊಂಡು ತಮ್ಮ ಊರಿಗೆ ಬಂದರು. ಊರಿನ ಜನರಲ್ಲಿ ಮತ್ತು ಬಂಧು-ಬಾಂಧವರಲ್ಲಿ ಸಂಭ್ರಮವೋ ಸಂಭ್ರಮ. ಪೂನಾದಲ್ಲಿದ್ದಾಗಲೇ ಗೌಡರ ಸಹಪಾಠಿ ನಿಜಲಿಂಗಪ್ಪನವರು ಚಿತ್ರದುರ್ಗದಲ್ಲಿ ವಕೀಲಿ ವೃತ್ತಿ ಕೈಗೊಳ್ಳುವುದಾಗಿಯೂ ಮತ್ತು ಗೌಡರು ರಾಮನಗರದಲ್ಲಿ ವಕೀಲಿ ವೃತ್ತಿ ಕೈಗೊಳ್ಳುವುದಾಗಿಯೂ ಪರಸ್ಪರ ಚರ್ಚಿಸಿ ತೀರ್ಮಾನಕ್ಕೆಗೊಂಡಿದ್ದರು. ಊರಿನಲ್ಲಿ ಕೆಲವು ದಿನ ಇದ್ದು ನಂತರ ರಾಮನಗರಕ್ಕೆ ಬಂದು ಒಂದು ಬಾಡಿಗೆ ಮನೆಯಲ್ಲಿ ವಕೀಲಿ ವೃತ್ತಿಯನ್ನು ಗೌಡರು ಪ್ರಾರಂಭಿಸಿದರು. ಆ ಕಾಲದಲ್ಲಿ ಬಿ.ಎ., ಪದವಿ ನಂತರ ಎಲ್.ಎಲ್.ಬಿ ಮಾಡಿದವರು ಕಡಿಮೆ ಅಥವಾ ಇಲ್ಲವೆಂದರೂ ಸರಿಯೇ ಆಗಿತ್ತು. ನ್ಯಾಯಾಲಯಗಳಲ್ಲಿ ಕಕ್ಷೀದಾರರ ಪರವಾಗಿ ವಾದ ಮಾಡಲು ಪ್ಲೀಡರ್‌ಗಳು ಇರುತ್ತಿದ್ದರು. ಪ್ಲೀಡರ್ ಟೆಸ್ಟ್ ಪಾಸಾದವರು ಪ್ಲೀಡರ್ ಎಂಬ ಹುದ್ದೆಯೊಂದಿಗೆ ನ್ಯಾಯಾಲಯಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದರು. ಅವರು ಆರು ವರ್ಷ ವಕೀಲಿ ವೃತ್ತಿ ಮಾಡಿದ ಮೇಲೆ ಅಡ್ವೋಕೇಟ್ ಹುದ್ದೆ ಪಡೆಯುತ್ತಿದ್ದರು. ಕಾನೂನು ಕಾಲೇಜುಗಳು ಪ್ರಾರಂಭವಾಗುವುದಕ್ಕೂ ಮೊದಲು ಮದ್ರಾಸ್,

ಬಾಂಬೆ ಮತ್ತು ಕೊಲ್ಕತ್ತಾಗಳಲ್ಲಿ ಕಾನೂನು ಶಾಲೆಗಳು ಇದ್ದವು. ಪ್ಲೀಡರ್ ಟೆಸ್ಟ್‌ನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಲಾ ಕೋಚಿಂಗ್ ತರಗತಿಗಳನ್ನು ಆ ಕಾನೂನು ಶಾಲೆಗಳು ನಡೆಸುತ್ತಿದ್ದವು.

ಗೌಡರು ಮತ್ತು ನಿಜಲಿಂಗಪ್ಪನವರು ಎಲ್.ಎಲ್.ಬಿಯನ್ನು ಪುಣೆಯ ಕಾನೂನು ಕಾಲೇಜಿನಲ್ಲಿ ಓದುವಾಗ ಆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದವರು ಜೆ.ಆರ್.ಘರಪುರೆಯವರು. ಅವರು ೧೯೦೨ರಿಂದಲೇ ತಮ್ಮ ಸಹದ್ಯೋಗಿ ಪಿ.ಬಿ.ಸಿಂಘ್ನೆಯವರ ಜೊತೆಗೂಡಿ ಪ್ಲೀಡರ್ ಟೆಸ್ಟ್ ತೆಗೆದುಕೊಳ್ಳುವವರಿಗೆ ಕಾನೂನು ತರಗತಿಗಳನ್ನು ನಡೆಸುತ್ತಿದ್ದರು. ಇನ್ನೂ ಪುಣೆಯಲ್ಲಿ ಕಾನೂನು ಕಾಲೇಜು ಪ್ರಾರಂಭವಾಗಿರಲಿಲ್ಲ. ಪೂನಾ ಕಾನೂನು ಕಾಲೇಜು ೨೫ ಜೂನ್ ೧೯೨೪ರಲ್ಲಿ ಪ್ರಾರಂಭವಾಯಿತು. ಗೌಡರು, ನಿಜಲಿಂಗಪ್ಪನವರು, ಕೆ.ಸುಬ್ಬರಾಯರು ಇವರೆಲ್ಲಾ ಆ ಕಾಲೇಜು ಹೊಸದಾಗಿ ಪ್ರಾರಂಭವಾದಾಗ ಸೇರಿದ ಮೊದಲ ಹಂತದ ವಿದ್ಯಾರ್ಥಿಗಳು. ಅವರುಗಳಿಗೆ ಅದೊಂದು ಹೆಮ್ಮೆಯ ವಿಷಯ ಆಗಿತ್ತು.

ಯಾವುದೇ ವೃತ್ತಿಯ ಪ್ರಾರಂಭದಲ್ಲಿ ಕೆಲವೊಂದು ಸಮಸ್ಯೆಗಳನ್ನು, ಆತಂಕವನ್ನು ಹುಟ್ಟುಹಾಕುವುದು ಸಹಜ. ಅಂತಹುದೇ ಪರಿಸ್ಥಿತಿಯನ್ನು ಆರಂಭದಲ್ಲಿ ಗೌಡರೂ ಎದುರಿಸಬೇಕಾಯಿತು. ಮೊದ ಮೊದಲು ಹೊಸ ಡಾಕ್ಟರ್ ಬಳಿ, ಹೊಸ ವಕೀಲರ ಬಳಿ ಹೋಗಲು ಜನ ಅನುಮಾನಿಸುವುದು ಸಾಮಾನ್ಯ. ವಕೀಲ ವೃತ್ತಿ ಪ್ರಾರಂಭಿಸಿದ ಕೆಲವು ತಿಂಗಳು ಗೌಡರ ವಕೀಲಿ ವೃತ್ತಿಯ ವಿಷಯವು ಜನರಿಗೆ ಇನ್ನೂ ಗೊತ್ತಿಲ್ಲದ ಕಾರಣ ಪ್ರಾರಂಭದಲ್ಲಿ ಕೇಸುಗಳು ಬರುತ್ತಿದುದ್ದು ಕಡಿಮೆ. ಮೊದಲು ಒಂದೆರಡು ತಿಂಗಳು ಸಂಪಾದನೆ ಅಷ್ಟಕ್ಕಷ್ಟೆ. ಆದರೂ ಪರವಾಗಿರಲಿಲ್ಲ. ಬಂದ ಕೆಲವು ಕೇಸುಗಳಲ್ಲಿ ೩೦-೪೦ ರೂಪಾಯಿ ಸಂಪಾದನೆಯಾಗುತ್ತಿತ್ತು. ಅದು ಆ ಕಾಲದಲ್ಲಿ ಸಣ್ಣ ಮೊತ್ತವೇನೂ ಆಗಿರದೇ ದೊಡ್ಡ ಮೊತ್ತವೇ ಆಗಿತ್ತು. ಬಂದ ಆ ಹಣದಲ್ಲಿ ಒಂದು ಒಳ್ಳೆಯ ಬೋರ್ಡ್ ಬರೆಯಿಸಿದರು, ಒಂದು ಜಮಾಖಾನ, ಮೂರ್‍ನಾಲ್ಕು ಒರಗು ದಿಂಬುಗಳನ್ನು ಕೊಂಡುಕೊಂಡರು. ಬರೆಯಲು ಒಂದು ಡೆಸ್ಕ್ ಮಾಡಿಸಿಕೊಂಡರು. ಬೋರ್ಡಿಗೆ ಒಂದೋ ಎರಡೋ ರೂಪಾಯಿ ಕೊಟ್ಟಿರಬಹುದು. ಆಗಿನ ಕಾಲವೇ ಅಂತಹುದು.

ಆ ಕಾಲಕ್ಕಾಗಲೇ ರಾಮನಗರದಲ್ಲಿ ಎಂ.ಆರ್.ಕೃಷ್ಣರಾವ್, ಆರ್.ಎ.ಅಯ್ಯಂಗಾರ್, ಕೆ.ಟಿ.ಶ್ರೀನಿವಾಸನ್ ಮುಂತಾದವರು ಹೆಸರುವಾಸಿಯಾದ ವಕೀಲರಾಗಿದ್ದರು. ಕೃಷ್ಣರಾಯರು ಆಗಲೇ ಚನ್ನಾಗಿ ಪ್ರಾಕ್ಟೀಸ್ ಮಾಡಿ ಸಾಕಷ್ಟು ಹಣ ಸಂಪಾದಿಸಿದ್ದರು. ದುಡಿದೇ ಉಣ್ಣಬೇಕೆಂದೇನೂ ಅವರಿಗೆ ಇರಲಿಲ್ಲ. ಗೌಡರು ಕೃಷ್ಣರಾಯರನ್ನು ಆಗಾಗ ಭೇಟಿಮಾಡಿ

ವಕೀಲ ವೃತ್ತಿಯ ಬಗೆಗೆ ಸಲಹೆಗಳನ್ನು ಪಡೆಯುತ್ತಿದ್ದರು. ಗೌಡರ ವಿನಯ, ವಿಧೇಯತೆಗಳಿಂದ ಸಂತುಷ್ಟರಾದ ಕೃಷ್ಣರಾಯರು ಅವರಿಗೆ ವಕೀಲ ವೃತ್ತಿಯಲ್ಲಿ ಸಾಕಷ್ಟು ಸಹಕಾರ ನೀಡಲು ಪ್ರಾರಂಭಿಸಿದರು. ಕೃಷ್ಣರಾಯರು ಸಾಕಷ್ಟು ಕೇಸುಗಳನ್ನು ಆರಂಭದ ದಿನಗಳಲ್ಲಿ ಹೊಂದಿದ್ದರು. ಅವರು ಅಲ್ಲಿ ಬಹಳ ಹೆಸರುವಾಸಿಯಾದ ವಕೀಲರಾಗಿದ್ದರಿಂದ ಹೆಚ್ಚು ಹೆಚ್ಚು ಹೊಸ ಹೊಸ ಕೇಸುಗಳು ಅವರಿಗೆ ಬರುತ್ತಿದ್ದವು. ಆವರಿಗೆ ಎಲ್ಲಾ ಕೇಸುಗಳನ್ನು ಕೈಗೆತ್ತಿಕೊಳ್ಳಲು ಸಮಯದ ಅಭಾವ ಉಂಟಾಗುತ್ತಿತ್ತು. ತಾವು ಕೈಗೆತ್ತಿಕೊಳ್ಳಲಾಗದ ಕೇಸುಗಳನ್ನು ಗೌಡರ ಬಳಿ ಕಳುಹಿಸುತ್ತಿದ್ದರು. ಆಗ ರಾಮನಗರ ಸುತ್ತಮುತ್ತ ವ್ಯವಹಾರ, ವ್ಯವಸಾಯ ಮಾಡುತ್ತಿದ್ದ ಅನುಕೂಲಸ್ಥರೆಲ್ಲ ಗೌಡರು, ಮುಸ್ಲಿಮರು, ಅಂಗಡಿ ಶೆಟ್ಟರು ಮುಂತಾದವರು ಆಗಿದ್ದರು. ಹೀಗಾಗಿ ಇವರ ಕೇಸುಗಳು ಎಲ್.ಎಲ್.ಬಿ ಓದಿ ಯುವ ವಕೀಲರಾಗಿದ್ದ ಮಾದಯ್ಯಗೌಡರಿಗೆ ಬರಲಾರಂಭಿಸಿದವು. ಜೊತೆಗೆ ಗೌಡರು ಹಿರಿಯ ವಕೀಲರೊಂದಿಗೆ ವಿನಯ, ವಿಧೇಯತೆಗಳಿಂದ ನಡೆದುಕೊಳ್ಳುತ್ತಿದ್ದರು. ಎದುರಿಗೆ ಬಂದ ಹಿರಿಯ ವಕೀಲರುಗಳಿಗೆ, ಜಡ್ಜ್‌ಗಳಿಗೆ ಗೌರವದಿಂದ ವಂದಿಸುತ್ತಿದ್ದರು. ಇತರ ಹಿರಿಯ ವಕೀಲರು ತಾವು ಕೈಗೆತ್ತಿಕೊಳ್ಳುವ ಕೇಸುಗಳನ್ನು ಗೌಡರಿಗೆ ಸಿಗುವಂತೆ ಮಾಡುತ್ತಿದ್ದರು. ಗೌಡರು ತಾವಾಗಿಯೇ ಆರಿಸಿಕೊಂಡಿದ್ದ ವಕೀಲ ವೃತ್ತಿಯಲ್ಲಿ ಯಶಸ್ವಿಯಾಗಲು ನಿಷ್ಠೆಯಿಂದ ಶ್ರಮಿಸಿದರು. ಸದಾ ಕಾನೂನು ಪುಸ್ತಕಗಳ ಅಧ್ಯಯನಶೀಲರಾದರು. ಕೋರ್ಟಿನಲ್ಲಿ ಚನ್ನಾಗಿ ವಾದ ಮಾಡುವುದನ್ನು ಅಭ್ಯಾಸ ಮಾಡಿಕೊಂಡರು. ಪ್ರತಿಯೊಂದು ಕೇಸನ್ನು ಎರಡು ಮೂರು ಸಲ ಓದಿ ಅರ್ಥ ಮಾಡಿಕೊಳ್ಳುತ್ತಿದ್ದರು. ವೈಚಾರಿಕವಾಗಿ ಮತ್ತು ಸ್ಪಷ್ಟವಾಗಿ ವಾದ ಮಾಡುವ ವಿಧಾನವನ್ನು ಹಿರಿಯ ವಕೀಲರ ವಾದವನ್ನು ಕೇಳಿ ಅನುಸರಿಸುತ್ತಿದ್ದರು. ಜೊತೆಗೆ ಜಡ್ಜ್‌ಗಳ ಪ್ರತಿಕ್ರಿಯೆಗಳನ್ನು ಆಲಿಸುತ್ತಿದ್ದರು. ಓದುವುದು, ಕೋರ್ಟಿಗೆ ಹೋಗುವುದು, ಜನಗಳು, ಬಂಧು-ಬಾಂಧವರ ಒಡನಾಟ ಅವರ ವಕೀಲ ವೃತ್ತಿಯ ದಿನಚರಿಗಳಾದವು. ಗೌಡರ ವಕೀಲ ವೃತ್ತಿ ಕುದುರಿತು. ಹಣ ಸಂಪಾದನೆಗೆ ಕೊರತೆಯಿಲ್ಲದಂತಾಯಿತು. ಸಾರ್ವಜನಿಕ ಜೀವನದಲ್ಲಿ ಮತ್ತು ನ್ಯಾಯಾಲಯದಲ್ಲಿ ಚಿರಪರಿಚಿತರಾದರು. ಜನರು ಅವರನ್ನು 'ಲಾಯರ್ ಮಾದಯ್ಯಗೌಡರು' ಎಂದು ಕರೆಯಲು ಪ್ರಾರಂಭಿಸಿದರು. ಗೌಡರ ಸನ್ನಡತೆ, ವಿನಯ, ಮಾತುಗಾರಿಕೆ, ಇತ್ಯಾದಿ ಗುಣಗಳಿಂದಾಗಿ ಬಹಳ ಬೇಗ ಅವರು ಜನಪ್ರಿಯ ವಕೀಲರಾಗಿ ಹೆಸರು ಪಡೆದರು.

ಗೌಡರು ಇಂಟರ್‌ಮೀಡಿಯಟ್ ಓದುತ್ತಿದ್ದಾಗಲೇ ಅವರ ಅಕ್ಕ ಗೌರಮ್ಮ ಮತ್ತು ಮಾವ ಗಡ್ಡಪ್ಪನವರ ಒಬ್ಬಳೇ ಮಗಳಾಗಿದ್ದ ಚನ್ನಮ್ಮನೊಂದಿಗೆ ಮದುವೆ ಮಾಡಲಾಗಿತ್ತು.

ಮನೆಯವರೆಲ್ಲರೂ ಚನ್ನಮ್ಮನನ್ನು ಪ್ರೀತಿಯಿಂದ 'ತಾಯಿ', 'ತಾಯಮ್ಮ' ಎಂದು ಕರೆಯುತ್ತಿದ್ದರು. ಚನ್ನಮ್ಮ ರೂಪವತಿ, ಗುಣವತಿ, ಬುದ್ಧಿವಂತೆಯೂ ಹೌದು. ಶಾಲೆಗೆ ಹೋಗದಿದ್ದರೂ ಮನೆಯಲ್ಲಿಯೇ ಓದಯ್ಯ ಗುರುಗಳಿಂದ ಮನೆಪಾಠದ ಮೂಲಕ ವಿದ್ಯೆಯನ್ನು ಕಲಿಯುತ್ತಿದ್ದರು. ವಿದ್ಯಾಪಾರಂಗತರಾಗಿದ್ದ ಪಂಡಿತರೊಬ್ಬರು ವಾರಕ್ಕೆರಡು ಬಾರಿ ಮನೆಗೆ ಬಂದು ಸಂಸ್ಕೃತ ಪಾಠ ಹೇಳಿಕೊಡುತ್ತಿದ್ದರು. ತಾಯಿ-ಅಜ್ಜಿಯವರಿಂದ ಸಾಕಷ್ಟು ತರಬೇತಿ ಪಡೆದ ತಾಯಮ್ಮ ಮನೆಯ ಕೆಲಸ ಕಾರ್ಯಗಳಲ್ಲಿ ನಿಪುಣಳಾದಳು. ಯಾವಾಗಲೂ ಏನಾದರೂ ಮನೆಗೆಲಸವನ್ನು ಮಾಡುತ್ತಿದ್ದರು. ಸುಮ್ಮನೆ ಕಾಲಹರಣ ಮಾಡುತ್ತಿರಲಿಲ್ಲ. ತೋಟಗಾರಿಕೆಯಲ್ಲಿಯೂ ಆಸಕ್ತಿ; ಹಿತ್ತಲಿನಲ್ಲಿ ವಿವಿಧ ರೀತಿಯ ತರಕಾರಿಗಳು ಮತ್ತು ನಾನಾ ಬಗೆಯ ಹೂವಿನ ಗಿಡಗಳನ್ನು ಬೆಳೆಸಿದ್ದರು. ತಾಯಮ್ಮಳಿಗೆ ದೇವರಲ್ಲಿ ಬಹಳ ಭಕ್ತಿಯಿತ್ತು. ಹೂ ಬಿಡಿಸಿ, ಹಾರ ಕಟ್ಟಿ ದೇವರಿಗೆ ಹಾಕುವುದರಲ್ಲಿ ತುಂಬಾ ಆಸಕ್ತಿ. ತಾಯಮ್ಮ ನೀಳವೇಣಿಯಾಗಿದ್ದಳು. ತಲೆ ತುಂಬಾ ಹೂವುಗಳನ್ನು ಮುಡಿದು ಮನೆಯಲ್ಲಿ ಓಡಾಡುತ್ತಿದ್ದರೆ, ಮನೆಯಲ್ಲಿ ಮಲ್ಲಿಗೆ ಹೂವುಗಳ ಘಮಲು ತುಂಬಿರುತ್ತಿತ್ತು.

ಇಂಟರ್‌ಮೀಡಿಯಟ್ ಓದುತ್ತಿದ್ದ ಗೌಡರಿಗೆ ತಾಯಮ್ಮಳೊಡನೆ ವಿಜೃಂಭಣೆಯಿಂದ ಮದುವೆ ಮಾಡಲಾಯಿತು. ಅದು ಸಾಮಾನ್ಯ ಮದುವೆಯಲ್ಲ; ಎಂಟು ದಿನಗಳ ಮದುವೆ. ಊರಿನ ಮೇಲಿನ ಕೇರಿಯಿಂದ ಹಿಡಿದು ಕೆಳಗಿನ ಕೇರಿಯವರೆಗೆ ಚಪ್ಪರದ ಅಲಂಕಾರ ಮಾಡಲಾಯಿತು. ಹದಿನಾರು ಕಂಬದ ತೊಟ್ಟಿಮನೆಯ ಅಲಂಕಾರ ಕಣ್ತುಂಬುವಂತಿತ್ತು. ಗೋಡೆಯ ಮೇಲೆಲ್ಲಾ ಹೂವಿನ ಚಿತ್ತಾರ, ಮೇಲ್ಮನೆಯ ಒಂದಂಕಣ ಜಾಗದಲ್ಲಿ ಹಸೆ ಬರೆದಿದ್ದರು. ಅಂಕೇಗೌಡರು ಏಳೂರಿನ ಪಟೇಲಿಕೆ ಹೊಂದಿದ್ದವರು. ಅದಕ್ಕೆ ತಕ್ಕಂತೆ ಮದುವೆಗೆ ಜನರು ಜಾತ್ರೆಗೆ ಬಂದಂತೆ ಬಂದರು. ಊರಿನ ಜನರೆಲ್ಲಾ ಸೇರಿ ನಡೆಸಿಕೊಟ್ಟ ಮದುವೆ ಆದಾಗಿತ್ತು. ಯಾರ ಮನೆಯಲ್ಲೂ ವಾರಗಟ್ಟಲೆ ಒಲೆ ಹಚ್ಚಿರಲಿಲ್ಲ. ಒಂದಿನ ಚಪ್ಪರದೂಟ; ಒಂದಿನ ಅರಿಸಿನ-ಎಣ್ಣೆಶಾಸ್ತ್ರ; ಇನ್ನೊಂದು ದಿನ ಧಾರೆಶಾಸ್ತ್ರ; ಮೆರವಣಿಗೆ ಒಂದು ದಿನ; ಆಮೇಲೆ ಆರತಕ್ಷತೆ; ಕಡೆಗೆ ದೇವರ ಸಮಾರಾಧನೆ. ಹೀಗೆ ಆ ಅದ್ದೂರಿ ಮದುವೆಯಲ್ಲಿ ಒಂದೊಂದು ದಿನ ಒಂದೊಂದು ಶಾಸ್ತ್ರ. ಆರತಕ್ಷತೆ ದಿನ ಅರಮನೆಯ ಬ್ಯಾಂಡ್‌ಸೆಟ್ ವಿಶೇಷ ಆಕರ್ಷಣೆಯಾಗಿತ್ತು. ನರ್ತಕಿಯರ ನರ್ತನ ನೋಡಿ ಊರಿನ ಜನರೆಲ್ಲಾ ಅತೀವ ಸಂತೋಷಪಟ್ಟರು. ನರ್ತಕಿಯರಿಂದ ಮದುಮಗಳು ತಾಯಮ್ಮಳಿಗೆ ಅಲಂಕಾರ ಮಾಡಿಸಲಾಯಿತು. ನರ್ತಕಿಯರು ಮದುಮಕ್ಕಳಿಗೆ ಆರತಿ ಎತ್ತಿ ಆಶಯ ಪದಗಳನ್ನು ಸುಶ್ರಾವ್ಯವಾಗಿ ಹಾಡಿದರು. ದೊಡ್ಡಮನೆತನಗಳಲ್ಲಿ ಆ ಥರಹದ

ಮನರಂಜನೆಗಳು ಅಂದಿನಕಾಲದಲ್ಲಿ ಸಾಮಾನ್ಯವಾಗಿತ್ತು. ನರ್ತಕಿಯರು ಹಾಕಿದ ಮೊಗ್ಗಿನ ಜಡೆಯನ್ನು ಗಮನವಿಟ್ಟು ನೋಡಿಕೊಂಡ ಗೌರಮ್ಮನವರು ಮುಂದೆ ಅಣ್ಣನ ಹೆಣ್ಣು ಮಗಳಿಗೆ ಹಾಗೆಯೇ ಮೊಗ್ಗಿನ ಜಡೆ ಹಾಕುತ್ತಿದ್ದರು. ಊರಲ್ಲಿ ಹಿಂದೆ ಇಂಥ ಮದುವೆ ಆಗಿರಲಿಲ್ಲ; ಮುಂದೆ ಇಂಥ ವೈಭವದ ಮದುವೆಯನ್ನು ನಾವು ನೋಡುತ್ತೇವೆಯೋ ಇಲ್ಲವೋ ಎಂದು ಮದುವೆಗೆ ಬಂದ ಜನ ಮಾತನಾಡುತ್ತಿದ್ದರು.

ಗೌಡರು ಕೈಹಿಡಿದ ಚನ್ನಮ್ಮ ಸಕಲ ಸದ್ಗುಣ ಸಂಪನ್ನೆಯಾಗಿದ್ದು, ತಮ್ಮ ಶೀಲ ಸೌಜನ್ಯಗಳಿಂದ ಎಲ್ಲರಿಗೂ ಪ್ರೀತಿಪಾತ್ರರಾದ ಅಪೂರ್ವ ಗೃಹಿಣಿಯಾಗಿದ್ದರು. ಕನ್ನಡ ಸಂಸ್ಕೃತ ಭಾಷೆಗಳ ಪುಸ್ತಕಗಳನ್ನು ಓದುವುದರ ಜೊತೆಗೆ, ಅನೇಕ ಕುಶಲ ಕಲೆಗಳಲ್ಲಿಯೂ ಅವರು ಪರಿಣತಿ ಪಡೆದಿದ್ದರು. ನಾಟಕಗಳಲ್ಲಿ ಪಾರ್ಟುಮಾಡುತ್ತಾ ಕಂಪನಿಯ ಜೊತೆಗೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ವಿವಿಧ ಊರುಗಳಿಗೆ ಹೋಗುತ್ತಿದ್ದ ಗೌಡರ ಅಣ್ಣ ಅಪ್ಪಾಜಿಗೌಡರು ತಮ್ಮ ನಾದಿನಿ ಚನ್ನಮ್ಮನಂಥ ಸುಂದರವಾದ ಹೆಣ್ಣು ಮಗಳನ್ನು ತಾವೆಲ್ಲಿಯೂ ಕಂಡಿದ್ದಿಲ್ಲವೆಂದು ಅತ್ಯಂತ ಪ್ರೀತಿವಾತ್ಸಲ್ಯದಿಂದ ಹೇಳುತ್ತಿದ್ದರು.

ಅದು ವಿವಾಹಿತ ಯುವಕ ಗೌಡರು ಬೆಂಗಳೂರಿನಲ್ಲಿ ಓದುತ್ತಿದ್ದ ಸಮಯ. ಕೆ.ಎಚ್.ರಾಮಯ್ಯನವರು ಗೌಡರಿಗೆ ಧರ್ಮಪಿತ ಅಥವಾ ಗಾಡ್‌ಫಾದರ್ ಆಗಿದ್ದರು. ಕೆ.ಎಚ್.ರಾಮಯ್ಯನವರು, ಹಾಗೂ ಹೊಂಬೇಗೌಡರ ಮಾವನವರಾದ ವೆಂಕಟರಾಮಯ್ಯನವರ ಮನೆಗಳಿಗೆ ಅವರು ಹೋಗಿ ಬರುತ್ತಾ ಅವರ ಕುಟುಂಬಗಳಿಗೆ ಬಹಳ ಆತ್ಮೀಯರಾಗಿದ್ದರು. ಬಸವನಗುಡಿಯಲ್ಲಿರುವ ಶ್ರೀರಾಮಕೃಷ್ಣಾಶ್ರಮದಲ್ಲಿ ಪ್ರತಿ ವರ್ಷವೂ ನಡೆಯುತ್ತಿದ್ದ ಶ್ರೀರಾಮಕೃಷ್ಣ ಪರಮಹಂಸರ ಜಯಂತಿಯ ಸಂದರ್ಭದಲ್ಲಿ ತಮ್ಮ ಅಕ್ಕ ಗೌರಮ್ಮನವರನ್ನು ಮತ್ತು ಪತ್ನಿ ಚನ್ನಮ್ಮನವರನ್ನು ಕರೆದುಕೊಂಡು ಹೋಗಿ, ಆಶ್ರಮದ ಪಕ್ಕದಲ್ಲಿದ್ದ ವೆಂಕಟರಾಮಯ್ಯನವರ ಮನೆಯಲ್ಲಿ ತಂಗುತ್ತಿದ್ದರು. ಒಮ್ಮೆ ಬೆಂಗಳೂರಿಗೆ ಹೋಗುವ ಸಂದರ್ಭದಲ್ಲಿ ಊರಿನಲ್ಲಿ ಇಲಿಗಳು ಸಾಯುತ್ತಿದ್ದವು. ವೆಂಕಟರಾಮಯ್ಯನವರ ಮನೆಯಲ್ಲಿದ್ದಾಗ ಅಚ್ಚಮ್ಮನವರೂ ಮತ್ತು ಗೌರಮ್ಮನವರೂ ಅದೂ ಇದೂ ಮಾತನಾಡುತ್ತಿದ್ದಾಗ ಇದ್ದಕ್ಕಿದ್ದಂತೆ ತಾಯಮ್ಮನಿಗೆ ಜ್ವರ ನೂರೆರಡು ಡಿಗ್ರಿ ಬಂದು ಬಿಟ್ಟಿತು. ಅದು ನಾಲ್ಕು ದಿನವಾದರೂ ಬಿಡಲಿಲ್ಲ. ಐದನೆಯ ದಿನ ಕಂಕುಳಲ್ಲಿ ಗೆಡ್ಡೆ ಕಾಣಿಸಿಕೊಂಡಿತು. ಇದು ಬರೀ ಜ್ವರವಲ್ಲ; ಪ್ಲೇಗ್ ಬಂದಿದೆ ಎಂದು ಗೊತ್ತಾಯಿತು. ಅಚ್ಚಮ್ಮನವರ ಅಳಿಯ ವಕೀಲರಾಗಿದ್ದ ಹೊಂಬೇಗೌಡರು ಡಾಕ್ಟರ್ ಹತ್ತಿರ ತಾಯಮ್ಮನನ್ನು ಕರೆದುಕೊಂಡು ಹೋದರು. ಆದರೆ, ಕಾಲಕ್ಕೆ ಕರುಣೆಯಿಲ್ಲ.

ತಾಯಮ್ಮನ ಮರಣ ಸನ್ನಿಹಿತವಾಗುತ್ತಿತ್ತು. ಜ್ವರದ ಮಧ್ಯೆ ತಾಯಮ್ಮ ಬಿಡುವಿಲ್ಲದಂತೆ ಮಾತನಾಡುತ್ತಿದ್ದರು. ಆಶುಕವಿತೆಗಳನ್ನು ಹೇಳುತ್ತಿದ್ದರು. ಪತಿಯೇ ಪರದೈವವೆಂದು ಭಾವಿಸಿದ್ದ ಪತಿವ್ರತೆಯರ ಕಥೆಗಳನ್ನು ಹೇಳಲಾರಂಭಿಸಿದರು. ಎರಡು ದಿನಗಳ ನಂತರ ತಾಯಮ್ಮನವರು ಕನ್ಯಾಮುತ್ತೈದೆಯಾಗಿಯೇ ಇಹಲೋಕ ತ್ಯಜಿಸಿದರು. ತಾಯಮ್ಮನ ಪಾರ್ಥಿವ ಶರೀರವನ್ನು ತಿಮ್ಮಸಂದ್ರಕ್ಕೆ ತಂದು, ತೋಪಿನಲ್ಲಿ ಸಮಾಧಿ ಮಾಡಲಾಯಿತು.

ತಾಯಮ್ಮನ ನೆನಪು ಗೌಡರನ್ನು ಬಹಳಷ್ಟು ಕಾಡಿತು. ಆಕೆಯ ಮುಗ್ಧತೆ, ಆ ಚಿಕ್ಕವಯಸ್ಸಿಗೇ ಅವಳಲ್ಲಿದ್ದ ಒಳ್ಳೆಯ ಸಂಸ್ಕಾರ, ಹೆಚ್ಚು ವಿದ್ಯೆ ಕಲಿಯದಿದ್ದರೂ ಆಕೆ ಓದಿನಲ್ಲಿ ಹೊಂದಿದ್ದ ಆಸಕ್ತಿ ಹಾಗೂ ಜ್ಞಾನ ಸ್ವತಃ ವಿದ್ಯಾ ಪಕ್ಷಪಾತಿಯಾಗಿದ್ದ ಗೌಡರಿಗೆ ಮೆಚ್ಚುಗೆಯಾಗಿತ್ತು. ಕನ್ಯೆಯಾಗಿಯೇ ತಾಯಮ್ಮನವರು ಕೊನೆಯುಸಿರೆಳೆದಿದ್ದರೂ, ಪತ್ನಿಯ ಸ್ಥಾನದಲ್ಲಿ ಆಕೆ ಗೌಡರ ಮನಸ್ಸನ್ನು ಗೆದ್ದಿದ್ದರು. ಅಷ್ಟೇ ಅಲ್ಲ ತಮ್ಮ ಸಂಸ್ಕಾರಯುತ ಗುಣಗಳಿಂದ ಮನೆಯವರ ಮನಸ್ಸನ್ನೆಲ್ಲ ಗೆದ್ದಿದ್ದರು. ಅವರನ್ನು ಸಮಾಧಿ ಮಾಡಿದ್ದ ತೋಪಿನಲ್ಲಿ ಗುಡಿ ಕಟ್ಟಿ ಪೂಜಿಸಿದರು. ಈಗಲೂ 'ತಾಯವ್ವನವರ ಗದ್ದಿಗೆ'ಯನ್ನು ಮನೆತನದವರು ಪೂಜಿಸುವ ವಾಡಿಕೆಯಿದೆ.

ಕಾನೂನು ಪದವಿ ಮುಗಿಸಿಕೊಂಡು ಬಂದು ರಾಮನಗರದಲ್ಲಿ ಒಂದು ಬಾಡಿಗೆ ಮನೆ ಮಾಡಿಕೊಂಡು ಗೌಡರು ಲಾಯರ್ ಪ್ರಾಕ್ಟೀಸ್ ಮಾಡುತ್ತಿದ್ದರು. ರಾಮನಗರದಲ್ಲಿ ವಕೀಲ ವೃತ್ತಿ ಆರಂಭವಾಗಿ ಚನ್ನಾಗಿ ನಡೆಯುತ್ತಾ ಇತ್ತು. ಹಣ ಸಂಪಾದನೆಯೂ ಚನ್ನಾಗಿತ್ತು. ಗೌಡರಿಗೆ ವಕೀಲಿ ವೃತ್ತಿಯಲ್ಲಿ ಕೈತುಂಬಾ ಕೆಲಸ. ಈ ಮಧ್ಯೆ ಅವರಿಗೆ ಬೇರೆ ಬೇರೆ ಕಡೆಯ ಕೆಲಸ ಕಾರ್ಯಗಳ ಓಡಾಟಗಳು. ಆಗೊಮ್ಮೆ ಈಗೊಮ್ಮೆ ಅವರಿವರಿಂದ ಮತ್ತು ಬಂಧು-ಬಾಂಧವರಿಂದ ಗೌಡರ ಮರು ಮದುವೆಯ ಬಗೆಗೆ ಪ್ರಸ್ತಾಪಗಳಾಗುತ್ತಿದ್ದವು. ಸಿಕ್ಕ ಸಿಕ್ಕ ಸ್ನೇಹಿತರು, ನಿಕಟ ಬಂಧು-ಬಾಂಧವರು "ಇನ್ನೂ ವಯಸ್ಸಿದೆ ಮದುವೆಯಾಗಿ" ಎಂದು ಒತ್ತಾಯಪೂರ್ವಕ ಸಲಹೆ ನೀಡಲು ಪ್ರಾರಂಭಿಸಿದರು. ಮದುವೆಯೆಂದರೆ ಹುಡುಗಾಟವೇ?. ಏನು ಮಾಡುವುದು? ಎಂದು ಗೌಡರು ಬಹಳ ಯೋಚಿಸುತ್ತಿದ್ದರು. ತಕ್ಷಣವೇ ಮದುವೆ ಆಗುತ್ತೇನೆ ಎಂದಾಗಲೀ ಅಥವಾ ಆಗುವುದಿಲ್ಲವೆಂದಾಗಲೀ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅಣ್ಣ ಅಪ್ಪಾಜಿಗೌಡರು ತಮ್ಮನಿಗೆ ಮದುವೆ ಮಾಡಲು ಯೋಚಿಸಿದ್ದರು. ಅಲ್ಲಿ ಇಲ್ಲಿ ಹುಡುಗಿಗಾಗಿ ವಿಚಾರಿಸುತ್ತಿದ್ದರು. ವಿವಿಧ ಕಡೆಯಿಂದ ಬಂದ ಒತ್ತಾಯದಂತೆ ಗೌಡರು ಮದುವೆಗೆ ಒಪ್ಪಿ ಹುಡುಗಿಯರನ್ನು ನೋಡಲು ಹೋಗಿ ಬಂದರು.

ಮದುವೆಯ ಋಣ ಮೈಸೂರು ನಗರದಲ್ಲಿ ಇತ್ತು. ಮೈಸೂರು ನಗರದ ಕೆಂಪಣ್ಣನವರು ಕಂಟ್ರಾಕ್ಟ್ ಕೆಲಸಗಳನ್ನು ಮಾಡಿಕೊಂಡು ಉತ್ತಮ ಸ್ಥಿತಿಯಲ್ಲಿದ್ದರು. ಅವರ ಮನೆ

ಕೃಷ್ಣಮೂರ್ತಿಪುರಂನಲ್ಲಿತ್ತು. ಅವರ ಮಗಳು ನಂಜಮ್ಮಣ್ಣಿ; ಕೆಂಪಣ್ಣನವರ ಮೊದಲನೆಯ ಪುತ್ರಿ ನಂಜಮ್ಮಣ್ಣಿ ಗೌಡರಿಗೆ ಒಪ್ಪಿಗೆಯಾದರು. ಕಂಕಣ ಬಲ ಕೂಡಿ ಬಂದು ಮದುವೆಗೆ ಸಿದ್ಧತೆಗಳಾದವು. ಹುಡುಗಿಗೆ ಬಂಗಾರದ ಡಾಬು, ಕಾಸಿನ ಸರ, ನಾಗೋಲೆ, ಬಂಗಾರದ ಬಳೆ, ಮೂರ್‍ನಾಲ್ಕು ಜರತಾರಿ ಸೀರೆಗಳನ್ನು ಕೆಂಪಣ್ಣನವರ ಮನೆಯ ಕಡೆಯ ಬಂಧುಗಳು ಕೇಳಿದ್ದರಿಂದ ಯಾರೂ ಮರು ಮಾತನಾಡದೇ ಸಂತೋಷದಿಂದ ಅವುಗಳನ್ನೆಲ್ಲಾ ಕೊಡಲು ಒಪ್ಪಿದರು. ಮದುವೆ ವಿಜೃಂಭಣೆಯಿಂದ ನಡೆಯಿತು.

ಗೌಡರು ರಾಮನಗರದಲ್ಲಿ ನಂಜಮ್ಮಣ್ಣಿರವರೊಂದಿಗೆ ಸಂಸಾರ ಹೂಡಿದರು. ರಾಮನಗರದ ಮೊದಲ ಹೆಸರು ಕ್ಲೋಸ್‌ಪೇಟೆಯಾಗಿತ್ತು. ಅವರ ಅಣ್ಣನ ಮಕ್ಕಳನ್ನು ಹಾಗೂ ಬಂಧುಗಳ ಮಕ್ಕಳನ್ನು ಓದಿಸಲು ಊರಿನಿಂದ ಕರೆದುಕೊಂಡು ಬಂದರು. ನಂಜಮ್ಮಣ್ಣಿಯವರು ಬಹಳ ಮೃದುಸ್ವಭಾವದ ಹೆಣ್ಣು ಮಗಳಾಗಿದ್ದರು. ಗುರು-ಹಿರಿಯರೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಮನೆಯಲ್ಲಿದ್ದ ಕುಟುಂಬದ ಮಕ್ಕಳೆಲ್ಲರನ್ನೂ ತನ್ನ ಒಡಹುಟ್ಟಿದ ಮಕ್ಕಳೆಂದೇ ಹೃದಯಪೂರ್ವಕವಾಗಿ ಭಾವಿಸಿ ಅವರುಗಳನ್ನೆಲ್ಲ ಪ್ರೀತಿ, ವಿಶ್ವಾಸ, ಮಮತೆ, ವಾತ್ಸಲ್ಯಗಳಿಂದ ನೋಡಿಕೊಳ್ಳುತ್ತಿದ್ದರು. ಸಕಾಲದಲ್ಲಿ ಮನೆ ಹಿರಿ-ಕಿರಿಯರಿಗೆ ಎಲ್ಲಾ ಮಕ್ಕಳಿಗೂ ಯಾವುದೇ ಬೇಧಭಾವವಿಲ್ಲದೆ ಹೊಟ್ಟೆ ತುಂಬಾ ಊಟ-ತಿಂಡಿಗಳನ್ನು ಬಡಿಸುತ್ತಿದ್ದರು. ಅವರು ತಮ್ಮ ಪತಿಯ ಜೊತೆ ಬಹಳ ಅನ್ಯೋನ್ಯವಾಗಿ ಸಂಸಾರವನ್ನು ನಡೆಸಿಕೊಂಡು ಹೋಗುತ್ತಿದ್ದರು. ಉತ್ತಮ ಸಂಸ್ಕಾರವಿದ್ದ ಅವರು ಬಹಳ ಸಜ್ಜನಿಕೆಯಿಂದ ಕುಟುಂಬದ ಸವಸ್ಯರೊಂದಿಗೆ ಹೊಂದಿಕೊಂಡು ಅವರೆಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಗೌಡರಿಗೆ ತಮ್ಮ ಧರ್ಮಪತ್ನಿ ತೆಗೆದುಕೊಳ್ಳುತ್ತಿದ್ದ ಕೌಟುಂಬಿಕ ಜವಾಬ್ದಾರಿ; ಸಾತ್ವಿಕತೆ, ಮತ್ತು ಶಾಂತ ಸ್ವಭಾವಗಳು ಬಹಳ ಸಮಾಧಾನ ತಂದವು. ಮನೆಗೆ ಬಂದ ಬಂಧು-ಬಾಂಧವರ ಎದುರು ಸಂದರ್ಭೋಚಿತವಾಗಿ 'ಇವಳು ಶಾಂತಾಮಣಿ' ಎಂದು ತಮ್ಮ ಧರ್ಮಪತ್ನಿಯ ಬಗೆಗೆ ಅಭಿಮಾನದಿಂದ ಹೇಳುತ್ತಿದ್ದರು.

ನಂಜಮ್ಮಣ್ಣಿಯವರು ಮೈಸೂರು ನಗರದಲ್ಲಿ ಓದಿದವರು. ಓದಲು ಮತ್ತು ಬರೆಯಲು ಅವರಿಗೆ ಚನ್ನಾಗಿ ಬರುತ್ತಿತ್ತು. ಗೌಡರ ವಕೀಲ ವೃತ್ತಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಅಚ್ಚುಕಟ್ಟಾಗಿ ದಾಖಲೆಮಾಡುತ್ತಿದ್ದರು. ಏನಾದರೂ ಗೊತ್ತಾಗದಿದ್ದರೆ ಕೇಳಿ ತಿಳಿದುಕೊಳ್ಳುತ್ತಿದ್ದರು. ಇದು ಗೌಡರ ವಕೀಲ ವೃತ್ತಿಗೆ ಬಹಳಷ್ಟು ಸಹಾಯಕವಾಯಿತು. ಸಾವಿತ್ರಮ್ಮನ ನಂತರ ಜನಿಸಿದ ಅಪ್ಪಾಜಿಗೌಡರ ಮಗ ಪ್ರಭುವನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವೆಂದೇ ಭಾವಿಸಿಕೊಂಡು ಎತ್ತಿಕೊಂಡು ಓಡಾಡುತ್ತಿದ್ದರು. ನನ್ನ ಮಗ

ನನ್ನ ಮಗ ಎಂದು ಪ್ರೀತಿಯಿಂದ ಲಾಲನೆ-ಪಾಲನೆ ಮಾಡುತ್ತಾ ಮುದ್ದು ಮಾಡುತ್ತಿದ್ದರು. ಮೈಸೂರಿನ ತಮ್ಮ ತವರು ಮನೆಗೆ ಹೋಗುವಾಗ ಪ್ರಭುವನ್ನು ಜೊತೆಯಲ್ಲೇ ಕರೆದುಕೊಂಡು ಹೋಗುತ್ತಿದ್ದರು. ಅಂತಹುದೇ ಪ್ರೀತಿ ವಾತ್ಸಲ್ಯವನ್ನು ಉಳಿದ ಮಕ್ಕಳಿಗೂ ತೋರಿಸುತ್ತಾ ಎಲ್ಲರನ್ನೂ ಅಕ್ಕರೆಯಿಂದ ಕಾಣುವ ಗುಣ ಅವರದ್ದಾಗಿತ್ತು. ನಂತರ ಪ್ರಭು ಡಾಕ್ಟರ್ ಆಗಿ ದೊಡ್ಡ ಹೆಸರು ಮಾಡಿ ಖ್ಯಾತಿಗಳಿಸಿ ಇಂದಿಗೂ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

ಗೌಡರ ವಕೀಲ ವೃತ್ತಿ ರಾಮನಗರದಲ್ಲಿ ಚನ್ನಾಗಿ ನಡೆಯುತ್ತಿತ್ತು. ಊರಲ್ಲಿ ಮಳೆ-ಬೆಳೆ ಚನ್ನಾಗಿ ಆಗುತ್ತಿದ್ದರಿಂದ ಜಮೀನಿನಲ್ಲಿಯೂ ಸಾಕಷ್ಟು ವರಮಾನ ಬರುತ್ತಿತ್ತು. ಊಟ-ತಿಂಡಿಗಳಿಗೆ ಸಾಕಷ್ಟು ದವಸ ಧಾನ್ಯಗಳು, ತರಕಾರಿಗಳು ಮತ್ತು ಅಡುಗೆಗೆ ಬೇಕಾದ ಬಹುತೇಕ ಲವಾಜಮೆಗಳು ಊರಿನಿಂದ ಬರುತ್ತಿದ್ದವು. ಮನೆಗೆ ಬಂದ ಬಂಧು-ಬಾಂಧವರನ್ನು ಪ್ರೀತಿ ಆದರಗಳಿಂದ ನೋಡಿಕೊಳ್ಳುತ್ತಿದ್ದರು. ಕುಟುಂಬದಲ್ಲಿ ಸುಖ ಸಂತೋಷಕ್ಕೆ ಯಾವುದೇ ಕೊರತೆಯಾಗುತ್ತಿರಲಿಲ್ಲ. ಗೌಡರು-ನಂಜಮ್ಮಣ್ಣಿಯವರ ದಾಂಪತ್ಯದ ಫಲವಾಗಿ ಒಂದು ಹೆಣ್ಣು ಮಗು ಜನ್ಮತಾಳಿತು. ಬಂಧು-ಬಾಂಧವರನ್ನೆಲ್ಲ ಆಹ್ವಾನಿಸಿ ಮಗುವಿನ ನಾಮಕರಣವನ್ನು ವಿಜೃಂಭಣೆಯಿಂದ ನಡೆಸಿ 'ಕಮಲ' ಎಂದು ನಾಮಕರಣ ಮಾಡಿದರು. ಮನೆ ಆರ್ಥಿಕವಾಗಿ ಉತ್ತಮವಾಗಿದ್ದುದ್ದರಿಂದ ಬಂದು ಹೋಗುವವರು ಹೆಚ್ಚಾಗುತ್ತಿದ್ದರು. ಕಮಲಳಿಗೆ ಮೈಸೂರು ತಾತನ ಮನೆಯಲ್ಲಿ ಅದ್ದೂರಿಯಾಗಿ ಹುಟ್ಟಿದ ಹಬ್ಬವನ್ನು ಏರ್ಪಡಿಸಿದ್ದರು. ತಿಮ್ಮಸಂದ್ರದ ಬಂಧು-ಬಾಂಧವರೆಲ್ಲ ಕಮಲನ ಹುಟ್ಟು ಹಬ್ಬಕ್ಕೆ ಬಂದಿದ್ದರು. ನಂತರ ಕಮಲ, ಶ್ರೀಮತಿ ಕಮಲಮ್ಮ-ಕೆಂಪಯ್ಯಯಾಗಿ ಇಂಜಿನಿಯರ್ ಪತ್ನಿಯಾಗಿ ಪುತ್ರ-ಪುತ್ರಿಯರನ್ನು ಪಡೆದು ತುಂಬು ಜೀವನ ನಡೆಸುತ್ತಿದ್ದಾರೆ.

ಗೌಡರ ಲಾಯರ್ ವೃತ್ತಿ ಅಭಿವೃದ್ಧಿಯಾದಂತೆ ಒಂದು ಕಾರನ್ನು ಕೊಂಡುಕೊಂಡರು. ಅದು ಮಾರೀಸ್ ಮೈನರ್ ಎಂಬ ಉದ್ದವಾದ ಕಪ್ಪನೆಯ ಕಾರು. ಆಗ ರಾಮನಗರದಲ್ಲಿ ಬೆರಳೆಣಿಕೆಯಷ್ಟು ಜನರು ಮಾತ್ರ ಕಾರನ್ನು ಹೊಂದಿದ್ದರು. ಕಾರು ಇಟ್ಟುಕೊಂಡವರು ಸಮಾಜದಲ್ಲಿ ಪ್ರತಿಷ್ಠೆಯನ್ನು ಹೊಂದಿರುತ್ತಿದ್ದರು. ರಾಮನಗರದಿಂದ ತಿಮ್ಮಸಂದ್ರಕ್ಕೆ ಬಂದರೆ ಕಾರು ನೋಡಲು, ಮುಟ್ಟಲು, ಆನಂದಿಸಲು ಊರ ಮಕ್ಕಳು, ಜನರು ಸೇರುತ್ತಿದ್ದರು. ಕಾರು ಓಡಿಸಲು ಮಲೆಯಾಳಿ ಭಾಷೆ ಮಾತನಾಡುತ್ತಿದ್ದ ನಾಯರ್ ಎಂಬ ಕೇರಳದ ಯುವಕನನ್ನು ಡ್ರೈವರ್ ಆಗಿ ನೇಮಿಸಿಕೊಂಡಿದ್ದರು. ನಾಯರ್ ಸಜ್ಜನ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದ. ಗೌಡರ ಘನತೆಗೆ ಮತ್ತು ಸಜ್ಜನಿಕೆಗೆ ನಾಯರ್ ಮಾರುಹೋಗಿದ್ದನು.

ಅವನು ಗೌಡರ ಕುಟುಂಬದವರಿಗೆಲ್ಲಾ ಬಹಳ ವಿಧೇಯನಾಗಿ ನಡೆದುಕೊಳ್ಳುತ್ತಿದ್ದನು. ಮನೆಮಂದಿಯಲ್ಲಿ ಒಬ್ಬನೆಂಬಂತೆ ಮನೆಗೆ ಹೊಂದಿಕೊಂಡಿದ್ದನು.

ಮೈಸೂರು ದಸರಾ ಉತ್ಸವವು ತನ್ನ ವೈಭವ ಮತ್ತು ಭವ್ಯತೆಯಿಂದ ಜಗತ್ಪ್ರಸಿದ್ಧಿಯಾಗಿದೆ. ದಸರಾ ಸಮಯದಲ್ಲಿ ಶ್ರೀಮನ್ಮಹಾರಾಜರು ಪ್ರಜಾಪ್ರತಿನಿಧಿ ಸಭೆಯನ್ನು ಕರೆಯುತ್ತಿದ್ದರು. ಗೌಡರು ಆ ಸಭೆಯಲ್ಲಿ ಭಾಗವಹಿಸಲು ಹೋಗುವಾಗ ಅವರ ತಾಯಿ ಲಿಂಗಮ್ಮ, ಮಡದಿ ನಂಜಮ್ಮಣ್ಣಿ, ಮಗು ಕಮಲ, ಅಣ್ಣನ ಮಗಳು ಮತ್ತು ಚಿಕ್ಕ ಮಗು ಪ್ರಭುವನ್ನು ಜೊತೆಗೆ ಕರೆದುಕೊಂಡು ಕಾರಿನಲ್ಲಿ ಮೈಸೂರಿಗೆ ಹೋದರು. ಗೌಡರ ಪರಿವಾರವು ಮಾವ ಕೆಂಪಣ್ಣನವರ ಮನೆಯಲ್ಲಿ ತಂಗಿತ್ತು. ಮನೆಯಲ್ಲಿ ವಿವಿಧ ಭಕ್ಷ್ಯಬೋಜ್ಯಗಳ ಸತ್ಕಾರ ನಡೆದಿತ್ತು. ನವರಾತ್ರಿಯ ದಸರಾ ಮಹೋತ್ಸವದ ಕಾರ್ಯಕ್ರಮಗಳನ್ನು ನೋಡಿ ಎಲ್ಲರೂ ಸಂತೋಷದಿಂದಿದ್ದರು.

ಒಂದು ದಿನ ಎಲ್ಲರೂ ದಸರಾ ವಸ್ತು ಪ್ರದರ್ಶನವನ್ನು ನೋಡಲು ಹೋಗಿದ್ದರು. ಆಗ ದಸರಾ ವಸ್ತು ಪ್ರದರ್ಶನವು ಮೈಸೂರು ಮೆಡಿಕಲ್ ಕಾಲೇಜಿನ ಪಕ್ಕದ ಶೇಷಾದ್ರಿ ಅಯ್ಯರ್ ರಸ್ತೆಗೆ ಹೊಂದಿಕೊಂಡಿರುವ ಕಟ್ಟಡಗಳಲ್ಲಿ ನಡೆಯುತ್ತಿತ್ತು. ದಸರಾ ವಸ್ತು ಪ್ರದರ್ಶನದಲ್ಲಿ ವಿಪರೀತ ಜನ ಸಂದಣಿ. ಅಲ್ಲಿ ಬಾಯಲ್ಲಿ ನೀರೂರಿಸುವ ವಿವಿಧ ಬಗೆಯ ತಿಂಡಿಗಳು, ಭಕ್ಷ್ಯಭೋಜ್ಯಗಳ ತಯಾರಿ ನಡೆದು ಮಾರಾಟವಾಗುತ್ತಿದ್ದವು. ರಾಷ್ಟ್ರದ ವಿವಿಧೆಡೆಯಿಂದ ಮತ್ತು ಯುರೋಪ್ ರಾಷ್ಟ್ರಗಳಿಂದಲೂ ವಸ್ತು ಪ್ರದರ್ಶನ ನೋಡಲು ಜನರು ಬರುತ್ತಿದ್ದರು. ವಸ್ತು ಪ್ರದರ್ಶನವನ್ನು ಸ್ವಲ್ಪ ಹೊತ್ತು ನೋಡಿದ ಮೇಲೆ ನಂಜಮ್ಮಣ್ಣಿಯವರು ಇದ್ದಕ್ಕಿದ್ದಂತೆ, "ಯಾಕೋ ನನಗೆ ವಿಪರೀತ ತಲೆ ನೋಯುತ್ತಿದೆ. ನನಗೆ ನಡೆಯಲು ಕಷ್ಟವಾಗುತ್ತಿದೆ. ಇಲ್ಲೇ ಕುಳಿತು ವಿಶ್ರಾಂತಿ ಪಡೆದುಕೊಳ್ಳುತ್ತೇನೆ; ನೀವು ಎಲ್ಲರೂ ಹೋಗಿ ನೋಡಿಕೊಂಡು ಬನ್ನಿ" ಎಂದು ಹೇಳಿ ಕುಳಿತು ಕೊಂಡರು. ಆಗ ಲಿಂಗಮ್ಮನವರು "ಅದೆಂಗಮ್ಮ ಆಗುತ್ತೆ; ಒಬ್ಬಳನ್ನೇ ಇಲ್ಲಿ ಕೂರಿಸಿ ನಾವು ಅಲ್ಲಿ ಏನು ನೋಡಬೇಕು? ನಡೆಯಿರಿ ಎಲ್ಲರೂ ಮನೆಗೆ ಹೋಗೋಣ" ಎಂದು ಮನೆಗೆ ಹೊರಟರು. ಮನೆಗೆ ಬಂದು ಸೇರುವಷ್ಟರಲ್ಲಿ ಅವರಿಗೆ ವಿಪರೀತ ಜ್ವರ. ಎಲ್ಲರೂ ಗಾಬರಿಗೊಂಡರು. ತಕ್ಷಣ ಡಾಕ್ಟರನ್ನು ಮನೆಗೆ ಕರೆಸಿದರು. ವಿವಿಧ ಉಪಕರಣಗಳ ಮೂಲಕ ಡಾಕ್ಟರು ಪರೀಕ್ಷೆ ಮಾಡಿದರು. ಅದು ಸಾಂಕ್ರಾಮಿಕ ರೋಗದ ಕಾಲ. ನಂಜಮ್ಮಣ್ಣಿಯವರಿಗೆ ಪ್ಲೇಗ್ ತಗುಲಿತ್ತು. ಕಂಕುಳ ಹತ್ತಿರ ಗಂಟು ಆಗಿದ್ದು ಕಂಡುಬಂದಿತು. ತಕ್ಷಣವೇ ಔಷಧೋಪಚಾರ ಮಾಡಲಾಯಿತು. ವೈದ್ಯರು ಔಷಧ, ಇಂಜೆಕ್ಷನ್ ಚೀಟಿಗಳನ್ನು ಬರೆದು ಕೊಟ್ಟು ವಿವಿಧ ಮಾತ್ರೆ ಮದ್ದುಗಳನ್ನು ತರಿಸಿ

ಅವುಗಳ ಸೇವನೆಯ ವೇಳಾಪಟ್ಟಿಯನ್ನು ತಿಳಿಸಿದರು. ಔಷಧೋಪಚಾರ ಪ್ರಾರಂಭವಾಯಿತು. ನಂಜಮ್ಮಣ್ಣಿ ಸಪ್ಪಗಾದರು. ಊಟ ಗಂಜಿ ಸೇರದಂತಾಯಿತು. ಹಿರಿಯರು ಧೈರ್ಯ ತೆಗೆದುಕೊಳ್ಳಮ್ಮ; ಎಷ್ಟು ಸೇರುತ್ತೋ ಅಷ್ಟು ಊಟ ಮಾಡು, ಶಕ್ತಿ ಬರುತ್ತೆ ಎಂದು ಊಟ ಮಾಡಿಸಲು ಪ್ರಯತ್ನಿಸುತ್ತಿದ್ದರು. ಹಿರಿಯರ ಪ್ರೀತಿ ವಾತ್ಸಲ್ಯಗಳ ಒತ್ತಾಯಕ್ಕೆ ಅಲ್ಪ ಸ್ವಲ್ಪ ಗಂಜಿ ಮತ್ತು ಇನ್ನಿತರ ಊಟ ಮಾಡುತ್ತಿದ್ದರು. ಜ್ವರದ ಬಳಲಿಕೆಯಿಂದ ಊಟ, ಗಂಜಿ ಮೈಗೆ ದಕ್ಕುತ್ತಿರಲಿಲ್ಲ. ಖಾಯಿಲೆ ಶಮನಗೊಳ್ಳಲಿಲ್ಲ. ಗೌಡರು ಇದೇನಾಗುತ್ತಿದೆ ಎಂದು ಗಾಬರಿಗೊಂಡರು. ಅದನ್ನು ತೋರಿಸಿಕೊಳ್ಳದೆ ಮಡದಿಯನ್ನು ಉಳಿಸಿಕೊಳ್ಳಲು ತುಂಬಾ ಶ್ರಮಪಟ್ಟರು. ಖಾಯಿಲೆ ಅಷ್ಟು ಸುಲಭವಾಗಿರಲಿಲ್ಲ. ಯಾವ ಚಿಕಿತ್ಸೆಗೂ ಬಗ್ಗದೆ ಅದು ಉಲ್ಬಣಿಸಿತು. ಉಪಚಾರ ಹಾಗೇ ನಡೆಯುತ್ತಿದ್ದಾಗ ನಾಲ್ಕೈದು ದಿನಗಳಲ್ಲೇ ನಂಜಮ್ಮಣ್ಣಿ ತೀರಿಕೊಂಡೇ ಬಿಟ್ಟರು. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ.

ಆಗಲಿದ ಪತ್ನಿಯ ಕ್ರಿಯಾಕರ್ಮಗಳನ್ನೆಲ್ಲಾ ಶಾಸ್ತ್ರೋಕ್ತವಾಗಿ ಮುಗಿಸಿದ ಗೌಡರು ನೋವಿನಿಂದ ಊರಿಗೆ ಮರಳಿದರು. ವಿಧಿಯ ವಿಪರೀತ ಮತ್ತು ಆಘಾತದಿಂದಾಗಿ ಅವರಿಗೆ ಕೆಲ ಕಾಲ ಯಾವುದರಲ್ಲಿಯೂ ಆಸಕ್ತಿ ಇಲ್ಲದಂತಾಯಿತು. ಪತ್ನಿಯ ಅಕಾಲ ಮರಣ ಅವರನ್ನು ಜರ್ಝರಿತಗೊಳಿಸಿತು. ಚಿಕ್ಕ ಮಗಳು ಕಮಲ ತಬ್ಬಲಿಯಾದಳು. ಮದುವೆಯಾಗಿ ಕೆಲವೇ ಕೆಲವು ವರ್ಷಗಳಾಗಿದ್ದವು. ತಬ್ಬಲಿ ಮಗು ಕಮಲ ಸೋದರತ್ತೆ ಗೌರಮ್ಮನ ಮಡಿಲು ಸೇರಿತು. ಇಬ್ಬರು ಪತ್ನಿಯರನ್ನು ಕಳೆದುಕೊಂಡ ದುಃಖ ಕೋಪಾಗ್ನಿಯಾಗಿ ಮಾರ್ಪಾಡುಗೊಂಡಿತು. ಕೋಪ ಯಾರ ಮೇಲೆ? ವಿಧಿರಾಯನಾಗಲೀ ಯಮಧರ್ಮರಾಯನಾಗಲೀ ನಮಗೆ ಕಾಣುತ್ತಾರೆಯೇ? ಕೈಗೆ ಸಿಗುತ್ತಾರೆಯೇ? ವಿಧಿಯಾಟದ ಮುಂದೆ ಅವರು ಅಳಲೂ ಆಗದೇ ನಗಲೂ ಆಗದೇ ಅಪ್ರತಿಭರಾದರು ಮತ್ತು ಅಸಹಾಯಕರಾದರು. ಕಾಲಚಕ್ರ ಯಾರಿಗೂ ಕಾಯದೆ ತನ್ನ ಪಾಡಿಗೆ ತಾನು ಉರುಳುತ್ತಿರುತ್ತದೆ. ತಾಯಿಯ ಆಗಲಿಕೆಯಿಂದ ತಬ್ಬಲಿಯಾದ ಮಗು ಕಮಲಳನ್ನು ನೋಡಿದಾಗ ಬಂಧು-ಬಾಂಧವರು ಮರುಗುತ್ತಿದ್ದರು. ಆ ಮಗುವಿಗೆ ಆಗ ನಾಲ್ಕು ವರ್ಷ. ತಾಯಿಗೆ ತಾಯಿಯೇ ಸಾಟಿ. ತಾಯಿಯ ಸ್ಥಾನವನ್ನು ಯಾರೂ ತುಂಬಲು ಸಾಧ್ಯವಿಲ್ಲ. ಗೌಡರ ಒಂಟಿ ಜೀವನ ಕಂಡು ಮತ್ತು ತಾಯಿ ಇಲ್ಲದ ತಬ್ಬಲಿಯಾದ ಪುಟ್ಟ ಬಾಲಕಿ ಕಮಲಳನ್ನು ಕಂಡು ಬಂಧು-ಬಾಂಧವರು, ಆಪ್ತೇಷ್ಟರು ಗೌಡರನ್ನು ಮದುವೆಯಾಗಿ ಎಂದು ಒತ್ತಾಯಿಸಲು ಪ್ರಾರಂಭಿಸಿದರು.

ದಂಪತಿಗಳು ಆಸೆಪಟ್ಟು ಕೊಂಡಿದ್ದ ಕಾರು ನೋಡಿದೊಡನೆ ಗೌಡರಿಗೆ ಹಿಂದಿನ ನೆನಪು ಬಂದು ಕಾಡಲು ಪ್ರಾರಂಭಿಸಿ ಅದರ ಬಗೆಗೆ ಜಿಗುಪ್ಸೆ ಉಂಟಾಯಿತು. ಈ

ಮೊದಲು ಕಾರನ್ನು ನೋಡಿ ಅವರು ಸಂತೋಷಪಡುತ್ತಿದ್ದರು. ಸಂತೋಷದಿಂದ ಕುಟುಂಬದೊಂದಿಗೆ ಕಾರಿನಲ್ಲಿ ಕುಳಿತು ಮೈಸೂರಿಗೆ ಹೋಗಿದ್ದ ಅವರು ಪತ್ನಿಯನ್ನು ಕಳೆದುಕೊಂಡು ವಾಪಸ್ಸಾದದ್ದು ಅವರ ಮನೋವ್ಯಥೆಯನ್ನು ಇಮ್ಮಡಿಸಿತು. ಭಾವುಕರಾದ ಗೌಡರು ತಮ್ಮ ಮನೋವ್ಯಥೆಯನ್ನು ಕಾರಿನ ಮೇಲೆ ತೀರಿಸಿಕೊಂಡರು. ಹಿತ್ತಲಲ್ಲಿ ನಿಲ್ಲಿಸಿದ್ದ ಕಾರು ಮತ್ತೆ ರಸ್ತೆಗಿಳಿಯಲ್ಲಿಲ್ಲ. ನಾಯರ್ ಮಾತ್ರ ಗೌಡರನ್ನು ಬಿಟ್ಟು ಕೇರಳಕ್ಕೆ ಹೋಗಲ್ಲಿಲ್ಲ. ಅತ್ಯಂತ ನಮ್ರತೆಯಿಂದ ಕುಟುಂಬದ ಸದಸ್ಯನಂತೆ ಗೌಡರ ಜೊತೆಗೆ ಉಳಿದುಕೊಂಡನು. ನಾಯರ್ ಮನೆಯಲ್ಲಿದ್ದುದು ಗೌಡರಿಗೆ ನೋವನ್ನು ಮರೆಯಲು ಬಹಳಷ್ಟು ಸಹಾಯಕವಾಯಿತು. ಗೌಡರ ಮನಸ್ಸನ್ನು ನಾಯರ್ ಚನ್ನಾಗಿ ಅರ್ಥ ಮಾಡಿಕೊಂಡಿದ್ದನು. ಅವರಿಬ್ಬರ ಮಧ್ಯೆಯ ಸಂಬಂಧಗಳ ವಿನ್ಯಾಸ ಬಹಳ ಚನ್ನಾಗಿ ಹೊಂದಿಕೆಯಾಗಿತ್ತು.

ಗೌಡರಿಗೆ ಒಮ್ಮೊಮ್ಮೆ ಎಲ್ಲಾ ನೆನಪಾಗಿ ನೋವುಗಳು ದ್ವಿಗುಣಗೊಂಡು ಒತ್ತಡಗಳು ಅಪ್ಪಳಿಸುತ್ತಿದ್ದವು; ಮರೆಯಲು ಪ್ರಯತ್ನಿಸುತ್ತಿದ್ದರು. ಗೌಡರೇನೋ ಹೊಲ, ಮನೆ, ಗದ್ದೆ, ತೋಟಗಳಿಗೆ ಹೋಗಿ ಅದೂ ಇದೂ ಕೆಲಸ ಮಾಡಿಸುತ್ತಿದ್ದರು. ದನಕರುಗಳನ್ನು ಮುದ್ದಿಸುತ್ತಿದ್ದರು. ಜೊತೆಗೆ ನಾಯರ್ ಇದ್ದುದ್ದರಿಂದ, ಹೇಗೋ ಸಮಯವನ್ನು ಕಳೆಯುತ್ತಿದ್ದರು. ಅಕ್ಕ ಗೌರಮ್ಮನವರ ನೋವು ಅಷ್ಟು ಸುಲಭವಾಗಿ ಶಮನವಾಗಲಿಲ್ಲ. ನಂಜಮ್ಮಣ್ಣಿ ಬದುಕಿದ್ದಾಗ ಹಿತ್ತಲಿಗೆ ಆಗಾಗ ಬಂದು ಕೂರುತ್ತಿದ್ದ ಗಿಳಿಗೆ ಕಾಳುಗಳನ್ನು ಮತ್ತು ಕುಡಿಕೆಯಲ್ಲಿ ನೀರನ್ನು ಇಡುತ್ತಿದ್ದರು. ಆ ಗಿಳಿ ಆಕಾಶದಿಂದ ಹಾರಿ ಬಂದಾಗ ಸೊಸೆಯನ್ನು ನೆನಪಿಸಿಕೊಂಡು ರೋಧಿಸುತ್ತಿದ್ದರು. ನಂಜಮ್ಮಣ್ಣಿ ನಿಧನದ ಶೋಕದಲ್ಲಿ ಜರ್ಝರಿತರಾಗಿದ್ದ ತನ್ನ ಅಕ್ಕನಿಗೆ ಗೌಡರು ಎಷ್ಟು ಸಾಧ್ಯವೋ ಅಷ್ಟು ಸಮಾಧಾನಪಡಿಸುತ್ತಿದ್ದರು. ಆ ನೋವನ್ನು ಮರೆಯಲಿ ಎಂದು ಒಂದು ಮುದ್ದಾದ ತರಬೇತಾದ ಮಾತಿನ ಗಿಳಿಯನ್ನು ತಂದುಕೊಟ್ಟರು. ಊರಿನಲ್ಲಿ ಎಲ್ಲೆಲೂ ಜನರ ಬಾಯಲ್ಲಿ ಆ ಗಿಳಿಯದೇ ಮಾತು. ಊರಿನ ಜನರು ಅ ಗಿಳಿ ಮಾತನಾಡುವುದನ್ನು ನೋಡಿ ಅಚ್ಚರಿಯಿಂದ ಮತ್ತು ಸೋಜಿಗದಿಂದ ನೋಡುತ್ತಿದ್ದರು. ಅ ಗಿಳಿಯು "ರಾಮ ರಾಮ" ಎನ್ನುತ್ತಿತ್ತು; "ಗೌರಕ್ಕ, ಗೌರಕ್ಕ" ಎನ್ನುತ್ತಿತ್ತು. ಕೆಲಸದ ಮೇಲೆ ಹೊರಗೆ ಹೋಗಿ ಬಂದ ಗೌಡರು ಜಟಕಾ ಬಂಡಿ ಇಳಿಯುತ್ತಿದ್ದಂತೆಯೇ ಪಂಜರದಲ್ಲಿದ್ದ ಗಿಳಿ ಅವರನ್ನು ನೋಡಿ ಕೂಗುತ್ತಾ ಪ್ರತಿಕ್ರಿಯಿಸುತ್ತಿತ್ತು. "ಗೌರಕ್ಕ, ಗೌಡ್ರು ಬಂದ್ರು ನೀರು ಕೊಡು, ಊಟಕ್ಕಿಡು" ಎಂದು ತನ್ನದೇ ಭಾಷೆಯಲ್ಲಿ ಕೂಗುತ್ತಿತ್ತು. ಗೌಡರು ಆ ಗಿಳಿಗೆ ಪ್ರಿಯವಾಗಿದ್ದ ಎಳೆಯ ರಾಗಿಯ ತೆನೆ, ಸೀಬೆಹಣ್ಣು ತಂದುಕೊಡುತ್ತಿದ್ದರು. ಕೊಟ್ಟು ಆ ಗಿಳಿಯು

ಅವುಗಳನ್ನು ತಿನ್ನುವುದನ್ನು ನೋಡಿ ಸಂತೋಷಪಡುತ್ತಿದ್ದರು. ಕಷ್ಟಗಳು, ನೋವುಗಳು ಬಂದರೆ ಒಂದೊಂದೇ ಬರುವುದಿಲ್ಲ; ಸಾಲಾಗಿ ಬರುತ್ತವೆ. ಅನುಭವಿಸಲೇಬೇಕು. ಎಲ್ಲರನ್ನೂ ಸಂತೋಷಗೊಳಿಸುತ್ತಿದ್ದ ಆ ಮುದ್ದಿನ ಗಿಳಿಯೂ ಒಂದು ದಿನ ಸತ್ತು ಹೋಯಿತು. ಮನೆಯವರೆಲ್ಲಾ ತಮ್ಮ ಮುದ್ದಿನ ಗಿಳಿಯ ಸಾವಿನಿಂದ ಗೋಳಾಡಿದರು; ಕೆಲವರು ಅಂದು ಊಟ ತಿಂಡಿ ಮಾಡಲಿಲ್ಲ. ಗಿಳಿಯ ಸಾವಿನ ಸುದ್ದಿ ತಿಳಿದು ರಾಮನಗರದಿಂದ ಬಂದ ಗೌಡರು ಅಕ್ಕನನ್ನು ಸಮಾಧಾನ ಪಡಿಸಿದರು. ಆ ಮುದ್ದಿನ ಗಿಳಿರಾಯನಿಗೆ ಶಾಸ್ತ್ರೋಕ್ತವಾಗಿ ಅಂತ್ಯ ಸಂಸ್ಕಾರ, ಹಾಲು ತುಪ್ಪ ಶಿವಗಣಾರಾಧನೆ ಎಲ್ಲಾ ಮಾಡಿದರು. ಅದರ ಗುಣಗಾನಗಳನ್ನು ಮಾಡುತ್ತ ಬಹಳ ರೋಧಿಸಿದರು.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಹಾಜರಾಗಲು ಗೌಡರು ಮೈಸೂರಿಗೆ ಬಂದಿದ್ದರು. ಜಗನ್ಮೋಹನ ಅರಮನೆಯಲ್ಲಿ ನಡೆಯುತ್ತಿದ್ದ ಸಭೆಗೆ ಅವರ ಸ್ನೇಹಿತರಾದ ಕ್ಯಾತನಹಳ್ಳಿಯ ಶಿವನಂಜೇಗೌಡರು ಕೂಡ ಬಂದಿದ್ದರು. ಪರಸ್ಪರ ಭೇಟಿಯಾದರು; ಲೋಕಾಭಿರಾಮವಾಗಿ ಮಾತನಾಡುತ್ತಾ ಶಿವನಂಜೇಗೌಡರು ಪತ್ನಿ ತೀರಿಕೊಂಡಿದ್ದಕ್ಕೆ ಸಂತಾಪ ಸೂಚಿಸಿದರು. ಮುಂದುವರೆದು "ಮತ್ತೆ ಮದುವೆಯಾಗುವ ಉದ್ದೇಶವಿದ್ದರೆ ಹೇಳಿ; ಸಂಕೋಚ ಪಡಬೇಡಿ; ನಮ್ಮ ಅಕ್ಕನ ಮಗಳಿದ್ದಾಳೆ" ಎಂದು ಹೇಳಿದರು. "ಮದುವೆಯಾಗಬೇಕೋ ಅಥವಾ ಬೇಡವೋ ಎಂಬುದನ್ನು ನಾನು ಯೋಚನೆ ಮಾಡಿಲ್ಲ" ಎಂದರು ಗೌಡರು. "ಮನೆಯಲ್ಲಿ ಏನು ಹೇಳುತ್ತಾರೆ"? ಎಂದು ಶಿವನಂಜೇಗೌಡರು ಕೇಳಿದರು. "ಮದುವೆಯಾಗಿ ಎನ್ನುತ್ತಾರೆ" ಎಂದರು ಗೌಡರು. "ಹಾಗಾದರೆ ಮದುವೆಯಾಗಿ ಬಿಡಿ" ಎಂದು ಶಿವನಂಜೇಗೌಡರು ದೃಢವಾಗಿ ತಿಳಿಸಿದರು. ಶಿವನಂಜೇಗೌಡರು ಗೌಡರ ಮನೆಯ ಹಿರಿಯರೊಂದಿಗೆ ಮಾತನಾಡಿದರು. ಮದುವೆಗೆ ಎಲ್ಲರೂ ತಕ್ಷಣವೇ ಒಪ್ಪಿದರು. ಮನೆ ಹಿರಿಯರು ಗೌಡರೊಂದಿಗೆ ಹೋಗಿ ಹೆಣ್ಣು ನೋಡಿದರು. ಹುಡುಗಿ ಎಣ್ಣೆಹೊಳೆಕೊಪ್ಪಲಿನ ರೈತರಾದ ವೆಂಕಟರಮಣೇಗೌಡರ ಮೊದಲ ಹೆಂಡತಿಯ ಎರಡನೆ ಮಗಳಾದ ಸಾವಿತ್ರಮ್ಮ. ಹುಡುಗಿ ನೋಡಿದ ನಂತರ ಎಲ್ಲರಿಗೂ ಒಪ್ಪಿಗೆಯಾಯಿತು. ಆಗ ಗೌಡರಿಗೆ ವಯಸ್ಸು ನಲವತ್ತು ವರ್ಷಗಳು. ಸಾವಿತ್ರಮ್ಮನದು ಹದಿಹರೆಯದ ೧೭ ವರ್ಷಗಳು. ಗಂಡಿಗೂ ಹೆಣ್ಣಿಗೂ ೨೩ ವರ್ಷಗಳ ವಯಸ್ಸಿನ ಅಂತರ. ಆ ಕಾಲದಲ್ಲಿ ವಯಸ್ಸಿನ ಅಂತರವು ದೊಡ್ಡ ವಿಷಯವಾಗಿರಲಿಲ್ಲ. ಜೊತೆಗೆ ಹೆಣ್ಣಿನ ಒಪ್ಪಿಗೆಯನ್ನು ಕೇಳುತ್ತಿರಲಿಲ್ಲ. ವಿದ್ಯಾವಂತ, ಅನುಕೂಲವಂತ, ರೂಪವಂತ ವರ ಸಿಕ್ಕಿರುವಾಗ ಮೂರನೆ ಮದುವೆ ಅಂತ ಹೆಣ್ಣಿನವರು ಯೋಚಿಸುತ್ತಿರಲಿಲ್ಲ. ಸೋದರ ಮಾವ ಶಿವನಂಜೇಗೌಡರ ಸ್ನೇಹಿತರಾಗಿದ್ದವರು ಮಾದಯ್ಯಗೌಡರು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ

ಸದಸ್ಯರಾಗಿದ್ದರು. ಕಂಕಣ ಬಲ ಕೂಡಿ ಬಂದಿತು. ಶ್ರೀರಂಗಪಟ್ಟಣದ ಕೃಷ್ಣಮೂರ್ತಿ ಬಂಗಲೆಯಲ್ಲಿ ಮದುವೆ ಅದ್ದೂರಿಯಾಗಿ ನಡೆಯಿತು.

ಸಾವಿತ್ರಮ್ಮ ತುಂಬಿದ ಸಂಸಾರಕ್ಕೆ ಸೊಸೆಯಾಗಿ ಬಂದರು. ಗೌಡರ ಅಣ್ಣನವರ ಎರಡನೆಯ ಮಗಳ ಹೆಸರು ಸಹ ಸಾವಿತ್ರಮ್ಮ ಎಂದು ಆಗಲೇ ಇತ್ತು. ಒಂದೇ ಮನೆಯಲ್ಲಿ ಎರಡು ಹೆಸರು ಹಿಡಿದು ಕರೆಯುವುದು ಗೊಂದಲವಾಗುತ್ತದೆ ಎಂದು ಗೌಡರ ಮಡದಿ ಸಾವಿತ್ರಮ್ಮನ ಹೆಸರನ್ನು ಶಾರದಮ್ಮ ಎಂದು ಬದಲಾಯಿಸಿದರು. ಶಾರದಮ್ಮ ನಿಷ್ಕಲ್ಮಷ ಹೃದಯದ ಮೃದುಸ್ವಭಾವದ ಹೆಣ್ಣು ಮಗಳು. ಶ್ರಮಜೀವಿ ಮತ್ತು ದೈವಭಕ್ತೆ. ವ್ಯವಸಾಯಗಾರರ ಕುಟುಂಬದಿಂದ ಬಂದ ಹೆಣ್ಣು ಮಗಳು. ಕೆಲಸ ಮಾಡುವುದಕ್ಕೆ ಎಂದೂ ಬೇಸರಪಟ್ಟುಕೊಳ್ಳುತ್ತಿರಲಿಲ್ಲ. ಉನ್ನತ ವ್ಯಾಸಂಗ ಮಾಡಿ ಹೆಸರುವಾಸಿ ಲಾಯರ್ ಆಗಿದ್ದ ಗೌಡರ ಮಡದಿಯಾಗಿದ್ದು ಅವರಿಗೆ ಸಂತೋಷವನ್ನು ಉಂಟುಮಾಡಿತ್ತು.

ರಾಮನಗರದಲ್ಲಿ ವಕೀಲ ವೃತ್ತಿ ಇತ್ತು; ಅಲ್ಲಿಯೇ ಸಂಸಾರ ಹೂಡಿದರು. ತಿಮ್ಮಸಂದ್ರದಲ್ಲಿ ಆಗ ಬರೀ ಪ್ರೈಮರಿ ಸ್ಕೂಲ್ ಮಾತ್ರ ಇತ್ತು. ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ ತರಗತಿಗಳನ್ನು ಓದಲು ಕುಟುಂಬದ ಮಕ್ಕಳು ಚನ್ನಪಟ್ಟಣಕ್ಕೆ ಹೋಗಬೇಕಾಯಿತು. ನಾಲ್ಕನೆ ತರಗತಿ ಮುಗಿದ ಮೇಲೆ ಕುಟುಂಬದ ಮಕ್ಕಳನ್ನೆಲ್ಲಾ ಗೌಡರು ರಾಮನಗರದಲ್ಲಿ ತಮ್ಮ ಮನೆಯಲ್ಲಿ ಇಟ್ಟುಕೊಂಡು ಓದಿಸುತ್ತಿದ್ದರು. ಸಂಸಾರಕ್ಕೆ ಅಗತ್ಯವಾದ ದವಸ ಧಾನ್ಯಗಳನ್ನು ಬೇಳೆಕಾಳುಗಳನ್ನು ಊರಿನಿಂದ ಕಳಿಸಿಕೊಡುತ್ತಿದ್ದರು. ಊರಿನಲ್ಲಿ ಸಿಗದಿದ್ದ ಲವಾಜಮೆಗಳನ್ನು ಮಾತ್ರ ರಾಮನಗರದ ಅಂಗಡಿಗಳಲ್ಲಿ ಕೊಂಡುಕೊಳ್ಳುತ್ತಿದ್ದರು.

ವಕೀಲೀ ವೃತ್ತಿಯಲ್ಲಿ ಕೃಷ್ಣರಾಯರು ಗೌಡರಿಗೆ ಬಹಳ ಆತ್ಮೀಯರಾಗಿದ್ದರು. ಕೃಷ್ಣರಾಯರು ಮತ್ತು ಗೌಡರು ವಕೀಲಿ ಜೀವನದಲ್ಲಿ ಯಾವತ್ತೂ ಪರಸ್ಪರ ಎದುರು ಬದುರು ವಾದಿಸಲಿಲ್ಲ. ಸಮಕಾಲೀನ ಸಮಾಜದ ಆಗು ಹೋಗುಗಳು, ಸಾಹಿತ್ಯ, ಸಂಗೀತ, ಮತ್ತು ಆಧ್ಯಾತ್ಮಿಕ ವಿಚಾರಗಳಲ್ಲಿ ಇಬ್ಬರೂ ಸಮಾನ ಆಸಕ್ತರಾದವರು. ಇಬ್ಬರ ಸಂಭಾಷಣೆಗಳಲ್ಲಿ ಸಮಕಾಲೀನ ಸಮಾಜದ ಆಗು ಹೋಗುಗಳು, ಸಾಹಿತ್ಯ, ಸಂಗೀತ, ಮತ್ತು ಆಧ್ಯಾತ್ಮಿಕ ವಿಚಾರಗಳ ಪ್ರವಾಹವೇ ಹರಿಯುತ್ತಿತ್ತು. ಕೃಷ್ಣರಾಯರ ಮಕ್ಕಳಾದ ಮಾಧವರಾವ್, ಶ್ರೀನಿವಾಸರಾವ್, ನಾಗರತ್ನರವರಿಗೂ ಗೌಡರ ಬಗೆಗೆ ಅಪಾರವಾದ ಗೌರವ ಮತ್ತು ವಿಶ್ವಾಸವಿತ್ತು. ಕೃಷ್ಣರಾಯರಿಗೆ ಕುವೆಂಪು ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿ. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಆಸ್ವಾದನೆಯಲ್ಲಿ ಸದಾ ತಲ್ಲೀನರಾಗಿರುತ್ತಿದ್ದರು. ಗೌಡರು ಒಮ್ಮೆ ರಾಮನಗರಕ್ಕೆ ಮಹಾಕವಿ ಕುವೆಂಪುರವರನ್ನು

ಯಾವುದೋ ಕಾರ್ಯಕ್ರಮಕ್ಕೆ ಕರೆಸಿದ್ದಾಗ, ಕೃಷ್ಣರಾಯರನ್ನು ಭೇಟಿ ಮಾಡಿಸಿದ್ದರು. ಆವರಿಗೆ ಸೌಖ್ಯವಿರಲಿಲ್ಲ. ಬೆಳಕಿನ ಪುಂಜದಂತಿದ್ದ ಮಹಾಕವಿಗಳನ್ನು ನೋಡಿದ ರಾಯರು ಸೌಖ್ಯವಿಲ್ಲದಿದ್ದರೂ ಗೌರವ ನೀಡಲು ಹಾಸಿಗೆಯಿಂದ ಎದ್ದು ಕುಳಿತುಕೊಳ್ಳಲು ಪ್ರಾರಂಭಿಸಿದರು. ಗೌಡರು ಸೌಜನ್ಯದಿಂದ "ಸ್ವಾಮಿ, ದಯವಿಟ್ಟು ಮೇಲೇಳುವ ತೊಂದರೆ ತೆಗೆದುಕೊಳ್ಳಬೇಡಿ. ಆರಾಮಾಗಿ ಮಲಗಿಯೇ ಇರಿ" ಎಂದು ಹೇಳಿದರು. ಮಹಾಕವಿಗಳು ತಮ್ಮ ಮನೆಗೆ ಬಂದಿದ್ದರಿಂದ ಹರ್ಷಗೊಂಡ ಕೃಷ್ಣರಾಯರು ಗೌಡರಿಗೆ ಕರೆದುಕೊಂಡು ಬಂದುದಕ್ಕಾಗಿ ಕೃತಜ್ಞತೆಯನ್ನು ಅರ್ಪಿಸಿದರು. ಗೌಡರ ಮೂಲಕ ಕುವೆಂಪು ಅವರ ಭೇಟಿಯಾಗಿದ್ದು ಕೃಷ್ಣರಾಯರಿಗೆ ಕೊನೆಯವರೆವಿಗೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿತ್ತು.

ಕೃಷ್ಣರಾಯರು ವಕೀಲಿ ವೃತ್ತಿಯಲ್ಲಿದ್ದರೂ ಸಾಹಿತ್ಯ ಪ್ರಿಯರಾಗಿದ್ದರು. ಕನ್ನಡ ಸಾಹಿತ್ಯ ಅವರಿಗೆ ಪ್ರಿಯವಾದುದಾಗಿತ್ತು. ಪ್ರಾಚೀನ ಕಾವ್ಯಗಳಲ್ಲಿ ಕುಮಾರವ್ಯಾಸ ಅಚ್ಚುಮೆಚ್ಚಿನ ಕವಿಯಾದರೆ, ಹೊಸ ಬಗೆಯ ಸಾಹಿತಿಗಳಲ್ಲಿ ಕುವೆಂಪು ಮೆಚ್ಚಿನ ಕವಿಯಾಗಿದ್ದರು. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಅವರಿಗೆ ಅದ್ಭುತವೆನಿಸಿತ್ತು. ರಜಾ ದಿನಗಳಲ್ಲಿ ಗೌಡರು ತಮ್ಮ ಮಗಳು ಸರಸ್ವತಿಯೊಡನೆ ಕೃಷ್ಣರಾಯರ ಮನೆಗೆ ಹೋಗುತ್ತಿದ್ದರು. ಅದನ್ನು ಮತ್ತೆ ಮತ್ತೆ ಓದಿಸಿ ಕೇಳಿ ಆನಂದಿಸುತ್ತಿದ್ದರು. ಮಗಳು ಸರಸ್ವತಿ, ಗೌಡರ ಜೊತೆಯಲ್ಲಿ ಇರುತ್ತಿದ್ದ ಕಾರಣ ಪಕ್ಕದಲ್ಲಿಯೇ ಇದ್ದ ಅಂತಹ ಗ್ರಂಥಗಳನ್ನು ಕೊಟ್ಟು ಓದಿಸಿ ಕೇಳುತ್ತಿದ್ದುದು ಸಾಮಾನ್ಯವಾದುದಾಗಿತ್ತು. ಗೌಡರ ಮಗಳು ಆ ಮಹಾನ್ ಗ್ರಂಥಗಳನ್ನು ಓದುತ್ತಿದಂತೆ, ಕೇಳುತ್ತಾ ಕೇಳುತ್ತಾ ಕೃಷ್ಣರಾಯರು ಆನಂದ ಪರವಶರಾಗುತ್ತಿದ್ದರು, ಕಂಬನಿ ಸುರಿಸುತ್ತಿದ್ದರು. ಮಧ್ಯೆ ಮಧ್ಯೆ 'ಆಹಾ, ಓಹೋ' ಎಂದು ಉದ್ಗರಿಸುತ್ತಾ ಮಹಾಕಾವ್ಯದ ಆನಂದವನ್ನು ಅನುಭವಿಸುತ್ತಿದ್ದ ಅವರು "ಅಮ್ಮಾ, ಇನ್ನೊಂದು ಸಾರಿ ಈ ಸಾಲು ಓದು; ಇನ್ನೊಂದು ಸಾರಿ ಆ ಸಾಲು ಓದು" ಎಂದು ಕೇಳುತ್ತಿದ್ದರು.

ಗೌಡರು ತಮ್ಮ ವಕೀಲ ವೃತ್ತಿಯಲ್ಲಿ ಬರೀ ಹಣಕಾಸು ಸಂಪಾದನೆಗೆ ಗಮನಕೊಡಲಿಲ್ಲ. ಗಾಂಧೀ ವಿಚಾರಧಾರೆಯನ್ನು ಮರೆಯದೇ ಜೀವನದಲ್ಲಿ ಅಳವಡಸಿಕೊಂಡಿದ್ದರು. ಬಡ ಬಗ್ಗರ ಕಷ್ಟಸುಖಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ತಿಮ್ಮೇಗೌಡ ಗೌಡರ ಕಕ್ಷಿದಾರರಲ್ಲೊಬ್ಬ. ಪ್ರಾರಂಭದಲ್ಲಿ ಆರ್ಥಿಕ ಸಮಸ್ಯೆಗಳಿಂದ ಬಳಲುತ್ತಿದ್ದ ತಿಮ್ಮೇಗೌಡ ಮಾಸಲುಬಟ್ಟೆ ಜೋಲುಮುಖ ಹಾಕಿಕೊಂಡು ಗೌಡರ ಮನೆಗೆ ಬಂದವನು. ದಾಯಾದಿಗಳ ಮತ್ಸರದಿಂದ ಜಮೀನು ಕಳೆದುಕೊಂಡು, ಅಸಹಾಯಕನಾಗಿ ಬಡತನಕ್ಕೆ ಸಿಕ್ಕಿ ಒದ್ದಾಡುತ್ತಿದ್ದನು. ಕೋರ್ಟು-ಕಛೇರಿಯ ಬಗ್ಗೆ ಏನೇನೂ ತಿಳಿಯದು. ತಿಮ್ಮೇಗೌಡನಿಗೆ

ಪಕ್ಕದೂರಿನ ಪುಣ್ಯಾತ್ಮರೊಬ್ಬರು "ನೋಡಪ್ಪಾ, ರಾಮನಗರದಲ್ಲಿ ಮಾದಯ್ಯಗೌಡರು ಎಂಬ ಒಬ್ಬ ಲಾಯರ್ ಇದ್ದಾರೆ. ಅವರಿಗೆ ಬಡವರೆಂದರೆ ಕನಿಕರ. ಅವರನ್ನು ನೀನು ಹೋಗಿ ನೋಡು; ನಿನ್ನ ಕಷ್ಟ ಹೇಳಿಕೋ, ನಿನ್ನ ಕಷ್ಟಗಳು ಬಗೆಹರಿಯಬಹುದು" ಎಂದು ಹೇಳಿದರು. ಒಂದು ದಿನ ತಿಮ್ಮೇಗೌಡ ರಾಮನಗರಕ್ಕೆ ಬಂದು ಗೌಡರನ್ನು ಕಂಡನು. ಬಿಸಿಲಿನಲ್ಲಿ ಬಾಡಿ ಬಸವಳಿದು ಬಂದು, ಮನೆಯ ಹೊರಗೆ ಮೆಟ್ಟಿಲಿನ ಮೇಲೆ ಕುಳಿತಿದ್ದ ತಿಮ್ಮೇಗೌಡನನ್ನ ಕೋರ್ಟಿನಿಂದ ಬಂದ ಗೌಡರು ನೋಡಿದರು ಮತ್ತು ಮಾತನಾಡಿಸಿ ವಿಷಯ ತಿಳಿದುಕೊಂಡರು. ಇರು ಎಂದು ಹೇಳಿ ಒಳಗೆ ಹೋದ ಗೌಡರು ಕೈಕಾಲು ಮುಖ ತೊಳೆದುಕೊಂಡು ಬಂದ ಗೌಡರು 'ಊಟ ಮಾಡಿದೆಯಾ?' ಎಂದು ತಿಮ್ಮೇಗೌಡನನ್ನು ವಿಚಾರಿಸಿದರು. "ಇಲ್ಲಾ ಸ್ವಾಮೀ" ಎಂದು ತಲೆಯಲ್ಲಾಡಿಸಿದ. ಗೌಡನನ್ನು ಜೊತೆಯಲ್ಲಿ ಕರೆದೊಯ್ದು ಊಟಮಾಡಿಸಿದರು. ನಂತರ ಅವನ ಸಮಸ್ಯೆಯ ವಿವರಗಳನ್ನು ಕೇಳಿದರು. ಗೌಡರ ಕಾಲುಹಿಡಿದು ಗೊಳೋ ಎಂದು ಅಳಲು ಪ್ರಾರಂಭಿಸಿದನು. ಅವನನ್ನು ಸಮಾಧಾನ ಪಡಿಸಿದ ಗೌಡರು ಅವನ ಗೋಳಿನ ಕತೆಯನ್ನು ಸಾವಧಾನದಿಂದ ಕೇಳಿದರು. ಅವನ ಕೇಸನ್ನು ಫೈಲ್ ಮಾಡಲು ತೀರ್ಮಾನಿಸಿದರು. ಮಾರನೆಯ ದಿನ ಅವನಿಗೆ ಸ್ನಾನಮಾಡಿಸಿ, ಮಡಿಬಟ್ಟೆಕೊಟ್ಟು, ಬಸ್‌ಚಾರ್ಜಿಗೆ ದುಡ್ಡುಕೊಟ್ಟು ಊರಿಗೆ ಕಳುಹಿಸಿದರು. ಅವನು ಬಂದಾಗಲೆಲ್ಲಾ ನೆಂಟರಿಗೆ ಉಪಚರಿಸುವಂತೆ ಅವನನ್ನ ಉಪಚರಿಸಿ, ದುಡ್ಡು ಕೊಟ್ಟು ಕಳುಹಿಸುತ್ತಿದ್ದರು.

ಗೌಡರ ಸಜ್ಜನಿಕೆಗೆ ಮಾರುಹೋದ ತಿಮ್ಮೇಗೌಡ ಮೂಕನಾಗುತ್ತಿದ್ದನು. ಕೋರ್ಟಿನಲ್ಲಿ ವಾದಿಸಿ, ಅವನ ಕೇಸ್ ಗೆದ್ದುಕೊಟ್ಟರು. ಅಡಿಕೆ ತೋಟ ತಿಮ್ಮೇಗೌಡನ ಸುಪರ್ದಿಗೆ ಬಂತು. ಧರ್ಮಸ್ಥಳದ ಭಕ್ತನಾದ ತಿಮ್ಮೇಗೌಡ, ಮಂಜುನಾಥನ ಮೇಲೆ ಆಣೆಮಾಡಿ, ಗೌಡರಿಗೆ ತಾನು ಬದುಕಿರುವವರೆಗೆ ವರ್ಷಕ್ಕೆ ಒಂದು ಮಣ ಅಡಿಕೆ ತಂದುಕೊಡುತ್ತೇನೆಂದು ವಾಗ್ದಾನ ಮಾಡಿದ. ತನ್ನನ್ನು ಮನೆ ಮಗನಂತೆ ನೋಡಿಕೊಂಡು, ಚಿಕ್ಕಾಸು ತೆಗೆದುಕೊಳ್ಳದೆ ಕೇಸ್ ಗೆದ್ದುಕೊಟ್ಟ ಗೌಡರ ಋಣವನ್ನ ಹೇಗೆ ತೀರಿಸಲಿ ಎಂದು ಅಲವತ್ತುಕೊಳ್ಳುತ್ತಿದ್ದ. ಮುಂದೆ ಗೌಡರಿಗೆ ಗಂಡುಮಗ ಹುಟ್ಟಿದಾಗ, 'ಮಂಜುನಾಥ'ನ ಹೆಸರು ಇಡಬೇಕೆಂದು ಬೇಡಿಕೊಂಡ. ಅವನು ಬದುಕಿರುವವರೆಗೆ ತನ್ನ ಮಾತಿನಂತೆಯೇ ನಡೆದುಕೊಂಡ. ತನ್ನೂರಿನಲ್ಲೆಲ್ಲಾ ಗೌಡರ ದೊಡ್ಡತನದ ಗುಣಗಾನ ಮಾಡುತ್ತಿದ್ದ.

ರಾಮನಗರದಲ್ಲಿದ್ದ ಮುಸ್ಲಿಂ ಬಾಂಧವರು ಗೌಡರನ್ನು ತುಂಬಾ ವಿಶ್ವಾಸದಿಂದ ಕಾಣುತ್ತಿದ್ದರು. ಕರೀಂ ಸಾಬ್‌ರ ಮಕ್ಕಳಾದ ಖಾಲಕ್, ಜಬ್ಬಾರ್, ನವಾಬ್, ನಿಸಾರ್, ಸಮದ್ ಮುಂತಾದವರು 'ಗೌಡಾಜೀ ನಮ್ಮ ಹಿರಿಯಣ್ಣ' ಎನ್ನುತ್ತಿದ್ದರು.

ನವಾಬ್‌ಸಾಬರಿಗಂತೂ ಗೌಡರ ಬಾಯಿಂದ ಆಧ್ಯಾತ್ಮದ ವಿಷಯ ತಿಳಿಯಲು ತುಂಬಾ ಆಸಕ್ತಿ. ಸಮ್ಮದ್‌ಸಾಬರು ಮುಂದೆ ಆರೋಗ್ಯ ಸಚಿವರಾದರು. ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದ ಆಗಾಸಾಬರಿಗೂ ಮತ್ತು ಕರೀಮ್‌ಸಾಬರಿಗೂ ಇದ್ದ ಮುನಿಸನ್ನು ಗೌಡರು ಬಗೆಹರಿಸಿದರು. ರಾಮನಗರದಲ್ಲಿ ಹಿಂದೂ-ಮುಸ್ಲಿಂ ಬಾಂಧವ್ಯ ಸೌಹಾರ್ದಯುತವಾಗಿರಲು ಗೌಡರು ಗಮನಕೊಡುತ್ತಿದ್ದರು.

ರಾಮನಗರದಲ್ಲಿ ಗೌಡರ ವಕೀಲಿ ವೃತ್ತಿ ಚನ್ನಾಗಿ ನಡೆಯುತ್ತಿತ್ತು. ಅದೇ ರೀತಿ ಚಿತ್ರದುರ್ಗದಲ್ಲಿ ನಿಜಲಿಂಗಪ್ಪನವರ ವಕೀಲಿ ವೃತ್ತಿ ಚನ್ನಾಗಿ ನಡೆಯುತ್ತಿತ್ತು. ಇಬ್ಬರಿಗೂ ಕೈಯಲ್ಲಿ ಸಾಕಷ್ಟು ನಗದು ಹಣ ಬರುತ್ತಿತ್ತು. ಗೌಡರು ಆ ದಿನದ ಸಂಪಾದನೆಯನ್ನು ಆ ದಿನವೇ ಬ್ಯಾಂಕಿನ ಅಕೌಂಟಿಗೆ ಇಟ್ಟಿದ್ದರೆ ದೊಡ್ಡ ಪ್ರಮಾಣದಲ್ಲಿ ಹಣ ಉಳಿತಾಯವಾಗುತ್ತಿತ್ತು. ನಿಜಲಿಂಗಪ್ಪನವರಿಗೆ ಊರಿನಲ್ಲಾಗಲೀ ಅಥವಾ ಚಿತ್ರದುರ್ಗ ಟೌನಿನಲ್ಲಾಗಲೀ ಸ್ವಂತದ ಮನೆ ಇರಲಿಲ್ಲ. ಆದುದರಿಂದ ನಿಜಲಿಂಗಪ್ಪನವರು ೧೯೩೧ರಲ್ಲಿ ಮನೆ ಕಟ್ಟಲು ಶುರು ಮಾಡಿ ಒಂದೊಂದಾಗಿ ಮನೆ ಕಟ್ಟುವ ಸಾಮಾಗ್ರಿಗಳನ್ನು ಕೂಡಿಸಲು ಪ್ರಾರಂಭಿಸಿ ೧೯೩೫ರಲ್ಲಿ ಮನೆ ಕಟ್ಟಿ ಮುಗಿಸಿ ಮನೆಗೆ 'ವಿನಯ' ಎಂದು ಹೆಸರಿಟ್ಟರು. ಮನೆಯ ಒಟ್ಟು ನಿರ್ಮಾಣದ ವೆಚ್ಚ ೧೧-೧೨ ಸಾವಿರ ಆಯಿತು. ನಿವೇಶನದ ಬೆಲೆ ಆಗ ೨೧೪ ರೂಪಾಯಿಗಳು ಮತ್ತು ನಾಲ್ಕು ಆಣೆ. ನಿಜಲಿಂಗಪ್ಪನವರು ಮನೆ ಕಟ್ಟಿಸುವಾಗ ಸಾಹುಕಾರ ವೀರಭದ್ರಪ್ಪನವರು ನಮ್ಮ ಮನೆಯಲ್ಲೇ ಇರಿ; ಸುಮ್ಮನೆ ಬೇರೆ ಮನೆ ಯಾಕೆ ಕಟ್ಟಿಸುತ್ತಿರೀ ಎಂದರು. ಎಷ್ಟು ದಿನ ಅಂತ ಅವರ ಮನೆಯಲ್ಲಿ ಇರುವುದು ಎಂದು ನಿಜಲಿಂಗಪ್ಪನವರು ಸ್ವಂತ ಮನೆಯನ್ನು ಕಟ್ಟಿಕೊಂಡರು. ಮುನಿಸಿಪಲ್ ಕೌನ್ಸಿಲ್ ಸದಸ್ಯರಾಗಿದ್ದ ಗೌಡರು ರಾಮನಗರದಲ್ಲಿ ಆಗ ಪ್ರಭಾವಿ ವ್ಯಕ್ತಿಯಾಗಿದ್ದರು. ಇಟ್ಟಿಗೆ ತಯಾರಿಸುವವರು, ಮರ ಮುಟ್ಟು ವ್ಯಾಪಾರಗಾರರು, ಬಡಗಿಗಳು, ಗಾರೆಕೆಲಸಗಾರರು ಎಲ್ಲರೂ ಪರಿಚಯವಿದ್ದವರು. ಮನಸ್ಸು ಮಾಡಿದ್ದರೆ ಬಹುದೊಡ್ಡ ಬಂಗಲೆಯನ್ನು ಕಟ್ಟಿಸಬಹುದಿತ್ತು. ಬೇಕಾದಷ್ಟು ನಿವೇಶನಗಳನ್ನು ಕೊಂಡು ಇಟ್ಟಿರಬಹುದಿತ್ತು. ಗೌಡರಿಗೆ ಊರಿನಲ್ಲಿ ಒಟ್ಟು ಕುಟುಂಬದ ಸಾಕಷ್ಟು ಜಮೀನು ಮತ್ತು ದೊಡ್ಡ ಮನೆ ಇತ್ತು. ಅವರು ಎಂದೂ ದುರಾಸೆ ಪಡಲಿಲ್ಲ. ಗಾಂಧೀಜಿಯವರ ಅಸಂಗ್ರಹ ತತ್ವದಲ್ಲಿ ಅಚಲನಿಷ್ಠೆಯನ್ನು ಹೊಂದಿದ್ದ ಅವರು ರಾಮನಗರದಲ್ಲಿ ಮನೆಯನ್ನು ಕಟ್ಟಿಸುವ ಮತ್ತು ನಿವೇಶನಗಳನ್ನು ಕೊಳ್ಳುವ ಆಲೋಚನೆಯನ್ನು ಎಂದೂ ಮಾಡಲಿಲ್ಲ. ರಾಜಕೀಯ ಮತ್ತು ವಕೀಲಿ ವೃತ್ತಿಯನ್ನು ಬಿಟ್ಟ ನಂತರ ತಮ್ಮ ಊರಾದ ತಿಮ್ಮಸಂದ್ರದಲ್ಲಿ ಬಂದು ನೆಲಸಲು ನಿರ್ಧರಿಸಿ, ಹಾಗೆಯೇ ಮಾಡಿದರು.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಅಣ್ಣ ಅಪ್ಪಾಜಿಗೌಡ ಮತ್ತು ತಮ್ಮ ಮಾದಯ್ಯಗೌಡ ಆದರ್ಶ ಅಣ್ಣ-ತಮ್ಮಂದಿರೆಂದು ಹೆಸರುವಾಸಿಯಾಗಿದ್ದರು. ಅಣ್ಣನಿಗೆ ತಮ್ಮನ ಮೇಲೆ ಅತೀವ ಭ್ರಾತೃವಾತ್ಸಲ್ಯ; ತಮ್ಮನಿಗೆ ಅಣ್ಣನ ಮೇಲೆ ಅತೀವ ಗೌರವ ಮತ್ತು ಪ್ರೀತಿ. ಅಣ್ಣನ ಎದುರಿಗೆ ತಮ್ಮ ಕುಳಿತುಕೊಳ್ಳುತ್ತಿರಲಿಲ್ಲ. ಸಲುಗೆಯಿಂದ ವರ್ತಿಸುತ್ತಿರಲಿಲ್ಲ. ಅಣ್ಣನ ಎದುರು ನಿಂತು ತಮ್ಮ ಮಾದಯ್ಯಗೌಡರು ಮಾತನಾಡುತ್ತಿದ್ದುದು ವಿರಳ. ಅಷ್ಟು ಗೌರವಾದರಗಳು ಅಣ್ಣ-ತಮ್ಮಂದಿರ ಮಧ್ಯೆ ಇದ್ದವು. ತಮ್ಮ ಡಬ್ಬಲ್ ಡಿಗ್ರಿ ಪದವೀಧರ ಎಂಬ ಗೌರವಾದರ ತಮ್ಮನ ಬಗೆಗೆ ಅಣ್ಣನಿಗಿದ್ದರೆ, ಅಣ್ಣನ ಬಗೆಗೆ ತಮ್ಮನಿಗೆ ಲಕ್ಷ್ಮಣ ಭಕ್ತಿ. ಏನಾದರೂ ಮಾತನಾಡುವ ಸಂದರ್ಭ ಬಂದಾಗ ಮನೆಯ ಮಕ್ಕಳ ಮೂಲಕ ಅವರು ಇವರಿಗೆ ಇವರು ಅವರಿಗೆ ಅವರವರ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು.

ಅದು ಲೋಕಸಭೆ ಅಧಿವೇಶನ ನಡೆಯುತ್ತಿದ್ದ ಸಮಯ; ಗೌಡರು ದೆಹಲಿಯಲ್ಲಿದ್ದರು. ಅಣ್ಣ ಅಪ್ಪಾಜಿಗೌಡರು ಮೂತ್ರಕೋಶದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಎರಡು ಸಾರಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಗೌಡರು ದೆಹಲಿಯಿಂದ ಬಂದು ಪ್ರೀತಿಯಿಂದ ಉಪಚರಿಸಿದರು. ತಮಿಳುನಾಡಿನ ವೆಲ್ಲೂರು ಆಸ್ಪತ್ರೆ ಬಹಳ ಪ್ರಸಿದ್ಧವಾಗಿತ್ತು; ಅಣ್ಣನನ್ನು ವೆಲ್ಲೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶಸ್ತ್ರಚಿಕಿತ್ಸೆ ಮಾಡಿಸಿದರು. ಬಹಳ ಅಕ್ಕರೆಯಿಂದ ಸೇವೆ ಸಲ್ಲಿಸಿದರು. ಹೆಣ್ಣು ಮಕ್ಕಳ ಮದುವೆಗೆ, ಗಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ಹಣಕಾಸು ನೀಡಿ ಸಹಾಯ ಮಾಡಿದರು. ಆ ಸಮಯದಲ್ಲಿ ಕುಟುಂಬದ ಆಸ್ತಿಯ ಪಾಲು ಮಾಡಿಕೊಳ್ಳದೆ ಒಟ್ಟು ಕುಟುಂಬವಾಗಿ ಇದುದ್ದರಿಂದ ಅದೆಲ್ಲಾ ನನ್ನ ಕರ್ತವ್ಯವೆಂದು ಭಾವಿಸಿ ಶ್ರದ್ಧೆಯಿಂದ ಒಟ್ಟು ಕುಟುಂಬವನ್ನು ನೋಡಿಕೊಂಡರು.

ಶಾರದಮ್ಮನವರ ವ್ಯಾಸಂಗ ಬರೀ ಮೂರನೆ ಕ್ಲಾಸ್ ಮಾತ್ರ ಆಗಿತ್ತು. ಹೆಂಡತಿ ಚನ್ನಾಗಿ ಓದಲಿ ಬರೆಯಲಿ ಎಂದು ಯೋಚಿಸಿ ಗೌಡರು ಮನೆ ಪಾಠಕ್ಕೆ ಒಬ್ಬ ಅಧ್ಯಾಪಕರನ್ನು ಗೊತ್ತು ಮಾಡಿ ಪತ್ನಿಗೆ ಇನ್ನೂ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿಸಿದರು. ರಾಮಾಯಣ, ಮಹಾಭಾರತ, ಶ್ರೀಮದ್ಭಗವದ್ಗೀತೆ, ಶುಕಸಪ್ತತಿ.....ಮುಂತಾದ ಅನೇಕ ಪುಸ್ತಕಗಳನ್ನೂ, ಗಳಗನಾಥರ ಕಾದಂಬರಿಗಳನ್ನೂ, ಶಾರದಮ್ಮ ಓದುವಂತಾದರು. ಶುದ್ಧ ಕನ್ನಡದಲ್ಲಿ ಮಾತನಾಡುವಂತಾದರು. ಮನೆಗೆ ಬರುತ್ತಿದ್ದ ರಾಜಕೀಯ ಬಂಧುಗಳ ಅತಿಥ್ಯ, ಹಳ್ಳಿಯಿಂದ ಬಂದು ಓದುತ್ತಿದ್ದ ಹುಡುಗರ ಗುಂಪು, ಜೊತೆಗೆ ಕಕ್ಷಿದಾರರನ್ನು ಗೌಡರು ಊಟಕ್ಕೆ ಎಬ್ಬಿಸುತ್ತಿದ್ದರು. ಎಲ್ಲರಿಗೂ ಚಿಕ್ಕ ವಯಸ್ಸಿನ ಹೆಂಡತಿ ಅಡಿಗೆ ಮಾಡಿ ಮಾಡಿ ದಣಿದರು. ಗೌಡರು ಹೆಂಡತಿಯ ಕಷ್ಟ ನೋಡಲಾರದೆ ಚನ್ನಯ್ಯ ಎಂಬ

ಅಡುಗೆಯವವನನ್ನು ಗೊತ್ತು ಮಾಡಿದರು. ಚನ್ನಯ್ಯನು ತುಂಬಾ ಪ್ರಾಮಾಣಿಕನಾದ ಹುಡುಗನಾಗಿದ್ದನು. ಚನ್ನಯ್ಯನು ಅವರ ಮನೆಯಲ್ಲಿ ಅಡುಗೆ ಮಾಡಿಕೊಂಡಿದ್ದಾಗ ಸೈಕಲ್ಲಿನ ಊರಿಗೆ ಬಂದು ಹಾಲನ್ನು ತೆಗೆದುಕೊಂಡು ಹೋಗುತ್ತಿದ್ದನು. ಅಡಿಗೆ ಚನ್ನಯ್ಯ ಎರಡು ವರ್ಷವಿದ್ದು ಕಾರಣಾಂತರದಿಂದ ಹೊರಟು ಹೋದ ಮೇಲೆ ತಮ್ಮ ಆತ್ಮೀಯ ಸ್ನೇಹಿತರಾಗಿದ್ದ ಶ್ರೀವೇಣುಗೋಪಾಲನಾಯ್ಡು ಅವರು ಬೆಂಗಳೂರು ಅರಮನೆಯ ಸೂಪರಿನ್‌ಟೆಂಡೆಂಟ್ ಆಗಿದ್ದ ಸಮಯದಲ್ಲಿ ಗೌಡರೇ ನಾಯ್ಡುರವರಿಗೆ ಹೇಳಿ ಅರಮನೆಯಲ್ಲಿ ಚನ್ನಯ್ಯನಿಗೆ ಕೆಲಸಕೊಡಿಸಿದ್ದರು. ಅವರ ಪರೋಪಕಾರ ಬುದ್ಧಿ ಯಾವಾಗಲೂ ಎಚ್ಚರವಾಗಿರುತ್ತಿತ್ತು.

ಗೌಡರು ತಮ್ಮ ಅಣ್ಣನ ಮಕ್ಕಳನ್ನು ಯಾವುದೇ ಬೇಧಭಾವ ಮಾಡದೆ ತಮ್ಮ ಮಕ್ಕಳೆಂದೇ ಭಾವಿಸಿ ಎತ್ತಿ ಆಡಿಸಿ ಅಕ್ಕರೆಯಿಂದ ನೋಡಿಕೊಂಡರು. ಆಗ ಅಣ್ಣನ ಮಗಳು ಸಾವಿತ್ರಮ್ಮನಿಗೆ ವಯಸ್ಸು ಎಂಟೋ ಒಂಭತ್ತೋ ವರ್ಷಗಳಿರಬಹುದು. ಒಂದು ಸಾರಿ ಟೈಫಾಯಿಡ್ ಜ್ವರ ಬಂದುಬಿಟ್ಟಿತು. ವಾಸಿ ಆಯಿತು ಅಂದುಕೊಂಡರೆ ಮತ್ತೊಮ್ಮೆ ಬಂದುಬಿಡುತ್ತಿತ್ತು; ಬಿಟ್ಟೂ ಬಿಡದಂತೆ ವಿಪರೀತವಾಗಿ ಕಾಡುತ್ತಿತ್ತು. ಅದು ಇಪ್ಪತ್ತೊಂದು ದಿನಗಳ ದೀರ್ಘ ಜ್ವರ. ತಂದೆ-ತಾಯಿಗಳು, ಬಂಧು-ಬಾಂಧವರು ಹುಡುಗಿಯ ನೋವು ನೋಡಿ ಮರುಗುತ್ತಿದ್ದರು ಔಷಧಿ ಗಂಜಿ ಕುಡಿಯಲು ಆಗುತ್ತಿರಲಿಲ್ಲ. ಕುಡಿದರೆ ದುಕ್ಕುತ್ತಿರಲಿಲ್ಲ. ಗೌಡರು ಸಾವಿತ್ರಮ್ಮನಿಗೆ ಔಷಧಿ ಮತ್ತು ಗಂಜಿ ಕುಡಿಸಲು ಪ್ರೀತಿಯಿಂದ ಪ್ರೇರೇಪಣೆ ಮಾಡುತ್ತಾ ತಮ್ಮ ಹತ್ತಿರವಿದ್ದ ಬೆಳ್ಳಿ ನಾಣ್ಯಗಳನ್ನು ಮುಂದೆ ಸುರಿದು "ನೀನು ಒಂದು ಲೋಟ ಗಂಜಿ ಕುಡಿದರೆ ಈ ದುಡ್ಡನ್ನೆಲ್ಲಾ ನಿನಗೇ ಕೊಡುತ್ತೇನೆ ಕಣವ್ವ...ಈ ಗಂಜಿಯನ್ನು ಕುಡಿ" ಎಂದು ಗೋಗೆರೆಯುತ್ತಿದ್ದರು. ಅದು ಪ್ರಭು ಪ್ರೌಢಶಾಲೆಯಲ್ಲಿ ಓದುತ್ತಿದ್ದ ಸಮಯ. ಪ್ರಭುವಿಗೂ ಟೈಫಾಯಿಡ್ ಜ್ವರ ಬಂದಿತು. ಗೌಡರು ಜ್ವರ ಬಿಡುವವರೆಗೂ ಬಹಳಷ್ಟು ಸಮಯವನ್ನು ಪ್ರಭು ಹತ್ತಿರ ಕುಳಿತುಕೊಂಡು ಸಮಾಧಾನ ಪಡಿಸುತ್ತಿದ್ದರು.

ಚನ್ನಯ್ಯನ ನಂತರ ಗೌಡರ ಮನೆಗೆ ಬಂದವಳು ಪುಟ್ಟಿ ಎಂಬ ಹುಡುಗಿ. ಅದು ತಂದೆ-ತಾಯಿ ಇಲ್ಲದ ಏಳು ವರ್ಷದ ಅನಾಥ ಹೆಣ್ಣು ಹುಡುಗಿ. ಆ ಹುಡುಗಿಯನ್ನು ಅವ್ವೇರಹಳ್ಳಿಯ ಕಕ್ಷೀಗಾರರೊಬ್ಬರು ಗೌಡರ ಮನೆಗೆ ಕರೆದುಕೊಂಡು ಬಂದಿದ್ದರು. ಶಾರದಮ್ಮ ಅ ಹುಡುಗಿಗೆ ಊಟ ಹಾಕಿ, ಬಟ್ಟೆಕೊಟ್ಟು ಕಳುಹಿಸಿದರು. ಹುಡುಗಿಗೆ ಗೌಡರ ಮನೆಯ ಆಪ್ತತೆ ಮತ್ತು ವಾತ್ಸಲ್ಯ ಹಿಡಿಸಿತು. ಅವಳು ಮತ್ತೆ ಗೌಡರ ಮನೆಗೆ ಹೋಗೋಣವೆಂದು ಹಠ ಹಿಡಿದಳು. ನಂತರ ಆ ಹಳ್ಳಿಯಿಂದ ಬಂದು ಗೌಡರ ಮನೆ

ಸೇರಿಕೊಂಡಳು. ಅಲ್ಲೇ ಬೆಳೆದಳು. ಮಗಳಂತೆ ಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಳು. ಗೌಡರ ಸಣ್ಣ ಮಕ್ಕಳನ್ನು ಸಾಕಿದಳು. ಅವರಿಗೆಲ್ಲಾ ಅಚ್ಚುಮೆಚ್ಚಿನ ಪುಟ್ಟಕ್ಕ ಆದಳು. ಬಸಿರು-ಬಾಣಂತನದಲ್ಲಿ ನಲುಗಿದ ಶಾರದಮ್ಮನ ಸಹಾಯಕ್ಕೆ ಬರುತ್ತಿದ್ದವರು ಅವರಕ್ಕ ದರಸಗುಪ್ಪೆ ಲಕ್ಷ್ಮಮ್ಮನವರು. ಅಕ್ಕನವರ ಮಗ, ಮತ್ತು ಮಗಳ ವಿದ್ಯಾಭ್ಯಾಸವೂ ರಾಮನಗರದಲ್ಲೇ ನಡೆಯಿತು. ಗೌಡರು ತಮ್ಮ ಅಣ್ಣನ ಮಕ್ಕಳನ್ನು ಸ್ವಂತ ಮಕ್ಕಳಂತೆಯೇ ಭಾವಿಸಿದ್ದರು. ಅಣ್ಣನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮತ್ತು ಮದುವೆ ಸಂದರ್ಭಗಳಲ್ಲಿ ಗೌಡರು ಅಣ್ಣನಿಗೆ ತ್ರಿಕರಣ ಶುದ್ಧಿಯಿಂದ ನೆರವಾದರು. ಶಾರದಮ್ಮನವರಿಗೆ ನಾಲ್ಕು ಜನ ಮಕ್ಕಳು ಹುಟ್ಟುತ್ತಲೇ ಅಸುನೀಗಿದವು. ಆಮೇಲೆ ಸರಸ್ವತಿ, ಮಂಗಳಾ ಹುಟ್ಟಿದರು. ನಂತರ ಎರಡು ಗಂಡು ಮಕ್ಕಳು ಹುಟ್ಟಿದರು. ಆರು ವರ್ಷದ ಅಂತರದಲ್ಲಿ ಜಾಹ್ನವಿ ಹುಟ್ಟಿದಳು. ಕೊನೆಯ ಮಗ ಕಿರಣ್. ಅವನು ಅನಿರೀಕ್ಷಿತವಾಗಿ ಕಾಂಪೌಂಡಿನಿಂದ ಬಿದ್ದು ತೀರಿಕೊಂಡನು. ಆನಂತರ ಮೂವರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಉಳಿದರು. ಆ ಕಾಲದಲ್ಲಿ ಮಿತ ಸಂತಾನದ ಕಲ್ಪನೆ ಜನರಲ್ಲಿ ಇರಲಿಲ್ಲ. ಮಕ್ಕಳಾದರೆ ದೇವರು ಕೊಟ್ಟ ವರವೆಂದು ಭಾವಿಸುತ್ತಿದ್ದರು; ಭಾರವೆಂದು ಯಾರೂ ಭಾವಿಸುತ್ತಿರಲಿಲ್ಲ. ತುಂಬಿದ ಸಂಸಾರದ ಮನೆ; ಕೂಡಿ ಬಾಳಿದರೆ ಸ್ವರ್ಗ ಸುಖ ಎಂದು ಭಾವಿಸಿ ಹೊಂದಾಣಿಕೆಯಿಂದ ಬಾಳಿದರೆ ಅದು ಸಂಮೃದ್ಧಿಯ ಸಂಕೇತ ಮತ್ತು ನಂದಗೋಕುಲವೆಂದು ತಿಳಿಯುತ್ತಿದ್ದರು.

ಹುಟ್ಟುತ್ತಾ ಅಣ್ಣ-ತಮ್ಮಂದಿರು; ಬೆಳೆಯುತ್ತಾ ದಾಯಾದಿಗಳು. ಇದು ಯಾವ ಕಾಲದಲ್ಲಿ ಇಲ್ಲ? ಮತ್ತು ಯಾರ ಮನೆಯಲ್ಲಿ ಇಲ್ಲ?. ವಂಶ ಬೆಳೆದಂತೆ ನಂದ ಗೋಕುಲದಂತಿದ್ದ ಮನೆಗಳಲ್ಲಿಯೂ ಸಂಬಂಧಗಳಲ್ಲಿ ಸಣ್ಣ ಪುಟ್ಟ ವ್ಯತ್ಯಾಸಗಳು ಆಗುವ ಸಂಭವವಿರುತ್ತವೆ. ಗೌಡರು ಕಾರಣಾಂತರಗಳಿಂದ ತಮ್ಮ ಆಪ್ತ ಬಂಧು ಬಾಂಧವರ ಮೂಲಕ ಆಸ್ತಿಯಲ್ಲಿ ಪಾಲು ಮಾಡಿಕೊಳ್ಳುವುದೆಂದು ಅಣ್ಣನವರಿಗೆ ಹೇಳಿಕಳಿಸಿದರು. ಅಷ್ಟು ವರ್ಷಗಳವರೆವಿಗೂ ಕುಟುಂಬ ಪಾಲಾಗುವುದರ ಬಗೆಗೆ ಲವಲೇಶವೂ ವಿಚಾರವನ್ನು ಅಪ್ಪಾಜಿಗೌಡರು ಮಾಡಿರಲಿಲ್ಲ. ಅವರ ಮಕ್ಕಳು ಬೆಳೆದು ದೊಡ್ಡವರಾಗಿ ಮದುವೆಯಾಗಿ ಮಕ್ಕಳಾಗಿದ್ದರೂ ಮನೆಯ ವ್ಯವಹಾರದಲ್ಲಿ ಯಾವ ಸ್ವಾತಂತ್ರ್ಯವನ್ನೂ ಅವರಿಗೆ ಕೊಟ್ಟಿರಲಿಲ್ಲ. ಬೆಳೆದ ಮಕ್ಕಳು ಕಷ್ಟ ಪಟ್ಟು ದುಡಿದು ವರಮಾನ ಗಳಿಸುವ ಕಾಲಕ್ಕೆ ಅವರ ಮೇಲೆ ಕುಟುಂಬ ನಿರ್ವಹಣೆಯ ನೊಗವನ್ನು ಹೊರಿಸದಿದ್ದುದರಿಂದ ಕೆಲವರು ಸೋಮಾರಿಗಳಾಗಿ ಅಲ್ಲಿ ಇಲ್ಲಿ ತಿರುಗಾಡುವಂತಾಯಿತು. ಇವೆಲ್ಲವನ್ನೂ ನಿರೀಕ್ಷಣೆ ಮಾಡದೇ ಇದ್ದ ಅಣ್ಣ ಅಪ್ಪಾಜಿಗೌಡರಿಗೆ ಕಾಲ ಚಕ್ರದ ಬದಲಾವಣೆಗಳ ಅರಿವು ಮೂಡತೊಡಗಿತು. ಬಹಳಷ್ಟು

ಚಿಂತಾಕ್ರಾಂತರೂ ಆದರು. ಕೊನೆಗೆ, ತಮ್ಮನ ಇಷ್ಟದ ಪ್ರಕಾರ ಕುಟುಂಬದ ಜಮೀನು ಆಸ್ತಿ ಭಾಗಮಾಡಿಕೊಡಲು ತೀರ್ಮಾನಿಸಿದರು. ಕೆಲವು ಆಪ್ತ ಬಂಧು-ಬಾಂಧವರ ಸಮ್ಮುಖದಲ್ಲಿ ಅಣ್ಣ-ತಮ್ಮಂದಿರು ಅನೇಕ ದಿನಗಳ ಕಾಲ ಮಾತುಕತೆ ನಡೆಸಿ ಆಸ್ತಿ ಭಾಗಮಾಡಿಕೊಂಡರು. ಯಾವ ಯಾವ ಜಮೀನು, ಮನೆ ಬೇಕೋ ಅದರಂತೆ ಫಲವತ್ತಾದ ಗದ್ದೆ, ತೋಟಗಳು, ರಸ್ತೆಯ ಕಡೆ ಬಾಗಿಲಿದ್ದ ದೊಡ್ಡ ತೊಟ್ಟಿಯ ಮನೆ ಹೀಗೆ ತಮ್ಮ ಕೇಳಿಸಿ ಎಲ್ಲವನ್ನೂ ಅಪ್ಪಾಜಿಗೌಡರು ಪ್ರೀತಿಯಿಂದ ತಮ್ಮನಿಗೆ ಪಾಲುಮಾಡಿ ಕೊಟ್ಟರು. ಅಪ್ಪಾಜಿಗೌಡರ ಮಕ್ಕಳು ತಮ್ಮ ಚಿಕ್ಕಪ್ಪ ಮಾದಯ್ಯಗೌಡರ ಬಗೆಗೆ ತಮ್ಮ ತಂದೆಯ ಮೇಲಿದ್ದಷ್ಟೆ ಭಯ, ಭಕ್ತಿ ಮತ್ತು ಪ್ರೀತಿಯನ್ನು ಇಟ್ಟುಕೊಂಡಿದ್ದರು. ಹಾಗಾಗಿ ತಮ್ಮ ತಂದೆಯವರ ತೀರ್ಮಾನಕ್ಕೆ ಯಾವ ಆಕ್ಷೇಪಣೆಗಳನ್ನೂ ಎತ್ತದೆ ಔದಾರ್ಯದಿಂದ ನಡೆದುಕೊಂಡರು. ಮನೆತನದ ಆಸ್ತಿ ಪಾಸ್ತಿಗಳ ಪಾಲಿನ ನಂತರ ಮಾದಯ್ಯಗೌಡರು ರಾಮನಗರ ಬಿಟ್ಟು ಊರಲ್ಲೇ ಬಂದು ವಾಸಮಾಡಲು ಪ್ರಾರಂಭಿಸಿದರು. ಮನೆತನದ ಆಸ್ತಿ ಪಾಲಾದದ್ದು ಸ್ವಾಭಾವಿಕವಾಗಿ ಅಣ್ಣ ಅಪ್ಪಾಜಿಗೌಡರಿಗೆ ನೋವಾಗಿತ್ತು. ಮಾದಯ್ಯಗೌಡರಿಗೂ ಇದು ಸಂತೋಷದ ವಿಷಯವಾಗಿರಲಿಲ್ಲ; ಆದರೆ ಇದು ವಂಶಾಭಿವೃದ್ಧಿ ಆದಂತೆ ಅನಿವಾರ್ಯವಾಗಿತ್ತು. ಅಣ್ಣ-ತಮ್ಮಂದಿರ ಮಧ್ಯೆ ಪ್ರೀತಿವಾತ್ಸಲ್ಯಗಳೆಂದೂ ಕಡಿಮೆಯಾಗಲಿಲ್ಲ. ಕುಟುಂಬದ ಆಸ್ತಿಯಲ್ಲಿ ಪಾಲುಂಟಾದರೂ ಅಣ್ಣ ಅಪ್ಪಾಜಿಗೌಡರಿಗೆ ತಮ್ಮ ಮಾದಯ್ಯಗೌಡರ ಮೇಲೆ ಪ್ರೀತಿ; ಅದೇ ರೀತಿ ತಮ್ಮ ಮಾದಯ್ಯಗೌಡರಿಗೆ ಅಣ್ಣನ ಮೇಲೆ ಪ್ರೀತಿ. ಎಂದೆಂದಿಗೂ ಅವರು ರಾಮ ಲಕ್ಷ್ಮಣರಂತೆ ಬದುಕಿ ಬಾಳಿದರು.

ಗೌಡರು ನೂರು ವರ್ಷ ದಾಟಿದ ತಮ್ಮ ತಾಯಿ ಲಿಂಗಮ್ಮನವರಿಗೆ 'ಭಾರತ ಯಾತ್ರೆ' ಮಾಡಿಸಲು ನಿರ್ಧರಿಸಿದರು. ಪತ್ನಿ, ಮೂವರು ಮಕ್ಕಳು-ಸರಸ್ವತಿ, ಮಂಗಳಾ, ಮಂಜು ಮತ್ತು ತಾಯಿ ಲಿಂಗಮ್ಮ ಇಷ್ಟು ಜನರನ್ನು ಭಾರತ ಯಾತ್ರೆಗೆ ಹೊರಡಿಸಿದರು. ವಯಸ್ಸಾದ ತಾಯಿಯನ್ನು ನೋಡಿಕೊಳ್ಳಲು ಪುಟ್ಟಂಕಮ್ಮ. ಇವರು ಕೊನೆಯವರೆಗೆ ತಿಮ್ಮಸಂದ್ರದಲ್ಲೇ ಇದ್ದರು. ಆಗ ಪಾರ್ಲಿಮೆಂಟ್ ನಡೆಯುತ್ತಿತ್ತು. ದೆಹಲಿಯಲ್ಲಿ ಒಂದೂವರೆ ತಿಂಗಳ ವಾಸ, ಸುತ್ತಮುತ್ತ ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಕರೆದುಕೊಂಡು ಹೋದರು. ಅದಾದ ಮೇಲೆ ಒಂದೂವರೆ ತಿಂಗಳು ಪುಣ್ಯ ಕ್ಷೇತ್ರಗಳಿಗೆ ಕರೆದುಕೊಂಡು ಹೋದರು. ಹರಿದ್ವಾರ, ಋಷಿಕೇಶದ ಯಾತ್ರೆ ಮುಗಿಸಿ ದೆಹಲಿಗೆ ಬಂದರು. ಋಷಿಕೇಶದಲ್ಲಿ ದಿವ್ಯ ಜೀವನ ಸಂಘದ ಸಂಸ್ಥಾಪಕರಾದ ಸ್ವಾಮಿ ಶಿವಾನಂದರ ದರ್ಶನವನ್ನು ಎಲ್ಲರಿಗೂ ಮಾಡಿಸಿದರು. ಕಾಶಿಯಲ್ಲಿ ಶ್ರೀಕಾಶಿವಿಶ್ವನಾಥ, ಜ್ಯೋತಿರ್ಲಿಂಗ ದರ್ಶನ ಮಾಡಿಸಿದರು.

ಅಯೋಧ್ಯಾ, ಗಯಾ ಮುಂತಾದ ಯಾತ್ರಾ ಸ್ಥಳಗಳಿಗೆ ಎಲ್ಲರನ್ನೂ ಕರೆದುಕೊಂಡು ಹೋದರು. ಕೋಲ್ಕತ್ತಾದಲ್ಲಿ ದಕ್ಷಿಣೇಶ್ವರ, ಬೇಲೂರು ಮಠಗಳನ್ನು ಸಂದರ್ಶಿಸಿ, ಶ್ರೀರಾಮಕೃಷ್ಣ ಪರಮ ಹಂಸರು, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಔನ್ನತ್ಯೆಗಳನ್ನು ಗೌಡರು ಎಲ್ಲರಿಗೂ ವಿವರಿಸಿ ಹೇಳುತ್ತಿದ್ದರು. ಅಚ್ಚಂಕಮ್ಮನವರ ಪೂರ್ವಾಶ್ರಮದ ಕೊನೆಯ ಮಗ ಶ್ರೀಶಂಕರಪ್ಪನವರು ಶ್ರೀರಾಮಕೃಷ್ಣ ಮಠದ ಸನ್ಯಾಸ ಸ್ವೀಕರಿಸಿದ್ದರು. ಇವರು ಪೂರ್ವಾಶ್ರಮದಲ್ಲಿ ಹೊಂಬೇಗೌಡರ ಭಾವಮೈದುನರಾಗಿದ್ದರು. ಅವರನ್ನು ಸಂಪರ್ಕಿಸಲು ಗೌಡರು ತುಂಬಾ ಪ್ರಯತ್ನಿಸಿದರು. ಆದರೆ ಅವರು ಉತ್ತರದ ಕಡೆ ಆಧ್ಯಾತ್ಮಿಕ ಪ್ರವಾಸ ಹೋಗಿದ್ದರಾದ್ದರಿಂದ ಅವರ ದರ್ಶನ ಪಡೆಯಲಾಗಲಿಲ್ಲ. ಇದು ಯಾತ್ರೆಯ ಸಮಯದಲ್ಲಿ ಗೌಡರಿಗೆ ಬಹಳಷ್ಟು ನಿರಾಶೆಯುಂಟುಮಾಡಿತು. ಯಾತ್ರಾ ಸಮಯದಲ್ಲಿ ಎಲ್ಲರಿಗೂ ಬೇಕಾದ ತಿಂಡಿ ಊಟಗಳನ್ನು ಬೇಕಾದಷ್ಟು ಪ್ರಮಾಣದಲ್ಲಿ ಕೊಡಿಸುತ್ತಿದ್ದರು. ಮಕ್ಕಳು ಅಪೇಕ್ಷಪಟ್ಟ ಸಾಮಾನುಗಳನ್ನು ಕೊಡಿಸುತ್ತಿದ್ದರು.

ಭಾರತ ಯಾತ್ರೆ ಮುಗಿಸಿಕೊಂಡು ರಾಮನಗರಕ್ಕೆ ವಾಪಸ್ ಬಂದು ಒಂದು ವಾರ ವಿಶ್ರಾಂತಿ ಪಡೆದುಕೊಂಡು ಮತ್ತೆ ದಕ್ಷಿಣ ಭಾರತದ ಪ್ರವಾಸಕ್ಕೆ ಹೊರಟರು. ರಾಮೇಶ್ವರಂ, ನಂತರ ಕನ್ಯಾಕುಮಾರಿಯಿಂದ ಮಧುರೈ, ಚನ್ನೈ, ತಿರುವನಂತಪುರ, ಮುಂತಾದ ಪುಣ್ಯ ಪ್ರೇಕ್ಷಣೀಯ ಸ್ಥಳಗಳನ್ನು ಭೇಟಿ ಮಾಡಿ ಊರಿಗೆ ಬಂದರು. ಬಂಧು–ಬಾಂಧವರನ್ನೆಲ್ಲಾ ಸೇರಿಸಿ, ತೀರ್ಥ–ಪ್ರವಾಸದ ಸಮಾರಾಧನೆ ನಡೆಸಿದರು. ದಾನ, ಧರ್ಮ ಮಾಡಿದರು. ಕನ್ಯಾದಾನ ಕೋಟಿದಾನಕ್ಕೆ ಸಮಾನವೆಂದು ಹೇಳುತ್ತಾ ಪುಟ್ಟಮ್ಮನನ್ನು ಮಾಗಡಿ ರಂಗೇಗೌಡರ ಭಾವಮೈದುನ ಸೀತಾರಾಮುವಿಗೆ ಕೊಟ್ಟು ಸಾಕಷ್ಟು ವಿಜೃಂಭಣೆಯಿಂದ ಮದುವೆ ಮಾಡಿಸಿದರು. ಭಾರತವೆಲ್ಲಾ ಸುತ್ತಿ ಬಂದ ಮೇಲೆ ಹುಟ್ಟಿದ ಗಂಡು ಮಗುವಿಗೆ ಭಾರತೀಶನೆಂದು ಹೆಸರಿಟ್ಟರು. ಅಣ್ಣ–ತಮ್ಮಂದಿರ ಮಕ್ಕಳು ಬೆಳೆದಂತೆ ಆಸ್ತಿಯಲ್ಲಿ ಪಾಲು ಮಾಡಲಾಯಿತು. ಅಷ್ಟರಲ್ಲಿ ರಾಜಕೀಯದಲ್ಲಿ ಏನೇನೋ ಬದಲಾವಣೆಗಳಾಗಿ ರಾಜಕೀಯ ಜೀವನದಿಂದ ನಿವೃತ್ತಿ ಪಡೆದರು. ನಂತರ ಗೌಡರು ಹಳ್ಳಿಗೆ ಹೋಗಿ ನೆಲೆಸಲು ನಿರ್ಧರಿಸಿದರು.

❖

# ೯. ಗೌಡರ ನಡೆ ನುಡಿ ಮತ್ತು ಆದರ್ಶ

ಮಹಾತ್ಮಾ ಗಾಂಧೀಜಿಯವರ ವಿಚಾರಧಾರೆಗೆ ಮಾರುಹೋಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಎಲ್ಲಾ ವರ್ಗಗಳ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದ ಗೌಡರು ಸರಳರೂ, ಸಜ್ಜನರೂ ಮತ್ತು ಸಾತ್ವಿಕರೂ ಆಗಿದ್ದರು. ತಾವು ಚುನಾಯಿತ ಪ್ರತಿನಿಧಿಯಾಗಿ ವಿವಿಧ ಉನ್ನತ ಸ್ಥಾನಮಾನಗಳನ್ನು ಪಡೆದ ನಂತರವೂ ಗಾಂಧೀಜಿಯವರ ವಿಚಾರಧಾರೆಯಲ್ಲಿ ಅಚಲ ನಿಷ್ಠೆಯನ್ನು ಮುಂದುವರಿಸಿದ್ದರು. ಅವರು ರಾಜಕೀಯ ಮತ್ತು ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿದ್ದರೂ ಆಧ್ಯಾತ್ಮಿಕತೆ ಅವರಿಗೆ ಬಹಳ ಪ್ರಿಯವಾಗಿದ್ದ ಜ್ಞಾನಪ್ರಕಾರವಾಗಿತ್ತು. ಹಣಗಳಿಸುವ ಅವಕಾಶಗಳು ಅವರಿಗೆ ಬಹಳಷ್ಟಿದ್ದವು; ಆದರೆ ಹಣಗಳಿಸುವ ಆಲೋಚನೆ ಅವರಿಗೆ ಎಂದೂ ಬರಲಿಲ್ಲ. ನ್ಯಾಯವಾದ ಗಳಿಕೆ ಮಾತ್ರ ಅವರ ಆದಾಯದ ಮೂಲವಾಗಿತ್ತು. ಅವರದ್ದು ನಿರಾಡಂಬರ ಜೀವನ ವಿಧಾನ; ಮುಚ್ಚು ಮರೆಯಿಲ್ಲದ ಕಪಟವರಿಯದ ಮುಗ್ಧಸ್ನಿಗ್ಧ ನಡಾವಳಿ. ಏನೇ ಕಷ್ಟಗಳು ಬಂದೆರಗಿದರೂ ತತ್ತರಿಸಿ ಹೋಗದ ಮನಸ್ಸಿನ ಗಟ್ಟಿತನ. ಬೇರೆಯವರ ಕಷ್ಟದಲ್ಲಿ ಭಾಗಿಯಾಗುವುದರಲ್ಲಿ ಕಂಡು ಬರುವ ದಯಾಪರತೆ; ಸಹಾಯ ಕೇಳಿ ಬಂದವರಿಗೆ ತಮ್ಮಿಂದಾದಷ್ಟು ಸಹಾಯ ನೀಡುವ ಉಪಕಾರ ಬುದ್ಧಿ. ಮನೆಗೆ

ಬಂದ ಬಂಧು–ಬಾಂಧವರ, ಅತಿಥಿಗಳ ಕ್ಷೇಮ ಸಮಾಚಾರ ವಿಚಾರಿಸುವಲ್ಲಿ, ಆತಿಥ್ಯ ನೀಡುವಲ್ಲಿ ತೋರಿಸುವ ಆತ್ಮೀಯತೆ, ತೊಡುವ ಬಟ್ಟೆಗಳು, ತಮ್ಮ ಕೊಠಡಿಯ ಪ್ರತಿಯೊಂದು ವಸ್ತುವನ್ನು ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಅಣಿಗೊಳಿಸುವಲ್ಲಿನ ಸದಭಿರುಚಿ. ದಿನಪತ್ರಿಕೆಗಳು, ಸ್ವಾತಂತ್ರ್ಯ ಹೋರಾಟದ ಮೇರು ವ್ಯಕ್ತಿಗಳ ಜೀವನ ಚರಿತ್ರೆಗಳು, ಜಗತ್ತಿನ ಆಗುಹೋಗುಗಳ ವಿಚಾರಗಳು, ಆಧ್ಯಾತ್ಮಿಕ ಗ್ರಂಥಗಳನ್ನು ಓದುವಲ್ಲಿ ಕಾಣುವ ಶಿಸ್ತುಬದ್ಧ ಆಸಕ್ತಿ, ನಡೆ–ನುಡಿಯಲ್ಲಿ ಕಂಡು ಬರುತ್ತಿದ್ದ ಸೌಜನ್ಯತೆ ಮತ್ತು ವಿನಯತೆ ಅವರಲ್ಲಿದ್ದವು.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸಂಘ ಮತ್ತು ಅನೇಕ ಸಾಹಿತಿಗಳೊಡನೆ ನಿಕಟ ಸಂಪರ್ಕ ಹೊಂದಿದ್ದ ಗೌಡರು ಕಾವ್ಯ, ನಾಟಕ, ಕಥೆ, ಜೀವನ ಚರಿತ್ರೆ, ತತ್ವಶಾಸ್ತ್ರ, ವೇದಾಂತ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳ ಗ್ರಂಥಗಳನ್ನು ಓದುತ್ತಿದ್ದರು. ಈ ಎಲ್ಲಾ ಗುಣ ಲಕ್ಷಣಗಳನ್ನು ಅವರ ವಕೀಲ ವೃತ್ತಿಯ ಸಹದ್ಯೋಗಿಗಳು, ಸ್ವಾತಂತ್ರ್ಯ ಹೋರಾಟದ ಹಿರಿಯ ಮತ್ತು ಕಿರಿಯ ಒಡನಾಡಿಗಳು ಗೌಡರಲ್ಲಿ ಕಂಡಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳಿಗೆ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಗುಬ್ಬಿವೀರಣ್ಣನವರ, ಸುಬ್ಬಯ್ಯ ನಾಯ್ಡುರವರ, ವರದಚಾರ್ಯರ ಕಂಪನಿಗಳ ಅನೇಕ ನಾಟಕಗಳನ್ನು ಬಿಡುವು ಸಿಕ್ಕಾಗ ನೋಡುತ್ತಿದ್ದರು. ಗುಬ್ಬಿವೀರಣ್ಣನವರ ಜೊತೆಗೆ ಇವರ ಒಡನಾಟವಿತ್ತು. ಗುಬ್ಬಿವೀರಣ್ಣನವರು ತಮ್ಮ ಕಂಪನಿಯ ಕಲಾವಿದರಿಗೆ ಆಚಾರ–ವಿಚಾರ ಸಂಸ್ಕೃತಿ ಮತ್ತು ನಾಗರೀಕತೆಗಳನ್ನು ಕಲಿಸುವುದರ ಜೊತೆಗೆ ಅವರೆಲ್ಲರನ್ನೂ ತಮ್ಮ ಕುಟುಂಬ ವರ್ಗದವರಂತೆ ನೋಡಿಕೊಳ್ಳುತ್ತಿದ್ದರು. ಪ್ರತಿದಿನ ಸಂಜೆ ಕಲಾವಿದರೆಲ್ಲಾ ಸ್ನಾನ ದೇವರ ಧ್ಯಾನ ಮಾಡಿ ವಿಭೂತಿ ಧರಿಸಿಕೊಂಡು ಭಜನೆ ಮಾಡುತ್ತಿದ್ದರು. ನಂತರ ಪ್ರತಿ ದಿನವೂ ತರಾವರಿಯ ಬಿಸಿಯೂಟವನ್ನು ಕಲಾವಿದರು ಊಟಮಾಡುವ ವ್ಯವಸ್ಥೆಯನ್ನು ಗುಬ್ಬಿವೀರಣ್ಣನವರು ಮಾಡಿದ್ದರು. ಪ್ರತಿ ದಿನವೂ ಊಟಕ್ಕೆ ತುಪ್ಪ, ಹಪ್ಪಳ, ತಾಜಾ ಉಪ್ಪಿನಕಾಯಿ, ತರಕಾರಿ ಪಲ್ಯ, ಚಪಾತಿ, ಚಟ್ನಿ, ಬಡಿಸುವ ವ್ಯವಸ್ಥೆಯಿತ್ತು. ಪ್ರತಿ ಸೋಮವಾರ ಯಾವುದಾದರೂ ಒಂದು ಸಿಹಿ ಊಟದ ವ್ಯವಸ್ಥೆ ಮಾಡುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಹೋಳಿಗೆ ಅಥವಾ ಕರಿಗಡಬು, ಜೊತೆಗೆ ತುಪ್ಪ, ಹೇರಳೆಕಾಯಿ ಚಿತ್ರಾನ್ನ, ಕರಿದ ಮಜ್ಜಿಗೆ ಮೆಣಸಿನಕಾಯಿ, ಪಕೋಡಗಳು ಊಟದಲ್ಲಿ ಸೇರಿರುತ್ತಿದ್ದವು. ಗುಬ್ಬಿವೀರಣ್ಣನವರು "ಹೋಳಿಗೆ ತುಪ್ಪ; ಹೊಡೆಯೋ ನನ್ನಪ್ಪಾ" ಎಂದು ದೇವರನ್ನು ಸ್ಮರಿಸುವ ಹಾಸ್ಯ ಚಟಾಕಿಯನ್ನು ಹಾರಿಸುತ್ತಿದ್ದರು. ಒಟ್ಟಾರೆ

ಗುಬ್ಬಿವೀರಣ್ಣನವರು ತಮ್ಮ ಕಲಾವಿದ ಬಂಧುಗಳನ್ನು ನೋಡಿಕೊಳ್ಳುತ್ತಿದ್ದುದು ಗೌಡರಿಗೆ ಅವರ ಬಗೆಗೆ ಅಪಾರ ಅಭಿಮಾನ ಉಂಟುಮಾಡಿತ್ತು.

ಗೌಡರ ಕಾವ್ಯಪ್ರೀತಿ ಅನುಪಮವಾದುದು. ಅವರ ಮನೆಯಲ್ಲಿ ಆಗಾಗ ಕಾವ್ಯವಾಚನ ಏರ್ಪಡುತ್ತಿತ್ತು. ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ ಅವರಿಗೆ ಪ್ರಿಯವಾದ ಕಾವ್ಯ ಗ್ರಂಥಗಳು. ಬಿ.ಎ., ಪಾಸು ಮಾಡಿದ ಮೇಲೂ ಅವರಿಗಿಟ್ಟಿದ್ದ ಪಠ್ಯಪುಸ್ತಕ ಗದುಗಿನ ನಾರಣಪ್ಪನ 'ಭಾರತ ಕಥಾ ಮಂಜರಿ'ಯನ್ನು ಓದಿ ಆಸ್ವಾದಿಸುತ್ತಿದ್ದುದನ್ನು ಕೆಂಗಲ್ ಹನುಮಂತಯ್ಯನವರು ನೆನಪಿಸಿಕೊಳ್ಳುತ್ತಿದ್ದರು. ಗೌಡರಿಂದಲೇ ಅವರಿಗೂ ಕಾವ್ಯಾಸಕ್ತಿ ಹೆಚ್ಚಾಯಿತು ಎಂಬುದನ್ನು ಕೆಂಗಲ್‌ಅವರು ಸ್ಮರಿಸುತ್ತಿದ್ದರು. ಗೌಡರ ಮನೆಯಲ್ಲಿ ಕಾವ್ಯಪಠನ ನಡೆಯುತ್ತಿದ್ದ ಸಂದರ್ಭದಲ್ಲಿ ಹುಟ್ಟಿದ ಅವರ ಅಣ್ಣನ ಮಕ್ಕಳಿಗೆ, ಕಾವ್ಯ ನಾಯಕರ ಹೆಸರನ್ನೇ ಇಡುತ್ತಿದ್ದರು. ಸಿದ್ಧರಾಮ ಚರಿತೆಯ ಸಿದ್ಧರಾಮಯ್ಯ, ಪ್ರಭುಲಿಂಗಲೀಲೆಯ ಪ್ರಭು, ಭವಾನಿಶಂಕರ, ನಾಮದೇವ....ಹೀಗೆ ಕೆಲವನ್ನು ಉದಾಹರಿಸಬಹುದು. ಪ್ರತಿದಿನವೂ ಮನೆಯಲ್ಲಿ ಸಂಧ್ಯಾ ಸಮಯ ಭಜನೆ ನಡೆಯುತ್ತಿತ್ತು. ಹೆಣ್ಣುಮಕ್ಕಳಿಗೆ ಶ್ರೀಮದ್ಭಗವದ್ಗೀತೆಯ ಶ್ಲೋಕಗಳು ಬಾಯಿಗೆ ಬರುತ್ತಿದ್ದವು.

ತಿಮ್ಮಸಂದ್ರದಲ್ಲಿ ಬಸವೇಶ್ವರನ ದೇವಾಲಯವಿದೆ. ಪ್ರತಿ ಸಂಕ್ರಮಣ ಕಾಲದಲ್ಲಿ, ಪ್ರಾತಃಕಾಲ ಮತ್ತು ಸಾಯಂಕಾಲ ಗ್ರಾಮಪಾಲನೆಗಾಗಿ ನಗರ ಸಂಕೀರ್ತನೆ ನಡೆಯುತ್ತಿತ್ತು. ಶ್ರೀರಾಮದೇವರ ನಾಮ ಸಂಕೀರ್ತನೆಯಲ್ಲಿ ಊರಿನ ಗುರು ಹಿರಿಯರು ಕಿರಿಯರೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು. ಪೂಜಾ ಕಾರ್ಯಕ್ರಮ ಮುಗಿದ ನಂತರ ಮಂಡಕ್ಕಿ, ಕಾಯಿತುರಿ, ಬೆಲ್ಲದ ಪುಡಿ, ಬಾಳೆಹಣ್ಣು ಚೂರುಗಳ ಫಲಾಹಾರ ದೇವರಿಗೆ ನೈವೇದ್ಯ ಮಾಡಿದ ನಂತರ ಬೊಗಸೆಗಟ್ಟಲೆ ವಿತರಣೆಯಾಗುತ್ತಿತ್ತು. ಕೆಲವೊಮ್ಮೆ ಕಡಲೆಹಿಟ್ಟು, ಒಣಕೊಬ್ಬರಿ ಪುಡಿ, ಶುಂಠಿ, ಏಲಕ್ಕಿಯಿಂದ ತಯಾರಿಸಿದ ಸಿಹಿ ಖಾದ್ಯದ ಪ್ರಸಾದ ವಿತರಣೆಯಾಗುತ್ತಿತ್ತು. ಊರಿನಲ್ಲಿ ಆಗಾಗ ರೈತರಿಂದ ಬಯಲಾಟ ನಡೆಯುತ್ತಿತ್ತು. ಇದಕ್ಕೆ ಗೌಡರ ಪ್ರೋತ್ಸಾಹ-ಸಹಕಾರ ಹೆಚ್ಚಿನದಾಗಿತ್ತು. ಭಾಗವತರಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದರು. ಊರ ಹಬ್ಬಕ್ಕೆ ಬಂದ ನೆಂಟರಿಷ್ಟರಿಗೆಲ್ಲಾ ಮನರಂಜನಾ ಕಾರ್ಯಕ್ರಮದಿಂದ ಹರ್ಷವಾಗುತ್ತಿತ್ತು. ಮನೆಯಲ್ಲಿ ವಿಶೇಷ ಅಡಿಗೆಗಳನ್ನು ಮಾಡಿ ಬಡಿಸಲಾಗುತ್ತಿತ್ತು. ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಯಾವುದೇ ಜಾತಿ ಬೇಧವಿಲ್ಲದೆ ಎಲ್ಲರೂ ಒಟ್ಟಾಗಿ ನಾಟಕಗಳಲ್ಲಿ ಪಾತ್ರಧಾರಿಗಳಾಗಿ ಭಾಗವಹಿಸುತ್ತಿದ್ದರು. ನಾಟಕ ಮುಗಿದು ನಾಲ್ಕೈದು ತಿಂಗಳಾದರೂ ಕೊಟ್ಟಿಗೆಯಲ್ಲಿ, ತೋಟದಲ್ಲಿ, ಹೊಲ ಗದ್ದೆಗಳಲ್ಲಿ ಕೆಲಸಮಾಡುತ್ತಾ ಪಾತ್ರಧಾರಿಗಳು ಪದ ಹಾಡುತ್ತಿದ್ದರೆ, ಕೇಳುಗರು

ಸಂತೋಷಪಡುತ್ತಿದ್ದರು. ಗೌಡರು ಕಲೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಪಾರವಾದ ಪ್ರೀತಿ ಅಭಿಮಾನ ಹೊಂದಿದ್ದರು. ಕಲಾವಿದರನ್ನು ಅಭಿಮಾನದಿಂದ ಕಾಣುತ್ತಿದ್ದರು.

ಪ್ರತಿದಿನ ಸಂಜೆಯ ವೇಳೆ ಮನೆಯಲ್ಲಿ ಮನೆಯವರೆಲ್ಲರೂ ಸೇರಿ ಪ್ರಾರ್ಥನೆ ಮಾಡುವ ಪದ್ಧತಿ ಇತ್ತು. ಇದನ್ನು ಗೌಡರೇ ಆರಂಭಿಸಿದ್ದರು. ಶ್ರೀಮದ್ಭಗವದ್ಗೀತೆಯ ಶ್ಲೋಕಗಳು, ಕುಮಾರವ್ಯಾಸ ಭಾರತದ ವಾಚನ, ದೇವರ ನಾಮಗಳ ಹಾಡುಗಳನ್ನು ಎಲ್ಲರೂ ಸೇರಿ ಹಾಡುತ್ತಿದ್ದರು. ಸುತ್ತಮುತ್ತಲ ಹಳ್ಳಿಗಳ ಆಧ್ಯಾತ್ಮಿಕ ಜೀವಿಗಳು, ಆಸಕ್ತರು ಬಂದು ಭಜನೆಗಳಲ್ಲಿ ಭಾಗವಹಿಸುತ್ತಿದ್ದರು. ಒಟ್ಟಾರೆ ಗೌಡರ ಮನೆ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಾತಾವರಣಗಳಿಂದ ಕೂಡಿದ್ದು ಸುತ್ತಮುತ್ತಲ ಹಳ್ಳಿಗಳಲ್ಲಿ ಪ್ರಸಿದ್ಧವಾಗಿತ್ತು.

ಗೌಡರು ಬಾಲ್ಯದಿಂದಲೂ ಶ್ರಮ ಜೀವಿಗಳಾಗಿ ವ್ಯವಸಾಯ, ದನಕರುಗಳ ಸಾಕಣೆ ಕೆಲಸಕಾರ್ಯಗಳಲ್ಲಿ ಆಸಕ್ತಿಯಿಂದ ತೊಡಗುತ್ತಿದ್ದರು. ದನಕರುಗಳಿಗೆ ಮೇವು ಹಾಕುವುದು, ನೀರು ಕುಡಿಸುವುದು, ಮುಸುರೆಬಾನಿಗೆ ತೌಡು, ಕಡಲೆಕಾಯಿ ಹಿಂಡಿ ಹಾಕುವಂತಹ ಕೆಲಸಕಾರ್ಯಗಳನ್ನು ಮಾಡುತ್ತಿದ್ದರು. ಮನೆಯ ಹಿರಿಯರು "ನೀನು ಓದುವ ಹುಡುಗ ಏನೂ ಕೆಲಸ ಮಾಡಬೇಡಪ್ಪಾ" ಎಂದು ಹೇಳುತ್ತಿದ್ದರೂ ಸಹ ವ್ಯವಸಾಯ ಮತ್ತು ಪಶು ಸಂಗೋಪನೆಗಳ ಕೆಲಸ ಕಾರ್ಯಗಳಲ್ಲಿ ಕುಟುಂಬದವರಿಗೆ ನೆರವಾಗುತ್ತಿದ್ದರು. ಅವರ ಜೀವನದ ಕೊನೆಯವರೆವಿಗೂ ವ್ಯವಸಾಯ, ತೋಟಗಾರಿಕೆ, ಪಶು ಸಂಗೋಪನೆಗಳ ಬಗೆಗೆ ಅವರಿಗೆ ಅಪಾರವಾದ ಆಸಕ್ತಿಯಿತ್ತು.

ಆಧ್ಯಾತ್ಮದಲ್ಲಿ ಅಪಾರವಾದ ಆಸಕ್ತಿ ಹೊಂದಿದ್ದ ಗೌಡರು ಸಾಧು ಸಂತರ ಜೊತೆ ನಿಕಟ ಸಂಪರ್ಕ ಹೊಂದಿದ್ದರು. ಸ್ವಾಮಿ ಶ್ರೀಚಿನ್ಮಯಾನಂದರ ಪ್ರವಚನಗಳಿಗೆ ಅವಕಾಶ ಮಾಡಿಕೊಂಡು ಹೋಗಿ ಶ್ರದ್ಧೆಯಿಂದ ಕುಳಿತು ಕೊನೆಯವರೆವಿಗೂ ಕೇಳುತ್ತಿದ್ದರು. ಪಾರ್ಲಿಮೆಂಟ್ ಸದಸ್ಯರಾಗಿ ದೆಹಲಿಯಲ್ಲಿದ್ದಾಗ ವಾರದ ಕೊನೆಯಲ್ಲಿ ಹೃಷಿಕೇಶಕ್ಕೆ ಹೋಗಿ ಆಧ್ಯಾತ್ಮಿಕ ಗುರು, ಮಹಾಪುರುಷ ಶ್ರೀಸ್ವಾಮಿ ಶಿವಾನಂದರನ್ನು ಭೇಟಿಮಾಡುತ್ತಿದ್ದರು. ಸ್ವಾಮಿ ಶಿವಾನಂದರು ಶ್ರೀರಾಮಕೃಷ್ಣ ಪರಮಹಂಸರ ಅತ್ಯಂತ ಅಂತರಂಗದ ಸನ್ಯಾಸಿ ಶಿಷ್ಯರಲ್ಲಿ ಒಬ್ಬರಾಗಿ ಅವರ ಸುಸಮೀಪ ಸಂಗಿಗಳಾಗಿದ್ದವರು. ಅವರು ತಮ್ಮ ಜೀವನದ ಎಲ್ಲವನ್ನೂ ತಮ್ಮ ಗುರು ಶ್ರೀರಾಮಕೃಷ್ಣ ಪರಮಹಂಸರ ದಿವ್ಯ ಸಂದೇಶವನ್ನು ಪ್ರಸಾರ ಮಾಡುವ ಮಹಾಕಾರ್ಯಕ್ಕೆ ಮುಡಿಪಾಗಿಟ್ಟವರು. ಸ್ವಾಮಿ ಶಿವಾನಂದರ ಯೋಗ ಮತ್ತು ವೇದಾಂತ ವಿಚಾರಗಳನ್ನು ಗೌಡರು ಆಸಕ್ತಿಯಿಂದ ಓದಿದ್ದ ಗೌಡರು ಆ ಮಹಾ ಪುರುಷರ ದಿವ್ಯ ಜೀವನ ಸಂಘದ ಪುಸ್ತಕಗಳನ್ನು ಸಂಗ್ರಹಿಸಿ ಜೋಪಾನವಾಗಿಟ್ಟುಕೊಂಡಿದ್ದರು. ಶ್ರೀಅರುಣಾಚಲಕ್ಷೇತ್ರದ ಮಹಾಯೋಗಿಗಳೂ ಉನ್ನತ

ಆಧ್ಯಾತ್ಮಿಕ ಸಾಧಕರಾಗಿದ್ದ ಶ್ರೀರಮಣಮಹರ್ಷಿಗಳನ್ನು ಹಾಗೂ ಪಾಂಡಿಚೆರಿಯ ಶ್ರೀಮಾತಾಜಿ ಮತ್ತು ಶ್ರೀಅರವಿಂದರ ದರ್ಶನ ಮಾಡಿದ್ದರು.

ಗೌಡರು ನಾಥಪಂಥದ ಶ್ರೀಆದಿಚುಂಚನಗಿರಿ ಪೀಠದ ಏಳಿಗೆಯಲ್ಲಿ ಸೇವೆ ಸಲ್ಲಿಸಿದವರಾಗಿದ್ದಾರೆ. ಶ್ರೀಆದಿಚುಂಚನಗಿರಿ ಪೀಠವು ನಾಥಪರಂಪರೆಯ ಉನ್ನತ ತಾತ್ವಿಕತೆಯ ಮಹಾಪೀಠವಾಗಿದೆ. ನಾಥದರ್ಶನವು ಏಕರೂಪಿಯಲ್ಲದ ಮಹಾದರ್ಶನವಾಗಿದೆ. ಮಂಗಳಕರ ದರ್ಶನಗಳನ್ನು ಕಾಲಕಾಲಕ್ಕೆ ಸ್ವೀಕಾರಮಾಡಿ ಪಡೆದ ಸಂಕರರೂಪಿ ಶಿವದರ್ಶನವಾಗಿದೆ . ಷಡ್ದರ್ಶನಗಳಲ್ಲಿ ಒಂದಾದ ಯೋಗವು ಅದರ ತಾತ್ವಿಕ ಬುನಾದಿಯಾಗಿದೆ. ವಜ್ರಯಾನ, ಶಾಕ್ತ, ಕೌಳ, ಕಾಪಾಲಿಕ ದರ್ಶನ ಮತ್ತು ಆಚರಣೆಗಳು ಅದರ ಕಟ್ಟಡಗಳು. ಹಲವು ದಿಕ್ಕುಗಳಿಂದ ಬಂದ ಮಂಗಳಕರ ದರ್ಶನ ಹಾಗೂ ಪಂಥಗಳು ಇದರೊಳಗೆ ಯುಕ್ತವಾಗಿ ಸಮರಸಗೊಂಡಿವೆ. ಶ್ರೀಕಾಲಭೈರವೇಶ್ವರ ಮಹಾಸ್ವಾಮಿಯು ನಾಥಪಂಥದ ಆರಾಧ್ಯದೈವವಾಗಿರುವುದು ಕಾಪಾಲಿಕರ ಚಿರಕುರುಹು. ತ್ರಿಶೂಲ ಹಾಗೂ ಶಕ್ತಿದೇವತೆಯ ಆರಾಧನೆ, ಶಾಕ್ತ ಕುರುಹು; ದೇಹ, ವಜ್ರದ ಪ್ರಸ್ತಾಪ ಬರುವುದು ವಜ್ರಯಾನದ ಕುರುಹು. ಮಹಾಯಾನದ 'ಶೂನ್ಯತೆ ಮತ್ತು ಕರುಣೆ' ಪರಿಭಾಷೆಗಳಿಗೆ 'ಪ್ರಜ್ಞಾ ಮತ್ತು ಉಪಾಯ' ಎಂಬ ಹೆಸರು ನಾಥಪಂಥದಲ್ಲಿ ಬರುತ್ತದೆ. 'ಪ್ರಜ್ಞಾ ಮತ್ತು ಉಪಾಯ' ಇವುಗಳನ್ನು ಸೇರಿಸಿ ನಾಥಪಂಥದವರು 'ಯುಗನದ್ಧ'ವೆಂದು ಕರೆದರು. ಇವುಗಳ ಅಂತಿಮ ದೆಸೆಯೇ 'ಸಮರಸ ಅಥವಾ ಮಹಾಸುಖ' ವಾಗಿದೆ. ನಾಥಪಂಥವು ಹುಟ್ಟಿನಿಂದ ಬರುವ ಶ್ರೇಷ್ಠ ಅಥವಾ ಕನಿಷ್ಠಗಳನ್ನು ಮಾನ್ಯಮಾಡುವುದಿಲ್ಲ. ನಾಥಪಂಥವು ಸದಾ ಶಿವ ಸಂಸ್ಕೃತಿಯಾಗಿದ್ದು ಸರ್ವ ಮಂಗಳಕರವಾದ ಶ್ರಮ ಸಂಸ್ಕೃತಿಯನ್ನು ಪರಿಪಾಲಿಸುತ್ತಾ ಬಂದಿದೆ. ನಾಥಪಂಥವು ಎಲ್ಲಾ ಕೆಳಸ್ತರಗಳ ನಿತ್ಯದ ಒಳ್ಳೆಯ ಬದುಕಿಗೆ ಗೌರವವನ್ನು ದೊರಕಿಸಿಕೊಡುವ ಆದರ್ಶವನ್ನು ಹಾಗೂ ಔನ್ನತ್ಯವನ್ನು ಹೊಂದಿದೆ. ಶ್ರೀಆದಿಚುಂಚನಗಿರಿ ಮಠವು ಹಿಂದೆ ಕೆಲವು ಭಂಗಿ ಸೇವನೆಯ ಕಾಪಾಲಿಗಳ ವಶದಲ್ಲಿತ್ತು. ಅಲ್ಲಿನ ಸ್ವಾಮಿಗಳೆನಿಸಿಕೊಂಡಿದ್ದವರು ದುರ್ನಡತೆಗಳಿಗೆ ಒಳಗಾಗಿದ್ದರೆಂಬ ಸುದ್ದಿ ಕೇಳಿಬಂದು ಎಲ್ಲರ ಆಕ್ಷೇಪಣೆಗಳಿಗೆ ಗುರಿಯಾಗಿ ಸುತ್ತಮುತ್ತಲ ಜನ ಜೀವನದಲ್ಲಿ ಕೆಟ್ಟ ಸಂದೇಶವನ್ನು ಬೀರುತ್ತಿತ್ತು. ಆ ಮಠದ ಸ್ವಾಮಿಗಳಾಗಿದ್ದವರು ತಮ್ಮ ಉತ್ತರಾಧಿಕಾರಿ ಯಾರೆಂಬುದನ್ನು ತೀರ್ಮಾನಿಸದೆ ಕೆ.ಆರ್.ಪೇಟೆಯಲ್ಲಿ ನಿಧನರಾಗಿದ್ದರು. ಆ ಸಮಯದಲ್ಲಿ ಸ್ವಾಮಿಗಳನ್ನು ನೋಡಿಕೊಳ್ಳುತ್ತಿದ್ದ ಮನೆಯವರು ತಮ್ಮ ಮನೆಯವರೊಬ್ಬರನ್ನು ಮಠದ ಸ್ವಾಮಿಗಳಾನ್ನಾಗಿ ಮಾಡಬೇಕಾಗಿ ಆ ಸ್ವಾಮಿಗಳನ್ನು ಕೋರಿಕೊಂಡರಂತೆ. ಆಗ ಸ್ವಾಮಿಗಳು ಇದು ವ್ಯವಸಾಯಸ್ಥ ಒಕ್ಕಲಿಗ ಜನಾಂಗದ ಶಿಶು ಮಕ್ಕಳ ಮಠ. ಈ ಜನಾಂಗದ

ಮಹಾತ್ಮ ಮುಖಂಡರು ಈ ಮಠದ ಸ್ವಾಮಿಗಳನ್ನು ಆರಿಸಿಕೊಳ್ಳಲಿ ಎಂದು ಹೇಳಿದ್ದರಂತೆ. ಈ ವಿಷಯ ಬಾಯಿಂದ ಬಾಯಿಗೆ ಹರಡಿ ಹೇಗೋ ಎಂ.ಸಿ.ಲಿಂಗೇಗೌಡರಿಗೆ ತಿಳಿದು ಬಂದಿತು. ಲಿಂಗೇಗೌಡರು ಈ ವಿಷಯವನ್ನು ಜನಾಂಗದ ಬಹುದೊಡ್ಡ ಮುಖಂಡರು ಮತ್ತು ಉನ್ನತ ಸ್ಥಾನಮಾನದಲ್ಲಿದ್ದ ಶ್ರೀಕೆ.ಎಚ್.ರಾಮಯ್ಯನವರಿಗೆ ತಿಳಿಸಿ ಒಕ್ಕಲಿಗರ ಮಠವಾಗಿರುವ ಶಿವನ ಆರಾಧನೆಯ ಈ ಶ್ರೀಮಠಕ್ಕೆ ಯೋಗ್ಯ ಸ್ವಾಮೀಜಿಗಳನ್ನು ಆರಿಸಬೇಕು. ಈ ಪ್ರಯತ್ನಕ್ಕೆ ತಾವು ನೇತೃತ್ವವಹಿಸಬೇಕೆಂದು ಕೋರಿಕೊಂಡರು. ಅದರಂತೆ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀಆದಿಚುಂಚನಗಿರಿ ಮಠದ ಶಿಶು ಮಕ್ಕಳು ಮಹಾಸಭೆ ಫೆಬ್ರವರಿ ೧೯೨೮ರಲ್ಲಿ ನಡೆಯಿತು. ಎಂ.ಸಿ.ಲಿಂಗೇಗೌಡರು, ವೀರಣ್ಣಗೌಡರು, ಮಾದಯ್ಯಗೌಡರು ಮುಂತಾದವರು ಈ ಸಭೆಯನ್ನು ಸಂಘಟನೆ ಮಾಡಿ ಜನರನ್ನು ಸೇರಿಸಿದರು. ಒಕ್ಕಲಿಗ ಜನಾಂಗದಿಂದ ಕೈಬಿಟ್ಟು ಹೋಗಿದ್ದ ಶ್ರೀಮಠವನ್ನು ಮತ್ತೆ ಒಕ್ಕಲಿಗರಿಗೆ ದಕ್ಕಿಸಿಕೊಡುವಲ್ಲಿ ಶ್ರೀಕೆ.ಎಚ್.ರಾಮಯ್ಯನವರು, ಎಂ.ಸಿ.ಲಿಂಗೇಗೌಡರು, ಮಾದಯ್ಯಗೌಡರು, ವೀರಣ್ಣಗೌಡರು ಮುಂತಾದವರು ಶ್ರಮಿಸಿದರು. ಪ್ರಾರಂಭದಲ್ಲಿ ಶ್ರೀಆದಿಚುಂಚನಗಿರಿ ಶ್ರೀಮಠಕ್ಕೆ ದರಸುಗುಪ್ಪೆಯ ಶ್ರೀಭಕ್ತನಾಥಸ್ವಾಮಿಗಳನ್ನು ಪೀಠಾಧಿಕಾರಿಗಳನ್ನಾಗಿ ಆಯ್ಕೆ ಮಾಡುವುದರಿಂದ ಹಿಡಿದು ರಾಮನಗರ ತಾಲ್ಲೂಕಿನ ಬಾನಂದೂರು ಗ್ರಾಮದ ಯುವಕಯೋಗಿ ಶ್ರೀಬಾಲಗಂಗಾಧರಯ್ಯನವರನ್ನು ಶ್ರೀಮಠಕ್ಕೆ ಕರೆದುಕೊಂಡು ಬರುವಲ್ಲಿ ಗೌಡರ ಪಾತ್ರ ಬಹಳಷ್ಟಿತ್ತು. ಮುಂದೆ ಅವರು ಪುಣ್ಯ ವಿಶೇಷ ಕಾರಣದಿಂದಾಗಿ ಶ್ರೀಆದಿಚುಂಚನಗಿರಿ ಮಹಾಪೀಠದ ಜಗದ್ಗುರುಗಳಾಗಿ ಶ್ರೀಕ್ಷೇತ್ರವನ್ನು ಜಗದಗಲದ ಮಟ್ಟಕ್ಕೆ ಕೊಂಡೊಯ್ದರೆಂಬುದಕ್ಕೆ ಈಗಿನ ಶ್ರೀಚುಂಚನಗಿರಿ ಮಹಾಕ್ಷೇತ್ರವನ್ನು ಕಣ್ಣಾರೆ ನೋಡಬಹುದಾಗಿದೆ. ಶ್ರೀಶ್ರೀಶ್ರೀಬಾಲಗಂಗಾಧರನಾಥ ಮಹಾಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದ ನಂತರ ಆ ಮಹಾಕ್ಷೇತ್ರದ ಶ್ರೇಯೋಭಿವೃದ್ಧಿಗೆ ಇನ್ನಿಲ್ಲದ ರೀತಿಯಲ್ಲಿ ಶ್ರಮಿಸಿದರು. ಆ ಮಹಾ ಪುರುಷರ ಪರಿಶ್ರಮಗಳ ಫಲವಾಗಿ ಶ್ರೀಕ್ಷೇತ್ರವು ಧಾರ್ಮಿಕವಾಗಿ, ಅಷ್ಟೇ ಅಲ್ಲದೆ, ವಿಜ್ಞಾನ, ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬಗೆಗೆ ಚಿಂತನೆ ಹರಿಸಿದೆ. ಅನೇಕ ಸಮಾಜಮುಖಿ ಜನ ಯೋಗಕ್ಷೇಮ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಶ್ರೀಶ್ರೀಶ್ರೀಬಾಲಗಂಗಾಧರನಾಥ ಮಹಾಸ್ವಾಮಿಗಳ ಅನುಪಮ ಸೇವೆ ಶ್ರೀಮಠವನ್ನು ಕಾಯುತ್ತಿದ್ದು ಅವರು ಶ್ರೀಭೈರವೈಕ್ಯರಾದ ನಂತರ ಅವರ ಆಶಯಗಳು ಮತ್ತು ಇಚ್ಛೆಗಳಂತೆಯೇ ಮಹಾಪೀಠವನ್ನೇರಿದ ಶ್ರೀಶ್ರೀಶ್ರೀಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಇವೆಲ್ಲವುದರ ಜೊತೆಗೆ ಅವುಗಳಿಗೆ ವೈಜ್ಞಾನಿಕ ಮತ್ತು ಕ್ರಮಬದ್ಧ ಸ್ಪರ್ಶಗಳನ್ನು ನೀಡಿ ಆಧ್ಯಾತ್ಮ ಹಾಗೂ ವಿಜ್ಞಾನಗಳನ್ನು

ಜೊತೆ ಜೊತೆಯಲ್ಲಿ ಕೊಂಡೊಯ್ಯುವಂತೆ ಮಾಡಿರುವುದು ಶ್ರೀಮಠಕ್ಕೆ ಮತ್ತಷ್ಟು ಶೋಭೆಯನ್ನುಂಟು ಮಾಡಿದೆ. ಅಂದು ಒಕ್ಕಲಿಗರ ಮುಖಂಡರೆನಿಸಿದ್ದ ಕೆ.ಎಚ್.ರಾಮಯ್ಯನವರ ನೇತೃತ್ವದಲ್ಲಿ ಆರಂಭಗೊಂಡ ಶ್ರೀಮಠದ ಕಾರ್ಯಗಳು ಒಟ್ಟಾರೆಯಾಗಿ ಒಂದು ಹೆಮ್ಮರವಾಗಿ ಬೆಳೆದು ನಿಂತಿವೆ. ಇಂದು ಶ್ರೀಮಠವು ಭಕ್ತರ ಮಹದಾನಂದದ ಪುಣ್ಯ ಕ್ಷೇತ್ರವೆನಿಸಿದೆ. ಇದರ ಹಿಂದೆ ನಿಂತ ಹಲವು ಮುಖಂಡರ ಸಾಲಿನಲ್ಲಿ ಮಾದಯ್ಯಗೌಡರೂ ಒಬ್ಬರಾಗಿದ್ದರು ಎಂಬುದನ್ನು ಯಾರೂ ಮರೆಯುವಂತಿಲ್ಲ.

ಶ್ರೀಆದಿಚುಂಚನಗಿರಿ ಮಹಾ ಕ್ಷೇತ್ರವು ಕೇವಲ ಒಕ್ಕಲಿಗ ಜನಾಂಗದ ಕ್ಷೇತ್ರವಾಗಿಲ್ಲದೆ ಸರ್ವ ಜನಾಂಗದ ಆಧ್ಯಾತ್ಮಿಕ ಮತ್ತು ಪ್ರಶಾಂತತೆಯ ಪುಣ್ಯ ಕ್ಷೇತ್ರವಾಗಿದೆ. ದೇಶದ ನಾನಾ ಭಾಗಗಳಿಂದ ಮತ್ತು ಹೊರದೇಶಗಳಿಂದ ಜನರು ಶ್ರೀಮಠಕ್ಕೆ ಬಂದು ಹೋಗುತ್ತಿರುತ್ತಾರೆ. ಉಪಾಹಾರದ ಸಮಯದಲ್ಲಿ ಬಂದವರಿಗೆ ಉಪಾಹಾರ ದೊರೆಯುತ್ತದೆ; ಊಟದ ಸಮಯದಲ್ಲಿ ಬಂದವರಿಗೆ ಊಟವು ದೊರೆಯುತ್ತದೆ. ಉಪಾಹಾರವೇ ಆಗಲೀ, ಊಟವೇ ಆಗಲೀ ಉತ್ಕೃಷ್ಟ ಪದಾರ್ಥಗಳನ್ನು ಬಳಸಿಕೊಂಡು ಶುಚಿ, ರುಚಿ ಮತ್ತು ಆರೋಗ್ಯ ಪೂರ್ಣಗುಣ ಮಟ್ಟದಲ್ಲಿ ತಯಾರಿಸಲಾಗುತ್ತದೆ. ನೂರಾರು, ಸಾವಿರಾರು ಸಂಖ್ಯೆಯಲ್ಲಿ ಬರುವ ಜನರಿಗೆ ಉಚಿತವಾಗಿ ಊಟ ಉಪಾಹಾರಗಳನ್ನು ಎನಿತೂ ಬೇಸರಿಸದೆ ಬಡಿಸುವುದನ್ನು ನೋಡಿ ಬಂದವರು ಆಶ್ಚರ್ಯಪಡುತ್ತಾರೆ ಮತ್ತು ಶ್ರೀಮಠದ ಬಗೆಗೆ ಅಭಿಮಾನಪಡುತ್ತಾರೆ. ಮೊದಲಿನಿಂದಲೂ ಶ್ರೀಮಠ, 'ಅನ್ನದಾನಿ ಮಠ' ಎಂದೇ ಪ್ರಖ್ಯಾತಿ ಹೊಂದಿದೆ.

ಶ್ರೀಆದಿಚುಂಚನಗಿರಿ ಮಹಾಕ್ಷೇತ್ರದಲ್ಲಿ ಪ್ರಕೃತಿ ಮಾತೆಯ ಸಹಜ ಸೌಂದರ್ಯವಿದೆ. ನಿತ್ಯ ಹರಿದ್ವರ್ಣದ ವೃಕ್ಷರಾಶಿಗಳು, ಅಮೂಲ್ಯ ಗಿಡಮೂಲಿಕೆಗಳು, ವನಸ್ಪತಿಗಳು ದೊರೆಯುತ್ತವೆ. ನವಿಲುಗಳು, ನಾನಾ ರೀತಿಯ ಬಣ್ಣ ಬಣ್ಣದ ಪಕ್ಷಿಗಳು, ಪ್ರಾಣಿಗಳು, ಕೀಟಗಳು ಸ್ವತಂತ್ರವಾಗಿ ವಿಹರಿಸುತ್ತಿರುತ್ತವೆ. ಒಟ್ಟಾರೆ, ಶ್ರೀಕ್ಷೇತ್ರದ ಪರಿಸರವು ಆಧ್ಯಾತ್ಮಿಕ ಮತ್ತು ಜೀವವೈವಿಧ್ಯತೆಯ ಆಗರವಾಗಿದೆ. ಹಿರಿಯ ಜಗದ್ಗುರುಗಳಾಗಿದ್ದ ಪದ್ಮಭೂಷಣ ಶ್ರೀಶ್ರೀಶ್ರೀಬಾಲಗಂಗಾಧರನಾಥ ಮಹಾಸ್ವಾಮಿಗಳು ಶ್ರೀಮಠವನ್ನು ತ್ರಿಕರಣಶುದ್ಧಿಯಿಂದ ಅಭಿವೃದ್ಧಿಗೊಳಿಸಿ ಕೈಗೊಂಡಿದ್ದ ಪೂಜೆ ಪುರಸ್ಕಾರಗಳು, ನಿತ್ಯ ದಾಸೋಹಗಳು, ಶೈಕ್ಷಣಿಕ ಪ್ರಸಾರ, ಸಾಂಸ್ಕೃತಿಕ ಪ್ರಸಾರ, ಆಧ್ಯಾತ್ಮಿಕ ಪ್ರಸಾರ, ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಇಂದಿನ ಜಗದ್ಗುರುಗಳಾದ ಶ್ರೀಶ್ರೀಶ್ರೀಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಚಾಚೂ ತಪ್ಪದೆ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹಾಗಾಗಿ ಮಹಾ ಸಾತ್ವಿಕರೂ ಯುವಯೋಗಿಗಳೂ ಆದ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳ ಬಗೆಗೆ ಭಕ್ತಾದಿಗಳಲ್ಲಿ ಅಪಾರ ಅಭಿಮಾನವಿದೆ.

ಗೌಡರು ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ವಾರಕ್ಕೊಮ್ಮೆ ಸೇರುತ್ತಿದ್ದ ಸ್ಟಡಿ ಸರ್ಕಲ್ ಅಥವಾ ವ್ಯಾಸಂಗ ಗೋಷ್ಠಿಯಲ್ಲಿ ಡಿ.ವಿ.ಜಿಯವರು ನೀಡುತ್ತಿದ್ದ "ಶ್ರೀಮದ್ಭಗವದ್ಗೀತೆ" ಬಗೆಗಿನ ಉಪನ್ಯಾಸಗಳಿಗೆ ಅನುಕೂಲ ಮಾಡಿಕೊಂಡು ಆಸಕ್ತರೊಡನೆ ಹೋಗುತ್ತಿದ್ದರು. ಈ ಉಪನ್ಯಾಸಗಳ ಲಿಖಿತ ರೂಪವಾಗಿ "ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನ ಧರ್ಮಯೋಗ" ಎಂಬ ಕೃತಿಯನ್ನು ಮೈಸೂರಿನ ಕಾವ್ಯಾಲಯ ಪ್ರಕಾಶಕರು ಹೊರ ತಂದರು. ಡಿ.ವಿ.ಜಿಯವರ "ಮಂಕುತಿಮ್ಮನ ಕಗ್ಗ" ಗೌಡರಿಗೆ ಪ್ರಿಯವಾದ ಕೃತಿಯಾಗಿತ್ತು. ಅದು ಯಾವಾಗಲೂ ಅವರ ಬಳಿ ಇರುತ್ತಿತ್ತು. ಬಸವಪ್ಪಶಾಸ್ತ್ರಿಗಳು, ಎಂ.ಎಲ್.ಶ್ರೀಕಂಠೇಶಗೌಡರು, ಎಂ.ಎಸ್.ಪುಟ್ಟಣ್ಣನವರು, ಪಂಜೆಮಂಗೇಶರಾಯರು, ಬಿ.ಎಂ.ಶ್ರೀ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿಗಳು, ಎಂ.ಆರ್.ಶ್ರೀನಿವಾಸಮೂರ್ತಿಗಳು, ಎಸ್.ಜಿ.ನರಸಿಂಹಾಚಾರ್, ಆರ್.ನರಸಿಂಹಾಚಾರ್, ಅಲಸಿಂಗರಾಚಾರ್ಯರು, ಎಂ.ಎ.ರಾಮಾನುಜಯ್ಯಂಗಾರ್ಯರು, ಚ.ವಾಸುದೇವಯ್ಯನವರು, ತೋಗೆರೆ ನಂಜುಂಡಶಾಸ್ತ್ರಿಗಳು, ಬೆಳ್ಳಾವೆ ವೆಂಕಟನಾರಾಣಪ್ಪನವರು, ಮಂಜೇಶ್ವರ ಗೋವಿಂದ ಪೈ ಮುಂತಾದ ಕನ್ನಡ ಸಾಹಿತ್ಯದ ಪ್ರಥಮ ಸಾಲಿನ ಮೇರು ಸಾಹಿತ್ಯೋಪಾಸಕರ ಕೃತಿಗಳನ್ನು ವಿದ್ಯಾರ್ಥಿದೆಸೆಯಲ್ಲಿಯೇ ಓದಿದ ಅವಕಾಶ ಅವರಿಗೆ ದೊರೆತ್ತಿತ್ತು. ಎ.ಆರ್.ಕೃಷ್ಣಶಾಸ್ತ್ರಿಗಳ "ವಚನ ಭಾರತ", ದೇವುಡು ಕೃಷ್ಣಶಾಸ್ತ್ರಿಗಳ "ಮಯೂರ" ಕೃತಿಗಳನ್ನು ಅನೇಕ ಸಾರಿ ಓದಿದ್ದರು. ಮಹಾಕವಿ ಕುವೆಂಪುರವರ ಬಹುತೇಕ ಎಲ್ಲಾ ಕೃತಿಗಳು ಅವರ ಮನೆಯಲ್ಲಿದ್ದವು. ಗೌಡರಿಗಿದ್ದ ಸಾಹಿತ್ಯಾಸಕ್ತಿ, ಆಧ್ಯಾತ್ಮ ಚಿಂತನೆ ಹಾಗೂ ಸಂಸ್ಕೃತಿಪ್ರಿಯತೆ ರಾಜಕಾರಣಿಗಳಲ್ಲಿ ಅಪರೂಪವಾದುದು.

ಯುಗಾವತಾರ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಶಾರದಾಮಾತೆ, ಸ್ವಾಮಿ ವಿವೇಕಾನಂದರು, ಮಹಾತ್ಮಾ ಗಾಂಧೀಜಿ, ಸರ್.ಎಂ.ವಿಶ್ವೇಶ್ವರಯ್ಯನವರು ಅವರಿಗೆ ಆದರ್ಶ ವ್ಯಕ್ತಿಗಳು. ಮೈಸೂರು ಸಂಸ್ಥಾನದ ಗಣ್ಯ ವ್ಯಕ್ತಿಗಳಾಗಿದ್ದ ಶ್ರೀಕೆ.ಎಚ್.ರಾಮಯ್ಯನವರ ಆಪ್ತವರ್ಗದಲ್ಲಿ ಗೌಡರು ಒಬ್ಬರಾಗಿದ್ದರು. ರಾಮಯ್ಯನವರು ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ಅವರೊಡನೆ ಯೂರೋಪ್ ದೇಶಗಳಿಗೆ ಅಭಿವೃದ್ಧಿ ವಿಷಯಗಳಲ್ಲಿ ಅಧ್ಯಯನ ಕೈಗೊಳ್ಳಲು ಹೋಗಿ ಬಂದ ನಂತರ ವೃದ್ಧಪಿತಾಮಹ ಎಂ.ವೆಂಕಟಕೃಷ್ಣಯ್ಯನವರ ಆಹ್ವಾನದ ಮೇರೆಗೆ ಉಪನ್ಯಾಸಗಳನ್ನು ನೀಡಿದ್ದರು. ರಾಮಯ್ಯನವರ ಈ ಉಪನ್ಯಾಸಗಳಿಗೆ ಗೌಡರು ಹೋಗಿ ಉಪನ್ಯಾಸಗಳನ್ನು ಕೇಳುತ್ತಿದ್ದರು. ಒಕ್ಕಲಿಗ ಜನಾಂಗದ ಗಣ್ಯವ್ಯಕ್ತಿಯಾದ ರಾಮಯ್ಯನವರು ಗೌಡರಿಗೆ ಧರ್ಮಪಿತರಂತಿದ್ದರು.

ಅವರ ಪ್ರೋತ್ಸಾಹದಿಂದ ಗೌಡರು ಉನ್ನತ ಶಿಕ್ಷಣ ಪಡೆದದ್ಯೋತಕವಾಗಿ ತಮ್ಮ ಮನೆಯಲ್ಲಿ ಕೆ.ಎಚ್.ರಾಮಯ್ಯನವರ ದೊಡ್ಡ ತೈಲಚಿತ್ರ ಗೋಡೆಯನ್ನು ಅಲಂಕರಿಸಿತ್ತು. ಗೌಡರು ಅವರ ಬಗೆಗೆ ಬಹಳ ಕೃತಜ್ಞತೆಯನ್ನಿಟ್ಟುಕೊಂಡಿದ್ದರು. ಪ್ರತಿ ದಿನವೂ ಸ್ಮರಿಸುತ್ತಿದ್ದರು. ರಾಮಯ್ಯನವರ ಹಿರಿಯ ಮಗಳೇ ಯಶೋಧರಾ ದಾಸಪ್ಪನವರು; ಅಳಿಯ ಹೆಚ್.ಸಿ. ದಾಸಪ್ಪನವರು ಕೇಂದ್ರಮಂತ್ರಿಗಳಾಗಿದ್ದವರು. ಯಶೋಧರಮ್ಮ ದಾಸಪ್ಪ, ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದರು. ಅವರ ಮಗ ಪಾರ್ಲಿಮೆಂಟ್ ಸದಸ್ಯರಾಗಿದ್ದ ತುಳಸೀದಾಸಪ್ಪನವರಿಗೂ ಗೌಡರೆಂದರೆ ಅಚ್ಚು-ಮೆಚ್ಚು. ಆಗಾಗ ರಾಮನಗರಕ್ಕೆ ಬಂದು, ಗೌಡರ ಮನೆಯ ಆತಿಥ್ಯವನ್ನು ಸ್ವೀಕರಿಸುತ್ತಿದ್ದರು. ಬಾಲ್ಯದಲ್ಲಿ ಅವರಿಗೆ ತಂದೆಯಿಂದ ಏನಾದರೂ ಕೆಲಸವಾಗಬೇಕಾಗಿದ್ದರೆ ಗೌಡರಿಂದ ಶಿಫಾರಸ್ ಮಾಡಿಸಿಕೊಳ್ಳುತ್ತಿದ್ದರು. ಮತ್ತೊಬ್ಬ ಮಗ ರಾಮದಾಸ್ ದಾಸಪ್ಪ ದಂಪತಿಗಳಂತೆಯೇ ಹಾಸ್ಯ ಪ್ರಿಯರು. ಇವರು ಮುಗ್ಧ ಸ್ವಭಾವದವರಾಗಿದ್ದರು. ಗೌಡರ ಹತ್ತಿರ ಮಕ್ಕಳಿಬ್ಬರಿಗೂ ತುಂಬಾ ಆತ್ಮೀಯತೆ ಮತ್ತು ಸಲುಗೆಯಿತ್ತು. ಹಾಸ್ಯ ಮತ್ತು ಮುಗ್ಧತೆಗಳಿಂದ ರಾಮದಾಸ್ 'ನನ್ನದು ದೊಡ್ಡೊಟ್ಟೆ' ಎಂದು ಮೊದಲೇ ಗೌಡರ ಹತ್ತಿರ ಹೇಳಿಬಿಡುತ್ತಿದ್ದರು. ಊಟ ಮಾಡುವಾಗ ರಾಮದಾಸ್, 'ಬೇಡ ಸಾಕು ಸಾಕು' ಅಂತ ಹೇಳಿದರೂ ಎಲೆಗೆ ಬಡಿಸಬೇಕು ಎಂಬ ಗುಟ್ಟು ಗೌಡರ ಹೆಂಡತಿ ಶಾರದಮ್ಮಣ್ಣಿಯವರಿಗೆ ಗೊತ್ತಿತ್ತು. ತಾಯಿ ಯಶೋಧರಮ್ಮನವರಿಗೆ ತಿಳಿಯದಂತೆ ರಾಮದಾಸ್ ಬೇಡ ಬೇಡ ಎಂದರೂ "ಚನ್ನಾಗಿ ಊಟ ಮಾಡಪ್ಪ" ಎಂದು ಶಾರದಮ್ಮಣ್ಣಿಯವರು ಬಡಿಸಿಬಿಡುತ್ತಿದ್ದರು. ಇದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಅಂತಹ ಸ್ನೇಹ ಮತ್ತು ಸಲುಗೆ ಗೌಡರು ಮತ್ತು ಯಶೋಧರಮ್ಮ ದಾಸಪ್ಪ ದಂಪತಿಗಳ ಮಧ್ಯೆ ಇತ್ತು.

ಕೆಂಗಲ್ ಹನುಮಂತಯ್ಯನವರು ಕರ್ನಾಟಕದ ಹೆಸರಾಂತ ಮುಖ್ಯಮಂತ್ರಿಯಾಗಿದ್ದವರು. ಇವರು ಗೌಡರಿಗೆ ಆತ್ಮೀಯರು ಮತ್ತು ಕುಟುಂಬ ಸ್ನೇಹಿತರು. ಹನುಮಂತಯ್ಯನವರ ತಾಯಿ ನಂಜಮ್ಮನವರು ಮತ್ತು ಗೌಡರ ತಾಯಿ ಲಿಂಗಮ್ಮನವರೂ ಬಹಳ ಆತ್ಮೀಯರಾಗಿದ್ದರು. ಅವರ ಹೆಣ್ಣು ಮಕ್ಕಳಾದ ವಸಂತಲಕ್ಷ್ಮಿ, ವಿಜಯಲಕ್ಷ್ಮಿಯರು ಗೌಡರ ಹೆಣ್ಣುಮಕ್ಕಳಾದ ಕಮಲ-ಮಮತರೊಡನೆ ಸ್ನೇಹದಿಂದ ಇದ್ದರು. ಸ್ವಾತಂತ್ರ ಹೋರಾಟದ ಸಮಯದಲ್ಲಿ ಜೊತೆ ಜೊತೆಯಲ್ಲಿ ಭಾಗವಹಿಸಿದವರು. ಕೆಂಗಲ್ ಹನುಮಂತಯ್ಯನವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮತ್ತು ತಮ್ಮ ವಕೀಲ ವೃತ್ತಿ ಜೀವನದ ಪ್ರಾರಂಭದಲ್ಲಿ ಹಣದ ಕೊರತೆಯನ್ನು ಅನುಭವಿಸುತ್ತಿದ್ದರು. ಅಣ್ಣ ಅಪ್ಪಾಜಿಗೌಡರು ಸಹಾಯ ಕೇಳಿದವರಿಗೆ ಇಲ್ಲ ಎನ್ನುತ್ತಿರಲಿಲ್ಲ. ಧಾನ ಧರ್ಮ

ಮಾಡುವುದರಲ್ಲಿ, ಬಂದವರಿಗೆ ಊಟ ಮಾಡಿಸುವುದರಲ್ಲಿ ಎತ್ತಿದ ಕೈ. ತಮ್ಮ ಮಾದಯ್ಯಗೌಡರ ಸಲಹೆಯಂತೆ ಆ ಸಮಯದಲ್ಲಿ ಹನುಮಂತಯ್ಯನವರಿಗೆ ವಕೀಲ ವೃತ್ತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ತಮ್ಮ ಕೈಲಾದಷ್ಟು ರೀತಿಯಲ್ಲಿ ಸಹಾಯ ಮಾಡಿದರು.

೧೯೫೨ರಲ್ಲಿ ಮೈಸೂರು ರಾಜ್ಯದಲ್ಲಿ ನಡೆದ ಪ್ರಥಮ ಮಹಾಚುನಾವಣೆಯಲ್ಲಿ ರಾಜ್ಯದ ವಿಧಾನ ಸಭಾ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಹನುಮಂತಯ್ಯನವರು ಶಾಸಕರಾಗಿ ವಿಧಾನಸಭೆಗೆ ಆರಿಸಿ ಬಂದರು. ಶಾಸಕಾಂಗ ಪಕ್ಷದ ನಾಯಕರಾಗಿ ಮುಖ್ಯಮಂತ್ರಿಗಳೂ ಆದರು. ಮುಖ್ಯಮಂತ್ರಿಯ ಕುರ್ಚಿಯಲ್ಲಿ ಕುಳಿತುಕೊಳ್ಳುವ ಮೊದಲು ಅವರು ತಮ್ಮ ಮನೆ ದೇವರು ಶ್ರೀಕೆಂಗಲ್ ಹನುಮಂತರಾಯ ಸ್ವಾಮಿಯ ಗುಡಿಗೆ ಹೋಗಿ ಭಕ್ತಿಪೂರ್ವಕ ಪೂಜೆ ಸಲ್ಲಿಸಿದರು. ನಂತರ ಅವರು ತಮ್ಮ ಹಿತೈಷಿಗಳಾಗಿದ್ದ ಮತ್ತು ವಯಸ್ಸಿನಲ್ಲಿ ಹಿರಿಯರಾಗಿದ್ದ ಗೌಡರನ್ನು ಮತ್ತು ಅಣ್ಣ ಅಪ್ಪಾಜಿಗೌಡರನ್ನು ಭೇಟಿಮಾಡಿ ಆಶೀರ್ವಾದ ಪಡೆದುಕೊಂಡರು.

ಗೌಡರು ಆಗ ಲೋಕ ಸಭೆಗೆ ಆಯ್ಕೆಯಾದರು. ಒಂದು ಪಕ್ಷ ಗೌಡರು ಆ ಸಮಯದಲ್ಲಿ ವಿಧಾನ ಸಭೆಗೆ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದರೆ ಅವರ ಸಾಮಾಜಿಕ ಸೇವೆ, ರಾಜಕೀಯ ಹಿರಿತನ, ಅನುಭವ, ಕಾಂಗ್ರೇಸ್ ಮುಖಂಡರ ಸ್ನೇಹ ಈ ಎಲ್ಲಾ ಕಾರಣಗಳಿಂದಾಗಿ ಅವರು ಮುಖ್ಯಮಂತ್ರಿಗಳಾಗುವ ಅವಕಾಶ ದೊರೆಯುತ್ತಿತ್ತು. ಗೌಡರು ಮತ್ತು ಹನುಮಂತಯ್ಯನವರು ಪರಸ್ಪರ ಸ್ನೇಹ ಮತ್ತು ಸಹಕಾರದಿಂದ ಕ್ಷೇತ್ರದ ಎಲ್ಲಾ ವರ್ಗಗಳ ಜನರ ಆತ್ಮೀಯ ಸಂಪರ್ಕವನ್ನಿಟ್ಟುಕೊಂಡಿದ್ದರು. ರಾಮನಗರ ಕ್ಷೇತ್ರವು ಮುಸ್ಲಿಂ ಸಮುದಾಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದೆ. ರಾಜಕೀಯ ಮತ್ತು ಇನ್ನಿತರ ಸಣ್ಣಪುಟ್ಟ ಕಾರಣಗಳಿಗಾಗಿ ರಾಮನಗರದಲ್ಲಿ ಆಗ ಕೆಲವೊಮ್ಮೆ ಹಿಂದೂ ಮುಸ್ಲಿಂ ಜನಾಂಗದ ಕೆಲವು ಗುಂಪುಗಳ ಮಧ್ಯೆ ವಿವಾದಗಳಾಗುತ್ತಿದ್ದವು. ಗೌಡರು ಮತ್ತು ಹನುಮಂತಯ್ಯನವರು ಎಲ್ಲರನ್ನೂ ಪ್ರೀತಿ ಮತ್ತು ವಿಶ್ವಾಸಕ್ಕೆ ತೆಗೆದುಕೊಂಡು ಅವರೆಲ್ಲರ ಗುಂಪುಗಳ ಮನವೊಲಿಸಿ ಕೋಮು ಸಂಘರ್ಷಗಳನ್ನು ತೃಪ್ತಿಕರವಾಗಿ ಪರಿಹರಿಸಿ ಎರಡೂ ಜನಾಂಗಗಳ ನಡುವೆ ಸಾಮಾಜಿಕ ಸೌಹಾರ್ದತೆ ಬೆಳೆಯಲು ಕೆಲಸ ಮಾಡಿದರು. ಇಬ್ಬರೂ ಗಾಂಧೀ ವಿಚಾರಧಾರೆಯನ್ನು ಮೈಗೂಡಿಸಿಕೊಂಡು ತಮ್ಮ ಜೀವನದುದ್ದಕ್ಕೂ ಅನುಸರಿಸಿಕೊಂಡು ಬಂದರು.

ಹನುಮಂತಯ್ಯನವರ ನಿಧನದ ನಂತರ ಅವರ ಜೀವನ ಚರಿತ್ರೆ ಬರೆಯಲು ಖ್ಯಾತ ವಿದ್ವಾಂಸರಾದ ಹ.ಕ.ರಾಜೇಗೌಡರು ಮುಂದಾಗಿದ್ದರು. ಹನುಮಂತಯ್ಯನವರ

ಡೈರಿಯ ಪ್ರತಿ ಪುಟದಲ್ಲಿಯೂ ಗೌಡರ ಬಗೆಗೆ ಉಲ್ಲೇಖವಿದೆ. ಇದು ಬಾಲ್ಯದಲ್ಲಿ ನಡೆದ ಹನುಮಂತಯ್ಯನವರ ಮುಗ್ಧ ತಮ್ಮನ ಘಟನೆ: ಆ ಕಾಲದಲ್ಲಿ ವಾಚನ್ನು ಕಟ್ಟಿಕೊಳ್ಳುವುದು, ಟೆರಿಲಿನ್ ಶರ್ಟ್ ಹಾಕಿಕೊಳ್ಳುವುದು ಪ್ರತಿಷ್ಠೆಯ ಮತ್ತು ನವನವೀನತೆಯ ವಿಷಯಗಳಾಗಿದ್ದವು. ಊರಿನಲ್ಲಿ ಕೆಲವೇ ಕೆಲವರು ವಾಚ್ ಕಟ್ಟುತ್ತಿದ್ದರು. ಅಂತಹ ಕೆಲವೇ ಕೆಲವರಲ್ಲಿ ಹನುಮಂತಯ್ಯನವರು ಸೇರಿದ್ದರು. ಗ್ರಾಮೀಣ ಯುವಕರು ಅಣ್ಣನವರು ಅಂದರೆ ಹನುಮಂತಯ್ಯನವರು ವಾಚ್ ಕಟ್ಟಿಕೊಂಡಿದ್ದಾರೆ ಎಂದು ಅವರ ನವನವೀನತೆಯ ವಾಚಿನ ಬಗೆಗೆ ಮಾತಾಡಿಕೊಳ್ಳುತ್ತಿದ್ದರು. ಒಂದು ಸಾರಿ ಹನುಮಂತಯ್ಯನವರ ತಮ್ಮ ವಾಚ್‌ನ್ನು ಕಟ್ಟಿಕೊಳ್ಳಬೇಕು ಎಂಬ ಬಾಲ್ಯ ಸಹಜ ಆಸೆಯಿಂದ ಅಣ್ಣನ ವಾಚನ್ನು ಕಟ್ಟಿಕೊಂಡು ಎಲ್ಲಿಗೋ ಹೋಗಿದ್ದರು. ಕೆಲಸದ ಮೇಲೆ ಹೊರಗೆ ಹೊರಟ ಹನುಮಂತಯ್ಯನವರು ವಾಚ್ ಕಟ್ಟಿಕೊಳ್ಳಲು ಹೋದಾಗ ತಾವು ಇಟ್ಟಿದ್ದ ಸ್ಥಳದಲ್ಲಿ ವಾಚ್ ಇರಲಿಲ್ಲ. ಹನುಮಂತಯ್ಯನವರು ತನ್ನ ತಮ್ಮನು ಅವರ ವಾಚನ್ನು ಕಟ್ಟಿಕೊಂಡಿರುವ ವಿಷಯ ಗೊತ್ತಾಗಿ ಕೋಪಕೊಂಡರು. ಅಲ್ಲಿದ್ದ ಗೌಡರು ಹನುಮಂತಯ್ಯನವರನ್ನು ಆ ವಾಚಿನ ವಿಷಯವಾಗಿ ಸಮಾಧಾನಗೊಳಿಸಿದ ವಿಧಾನವನ್ನು ಮೆಚ್ಚಿಗೆಯಿಂದ ಬರೆದುಕೊಂಡಿದ್ದಾರೆ. ಗೌಡರ ಸಲಹೆಯಂತೆ ಹನುಮಂತಯ್ಯನವರು ತಮ್ಮನಿಗೆ ಒಂದು ಹೊಸ ವಾಚ್ ಕೊಡಿಸಿದರು. ತಮ್ಮನಿಗೆ ಗೌಡರು ಒಳ್ಳೆ ವಿಧಾನದಲ್ಲಿ ಬುದ್ಧಿ ಹೇಳಿದಾಗ ತಮ್ಮನು ಪಶ್ಚಾತ್ತಾಪಕೊಂಡನು. ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ತಿಳಿಸಿದನು.

ಅದು ತಿಮ್ಮಸಂದ್ರದ ಸರ್ಕಾರಿ ಕಾರ್ಯಕ್ರಮ. ಊರಿನಲ್ಲಿ ಹೊಸದಾಗಿ ಕಟ್ಟಿದ್ದ ಆಸ್ಪತ್ರೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಕೆಂಗಲ್‌ರು ಬಂದಿದ್ದರು. ಅವರ ಜೊತೆಗೆ ತಿಮ್ಮಸಂದ್ರದ ಕಾರ್ಯಕ್ರಮವಾಗಿದ್ದರಿಂದ ತಾಯಿ ನಂಜಮ್ಮ, ಪತ್ನಿ ಪುಟ್ಟಮ್ಮ, ಮತ್ತು ಹೆಣ್ಣು ಮಕ್ಕಳು ವಸಂತಲಕ್ಷ್ಮೀ, ವಿಜಯಲಕ್ಷ್ಮೀ ಸಹಾ ಬಂದಿದ್ದರು. ಹನುಮಂತಯ್ಯನವರು ತಮ್ಮ ಆಸ್ಪತ್ರೆಯ ಉದ್ಘಾಟನಾ ಭಾಷಣದಲ್ಲಿ ಗೌಡರ ಬಗೆಗೆ ಬಹಳ ಆತ್ಮೀಯವಾಗಿ ಮಾತನಾಡಿದರು:

'ಮಾದಯ್ಯಗೌಡರು ಬಿ.ಎ., ಮುಗಿಸಿ, ಎಲ್.ಎಲ್.ಬಿ., ಓದಲು ಪೂನಾಕ್ಕೆ ಹೋಗುವ ತಯ್ಯಾರಿಯಲ್ಲಿದ್ದರು. ನಾನಿನ್ನೂ ಬಿ.ಎ., ಪದವಿಯ ಎರಡನೆಯ ವರ್ಷದಲ್ಲಿದ್ದೆ. ಆಗ ನಮಗೆ ಕುಮಾರವ್ಯಾಸನ 'ಭಾರತ ಕಥಾ ಮಂಜರಿ' ಪಠ್ಯ ಪುಸ್ತಕವಾಗಿತ್ತು. ಗೌಡರನ್ನು ಭೇಟಿಯಾಗಲು ಅವರ ಕೊಠಡಿಗೆ ಹೋದಾಗ, ಅವರು ಕುಮಾರವ್ಯಾಸ ಭಾರತವನ್ನು ತನ್ಮಯತೆಯಿಂದ ಓದುತ್ತಾ ಕುಳಿತಿದ್ದರು. ನನಗೆ ಆಶ್ಚರ್ಯ!. ಪಾಸಾಗಿದ್ದಾರೆ; ಮತ್ತೆ

ಓದುತ್ತಿದ್ದಾರಲ್ಲಾ ಅಂತ. ಕೇಳಿಯೂ ಬಿಟ್ಟೆ. ಆದರೆ, ಕಾವ್ಯಾಸ್ವಾದನದಲ್ಲಿನ ಆನಂದ ಏನೆಂಬುದನ್ನು ಅವರ ಮಾತುಗಳಿಂದ ಕೇಳಿ ತಿಳಿದುಕೊಂಡೆ. 'ವಿದುರ ನೀತಿ'ಯ ಬಗೆಗೆ, ರಾಜಕಾರಣದ ಬಗೆಗೆ, ಗದುಗಿನ ನಾರಾಣಪ್ಪ ಬರೆದಿರುವುದನ್ನು ನಾವಿಬ್ಬರೂ ಚರ್ಚಿಸುತ್ತಿದ್ದೆವು" ಎಂದು ಹೇಳಿದರು. ಗೌಡರ ಜೊತೆಗೆ ನಡೆಸಿದ ಮಾತಿನ ಪ್ರೇರೇಪಣೆ ಮತ್ತು ಸ್ಫೂರ್ತಿಯಿಂದ ಹನುಮಂತಯ್ಯನವರು ರಾಜ್ಯದ ಮುಖ್ಯಮಂತ್ರಿಯಾದ ಅವಧಿಯಲ್ಲಿ ಕುಮಾರವ್ಯಾಸ ಭಾರತವನ್ನು ಪ್ರಕಟಿಸಿ ಎರಡು ರೂಪಾಯಿಗಳಿಗೆ ಜನರಿಗೆ ದೊರೆಯುವಂತಹ ಶ್ಲಾಘನೀಯ ಕೆಲಸ ಮಾಡಿದರು.

ಗೌಡರು ಲೋಕಸಭೆಯ ಸದಸ್ಯರಾಗಿದ್ದಾಗ ಮಾತನಾಡುತ್ತಿದ್ದುದು ಕಡಿಮೆ. ನಿಜಲಿಂಗಪ್ಪನವರು ಸಹ ಮಾತನಾಡುತ್ತಿದ್ದುದು ಕಡಿಮೆ. ಗೌಡರಿಗೂ, ಮತ್ತು ಅವರ ಜೊತೆ ಲೋಕಸಭಾ ಸದಸ್ಯರಾಗಿದ್ದ ಬೆಂಗಳೂರು (ಉತ್ತರ) ಕ್ಷೇತ್ರದ ಕೇಶವಅಯ್ಯಾಂಗಾರರಿಗೆ; ಶಿವಮೊಗ್ಗ ಕ್ಷೇತ್ರದ ಕೆ.ಜಿ.ಒಡೆಯರ್‌ರವರಿಗೆ; ತುಮಕೂರು ಕ್ಷೇತ್ರದ ಸಿ.ಆರ್.ಬಸಪ್ಪನವರಿಗೆ; ಕೋಲಾರ ಕ್ಷೇತ್ರದ ಎಂ.ವಿ.ವೆಂಕಟಪ್ಪನವರಿಗೆ ಚನ್ನಾಗಿ ಇಂಗ್ಲೀಷ್ ಬರುತ್ತಿತ್ತು. ಕಿಸಾನ್ ಮಝ್ದೂರ್ ಪೀಪಲ್ಸ್ ಪಾರ್ಟಿಯಿಂದ ಮೈಸೂರು ಲೋಕಸಭಾ ಕ್ಷೇತ್ರದಿಂದ ಎನ್.ರಾಚಯ್ಯನವರ ಜೊತೆಗೆ ಆಯ್ಕೆಯಾಗಿದ್ದ ಎಂ.ಎಸ್.ಗುರುಪಾದಸ್ವಾಮಿಯವರು ಇಂಗ್ಲೀಷ್‌ನಲ್ಲಿ ಲೋಕಸಭಾ ಕಲಾಪಗಳಲ್ಲಿ ಚನ್ನಾಗಿ ಮಾತನಾಡುತ್ತಿದ್ದರು; ಹಿಂದಿ ಅವರಿಗೆ ಅಷ್ಟು ಚನ್ನಾಗಿ ಮಾತನಾಡಲು ಬರುತ್ತಿರಲಿಲ್ಲ. ಗುರುಪಾದಸ್ವಾಮಿಯವರು ಲೋಕಸಭೆಯ ಕಲಾಪಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದರು. ನಿಜಲಿಂಗಪ್ಪನವರು ಇಂಗ್ಲೀಷ್, ಹಿಂದಿ, ಉರ್ದು ಮತ್ತು ತೆಲುಗಿನಲ್ಲಿ ಚನ್ನಾಗಿ ಮಾತನಾಡಬಲ್ಲವರಾಗಿದ್ದರು. ಗೌಡರು, ನಿಜಲಿಂಗಪ್ಪನವರು, ಲೋಕಸಭೆಯಲ್ಲಿ ಹೆಚ್ಚು ಮಾತನಾಡದಿದ್ದರೂ ಅವರ ಕೆಲಸಗಳೆಲ್ಲಾ ಲಾಬಿಯಲ್ಲೇ ನಡೆಯುತ್ತಿದ್ದವು. ಅಲ್ಲೇ ಎಲ್ಲರೂ ಸಿಗುತ್ತಿದ್ದರು. ಗೆಳೆಯ ನಿಜಲಿಂಗಪ್ಪನವರಿಗೆ ಬಹಳಷ್ಟು ಜನ ಪರಿಚಯವಿದ್ದರು, ನಿಜಲಿಂಗಪ್ಪನವರ ಮೂಲಕ ಎಲ್ಲರೂ ಸಹ ಗೌಡರಿಗೆ ಪರಿಚಯವಾದರು. ಅವರ ಮೂಲಕ ಮಾತನಾಡಿ ರಾಜ್ಯದ ಮತ್ತು ಕ್ಷೇತ್ರದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು.

ಮೊದಲಿನಿಂದಲೂ ಗೌಡರು ಕರ್ನಾಟಕದ ಏಕೀಕರಣದ ಪರವಾಗಿದ್ದರು. ಹಳೇ ಮೈಸೂರು ಕಡೆಯಿಂದ ಆ ದಿನಗಳಲ್ಲಿ ವಿ.ವೆಂಕಟಪ್ಪನವರು, ಎಚ್.ಕೆ.ವೀರಣ್ಣಗೌಡರು, ಸಾಹುಕಾರ್ ಚನ್ನಯ್ಯ, ಹುಚ್ಚಮಾಸ್ತಿಗೌಡ, ನಾಗಯ್ಯರೆಡ್ಡಿ, ಕೆ.ವಿ.ಶಂಕರಗೌಡ, ಡಿ.ದೇವರಾಜ ಅರಸು ಮೊದಲಾದವರು ಮೈಸೂರು ರಾಜ್ಯದ ಪರವಾದ ವಾದಿಗಳಾಗಿದ್ದರು. ಬೆನಗಲ್

ರಾಮರಾವ್, ಡೆಪ್ಯೂಟಿ ಚನ್ನಬಸಪ್ಪ, ಮುದವೀಡು ಕೃಷ್ಣರಾವ್, ಹುಯಿಲಗೋಳ ನಾರಾಯಣರಾವ್, ಬಿ.ಶಿವಮೂರ್ತಿಶಾಸ್ತ್ರಿಗಳು, ಬಿ.ಎಂ.ಶ್ರೀ ಮುಂತಾದವರು ಬಹಳ ಹಿಂದೆಯೇ ಕರ್ನಾಟಕದ ಏಕೀಕರಣದ ಅವಶ್ಯಕತೆಯ ಬಗೆಗೆ ಪ್ರಚಾರ ಮಾಡಿದ್ದರು. ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ಸಿನ ರಾಷ್ಟ್ರಕೂಟದಲ್ಲಿ ಕರ್ನಾಟಕ ಏಕೀಕರಣದ ಪರವಾದ ನಿರ್ಣಯವನ್ನು ಸಹ ಕೈಗೊಳ್ಳಲಾಯಿತು. ೧೯೫೬ರವರೆಗೆ ನಡೆವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರುಗಳು ತಮ್ಮ ಅಧ್ಯಕ್ಷೀಯ ಭಾಷಣಗಳಲ್ಲಿ ಕರ್ನಾಟಕ ಏಕೀಕರಣದ ಅಗತ್ಯವನ್ನು ಪ್ರಸ್ತಾಪಿಸುತ್ತಿದ್ದರು. ಗೌಡರು, ಕೆಂಗಲ್ ಹನುಂತಯ್ಯನವರು, ಡಾ.ಸಿ.ಬಂದೀಗೌಡರು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಏಕೀಕರಣ ಕುರಿತು ಮಾತನಾಡುತ್ತಿದ್ದರು. ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯ, ಟಿ.ಮಾದಯ್ಯಗೌಡ, ರಾಮಕೃಷ್ಣ ಹೆಗಡೆ, ಆರ್.ಅನಂತರಾಮನ್, ಅರಗಂಡೊಣಿ,ದೊಡ್ಡನಗೌಡ, ರಂಗನಾಥ ದಿವಾಕರ, ಆರ್.ಎಸ್.ಆರಾಧ್ಯ, ಎನ್.ಕೆ.ಉಪಾಧ್ಯಾಯ, ಉರವಕೊಂಡ ಜಗದ್ಗುರು, ಎಸ್.ಆರ್.ಕಂಠಿ, ಕಡಪಾ ರಾಘವೇಂದ್ರರಾವ್, ಡಿ.ಪಿ.ಕರಮರ್‌ಕರ್, ಡಿ.ಎಸ್.ಕಕ್ಕಿಲಾಯ, ಬಿ.ವಿ.ಕಕ್ಕಿಲಾಯ, ಕಾರ್ನಾಡು ಸದಾಶಿವರಾವ್, ಗಂಗಾಧರರಾವ್ ದೇಶಪಾಂಡೆ, ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ, ಗಾದಿಲಿಂಗನಗೌಡ, ಗುದ್ಲೆಪ್ಪಹಳ್ಳಿಕೇರಿ, ಎಂ.ಎಸ್.ಗುರುಪಾದಸ್ವಾಮಿ, ಚನ್ನಬಸಪ್ಪ ಅಂಬಲಿ, ಚನ್ನಪ್ಪ ವಾಲಿ, ಚನ್ನಬಸವ ಪಟ್ಟದ್ದೇವರು, ಚಿನ್ಮಯಸ್ವಾಮಿ ಓಂಕಾರಮಠ, ರಾ.ಹ.ದೇಶಪಾಂಡೆ, ಎಸ್.ಸಿ.ನಂದೀಮಠ, ಡಾ.ಬಿ.ಆರ್.ನಾಗನಗೌಡೆ, ಕೆ.ಎಫ್.ಪಾಟೀಲ, ಪ್ರಭುರಾಮ್ ಕಂಬಳಿವಾಲೆ, ಸಿದ್ಧವನಹಳ್ಳಿ ಕೃಷ್ಣಶರ್ಮ, ಮಂಗಳವೇಢೆ ಶ್ರೀನಿವಾಸರಾವ್, ಎಸ್.ಎಸ್.ಮಳೀಮಠ, ಮಹದೇವಪ್ಪ ಮುರಗೋಡು, ಮುದವೀಡು ಕೃಷ್ಣರಾವ್, ರಂಜಾನ್ ಸಾಬ್, ಸಿ.ಬಿ.ಮೊನ್ನಯ್ಯ, ಶಾಂತವೇರಿ ಗೋಪಾಲಗೌಡ, ಶ್ರೀನಿವಾಸರಾವ್ ಕೌಜಲಗಿ, ಸ್ವಾಮಿ ರಮಾನಂದ ತೀರ್ಥ, ಸಿದ್ಧಪ್ಪ ಹೊಸಮನಿ, ರಾವ್‌ಬಹದ್ದೂರ್ ಸಿದ್ಧಪ್ಪ ಕಂಬಳಿ, ಟಿ.ಸುಬ್ರಮಣ್ಯಂ, ಎನ್.ಎಸ್.ಹರ್ಡೀಕರ್, ಮೊದಲಾದವರ ಪಾತ್ರ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಗಣನೀಯವಾಗಿತ್ತು.

ದೇವುಡು ನರಸಿಂಹಶಾಸ್ತ್ರಿ, ಬಿ.ಶಿವಮೂರ್ತಿಶಾಸ್ತ್ರಿ, ನಿಜಲಿಂಗಪ್ಪ, ಎಸ್.ಕೆ.ಕರೀಂಖಾನ್, ಎಂ.ಜಿ.ವೆಂಕಟೇಶಯ್ಯ, ಅಂದಾನಪ್ಪ ದೊಡ್ಡ ಮೇಟಿ, ಅದರಗುಂಚಿ ಶಂಕರಗೌಡ ಪಾಟೀಲರು, ಹಾರನಹಳ್ಳಿ ರಾಮಸ್ವಾಮಿ, ಕೋ.ಚನ್ನಬಸಪ್ಪ, ಜಂತಕಲ್ಲು ಗಾದಿ ಲಿಂಗಪ್ಪ, ಅಲ್ಲಂಕರಿಬಸಪ್ಪ ಮುಂತಾದವರು ಏಕೀಕರಣದ ಪರವಾಗಿ ವಿವಿಧೆಡೆ ಪ್ರವಾಸ ಮಾಡಿ ಪ್ರಚಾರ ಮಾಡಿದರು. ವಿ.ವೆಂಕಟಪ್ಪ, ಎಚ್.ಕೆ.ವೀರಣ್ಣಗೌಡ, ಸಾಹುಕಾರ್ ಚನ್ನಯ್ಯ, ನಾಗಯ್ಯ ರೆಡ್ಡಿ, ಕೆ.ವಿ.ಶಂಕರೇಗೌಡ, ಡಿ.ದೇವರಾಜ ಅರಸು, ಹಾಸನದ ಲಕ್ಕಪ್ಪಗೌಡ,

ಮಂಡ್ಯದ ಪಿ.ಎನ್.ಜವರಪ್ಪಗೌಡ ಇವರೆಲ್ಲಾ ಪ್ರವಾಸ ಮಾಡಿ ಸಭೆ ಸಮಾರಂಭಗಳಲ್ಲಿ ಮೈಸೂರು ರಾಜ್ಯದ ಪರ ಪ್ರಚಾರ ಮಾಡಿದರು. ಕರ್ನಾಟಕ ಏಕೀಕರಣದಿಂದ ಏನೆಲ್ಲಾ ಸಮಸ್ಯೆಗಳು ಉಂಟಾಗುತ್ತವೆ ಎಂದು ತಮ್ಮ ಭಾಷಣಗಳಲ್ಲಿ ತಿಳಿಸಿದರು.

ಪ್ರೊ.ಬಿ.ಎಂ.ಶ್ರೀಯವರು ಗೌಡರಿಗೆ ಚಿರಪರಿಚಿತರು. ಬಿ.ಎಂ.ಶ್ರೀಯವರು ವಯಸ್ಕರ ಶಿಕ್ಷಣ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಪ್ರಾಧ್ಯಾಪಕರು ಮತ್ತು ಕುಲಸಚಿವರೂ ಆಗಿದ್ದವರು. ಬಿ.ಎಂ.ಶ್ರೀಯವರು ಕನ್ನಡ ನಾಡಿನ ಏಕೀಕರಣ ಬಗೆಗೆ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವಲ್ಲಿ ಬಹುವಾಗಿ ಶ್ರಮಿಸಿದವರು. ಒಂದು ಭಾಷೆಯನ್ನಾಡುವವರು, ಒಂದು ಸಂಸ್ಕೃತಿಯ ಪರಂಪರೆಯನ್ನುಳ್ಳವರು ಒಂದುಗೂಡದೆ ಕನ್ನಡ ಜನಪದದ ಮುನ್ನಡೆ ಸಾಧ್ಯವಿಲ್ಲ ಎಂದು ಮನಗಂಡಿದ್ದ ಅವರು ಕನ್ನಡ ನಾಡಿನ ದಕ್ಷಿಣೋತ್ತರಗಳನ್ನು ಒಂದಾಗಿ ಹೊಂದಿಸುವ ಯತ್ನದಲ್ಲಿ ಮುಂದಾಳಾದರು. ವಿವಿಧ ಭಾಗಗಳು ರಾಜಕೀಯವಾಗಿ ಒಂದು ಆಡಳಿತಕ್ಕೆ ಒಳಪಡುವ ಮೊದಲು ಅದಕ್ಕೆ ಅಗತ್ಯವಾದ ಮೊದಲ ಸಿದ್ಧತೆಯಾಗಿ ಮಾನಸಿಕವಾಗಿ ಒಂದಾಗುವಂತೆ ಸಂಪರ್ಕಗಳನ್ನು ಏರ್ಪಡಿಸಿದರು. ಅನ್ಯೋನ್ಯವಾಗಿ ಬಳಕೆ ಬೆಳೆಯುವಂತೆ ಮಾಡಿದರು. ತುಂಗಭದ್ರೆಯ ಆಚೆ ಈಚೆಗಳನ್ನು ಜೋಡಿಸುವ ಜೀವಂತ ಸೇತುವೆಗಳಾಗೋಣ ಎಂದು ಅವರು ಹೇಳುತ್ತಿದ್ದರು. ಅಂಥ ಒಂದು ಜೀವಂತ ಸೇತುವೆ ಅವರಾಗಿದ್ದರು. ಬರೀ ಕರ್ನಾಟಕದ ಉತ್ತರ ದಕ್ಷಿಣಗಳನ್ನು ಹೊಂದಿಸುವ ಸೇತುವೆ ಅವರಾಗಿರಲಿಲ್ಲ. ಸಾಂಸ್ಕೃತಿಕವಾಗಿ ಪೂರ್ವ ಪಶ್ಚಿಮಗಳನ್ನು ಹೊಂದಿಸುವ, ಒಂದಾಗಿಸುವ, ಒಂದು ಜೀವಂತ ಸೇತುವೆ, ಒಂದು ಶ್ರೀಮಂತ ಸಮನ್ವಯ ಅವರಾಗಿದ್ದರು. ಅವರ ೫೦ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ "ಸಂಭಾವನೆ" ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದಾಗ ಕರ್ನಾಟಕ ಏಕೀಕರಣದ ವಿಚಾರವಾಗಿ ಸಮರ್ಥವಾಗಿ ಮಾತನಾಡಿದ್ದರು. ಗೌಡರು ಬಿ.ಎಂ.ಶ್ರೀಯವರ "ಸಂಭಾವನೆ" ಗ್ರಂಥವನ್ನು ಸಮಗ್ರವಾಗಿ ಓದಿದ್ದರು.

ಒಂದು ಸಲ ಲೋಕಸಭೆಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಬಗೆಗೆ ಗೆಳೆಯ ನಿಜಲಿಂಗಪ್ಪನವರು ಸುಮಾರು ಎರಡು ಗಂಟೆಗಳ ಕಾಲ ಒಂದೇ ಸಮ ಮಾತನಾಡಿದರು. ಆಗ ಜಿ.ವಿ.ಮಾವಳಂಕರ್ ಲೋಕಸಭೆಯ ಸ್ಪೀಕರ್ ಆಗಿದ್ದರು. ನಂತರ ಅನಂತ ಶಯನಂ ಅಯ್ಯಾಂಗಾರ್ ಸ್ಪೀಕರ್ ಆದರು. ಎಂ.ಎ ಅಯ್ಯಾಂಗಾರ್, ಸರ್ದಾರ್ ಹುಕುಂಸಿಂಗ್ ಡೆಪ್ಯೂಟಿ ಸ್ಪೀಕರ್‌ಗಳಾಗಿದ್ದರು. ಆಗ ಒಬ್ಬ ಸದಸ್ಯರಿಗೆ ೧೫ ನಿಮಿಷಗಳ ಕಾಲ ಮಾತನಾಡುವ ಅವಕಾಶ ಮಾತ್ರ ದೊರಕುತ್ತಿತ್ತು. ಹಾಸನ–

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಿದ್ದನಂಜಪ್ಪನವರು; ಮೈಸೂರು ಲೋಕಸಭಾ ಕ್ಷೇತ್ರದಿಂದ ಗುರುಪಾದಸ್ವಾಮಿಯವರ ಜೊತೆಗೆ ಆಯ್ಕೆಯಾಗಿದ್ದ ಎನ್.ರಾಚಯ್ಯನವರು, ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕೆ.ಜಿ.ಒಡೆಯರ್‌ರವರು, ತುಮಕೂರು ಲೋಕಸಭಾ ಕ್ಷೇತ್ರದ ಸಿ.ಆರ್.ಬಸಪ್ಪನವರು, ಎಂ.ವಿ.ಕೃಷ್ಣಪ್ಪನವರೊಂದಿಗೆ ಕೋಲಾರ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದ ದೊಡ್ಡ ತಿಮ್ಮಯ್ಯನವರು, ಮಂಡ್ಯ ಲೋಕಸಭಾ ಕ್ಷೇತ್ರದ ಎನ್.ಕೆ.ಶಿವನಂಜಪ್ಪನವರು ಮತ್ತು ಮಾದಯ್ಯಗೌಡರು ಇವರೆಲ್ಲಾ ತಮಗೆ ದೊರಕಬೇಕಾಗಿದ್ದ ಸಮಯವನ್ನು ಬಿಟ್ಟುಕೊಟ್ಟು ನಿಜಲಿಂಗಪ್ಪನವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರು. ಅದಕ್ಕೆ ಲೋಕಸಭೆ ಸ್ಪೀಕರ್ ಜಿ.ವಿ.ಮಾವಳಂಕರ್‌ರವರು ಏನೂ ತಕರಾರು ಮಾಡದೆ ತಕ್ಷಣ ಒಪ್ಪಿಗೆ ಕೊಟ್ಟರು. ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಮತ್ತು ಗೃಹಮಂತ್ರಿ ವಲ್ಲಭಭಾಯಿ ಪಟೇಲ್‌ರು, ನಿಜಲಿಂಗಪ್ಪನವರ ಮಾತುಗಳನ್ನು ಎಲ್ಲಿಗೂ ಹೋಗದೆ ಕುಳಿತುಕೊಂಡು ಗಮನವಿಟ್ಟು ಆಲಿಸಿದರು. ಆಗ ನೆಹರೂರವರಿಗೆ ಭಾಷಾವಾರು ಪ್ರಾಂತ್ಯಗಳು ಮತ್ತು ಕರ್ನಾಟಕ ಏಕೀಕರಣದ ವಿಷಯಗಳ ಬಗೆಗೆ ಮಾತನಾಡಿದರೆ ಇಷ್ಟವಾಗುತ್ತಿರಲಿಲ್ಲ.

ಅದು ಲೋಕಸಭೆಯ ಅಧಿವೇಶನದ ಸಮಯ. ನಿಜಲಿಂಗಪ್ಪನವರು, ಗೌಡರು ಕರ್ನಾಟಕದ ಇತರ ಕೆಲವು ಲೋಕಸಭೆ ಸದಸ್ಯರು ನಿಂತು ರಾಜ್ಯದ ಸಮಸ್ಯೆಗಳ ಬಗೆಗೆ ಚರ್ಚಿಸುತ್ತಿದ್ದರು. ಇವರನ್ನು ನೋಡಿದ ನೆಹರೂರವರು ತುಸು ವೇಗದಿಂದ ಹತ್ತಿರ ಬಂದು, ನಿಜಲಿಂಗಪ್ಪನವರನ್ನು ಕುರಿತು "ಏನು ನಿಜಲಿಂಗಪ್ಪ? ನೀನು ಯಾವಾಗಲೂ ಕರ್ನಾಟಕ ಕರ್ನಾಟಕ ಎಂದು ರಾಜ್ಯದ ಏಕೀಕರಣಕ್ಕೆ ಮಾತನಾಡುತ್ತಿರುತ್ತೀಯಲ್ಲಾ, ಬೇರೆ ಪ್ರಾಂತ್ಯದವರು ಸಹ ಇದೇ ರೀತಿ ಬೇಡಿಕೆ ಇಟ್ಟರೆ ಏನುಮಾಡುವುದು?, ಹೊಸ ಹೊಸ ರಾಜ್ಯಗಳು ಸ್ಥಾಪನೆಯಾದರೆ ಆಡಳಿತ ವೆಚ್ಚಕ್ಕೆ ಹಣ ಹೊಂದಿಸುವುದು ಹೇಗೆ?" ಎಂದು ಹೇಳಿ ಸಿಟ್ಟಿನಿಂದ ನಿಜಲಿಂಗಪ್ಪನವರ ಎರಡೂ ಭುಜಗಳನ್ನು ಬಲವಾಗಿ ಹಿಡಿದು ಅಲುಗಾಡಿಸಿದರು. ನಿಜಲಿಂಗಪ್ಪನವರು ಅಷ್ಟೇ ಭದ್ರವಾಗಿ ಕಾಲೂರಿ ನಿಂತಿದ್ದರಿಂದ ಬೀಳಲಿಲ್ಲ.

ಗೌಡರು ಗ್ರಾಮೀಣ ಪ್ರದೇಶಗಳಿಗೆ ಆಗಿಂದ್ದಾಗ್ಗೆ ಹೋಗುತ್ತಿದ್ದರು. ಅನೇಕರನ್ನು ಹೆಸರು ಹಿಡಿದು ಕರೆಯುವ ನಿಕಟತೆ ಅವರಿಗೆ ಇತ್ತು. ಜನರ ಜೊತೆಗೆ ಬೆರೆತು ಕಷ್ಟಸುಖಗಳನ್ನು ಅರಿಯುತ್ತಿದ್ದರು. ಸರ್ಕಾರದ ಸೌಲಭ್ಯಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಅರ್ಹರಿಗೆ ದೊರಕಿಸಿಕೊಡಲು ತಮ್ಮ ಸಮಯವನ್ನು ಬಳಸುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ, ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ, ಶಾಸಕರಾಗಿದ್ದಾಗ,

ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ ಮತ್ತು ಇನ್ನಿತರ ಅಧಿಕಾರವಾಧಿಗಳಲ್ಲಿ ಹಳ್ಳಿಗಳಿಗೆ ಹೋದಾಗ ಯಾವ ಮನೆ ಯಾವ ಜಗುಲಿಗೆ ಹೋದಾಗ ಹಳ್ಳಿ ಜನರು ಕೊಟ್ಟ ಆಹಾರ, ಪಾನೀಯ ಸೇವಿಸುತ್ತಿದ್ದರು. ಚುನಾವಣೆ ಸಮಯದಲ್ಲಿ ಎಲ್ಲಾ ಹಳ್ಳಿಗಳ ಜನರನ್ನು ಭೇಟಿಮಾಡಲು ಸಮಯ ಸಾಕಾಗುತ್ತಿರಲಿಲ್ಲ. ತಾವು ಭಾಗವಹಿಸುತ್ತಿದ್ದ ಗ್ರಾಮೀಣ ಕಾರ್ಯಕ್ರಮಗಳಲ್ಲಿ ನನಗೆ ಸಮಯವಿಲ್ಲ; ಬೇರೆ ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ; ಬೇಗನೆ ಕಾರ್ಯಕ್ರಮ ಮುಗಿಸಿ ಎಂದು ಒತ್ತಡ ಉಂಟುಮಾಡಿ ಸಮಾರಂಭದ ಆಯೋಜಕರಿಗೆ ಎಂದೂ ಕಿರಿಕಿರಿ ಉಂಟುಮಾಡುತ್ತಿರಲಿಲ್ಲ. ಕೆಲವೊಮ್ಮೆ ಗ್ರಾಮೀಣ ಕಾರ್ಯಕ್ರಮಗಳು ಮುಗಿಯುವುದು ತಡವಾಗುತ್ತಿತ್ತು. ಯಾರ ಮನೆಯವರಿಗೂ ಕಿರಿಕಿರಿ ಉಂಟುಮಾಡದೆ ಯಾವುವೇ ರೀತಿಯ ತೊಂದರೆ ಕೊಡದೆ ಪ್ರಾಥಮಿಕ ಶಾಲೆಗಳು ಅಥವಾ ಸರ್ಕಾರಿ ಸಂಸ್ಥೆಗಳ ಕಟ್ಟಡಗಳಲ್ಲಿ ಕಾರ್ಯಕರ್ತರೊಡನೆ ಮಲಗಿಬಿಡುತ್ತಿದ್ದರು. ಹಳೆ ಕಂಬಳಿ, ಹಳೆ ಚಾಪೆ ಇದ್ದರೆ ಸಾಕಾಗಿಬಿಡುತ್ತಿತ್ತು. ಸತತ ಓಡಾಟದಿಂದ ಆಯಾಸಗೊಂಡು ಬಳಲಿರುತ್ತಿದ್ದ ಅವರು ಹಾಗೆಯೇ ಗಾಢವಾದ ನಿದ್ರೆಗೆ ಹೋಗಿಬಿಡುತ್ತಿದ್ದರು. ಕೆಲವೊಮ್ಮೆ ಅನಿರೀಕ್ಷಿತ ಸನ್ನಿವೇಶಗಳಲ್ಲಿ ಹಳ್ಳಿಗಾಡಿನ ಜನರೊಂದಿಗೆ ಕಾರ್ಯಕರ್ತರೊಡನೆ ಹೋಗುತ್ತಿದ್ದ ಗೌಡರು ಹೊಲ ಗದ್ದೆ ತೋಟಗಳಲ್ಲಿ ಸೊಪ್ಪು ಸೆದೆ ತಿಂದು ಸರಳವಾದ ಹಾಸಿಗೆ ಹೊದಿಕೆಗಳೊಂದಿಗೆ ಆರಾಮವಾಗಿರುತ್ತಿದ್ದರು. ಅವರು ಎಂದೂ ಹೀಗೇ ಇರಬೇಕು, ಹಾಗೇ ಇರಬೇಕೆಂದು ಸವಲತ್ತುಗಳನ್ನು ಬಯಸಿದವರಲ್ಲ. ಇಂತಹ ಚಟುವಟಿಕೆಗಳಿಂದ ಗ್ರಾಮೀಣ ಜನರ ಆಶೋತ್ತರಗಳನ್ನು ಚನ್ನಾಗಿ ತಿಳಿದುಕೊಂಡು ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿದ್ದರು. ಆಗ ಸರ್ಕಾರದ ಬಳಿ ಹೆಚ್ಚು ದುಡ್ಡು ಇರುತ್ತಿರಲಿಲ್ಲ. ಪಾರ್ಲಿಮೆಂಟ್ ಸದಸ್ಯರಾಗಿ, ಶಾಸಕರಾಗಿ ಇವರಿಗೆ ಬರುತ್ತಿದ್ದ ಸಾರಿಗೆ ಭತ್ಯೆಗಳು, ಸಂಭಾವನೆಗಳು, ತಿಂಗಳ ಸಂಬಳ, ಈಗಿನಂತೆ ಹೆಚ್ಚಾಗಿರಲಿಲ್ಲ. ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ ತಿಂಗಳಿಗೆ ನಾಲ್ಕು ನೂರು ರೂಪಾಯಿಗಳನ್ನು ಕೊಡುತ್ತಿದ್ದರು. ಅಧಿವೇಶನ ನಡೆಯುತ್ತಿದ್ದಾಗ ಇಪ್ಪತ್ತು ರೂಪಾಯಿ ದಿನಭತ್ಯೆ ಸಿಗುತ್ತಿತ್ತು. ಸಂಸಾರ ದೊಡ್ಡದು. ವಂಶದ ಬಂಧು-ಬಾಂಧವರ ಜನಸಂಖ್ಯೆಯು ಲಾರಿಗಳಲ್ಲಿ ತುಂಬುವಷ್ಟು ಇರುತ್ತಿತ್ತು. ವಂಶಸ್ಥರ ಮಕ್ಕಳು ಮರಿಗಳ ವಿದ್ಯಾಭ್ಯಾಸಗಳ ಖರ್ಚುಗಳು, ಕಾಯಿಲೆಗಳು ಬಂದಾಗ ವೈದ್ಯರ ಔಷಧಿ ಖರ್ಚು ವೆಚ್ಚಗಳು, ಮದುವೆ ಮುಂಜಿಗಳ ಖರ್ಚುಗಳು ಬಹಳಷ್ಟು ಇರುತ್ತಿದ್ದವು. ಕ್ಷೇತ್ರದ ಮತದಾರ ಜನರ ಸಂಖ್ಯೆಯೂ ಹೆಚ್ಚು. ಹೋದ ಕಡೆಯಲ್ಲೆಲ್ಲಾ ಕೆಲವು ಜನರು ಗೌಡರಿಂದ ಹಣಕಾಸಿನ ನೆರವನ್ನು ಬಡಬಲ್ಲಿದರೆನ್ನದೇ ನಿರೀಕ್ಷೆ ಮಾಡುತ್ತಿದ್ದರು. ಜೇಬಿನಲ್ಲಿದ್ದ ಹಣವು ನೀರಿನಂತೆ ಖರ್ಚಾಗಿ ಬಿಡುತ್ತಿತ್ತು. ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ ಏನೂ ಹಣ ಉಳಿಸುವುದಕ್ಕೆ ಆಗುತ್ತಿರಲಿಲ್ಲ.

ಎಷ್ಟೋ ಸಾರಿ ಹಣಕಾಸಿನ ನೆರವು ಕೇಳಿದವರಿಗೆ ಹಣಕೊಡಲಾಗದೇ ಪೇಚಾಡಿಬಿಡುತ್ತಿದ್ದರು. ಕೆಲವೊಮ್ಮೆ ಬಂಧು-ಬಾಂಧವರಿಂದ ನಿಷ್ಠುರಕ್ಕೊಳಗಾಗಿ ಮನಸ್ಸಿನಲ್ಲಿಯೇ ಸಂಕಟ ಪಡುತ್ತಿದ್ದರು. ಆದರೆ ತಮ್ಮ ಮನಸ್ಸಿನಲ್ಲಿ ಉಂಟಾಗುತ್ತಿದ್ದ ಪೇಚಾಟವನ್ನು ಜನರಿಗೆ ತೋರ್ಪಡಿಸುತ್ತಿರಲಿಲ್ಲ.

ಗೌಡರು ಪಾರ್ಲಿಮೆಂಟ್ ಸದಸ್ಯರಾಗಿ ದೆಹಲಿಯಲ್ಲಿದ್ದಾಗ, ಅವರ ಕುಟುಂಬದ ಯೋಗಕ್ಷೇಮದ ಕಡೆ ಮಾಗಡಿಯ ಸಿ.ಆರ್.ರಂಗೇಗೌಡರು ಆಗಿಂದ್ದಾಗ್ಗೆ ಹೋಗಿ ವಿಚಾರಿಸಿ ಏನಾದರೂ ಅಗತ್ಯಗಳಿದ್ದರೆ ಪೂರೈಸುತ್ತಿದ್ದರು. ಡಿಗ್ರಿ ಮುಗಿಯುತ್ತಿದ್ದಂತೆಯೇ ಗೌಡರ ಸಂಪರ್ಕಕ್ಕೆ ರಂಗೇಗೌಡರು ಬಂದರು. ಗೌಡರ ಮಾರ್ಗದರ್ಶನದಲ್ಲಿ ರಂಗೇಗೌಡರು ಜೀವನ ರೂಪಿಸಿಕೊಂಡರು. ಗೌಡರ ಸಲಹೆಯಂತೆ, ಸುಂದರರಾಯರ ಕೃಪಾ ಹೋಮಿಯೋಪಥಿಸ್ಟರಲ್ಲಿ ಅಭ್ಯಾಸ ಮಾಡಿ 'ಹೋಮಿಯೋಪತಿ' ಔಷಧ ಕೊಡುವ ವೈದ್ಯರಾದರು. ಕಲೆ, ಸಂಗೀತ, ಜಾನಪದದಲ್ಲಿ ಗೌಡರಂತೆ ರಂಗೇಗೌಡರಿಗೂ ಅಭಿರುಚಿ ಇತ್ತು.

ರಂಗೇಗೌಡರು ಸುಸಂಸ್ಕೃತ ಮನೆತನದವರಾಗಿದ್ದು, ಜೀವನ ಪಥದಲ್ಲಿ ನಡೆಯಲು ಅವರಿಗೆ ಸರಿಯಾದ ಮಾರ್ಗದರ್ಶನ ಬೇಕಾಗಿತ್ತು. ಗೌಡರ ಸಂಪರ್ಕಕ್ಕೆ ಬಂದ ಮೇಲೆ ಆವರಿಗೆ ಆ ಮಾರ್ಗದರ್ಶನ ದೊರೆಯಿತು. ಏನಾದರೂ ಸಾಧಿಸಬೇಕೆಂಬ ಹಂಬಲ ಹೊತ್ತಿದ್ದ ರಂಗೇಗೌಡರಿಗೆ ಗೌಡರ ಮಾರ್ಗದರ್ಶನದಿಂದ ದೊಡ್ಡ ನಿಧಿಯೇ ದೊರಕಿದಂತಾಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಹಾಯಕವಾದುದಲ್ಲದೆ, ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ನೆರವಾಯಿತು. ಗೌಡರ ಸಾಕು ಮಗಳು ಪುಟ್ಟಮ್ಮನ ಜೀವನ ಅತಂತ್ರವಾಗಲು ಬಿಡದೆ, ತಮ್ಮ ಭಾವಮೈದುನ ಮಹಾರಾಣಿ ಕಾಲೇಜಿನ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಸೀತಾರಾಮ್ ಜೊತೆ ಮದುವೆ ಮಾಡಿಸಿದರು. ಗೌಡರು ದೆಹಲಿಯಲ್ಲಿರುವಾಗ ಗೌಡರ ಚಿಕ್ಕಮಕ್ಕಳ ವಿದ್ಯಾಭ್ಯಾಸ, ಆರೋಗ್ಯದ ಕಡೆ ನಿಗಾವಹಿಸಿ, ಕಾಲಕಾಲಕ್ಕೆ ಗೌಡರಿಗೆ ಮಾಹಿತಿ ಒದಗಿಸುತ್ತಿದ್ದರು. ಮುಂದೆ ಮಾಗಡಿ ತಾಲ್ಲೂಕಿನ ವಿಧಾನಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಯಾಗಿ ಜಯಶೀಲರಾದರು. ಗೌಡರ ಒಡನಾಟ, ರಾಜಕೀಯದ ಅನುಭವದಿಂದ ಪ್ರಭಾವಿತರಾಗಿ, ಮಾಗಡಿ ತಾಲ್ಲೂಕಿನ ಜನರ ಬೆಂಬಲ ಪಡೆದರು. ರಂಗೇಗೌಡರ ಒಬ್ಬನೇ ಮಗನಿಗೆ 'ಗುರುದೇವ'ನೆಂದು ಹೆಸರಿಟ್ಟವರು ಗೌಡರು. ಶ್ರೀರಾಮಕೃಷ್ಣ ಪರಮ ಹಂಸರ ಪ್ರಭಾವಕ್ಕೆ ಒಳಗಾಗಿದ್ದ ಗೌಡರು ತಮ್ಮ ಬಳಿ ಬಂದವರನ್ನು ಸಾತ್ವಿಕತೆಗೆ ತಿರುಗಿಸುತ್ತಿದ್ದರು. ಗೌಡರಲ್ಲಿದ್ದ ಸಾತ್ವಿಕ ಗುಣದಿಂದಾಗಿ ಅದೆಲ್ಲವೂ ನಿರಾಯಾಸವಾಗಿ ನಡೆದು ಹೋಗುತ್ತಿತ್ತು. ಅವರಲ್ಲಿನ

ಸಾತ್ವಿಕತೆ ಅವರ ಬಳಿ ಬಂದವರನ್ನೆಲ್ಲ ಅಯಸ್ಕಾಂತದಂತೆ ತಮ್ಮತ್ತ ಸೆಳೆದುಕೊಳ್ಳುತ್ತಿತ್ತು. ಅವರೊಬ್ಬ ನಿಜವಾದ ಅರ್ಥದ ಅಜಾತ ಶತ್ರುವೆನಿಸಿದ್ದರು.

ಗೌಡರು ಸುಮಾರು ೧೫-೨೦ ವರ್ಷಗಳ ಕಾಲ ಜನ ಪ್ರತಿನಿಧಿಯಾಗಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸಮಾಡಿ ಎಲ್ಲರ ಮೆಚ್ಚುಗೆ ಪಡೆದಿದ್ದರು. ಸಚಿವರಾಗಬೇಕು ಎಂದು ಅವರು ಆಸೆ ಇಟ್ಟುಕೊಂಡವರಲ್ಲ. ಸ್ಥಿತಿವಂತ ವ್ಯವಸಾಯಗಾರರ ಮನೆಯ ಹಿನ್ನೆಲೆ ಅವರದು. ಹಿಂದುಳಿದ ಜನಾಂಗದಿಂದ ಬಂದವರಾದರೂ ಉನ್ನತ ಶಿಕ್ಷಣ ಪಡೆದರು. ಯಶಸ್ವೀ ವಕೀಲರಾದರು. ಅನೇಕ ಬಾರಿ ಜನಪ್ರತಿನಿಧಿಯಾಗಿ ಆಯ್ಕೆಯಾದ ಅದೃಷ್ಟವಂತರು. ಎಲ್ಲಿಯೂ ಹಿಂಬಾಗಿಲಿನಿಂದ ನುಸುಳುವ ಪ್ರಯತ್ನ ಮಾಡಲಿಲ್ಲ. ಎಲ್ಲವೂ ಅವರ ಅರ್ಹತೆಗೆ ದೊರೆತ ಫಲವೆಂದು ಹೇಳಬಹುದು. ಕೌಟುಂಬಿಕ ಹಿನ್ನೆಲೆ, ಉನ್ನತ ವಿದ್ಯಾಭ್ಯಾಸ, ಸ್ವಾತಂತ್ರ್ಯ ಹೋರಾಟ, ಸಾರ್ವಜನಿಕ ಸೇವೆ, ರಾಜಕೀಯ ಹಿರಿತನ ಇವುಗಳಲ್ಲೆಲ್ಲಾ ಹಿರಿತನವನ್ನು ಹೊಂದಿದ್ದು ಅವರು ಎಂದೋ ಸಚಿವರಾಗಬೇಕಿತ್ತು. ಗೌಡರಿಗಿಂತ ಅನೇಕ ವಿಷಯಗಳಲ್ಲಿ ಕಿರಿತನ ಹೊಂದಿದ್ದವರು ಸಚಿವರಾದರು, ಮುಖ್ಯಮಂತ್ರಿಗಳಾದರು, ಕೇಂದ್ರ ಮಂತ್ರಿಗಳಾದರು. ಆದರೆ ಗೌಡರು ಕೇಂದ್ರ ಸರ್ಕಾರದಲ್ಲಾಗಲೀ ಅಥವಾ ರಾಜ್ಯ ಸರ್ಕಾರದಲ್ಲಾಗಲೀ ಸಚಿವರಾಗಲು ಸಾಧ್ಯವಾಗಲಿಲ್ಲ. ಎಲ್ಲವೂ ಇದ್ದು ಸಚಿವ ಸ್ಥಾನ ಸಿಗಲಿಲ್ಲ. ಕ್ಷೇತ್ರದ ಜನತೆ, ರಾಜಕೀಯ ಸಹೋದ್ಯೋಗಿಗಳು ಮತ್ತು ಹಿತೈಷಿಗಳು "ನೀವು ಎಲ್ಲಾ ಅರ್ಹತೆಗಳನ್ನು ಹೊಂದಿದವರು; ಸಚಿವರಾಗಬೇಕು. ಸತತ ಪ್ರಯತ್ನ ಮಾಡಿ" ಎಂದು ಒತ್ತಾಯಿಸುತ್ತಿದ್ದರು. ಜನರ ಮಾತನ್ನು ಶಾಂತವಾಗಿ ಆಲಿಸಿ "ಎಲ್ಲವೂ ಶಿವೇಚ್ಛೆ" ಎಂದು ಪ್ರತಿಕ್ರಿಯಿಸುತ್ತಿದ್ದರು. ಮುಖ್ಯಮಂತ್ರಿಗಳಾದ ಕೆ.ಸಿ.ರೆಡ್ಡಿಯವರು, ಕೆಂಗಲ್ ಹನುಮಂತಯ್ಯನವರು, ಕಡಿದಾಳ್ ಮಂಜಪ್ಪನವರು, ಎಸ್.ಆರ್.ಕಂಠಿಯವರು, ಬಿ.ಡಿ.ಜತ್ತಿಯವರು, ನಿಜಲಿಂಗಪ್ಪನವರು ಇವರೆಲ್ಲರೂ ಗೌಡರಿಗೆ ಪರಮಾಪ್ತರಾಗಿದ್ದರು. ಕ್ಷೇತ್ರದ ಕೆಲಸ ಕಾರ್ಯಗಳಿಗೆ ಬಡಬಗ್ಗರಿಗೆ, ದೀನದಲಿತರಿಗೆ ಸರ್ಕಾರದ ಸೌಲಭ್ಯಗಳನ್ನು ಕೇಳಲು ಮತ್ತು ಕ್ಷೇತ್ರದ ಯುವಕರಿಗೆ ಸರ್ಕಾರದ ಕೈಗಾರಿಕೆಗಳಲ್ಲಿ ನೌಕರಿಗಳನ್ನು ದೊರಕಿಸಿಕೊಡಲು ಈ ಮೇಲೆ ತಿಳಿಸಿದ ಎಲ್ಲರೂ ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಅವರ ಬಳಿ ಹೋಗುತ್ತಿದ್ದರು. ಕ್ಷೇತ್ರದ ಕೆಲಸ ಕಾರ್ಯಗಳನ್ನು ಅವರಿಂದ ಮಾಡಿಸುತ್ತಿದ್ದರು. ತಮಗೆ ತಾವು ಮಂತ್ರಿಯಾಗದಿದ್ದರೂ, ಒಬ್ಬ ಮಂತ್ರಿಯಾಗಿ ಮಾಡಬಹುದಾದ ಎಲ್ಲ ಕೆಲಸಕಾರ್ಯಗಳನ್ನೂ ಮಾಡುತ್ತಿದ್ದ ಹೆಗ್ಗಳಿಕೆ ಅವರದು. ಗೌಡರನ್ನು ನೀರಾವರಿ ಅಥವಾ ಪಶು ಸಂಗೋಪನೆ ಅಥವಾ ಶಿಕ್ಷಣ ಸಚಿವರನ್ನಾಗಿ ಮಾಡಬೇಕೆಂಬ ಆಲೋಚನೆಯನ್ನು ನಿಜಲಿಂಗಪ್ಪನವರು ಮಾಡಿದ್ದರು. ಪತ್ರಿಕೆಗಳಲ್ಲಿಯೂ

ಸಂಭವನೀಯ ಸಚಿವರಾಗುವ ಹೆಸರುಗಳಲ್ಲಿ ಇವರ ಹೆಸರು ಸಹಾ ಪ್ರಕಟವಾಗುತ್ತಿತ್ತು. ಆಗ ಸಚಿವ ಪದವಿಗಳ ಸಂಖ್ಯೆ ಈಗಿನಂತೆ ಹೆಚ್ಚು ಇರುತ್ತಿರಲಿಲ್ಲ. ಶಾಸಕರಾಗಿ ಆಯ್ಕೆಯಾದವರಲ್ಲಿ ಬಹಳಷ್ಟು ನಾಯಕರು ಸಚಿವರಾಗಬೇಕೆಂದು ಕಾದು ಕುಳಿತು ಮುಖ್ಯಮಂತ್ರಿಗಳ ಮೇಲೆ ಬಹಳಷ್ಟು ಪ್ರಭಾವವನ್ನು ಬೀರುತ್ತಿದ್ದರು. ಅಷ್ಟೇ ಅಲ್ಲದೆ, ನಾನಾ ರೀತಿಯ ಒತ್ತಡಗಳನ್ನು ಹಾಕಿ ಮತ್ತು ನಯವಾದ ಬೆದರಿಕೆಗಳನ್ನು ಒಡ್ಡಿ ಸಚಿವರಾಗಿಬಿಡುತ್ತಿದ್ದರು. ಗೌಡರು ಮಾತ್ರ ಹೇಗೂ ನನ್ನ ಸ್ನೇಹಿತರೇ ಮುಖ್ಯಮಂತ್ರಿಗಳಾಗಿದ್ದಾರೆ. ಅವರಿಗೆ ನನ್ನ ರಾಜಕೀಯ ಹಿರಿತನ ಗೊತ್ತಿದೆ. ತಮ್ಮ ಕ್ಷೇತ್ರದ ಕೆಲಸಕಾರ್ಯಗಳ ಸಂಬಂಧವಾಗಿ ಭೇಟಿ ಮಾಡಿದಾಗ ನನ್ನ ಸೇವಾ ಹಿರಿತನ ಮತ್ತು ಅರ್ಹತೆಗಳು ಗುರುತಿಸಿ ಸಚಿವರನ್ನಾಗಿ ಮಾಡಿ ಎಂದು ಮುಖ್ಯಮಂತ್ರಿಯನ್ನು ಕೇಳುತ್ತಿದ್ದರು. ಹೆಚ್ಚು ಒತ್ತಡ ಹಾಕುತ್ತಿರಲಿಲ್ಲ. ಕಿರಿಕಿರಿ ಉಂಟುಮಾಡುತ್ತಿರಲಿಲ್ಲ. ತಮ್ಮ ಕ್ಷೇತ್ರದ ಕೆಲಸಕಾರ್ಯಗಳನ್ನು ಮಾಡಿಸಿಕೊಂಡು ಬಂದು ಬಿಡುತ್ತಿದ್ದರು. ಅವರಿಗೆ ಜನರ ಯೋಗಕ್ಷೇಮಗಳ ಕೆಲಸಕಾರ್ಯಗಳು ಮುಖ್ಯವಾಗಿದ್ದವು. ಸಚಿವ ಸ್ಥಾನ ಪಡೆದುಕೊಳ್ಳುವ ತಂತ್ರಗಳು ಅವರಿಗೆ ಗೊತ್ತಿರಲಿಲ್ಲ. ಅಧಿಕಾರಕ್ಕಾಗಿ ಕಾಡಲಿಲ್ಲ ಮತ್ತು ಬೇಡಲಿಲ್ಲ. ಸಚಿವರಾಗಲಿಲ್ಲ ಎಂದು ನಿರಾಶೆ ಪಡಲಿಲ್ಲ.

ಗೌಡರು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಸಂಪೂರ್ಣ ನಿಷ್ಠೆಯನ್ನು ಹೊಂದಿ. ಅದರಂತೆ ಸದಾ ಖಾದೀ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಿದ್ದರು. ಖಾದೀ ಷರ್ಟ್, ಖಾದೀ ಪಂಚೆ ಕಚ್ಚೆ ಹಾಕಿ ಉಡುತ್ತಿದ್ದರು. ಖಾದೀ ಟೋಪಿ ಅಥವಾ ಖಾದೀ ಪೇಟಾ ಧರಿಸುತ್ತಿದ್ದರು. ಮೈಸೂರು ಪ್ರಜಾ ಪ್ರತಿನಿಧಿಸಭೆ ಸದಸ್ಯರಾಗಿದ್ದ ಸಮಯದಲ್ಲಿ ಖಾದೀ ಪೇಟಾ ಹಾಕಿಕೊಳ್ಳುವ ಅಭ್ಯಾಸ ಉಂಟಾಯಿತು. ಪ್ಯಾಂಟ್, ಖಾದೀ ಕೋಟುಗಳನ್ನು ಕೂಡ ಅವರು ಧರಿಸುತ್ತಿದ್ದರು. ಟೈ ಕಟ್ಟುತ್ತಿರಲಿಲ್ಲ, ಕುಟೀರ ಕೈಗಾರಿಕೆಗಳಿಂದ ತಯಾರಿಸಿದ ಬೂಡ್ಸುಗಳನ್ನು ಧರಿಸುತ್ತಿದ್ದರು. ಅವರು ಮನೆಯಲ್ಲಿ ಚರಕವನ್ನು ಇಟ್ಟುಕೊಂಡಿದ್ದರು. ಸಮಯ ಸಿಕ್ಕಾಗ ಚರಕದಿಂದ ನೂಲನ್ನು ತೆಗೆಯುತ್ತಿದ್ದರು.

ಗೌಡರು ಎತ್ತರವಾಗಿದ್ದು, ಆರೋಗ್ಯ ಪೂರ್ಣಮೈಕಟ್ಟನ್ನು ಹೊಂದಿದ್ದರು. ಗೋಧಿ ಬಣ್ಣದವರಾಗಿದ್ದ ಅವರ ಎಡಗೆನ್ನೆಯ ಮೇಲೆ ಚಿಕ್ಕಾಸಗಲದ ಮಚ್ಚೆ ಇತ್ತು. ಅವರು ಮಗುವಾಗಿದ್ದಾಗ ಸಿಡುಬು ಬಂದು ಉಳಿದಿದ್ದ ಕಲೆಯದು. ತೀರ ಉದ್ದವಲ್ಲದ ಚೂಪು ಮೂಗು, ಹೊಳೆಯುವ ಕಣ್ಣುಗಳು, ಸಾವಿರ ಮಂದಿ ಮಧ್ಯೆ ಕುಳಿತಿದ್ದರೂ ಎದ್ದು ಕಾಣುವ ನಾಯಕತ್ವದ ವರ್ಚಸ್ಸು ಅವರದು. ಮಾತು ಕಡಿಮೆ ಎಂದರೂ ಸರಿಯೇ; ಅದು ಸಹಜ ವಿನಯವಂತಿಕೆಯ ಲಕ್ಷಣ ಮತ್ತು ಗಂಭೀರ ಪ್ರವೃತ್ತಿ. ಅವರು ಸಂಕೋಚ

ಸ್ವಭಾವದವರಾಗಿರಲಿಲ್ಲ. ಜನರೊಡನೆ ಮುಕ್ತವಾಗಿ ಬೆರೆಯುತ್ತಿದ್ದರು. ತಮ್ಮ ನಿರ್ಮಲ ಮುಗುಳು ನಗೆಯಿಂದಲೇ ಜನರನ್ನು ಗೌರವಿಸುತ್ತಿದ್ದರು. ಜನರು ಹೇಳುವುದನ್ನು ಸಮಾಧಾನದಿಂದ ಕೇಳಿಸಿಕೊಳ್ಳುತ್ತಿದ್ದರು. ವೃತ್ತಿಯಲ್ಲಿ ವಕೀಲರಾದರೂ ಜನರೊಡನೆ ವಾದಕ್ಕೆ ಪ್ರತಿವಾದ ಮಾಡುತ್ತಿರಲಿಲ್ಲ. ಜನರು ಕೇಳುತ್ತಿದ್ದ ಎಲ್ಲಾ ಕೆಲಸಕಾರ್ಯಗಳನ್ನು ಮಾಡಿಕೊಡಲಾಗದಿದ್ದರೂ ಜನರಿಗೆ ನಿರಾಶೆಯಾಗದಂತೆ ಮತ್ತು ಅಸಮಾಧಾನವಾಗದಂತೆ ನಡೆದುಕೊಳ್ಳುತ್ತಿದ್ದರು. "ಜನರಿಂದಲೇ ನಾನು" ಎಂಬ ಪ್ರಜ್ಞೆ ಮತ್ತು ಮನೋಭಾವನೆ ಅವರಲ್ಲಿ ಸದಾ ಜಾಗೃತವಾಗಿರುತ್ತಿತ್ತು.

ಶಾಸಕರಾಗುವುದು, ಪಾರ್ಲಿಮೆಂಟ್ ಸದಸ್ಯರಾಗುವುದು ಆಗಲೂ ಸುಲಭವಾದ ವಿಷಯವಾಗಿರಲಿಲ್ಲ. ಹಣವಿದ್ದೂ ಎಲ್ಲವೂ ಇದ್ದು ದೀರ್ಘಕಾಲ ಕಾದರೂ ತೀವ್ರ ಪೈಪೋಟಿಯ ಕಾರಣದಿಂದಾಗಿ ಅನೇಕರು ಶಾಸಕರಾಗಲಿಲ್ಲ, ಪಾರ್ಲಿಮೆಂಟ್ ಸದಸ್ಯರಾಗಲಿಲ್ಲ. ಹಾಗೆ ನೋಡಿದರೆ ಗೌಡರು ಈ ಅವಕಾಶಗಳನ್ನು ಪಡೆದ ಅದೃಷ್ಟವಂತರು. ದಾಂಪತ್ಯ ಜೀವನದಲ್ಲಿ ಇವರು ಪತ್ನಿಯರ ಅಗಲಿಕೆಯ ವಿಪತ್ತುಗಳನ್ನು ಎದುರಿಸಬೇಕಾಯಿತು. ಅದನ್ನು ವಿಧಿಯಾಟ ಎಂದು ಕರೆದರು. ಗೌಡರು ವಿಧಿನಿಯಮದಂತೆ ಬಂಧು-ಬಾಂಧವರ ಒತ್ತಾಯದಿಂದ ಮೂರು ಬಾರಿ ಮದುವೆಯಾಗಬೇಕಾಯಿತು. ಮೊದಲ ಇಬ್ಬರ ಪತ್ನಿಯರು ಸಾಂಕ್ರಾಮಿಕ ರೋಗಗಳಾದ ಪ್ಲೇಗು, ಮಲೇರಿಯಾದಂತಹ ರೋಗಗಳಿಗೆ ಬಲಿಯಾದರು. ಮೊದಲನೆಯ ಹೆಂಡತಿ ಸ್ವಂತ ಅಕ್ಕನ ಮಗಳು ಚನ್ನಮ್ಮ. ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಮನೆಯ ಹಿರಿಯರು ಚನ್ನಮ್ಮನೊಂದಿಗೆ ಗೌಡರ ಮದುವೆಮಾಡಿಸಿದ್ದರು. ಮದುವೆಯಾದ ಎರಡು ಮೂರು ವರ್ಷಗಳಲ್ಲಿ ಪ್ಲೇಗು ರೋಗದಿಂದ ಚನ್ನಮ್ಮ ತೀರಿಕೊಂಡರು. ವಕೀಲರಾಗಿದ್ದ ಗೌಡರು ಏಳೆಂಟು ವರ್ಷಗಳ ಕಾಲ ಮದುವೆಯಾಗಲಿಲ್ಲ. ಎರಡನೆಯ ಮದುವೆ ಮೈಸೂರಿನ ನಂಜಮ್ಮಣ್ಣಿಯವರೊಡನೆ ನಡೆಯಿತು. ಇವರು ಮದುವೆಯಾದ ಮೂರು ವರ್ಷಗಳಲ್ಲಿಯೇ ಪ್ಲೇಗ್ ರೋಗದಿಂದ ಯಾವ ಚಿಕಿತ್ಸೆಯೂ ಫಲಕಾರಿಯಾಗದೇ ಮರಣ ಹೊಂದಿದರು. ಮೂರನೆಯ ಹೆಂಡತಿ ಎಣ್ಣೆಹೊಳೆಕೊಪ್ಪಲಿನ ಶಾರದಮ್ಮಣ್ಣಿ. ಶಾರದಮ್ಮಣ್ಣಿಯವರ ಜೊತೆ ಅವರ ದಾಂಪತ್ಯ ದೀರ್ಘವಾದುದು. ಮೂರನೆಯ ಪತ್ನಿಯಾಗಿ ಬಂದ ಶಾರದಮ್ಮಣ್ಣಿ ಅವರು ತುಂಬು ಕುಟುಂಬದಿಂದ ಬಂದ ಹೆಣ್ಣು ಮಗಳು. ಸುಸಂಸ್ಕೃತ ಮನೆತನ ಅದಾಗಿತ್ತು. ಅಷ್ಟೇ ದೊಡ್ಡ ವ್ಯಕ್ತಿಯ ಕೈಹಿಡಿಯುವ ಪುಣ್ಯವೂ ಅವರಿಗೆ ಲಭಿಸಿತ್ತು. ಅವರ ಮದುವೆಗೆ ಮೊದಲ ಹೆಸರು ಸಾವಿತ್ರಮ್ಮ ಎಂದು. ಆದರೆ, ತುಂಬಿದ ಮನೆಯಲ್ಲಿ ಆಗಲೇ ಸಾವಿತ್ರಮ್ಮ ಎಂಬ ಹೆಸರಿನ ಅಣ್ಣ ಅಪ್ಪಾಜಿಗೌಡರ ಮಗಳಿದ್ದುದರಿಂದ ಇವರ

ಹೆಸರನ್ನು ಶಾರದಮ್ಮಣ್ಣಿ ಎಂದು ಬದಲಾಯಿಸಲಾಯಿತು. ಗೌಡರ ಅಣ್ಣನ ಮಗಳು ಸಾವಿತ್ರಮ್ಮ ನಂತರ ನಾಡೋಜ ಕರ್ನಾಟಕ ರತ್ನ ದೇಜಗೌಅವರ ಧರ್ಮಪತ್ನಿಯಾದರು. ತುಂಬಿದ ಕುಟುಂಬದಲ್ಲಿ ಕಾಲಿಟ್ಟ ಶಾರದಮ್ಮಣ್ಣಿಯವರು ಚಿಕ್ಕವಯಸ್ಸಿನಲ್ಲಿಯೇ ಎಲ್ಲ ಕೆಲಸಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಿದರು. ಮನೆಗೆ ಬಂದು ಹೋಗುತ್ತಿದ್ದ ನೆಂಟರಿಷ್ಟರನ್ನು, ಅತಿಥಿಗಳನ್ನು ಸತ್ಕರಿಸುವಲ್ಲಿಯೂ ಮೆಚ್ಚುಗೆಗಳಿಸಿದ್ದರು. ಜನಪ್ರತಿನಿಧಿಯಾಗಿದ್ದ ಗೌಡರು ರಾಜಕೀಯ, ಸಾಮಾಜಿಕ ಸೇವಾಕಾರ್ಯಗಳಲ್ಲಿ ಸಂಪೂರ್ಣವಾಗಿ ತೊಡಗಿದ್ದಾಗ ಶಾರದಮ್ಮಣ್ಣಿಯವರು ಮನೆವಾರ್ತೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯ ತೋರಿದ್ದರು. ಪೂಜೆ ಪುನಸ್ಕಾರಗಳಲ್ಲಿ ಹೆಚ್ಚಿನ ಶ್ರದ್ಧೆ ಆಸಕ್ತಿ ಹೊಂದಿದ್ದ ಅವರು ಮನೆಯಲ್ಲಿ ನಿತ್ಯ ಪೂಜೆಯನ್ನು ಭಕ್ತಿಯಿಂದ ಆಚರಿಸುತ್ತಿದ್ದರು.

ಗೌಡರು ಕುಟುಂಬದ ಎಲ್ಲರೊಡನೆ ಪ್ರೀತಿ ವಾತ್ಸಲ್ಯ ಮತ್ತು ಸೌಹಾರ್ದಯುತವಾಗಿ ನಡೆದುಕೊಳ್ಳುತ್ತಿದ್ದರು. ಅವರು ರಾಮನಗರದಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದ ಕಾಲ ಸುಖ ಸಮೃದ್ಧಿಯ ಕಾಲವಾಗಿತ್ತು. ವಕೀಲ ವೃತ್ತಿಯಿಂದ ವರಮಾನ ತುಂಬಾ ಚನ್ನಾಗಿ ಬರುತ್ತಿತ್ತು. ಊರಿನಲ್ಲಿ ಪ್ರೈಮರಿ ಸ್ಕೂಲಿನಲ್ಲಿ ಓದಿ ಮುಗಿಸಿದ ಮೇಲೆ ಅಣ್ಣನ ಮಕ್ಕಳು ಹಾಗೂ ಸಂಬಂಧಿಕರ ಮಕ್ಕಳು ಅವರ ಮನೆಯಲ್ಲೇ ಇದ್ದುಕೊಂಡು ಲೋವರ್ ಸೆಕೆಂಡರಿ ಎಜುಕೇಶನ್ ಓದಿ ಮುಗಿಸಿದರು. ಆಗಿನ ಕಾಲದ ಪದ್ಧತಿಯಂತೆ ಹೆಣ್ಣು ಮಕ್ಕಳನ್ನು ಮನೆಯ ಹಿರಿಯರು ಮುಂದಕ್ಕೆ ಓದಿಸುತ್ತಿರಲಿಲ್ಲ. ಗಂಡು ಮಕ್ಕಳು ಮುಂದಕ್ಕೆ ಓದಿ ಒಳ್ಳೆಯ ಕೆಲಸಗಳಿಗೆ ಸೇರಿ ಅಭಿವೃದ್ಧಿಗೊಂಡರು. ಮನೆಯ ಮಕ್ಕಳು ಚನ್ನಾಗಿ ವಿದ್ಯಾಭ್ಯಾಸ ಮಾಡಲು ಎಲ್ಲಾ ರೀತಿಯ ಅನುಕೂಲಗಳನ್ನು ಗೌಡರು ಮತ್ತು ಶಾರದಮ್ಮಣ್ಣಿ ಮಾಡಿಕೊಡುತ್ತಿದ್ದರು. ಒಳ್ಳೆಯ ಗುಣ ನಡತೆಗಳನ್ನು ಮಕ್ಕಳು ಬೆಳೆಸಿಕೊಳ್ಳಬೇಕು ಹಾಗೂ ಚನ್ನಾಗಿ ಓದಬೇಕು ಎಂದು ದಂಪತಿಗಳು ಮಕ್ಕಳಿಗೆ ಹೇಳುತ್ತಿದ್ದರು. ಮನೆಗೆ ಬೇಕಾದ ಎಲ್ಲಾ ಪದಾರ್ಥಗಳನ್ನು ಯಾವುದಕ್ಕೂ ಕೊರತೆ ಮಾಡದೆ ಒದಗಿಸಿಕೊಡುತ್ತಿದ್ದರು. ಊರಿನಿಂದ ಭತ್ತ, ರಾಗಿ, ತೆಂಗಿನ ಕಾಯಿ, ತರಕಾರಿಗಳು ದ್ವಿದಳ ಧಾನ್ಯಗಳು ಬರುತ್ತಿದ್ದವು. ಬೇಕಾದ ಇತರೆ ಎಲ್ಲಾ ಲವಾಜಮೆಗಳನ್ನು, ಯಾವುದಕ್ಕೂ ಕೊರತೆಯಾಗದಂತೆ ಗೌಡರು ನೋಡಿಕೊಂಡು ಒದಗಿಸಿಕೊಡುತ್ತಿದ್ದರು. ತಿಮ್ಮಸಂದ್ರದಲ್ಲಿ ಮನೆಯ ವ್ಯವಸಾಯ ಮತ್ತು ಪಶುಸಂಗೋಪನೆ ಚನ್ನಾಗಿ ನಡೆಯುತ್ತಿದ್ದವು. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಇವುಗಳು ತಿಮ್ಮಸಂದ್ರದ ಮನೆಯಿಂದ ಗೌಡರ ಟೌನಿನ ಮನೆಗೆ ಬರುತ್ತಿದ್ದವು. ಇಂತಹುದೇ ತಿಂಡಿ ಊಟಬೇಕೆಂದು ಗೌಡರು ಬಯಸುತ್ತಿರಲಿಲ್ಲ. ಮಾಡಿದ ಅಡುಗೆ ರುಚಿಯಾಗಿರಬೇಕು ಮತ್ತು ಶುಚಿಯಾಗಿರಬೇಕು. ಮುದ್ದೆ, ಅನ್ನ, ರೊಟ್ಟಿ, ಸೊಪ್ಪು ಕಾಳು ಯಾವುದನ್ನು ಮನೆಯಲ್ಲಿ ಮಾಡಿದರೂ ಸುಮ್ಮನೆ ಊಟಮಾಡುತ್ತಿದ್ದರು ಎಂದೂ

ಜರಿಯುತ್ತಿರಲಿಲ್ಲ. ಪಾರ್ಲಿಮೆಂಟ್ ಸದಸ್ಯರಾದಾಗಲೂ ಆಹಾರ ಪದ್ಧತಿ ಬದಲಾಯಿಸುವ ವಿಚಾರ ಅವರ ತಲೆಯಲ್ಲಿ ಸುಳಿಯಲಿಲ್ಲ. ಕೆಲವೊಮ್ಮೆ ಹಳ್ಳಿಯ ಕಜ್ಜಾಯ, ಉದ್ದಿನ ಹಪ್ಪಳ, ಉಪ್ಪುಸಾರು ಮೊದಲಾದ ಗ್ರಾಮೀಣ ಪದಾರ್ಥಗಳನ್ನು ಕೇಳಿಪಡೆಯುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಶಾರದಮ್ಮಣ್ಣಿಯವರು ಎಲ್ಲರಿಗೂ ತೃಪ್ತಿಯಾಗುವಂತಹ ವಿಶೇಷ ಅಡುಗೆಗಳನ್ನು ಮಾಡುವ ವ್ಯವಸ್ಥೆ ಮಾಡುತ್ತಿದ್ದರು.

ಗೌಡರು ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ, ಶಾಸಕರಾಗಿದ್ದಾಗ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ ಕೊಡುವ ಯೋಜನೆ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಆಗ ಗೌಡರ ಆಪ್ತಮಿತ್ರ ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಗೌಡರು ತಮ್ಮ ಕ್ಷೇತ್ರದ ಅರ್ಹ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯನ್ನು ತಯಾರಿಸಿದರು. ಅರ್ಹ ಸ್ವಾತಂತ್ರ್ಯ ಹೋರಾಟಗಾರರಿಗೆ, ಸಾಹಿತಿಗಳಿಗೆ, ವಿಧವೆಯರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಕೊಡಿಸಿದರು. ಕರ್ನಾಟಕದಲ್ಲಿ ಮಾಸಾಶನ ಕೊಡುವ ಯೋಜನೆ ವಿಷಯವನ್ನು ಕೇಳಿ ಮೊರಾರ್ಜಿ ದೇಸಾಯಿಯವರು ನಿಜಲಿಂಗಪ್ಪನವರ ಮೇಲೆ ಸಿಟ್ಟುಮಾಡಿಕೊಂಡು ಇದನ್ನು ಕೊಡುವುದು ಬೇಡ ಎಂದರು. ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ತ್ಯಾಗ ಮಾಡಿದ್ದಾರೆ. ದೇಶಕ್ಕಾಗಿ ಹೋರಾಡಿದ್ದಾರೆ. ಮನೆ ಮಠ ಎಲ್ಲಾ ಕಳೆದುಕೊಂಡವರೂ ಇದ್ದಾರೆ. ಜೈಲಿಗೆ ಹೋಗಿ ವ್ಯವಹಾರದಲ್ಲಿ ಕಷ್ಟ ನಷ್ಟ ಅನುಭವಿಸಿ ಬಹಳ ತೊಂದರೆಯಲ್ಲಿರುವವರೂ ಇದ್ದಾರೆ. ಅವರಿಗೆ ಈಗ ಸಹಾಯ ಮಾಡದಿದ್ದರೆ, ಸತ್ತೇ ಹೋಗುತ್ತಾರೆ. ಎಷ್ಟೋ ಜನರಿಗೆ ಊಟಕ್ಕೂ ತೊಂದರೆಯಾಗಿದೆ. ಮಾಸಾಶನ ಕೊಡುವುದರಿಂದ ಸ್ವಲ್ಪ ಸಹಾಯವಾಗುತ್ತದೆ ಎಂಬುದು ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರ, ಗೌಡರು ಮತ್ತು ಇನ್ನೂ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಅಭಿಪ್ರಾಯವಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಮಾಸಾಶನ ಕೊಟ್ಟ ನಂತರ ದೇಶದ ಎಲ್ಲಾ ರಾಜ್ಯದವರೂ ಮತ್ತು ಕೇಂದ್ರ ಸರ್ಕಾರವೂ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ ಕೊಡಲು ಪ್ರಾರಂಭ ಮಾಡಿದರು.

ರಾಮನಗರದಲ್ಲಿ ರೇಷ್ಮೆ ಉದ್ಯಮದ ರಫ್ತು ವ್ಯಾಪಾರವು ಅಭಿವೃದ್ಧಿಗೊಳ್ಳಲು ಗೌಡರು ಬಹಳಷ್ಟು ಶ್ರಮಿಸಿದರು. ಆ ಕಾಲದಲ್ಲಿ ರೇಷ್ಮೆಗೂಡಿನಿಂದ ರೇಷ್ಮೆ ಎಳೆಯನ್ನು ಸಂಸ್ಕರಿಸಿ ತೆಗೆಯುವಾಗ ಕೆಲವು ರೇಷ್ಮೆ ಪದಾರ್ಥಗಳು ಉಳಿದು ವ್ಯರ್ಥವಾಗುತ್ತಿದ್ದವು. ವ್ಯರ್ಥ ರೇಷ್ಮೆ ಪದಾರ್ಥಗಳ ಆರ್ಥಿಕ ಸದ್ಬಳಕೆಯಾಗುತ್ತಿರಲಿಲ್ಲ. ಗೌಡರು ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ ಕೇಂದ್ರ ಸರ್ಕಾರದ ರಫ್ತು ಅಭಿವೃದ್ಧಿ ಪರಿಷತ್ತಿನ ಪದಾಧಿಕಾರಿಗಳನ್ನು

ಭೇಟಿಯಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ರೇಷ್ಮೆ ಉತ್ಪನ್ನಗಳಿಗೆ ಮತ್ತು ರೇಷ್ಮೆ ಉಪ ಉತ್ಪನ್ನಗಳಿಗೆ ಬೇಡಿಕೆ ದೊರೆಯುವಂತೆ ಮಾಡಿದರು. ವ್ಯರ್ಥ ರೇಷ್ಮೆ ಪದಾರ್ಥಗಳಿಗೂ ಸಹ ಬೇಡಿಕೆ ದೊರಕಿಸುವಲ್ಲಿ ಗೌಡರು ನೀಡಿದ ಸಹಾಯವನ್ನು ರಾಮನಗರದ ರೇಷ್ಮೆ ಉದ್ಯಮಿಗಳು ಮರೆಯಲಾಗುವುದಿಲ್ಲ. ಯಾವ ಊರುಗಳಲ್ಲಿ ವಿದ್ಯುತ್ ಬಂದಿರಲಿಲ್ಲವೋ ಅಲ್ಲಿಗೆ ವಿದ್ಯುತ್ ಸಂಪರ್ಕ ಒದಗಿಸಿದರು. ಹಳ್ಳಿ ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ಮತ್ತು ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲು ಹಣ ಮಂಜೂರಾತಿ ಮಾಡಿಸಿದರು. ಗೌಡರ ಹುಟ್ಟೂರು ತಿಮ್ಮಸಂದ್ರದಲ್ಲಿ ಶಾಲೆ ಇರಲಿಲ್ಲ. ಬಸ್ ಸೌಲಭ್ಯಗಳ ಕೊರತೆಯಿತ್ತು. ಗೌಡರ ಬಯಕೆಯಂತೆ ಸರ್ಕಾರಿ ಪ್ರೈಮರಿ ಶಾಲೆ ಆರಂಭವಾಯಿತು. ಅದಕ್ಕೆ ಬೇಕಾದ ಜಾಗವನ್ನು ಗೌಡರು ನೀಡಿದರು. ಊರಿನಲ್ಲಿ ಆಸ್ಪತ್ರೆ ಇರಲಿಲ್ಲ; ಜನರು ದೂರದ ತಾಲ್ಲೂಕು ಕೇಂದ್ರದ ಆಸ್ಪತ್ರೆಗೆ ಹೋಗಬೇಕಾಗಿತ್ತು. ಇಲ್ಲವೇ ಅಳಲೇಕಾಯಿ ಪಂಡಿತರ ಮೊರೆ ಹೋಗಬೇಕಾಗಿತ್ತು. ರೋಗ-ರುಜಿನಗಳಿಂದ ಜನ ನರಳುವುದನ್ನು ಕಂಡು ಗೌಡರು ಅದಕ್ಕಾಗಿ ತಮ್ಮ ಮನೆಯ ಪಕ್ಕದ ಮತ್ತೊಂದು ಮನೆಯನ್ನು ಆಸ್ಪತ್ರೆಯನ್ನಾಗಿ ಮಾಡಿಸಿದರು. ವಾರಕ್ಕೆರಡು ಬಾರಿ ರಾಮನಗರದ ಪ್ರೈಮರಿ ಹೆಲ್ತ್ ಸೆಂಟರ್‌ನಿಂದ ಡಾಕ್ಟರ್, ನರ್ಸ್, ಕಾಪೌಂಡರ್‌ಗಳು ಔಷಧಿ ಸಮೇತ ಅಲ್ಲಿಗೆ ಬರುತ್ತಿದ್ದರು. ಸುತ್ತಮುತ್ತಲ ಹಳ್ಳಿಯ ಜನರೆಲ್ಲಾ ಬಂದು ಔಷಧೋಪಚಾರ ಪಡೆಯುತ್ತಿದ್ದರು. ಹೆರಿಗೆ ಕಷ್ಟವಾಗಿ ಬಾಣಂತಿಯರು ಮರಣ ಹೊಂದುತ್ತಿದ್ದರಾದ್ದರಿಂದ ಕ್ರಮೇಣ ಒಬ್ಬ ತರಬೇತಿ ಹೊಂದಿದ ನರ್ಸ್ ಹಳ್ಳಿಯಲ್ಲೇ ಇರುವ ವ್ಯವಸ್ಥೆ ಮಾಡಿದರು. ಸರ್ಕಾರಿ ಆಸ್ಪತ್ರೆಗಾಗಿ ಹೊಸ ಕಟ್ಟಡವನ್ನು ಕಟ್ಟಿಸಿದರು. ಡಾಕ್ಟರ್‌ಗಳು ಮತ್ತು ನರ್ಸ್‌ಗಳು ವಾಸಿಸಲು ಮನೆಗಳನ್ನು ಕಟ್ಟಿಸಿದರು. ಕೆಂಗಲ್ ಹನುಮಂತಯ್ಯನವರೇ ಬಂದು ಆಸ್ಪತ್ರೆಯನ್ನು ಉದ್ಘಾಟಿಸಿ, ಗೌಡರ ಸೇವಾಕಾರ್ಯವನ್ನು ಶ್ಲಾಘಿಸಿದರು.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಡವರ ಅಭಿವೃದ್ಧಿಗಾಗಿ ರೂಪಿಸಿದ್ದ ಕಾರ್ಯಕ್ರಮಗಳನ್ನು ಗೌಡರು ಕೂಲಂಕುಶವಾಗಿ ಓದುತ್ತಿದ್ದರು. ಅದರಂತೆ ಕೃಷಿ ಕಾರ್ಮಿಕರು, ಕೂಲಿಕಾರರು, ಬಡ ರೈತರು, ದಲಿತ ವರ್ಗದವರು, ಹಿಂದುಳಿದ ವರ್ಗದವರು ಇವರೆಲ್ಲರಿಗೆ ಸರ್ಕಾರದಿಂದ ದೊರಕಬೇಕಾದ ಸಾಂಸ್ಥಿಕ ಸೌಲಭ್ಯಗಳು ಮತ್ತು ಉತ್ತೇಜನಗಳನ್ನು ದೊರಕಿಸಿ ಕೊಟ್ಟರು. ಮನೆ ಇಲ್ಲದ ಕೆಲವರಿಗೆ ಮನೆಗಳನ್ನು ದೊರಕಿಸಿಕೊಟ್ಟರು. ನಗರ ಪ್ರದೇಶಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳ್ಳಲು ಕೆಲಸ ಮಾಡಿದರು. ನೂರಾರು ವಿದ್ಯಾವಂತ, ಅರೆ ವಿದ್ಯಾವಂತ ಯುವಕರಿಗೆ ಸರ್ಕಾರದಲ್ಲಿ ಉದ್ಯೋಗ

ದೊರಕಲು ಶಿಫಾರಸು ಮಾಡಿದರು. ಅನೇಕ ಗ್ರಾಮೀಣ ಯುವಕರಿಗೆ ಬೆಂಗಳೂರು ಸುತ್ತಮುತ್ತ ಸ್ಥಾಪನೆಗೊಂಡ ಸರ್ಕಾರಿ ಮತ್ತು ಅರೆ ಸರ್ಕಾರಿ ಕೈಗಾರಿಕೆಗಳಲ್ಲಿ ಉದ್ಯೋಗ ಪಡೆದುಕೊಳ್ಳಲು ನೆರವಾದರು. ಗ್ರಾಮಾಂತರ ಪ್ರದೇಶದಿಂದ ಬಂದ ಗೌಡರು ಮಂಚನಬೆಲೆ ನೀರಾವರಿ ಯೋಜನೆಯ ಬಗೆಗೆ ಪಾರ್ಲಿಮೆಂಟ್ ಸದಸ್ಯರಾಗಿದ್ದ ಕಾಲದಿಂದಲೂ ಪ್ರಸ್ತಾಪ ಮಾಡುತ್ತಾ ಸರ್ಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾದರು. ಮಂಚನಬೆಲೆ ನೀರಾವರಿ ಯೋಜನೆಯಿಂದ ಕುಡಿಯುವ ನೀರಿಗೆ, ರೈತರ ಜಮೀನುಗಳಿಗೆ ಬೆಳೆ ಬೆಳೆಯಲು ಹಾಗೂ ಮಳೆಗಾಲದಲ್ಲಿ ಪ್ರವಾಹ ನಿಯಂತ್ರಣಕ್ಕೆ ಅನುಕೂಲವಾಗುತ್ತದೆ ಎಂದು ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರಿಗೆ, ಬಿ.ಡಿ.ಜತ್ತಿಯವರಿಗೆ, ನಿಜಲಿಂಗಪ್ಪನವರಿಗೆ ಮತ್ತು ನೀರಾವರಿ ಸಚಿವರುಗಳಿಗೆ ಒತ್ತಾಯಿಸುತ್ತಿದ್ದರು. ಎಂ.ವಿ.ರಾಜಶೇಖರನ್‌ರವರು ಗೌಡರ ಕಿರಿಯ ಸ್ನೇಹಿತರಲ್ಲೊಬ್ಬರು; ರಾಜಶೇಖರನ್‌ರವರು ಪಾರ್ಲಿಮೆಂಟ್ ಸದಸ್ಯರಾದಾಗ ಮಂಚನಬೆಲೆ ನೀರಾವರಿ ಯೋಜನೆಗೆ ಹೋರಾಟ ಮಾಡಲು ಸಲಹೆ ನೀಡಿದರು. ಅದರಂತೆ ರಾಜಶೇಖರನ್‌ರವರು ಮತ್ತು ಇತರ ಅನೇಕ ಜನಪ್ರತಿನಿಧಿಗಳು ಮಂಚನ ಬೆಲೆ ನೀರಾವರಿ ಯೋಜನೆ ಪೂರ್ಣಗೊಳ್ಳಲು ಶ್ರಮಿಸಿದರು. ಇಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಳ್ಳಿಗಳಿಗೆ ಮತ್ತು ಮಾಗಡಿ ನಗರಕ್ಕೆ ಮಂಚನ ಬೆಲೆ ನೀರಾವರಿ ಯೋಜನೆಯಿಂದ ಕುಡಿಯುವ ನೀರು ದೊರಕುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಆರ್ಥಿಕವಾಗಿ ಮುಂದುವರಿದ ಜಿಲ್ಲೆಯಾಗಿದೆ. ಏಳು ಸಾವಿರ ಎಕರೆಗಳಿಗೂ ಹೆಚ್ಚು ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರೆಯುತ್ತಿದೆ. ಪಶುಸಂಗೋಪನೆ ಅಭಿವೃದ್ಧಿಯಾಗಿದೆ. ಎಂ.ಎಚ್.ಮರೀಗೌಡರು ಗೌಡರ ಆಪ್ತರಲ್ಲಿ ಒಬ್ಬರು. ಸಂಬಂಧಿಗಳೂ ಹೌದು. ಅವರು ತೋಟಗಾರಿಕೆ ಇಲಾಖೆಯ ಮುಖ್ಯಸ್ಥರಾಗಿದ್ದರು. ಬಹಳ ದಕ್ಷ ಮತ್ತು ಸೇವಾ ಮನೋಭಾವದ ತೋಟಗಾರಿಕೆ ಮುಖ್ಯಸ್ಥರಾಗಿದ್ದವರು. ಗೌಡರು ಮರೀಗೌಡರ ಮೂಲಕ ತಮ್ಮ ಕ್ಷೇತ್ರದ ವ್ಯವಸಾಯಗಾರರಿಗೆ ತೆಂಗಿನ ಸಸಿ, ಬಾಳೆ ಕಂದುಗಳು, ತರಕಾರಿ ಬೀಜಗಳು, ಹಣ್ಣಿನ ಗಿಡಗಳನ್ನು ವಿವಿಧ ಯೋಜನೆಗಳ ಅಡಿಯಲ್ಲಿ ದೊರಕಿಸಿಕೊಟ್ಟರು. ಮರೀಗೌಡರು ನಿವೃತ್ತರಾದ ಮೇಲೆ ಒಕ್ಕಲಿಗರ ಸಂಘದ ಅಧ್ಯಕ್ಷರಾಗಲು ಗೌಡರು ನೆರವಾಗಿದ್ದರು. ಪಶುಸಂಗೋಪನ ಸಚಿವರಾಗಿದ್ದ ಎಂ.ವಿ.ಕೃಷ್ಣಪ್ಪನವರು ಸಹ ಗೌಡರ ಆಪ್ತಮಿತ್ರರು. ರಾಮನಗರ ಸುತ್ತಮುತ್ತ ಹೈನುಗಾರಿಕೆ ಅಭಿವೃದ್ಧಿಗೊಳ್ಳಲು ಗೌಡರು ಎಂ.ವಿ.ಕೃಷ್ಣಪ್ಪನವರ ಸಹಕಾರವನ್ನು ಪಡೆದುಕೊಂಡರು. ಬೆಂಗಳೂರು ನಗರಕ್ಕೆ ಕಾವೇರಿ ನೀರು ಬರಲು ಅಂದಿನ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರ ಜೊತೆ ಗೌಡರು ಕೈ ಜೋಡಿಸಿದರು.

ಬೆಂಗಳೂರಿಗೆ ಕಾವೇರಿ ನದಿಯಿಂದ ನೀರು ತರುವುದು ಸಾಧ್ಯವಿಲ್ಲವೆಂದು ಕೆಲವು ಇಂಜಿನಿಯರ್‌ಗಳು ಹೇಳುತ್ತಿದ್ದರು. ಕಡೆಗೆ ನಿವೃತ್ತರಾಗಿದ್ದ ಚೀಫ್ ಇಂಜಿನಿಯರ್ ಎನ್.ನರಸಿಂಹಯ್ಯಅವರ ಸಲಹೆಯಂತೆ ಕಾವೇರಿಯಿಂದ ವಿವಿಧ ಕಡೆ ನೀರು ಎತ್ತರಿಸಿ ಬೆಂಗಳೂರು ನಗರಕ್ಕೆ ನೀರು ತರಲು ಸಾಧ್ಯವಾಯಿತು.

ಅಣ್ಣ ಅಪ್ಪಾಜಿಗೌಡರು ತಮ್ಮನ ಕೋರಿಕೆಯಂತೆ ಕುಟುಂಬದ ಜಮೀನುಗಳ ಭಾಗವಾದ ನಂತರ ಗೌಡರು ರಾಮನಗರವನ್ನು ಬಿಟ್ಟು ತಿಮ್ಮಸಂದ್ರಕ್ಕೆ ಬಂದು ನೆಲೆಸಿದರು. ಆ ಸಂದರ್ಭದಲ್ಲಿ, ತಮ್ಮ ಅಮೂಲ್ಯ ಆಸ್ತಿಯಂತೆ ಕಾಪಾಡಿಕೊಂಡು ಬಂದಿದ್ದ ಪುಸ್ತಕಗಳನ್ನೆಲ್ಲಾ ದಾನ ಮಾಡಿ ಬಿಟ್ಟರು. ತಮ್ಮ ಸಂಬಂಧಿ ಲಾಯರ್ ಶಿವಲಿಂಗಯ್ಯನವರಿಗೆ ಲಾ ಪುಸ್ತಕಗಳನ್ನು ಅವರ ಕೋರಿಕೆಯಂತೆ ಕೊಟ್ಟರು. ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಎರಡು ಗ್ರಂಥಾಲಯಗಳಿಗೆ ನೀಡಿದರು. ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನೂ ಅವರ ಪ್ರೀತಿ ಪಾತ್ರ ಮಗಳು ಡಾ.ಸರಸ್ವತಿ ರಾಜೇಂದ್ರರಿಗೆ ಅವರ ಕೋರಿಕೆಯಂತೆ ಕೊಟ್ಟರು.

ಗೌಡರು ಪ್ರಾಮಾಣಿಕ ರಾಜಕಾರಣಿಯಾಗಿ, ೪೫ ವರ್ಷಗಳ ಕಾಲ ರಾಮನಗರದಲ್ಲಿ ವಾಸವಾಗಿದ್ದರು. ಮನಸ್ಸು ಮಾಡಿದ್ದರೆ ಅನೇಕ ನಿವೇಶನಗಳನ್ನು ಮಾಡಿಕೊಳ್ಳಬಹುದಿತ್ತು. ಅದ್ದೂರಿಯಾದ ಬಂಗಲೆಯನ್ನು ಕಟ್ಟಿಕೊಳ್ಳಬಹುದಿತ್ತು. ಗಾಂಧೀಜಿಯವರ ಅಸಂಗ್ರಹ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದ ಅವರು ಯಾವುದಕ್ಕೂ ಆಸೆಪಡಲಿಲ್ಲ. ರಾಷ್ಟ್ರ ಮತ್ತು ರಾಜ್ಯ ರಾಜಕೀಯದಲ್ಲಿ ಮಹತ್ತರ ಬದಲಾವಣೆಗಳಾಗಿ ಇವರು ರಾಜಕೀಯದಿಂದ ನಿವೃತ್ತಿ ಪಡೆದರು. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲಿಗೆ ಬಂದಿದ್ದ ಜಮೀನಿನಲ್ಲಿ ವ್ಯವಸಾಯವನ್ನು ಪ್ರಾರಂಭಿಸಿದರು. ಗೌಡರಿಗೆ ಕೃಷಿ ಕ್ಷೇತ್ರ ರಾಜಕೀಯದಷ್ಟೇ ಅತ್ಯಂತ ಪ್ರಿಯವಾದ ಕ್ಷೇತ್ರವಾಯಿತು. ಅವರ ತಾತ ತಂದೆಯವರ ಕಾಲದಿಂದಲೂ ಸಾಕಷ್ಟು ಜಮೀನು ಹೊಂದಿದ ಕುಟುಂಬ ಅವರದಾಗಿತ್ತು. ಗೌಡರು ಶಾಸಕರಾಗಿದ್ದಾಗ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಕ್ಷೇತ್ರದ ಶಾಸಕರಾಗಿದ್ದ ಶ್ರೀವಿ.ಮಸಿಯಪ್ಪನವರು ಗೌಡರ ಆಪ್ತ ಸ್ನೇಹಿತರಲೊಬ್ಬರು. ಗೌಡರಂತೆ ಮಸಿಯಪ್ಪನವರು ಸಹ ಅತ್ಯಂತ ಪ್ರಾಮಾಣಿಕರು, ಸತ್ಯವಂತರು ಮತ್ತು ಅಪ್ಪಟ ಗಾಂಧೀವಾದಿಯಾಗಿದ್ದರು. ಅವರು ರಾಜಕೀಯದಿಂದ ನಿವೃತ್ತಿ ಹೊಂದಿದ ನಂತರ ತಮ್ಮ ಜಮೀನಿನಲ್ಲಿ ಬದನೆಕಾಯಿಯನ್ನು ಬೆಳೆದು ಹಿರಿಯೂರು ಟೌನಿನ ಶನಿವಾರ ನಡೆಯುತ್ತಿದ್ದ ಸಂತೆಯಲ್ಲಿ ಮಾರಾಟ ಮಾಡಿ ಗಾಂಧೀಜಿಯವರಂತೆ ಆಹಾರ ಕಾಯಕವನ್ನು ಅತ್ಯಂತ ನಿಷ್ಠೆಯಿಂದ ಪರಿಪಾಲಿಸುತ್ತಿದ್ದರು.

ಗೌಡರಿಗೆ ನಾಲ್ಕು ಜನ ಹೆಣ್ಣು ಮಕ್ಕಳು; ಇಬ್ಬರು ಗಂಡು ಮಕ್ಕಳು. ಎರಡನೆಯ ಪತ್ನಿಯ ಮಗಳು ಶ್ರೀಮತಿಕಮಲಮ್ಮ, ಮೂರನೆಯ ಪತ್ನಿಯ ಮಕ್ಕಳು ಸರಸ್ವತಿ, ಮಂಗಳಾ, ಜಾಹ್ನವಿ, ಮಂಜುನಾಥ, ಮತ್ತು ಭಾರತೇಶ್. ಭಾರತವನ್ನು ಸುತ್ತಿ ಬಂದ

ಮೇಲೆ ಹುಟ್ಟಿದ ಮಗನಿಗೆ ಭಾರತೇಶ್ ಎಂದು ಹೆಸರಿಟ್ಟರು. "ಗೌಡರು ಮಕ್ಕಳಿಗೆ ಎಷ್ಟೊಂದು ಹಣ ಸಂಪಾದನೆ ಮಾಡಿ ಇಡಬಹುದಿತ್ತು. ಬೆಂಗಳೂರಿನಲ್ಲಿ ರಾಮನಗರದಲ್ಲಿ ಮನೆಗಳನ್ನು, ಮಳಿಗೆಗಳನ್ನು ಕಟ್ಟಿಸಿ ಮಕ್ಕಳಿಗೆ ಆಸ್ತಿ ಮಾಡಬಹುದಿತ್ತು. ಗಂಡು ಮಕ್ಕಳನ್ನು ಹೆಣ್ಣು ಮಕ್ಕಳನ್ನು ಹೆಚ್ಚು ಹೆಚ್ಚು ಓದಿಸಿ ಸರ್ಕಾರದಲ್ಲಿ ದೊಡ್ಡ ಹುದ್ದೆಗಳನ್ನು ಕೊಡಿಸಬಹುದಿತ್ತು. ರಾಜಕೀಯವಾಗಿ ಮಕ್ಕಳನ್ನು ಸಹ ಬೆಳೆಸಬಹುದಿತ್ತು" ಎಂಬ ಮಾತುಗಳು ಕೇಳಿಬರುತ್ತಿದ್ದವು. ಗೌಡರು ಇಂತಹ ಮಾತುಗಳನ್ನು ಜನರು ಆಡಿದಾಗ ಸಮಾಧಾನದಿಂದ ಕೇಳುತ್ತಿದ್ದರು. ಏನನ್ನೂ ಪ್ರತಿಯಾಗಿ ಹೇಳುತ್ತಿರಲಿಲ್ಲ.

ರಾಜಕೀಯದಲ್ಲಿ ಅವರ ಸ್ನೇಹಿತರೇ ಅವರಿಗೆ ತೊಡಕಾದರು. ಆದರೆ ಗೌಡರು ಅದನ್ನು ತಮ್ಮ ರಾಜಕೀಯ ಜೀವನದ ಹಿನ್ನಡೆ ಎಂದು ಭಾವಿಸಲಿಲ್ಲ. ಅದು ಅವರ ದೊಡ್ಡಗುಣ. ಗೌಡರ ಬಳಿ ಆಗ ಒಂದು ಕಾರು ಮಾತ್ರ ಇತ್ತು. ತಂದೆ ತಾಯಿಯಿಂದ ಬಂದ ಪಿತ್ರಾರ್ಜಿತವಾದ ಆಸ್ತಿ ಬಿಟ್ಟು ಅವರ ಬಳಿ ಬೇರಾವ ಆಸ್ತಿ ಪಾಸ್ತಿಗಳು ಇರಲಿಲ್ಲ. ಕಾರಿನ ಚಾಲಕನಾಗಿದ್ದವನು ಕೇರಳ ಮೂಲದ ನಾಯರ್. ಗೌಡರನ್ನು ಬಿಟ್ಟು ಎಲ್ಲೂ ಹೋಗದೆ ಅವರ ತೋಟದ ಮನೆಯಲ್ಲಿಯೇ ಅಂತಿಮ ಕಾಲದವರೆವಿಗೂ ಉಳಿದುಬಿಟ್ಟ. ಗೌಡರ ಸಂಪರ್ಕವೇ ಅಂತಹುದಾಗಿತ್ತು. ಗೌಡರು ಸ್ನೇಹಜೀವಿಗಳು; ಗೌಡರು ಆತ್ಮೀಯವಾಗಿ ಹಚ್ಚಿಕೊಂಡವರನ್ನು ಬಿಡುತ್ತಿರಲಿಲ್ಲ; ಅದೇ ರೀತಿ ಗೌಡರಿಗೆ ಆತ್ಮೀಯರಾದವರು ಗೌಡರನ್ನು ಬಿಟ್ಟು ಹೋಗುತ್ತಿರಲಿಲ್ಲ. ಅವರ ಪ್ರೀತಿ ವಾತ್ಸಲ್ಯ, ಸ್ನೇಹಪರತೆ ಅಪ್ಪರಮಟ್ಟಿಗೆ ಕಟ್ಟಿಹಾಕಿ ಬಿಡುತ್ತಿತ್ತು.

ಕಾರಿನ ಚಾಲಕ ನಾಯರ್ ತಿಮ್ಮಸಂದ್ರದಲ್ಲಿಯೇ ಗೌಡರ ಜೊತೆ ಉಳಿದು ನೆಮ್ಮದಿಯ ಬದುಕನ್ನು ಅನುಭವಿಸಲು ಅನುಕೂಲವಾಯಿತು. ಗೌಡರಿಗೆ ವ್ಯವಸಾಯದ ಮತ್ತು ಕುಟುಂಬದ ಕೆಲಸ ಕಾರ್ಯಗಳಲ್ಲಿ ಮನಃಪೂರ್ವಕವಾಗಿ ನೆರವಾಗುತ್ತಿದ್ದನು. ಜಮೀನಿನಲ್ಲಿ ಒಂದು ಮನೆಯನ್ನು ನಾಯರ್‌ಗಾಗಿ ಕಟ್ಟಿಸಲಾಯಿತು. ನಾಯರ್‌ಗೆ ಊಟ ತಿಂಡಿ, ಟೀ. ಕಾಫಿ ಮನೆಯಿಂದ ಸರಬರಾಜಾಗುತ್ತಿತ್ತು. ಅಣ್ಣನವರ ಮಕ್ಕಳ ಮದುವೆಯ ಮಂಟಪ ಅಲಂಕರಿಸುವಲ್ಲಿ ನಾಯರ್ ಆಸಕ್ತಿ ಅಸಾಧಾರಣವಾದುದ್ದಾಗಿತ್ತು. ತೋಟದಲ್ಲಿ ನಾಯರ್ ತನ್ನ ಅಭಿರುಚಿಗೆ ತಕ್ಕಂತೆ ಹೂವಿನ ಗಿಡಗಳು, ಹಣ್ಣಿನ ಗಿಡಗಳನ್ನು ನೆಟ್ಟು ನೀರು ಗೊಬ್ಬರ ಹಾಕಿ ಪೋಷಣೆ ಮಾಡುತ್ತಿದ್ದನು. ಬೇಕಾದ ಸಸಿಗಳು, ಹಣ್ಣಿನ ಗಿಡಗಳು, ಹೂವಿನ ಗಿಡಗಳನ್ನು ಗೌಡರಿಗೆ ಹೇಳಿ ತರಿಸಿಕೊಳ್ಳುತ್ತಿದ್ದನು. ನಾಯರ್ ಬೆಳೆಸಿದ ವೀಳೆಯದೆಲೆ ತೋಟ, ಗುಲಾಬಿ ತೋಟ ಕಂಗೊಳಿಸುತ್ತಿದ್ದವು. ಅಲ್ಲಿ ಬಿಡುತ್ತಿದ್ದ ಗುಲಾಬಿ ಹೂವುಗಳನ್ನು ಗುಲ್ಕನ್ ತಯಾರು ಮಾಡುವ ಉದ್ಯಮದವರು ಬಂದು ಕೊಂಡುಕೊಂಡು ಹೋಗುತ್ತಿದ್ದರು.

ಗೌಡರ ಸಂಪರ್ಕಕ್ಕೆ ಬಂದವರಲ್ಲಿ ಚನ್ನಪ್ಪ ಎಂಬ ಒಬ್ಬ ತುಂಬಾ ನಿಷ್ಠಾವಂತ ವ್ಯಕ್ತಿ ಸೇರಿದ್ದಾರೆ. ಚನ್ನಪ್ಪನ ಸಂಸಾರದಲ್ಲಿ ಯಾವುದೋ ವಿಷಗಳಿಗೆಯಲ್ಲಿ ಭಿನ್ನಾಭಿಪ್ರಾಯ ಬಂದು ಊರು ಬಿಟ್ಟು ಹೋಗಿ ಹತ್ತು ವರ್ಷದ ನಂತರ ತಿಮ್ಮಸಂದ್ರಕ್ಕೆ ಬಂದನು. ಬಂದ ಮೇಲೆ ಚನ್ನಪ್ಪನ ನಡವಳಿಕೆಯೇ ಬೇರೆಯಾಗಿ ತತ್ವಜ್ಞಾನಿಯಂತ್ತಾಗಿದ್ದರು. ಅದನ್ನು ಸರಿಯಾಗಿ ಗೌಡರು ಗುರುತಿಸಿದರು. ಇಬ್ಬರಿಗೂ ತುಂಬಾ ಆತ್ಮೀಯ ಹೊಂದಾಣಿಕೆಯಾಗಿತ್ತು. ಬೆಳಗಿನ ತಿರುಗಾಟದಲ್ಲಿ ತೋಟದ ಕಡೆ ಹೊರಟಾಗ ಜೊತೆಯಲ್ಲಿ ಚನ್ನಪ್ಪ ಇರುತ್ತಿದ್ದರು. ಅವರಿಬ್ಬರ ಆತ್ಮೀಯ ಸಂಭಾಷಣೆ ಆಧ್ಯಾತ್ಮಕ್ಕೆ ಸಂಬಂಧ ಪಟ್ಟದ್ದು; ಅದು ಸಾಮಾನ್ಯರಿಗೆ ಅರ್ಥವಾಗುವಂತಿರಲಿಲ್ಲ. ಸಮಾನ ಧರ್ಮಿಗಳ ಮಧ್ಯೆ ಬೇರೆ ಯಾವ ಅಂತಸ್ತು ಅಡ್ಡಿಯಾಗಿರಲಿಲ್ಲ.

ಚನ್ನಪ್ಪ ಮನೆಗೆ ಬಂದರೆ ಗೌಡರು ಅವರಿಗೆ ಊಟ, ತಿಂಡಿ ಮಾಡಿಸುತ್ತಿದ್ದರು. ಗೌಡರು ಕುರ್ಚಿಯ ಮೇಲೆ ಕುಳಿತು, ಹೆಂಡತಿ ತಂದುಕೊಡುತ್ತಿದ್ದ ಬಿಸಿಬಿಸಿ ಇಡ್ಲಿ-ಚಟ್ನಿ ತಿನ್ನುವಾಗ, ಚನ್ನಪ್ಪ ದೂರದಲ್ಲಿ ಕುಕ್ಕರುಗಾಲಿನಲ್ಲಿ ಕುಳಿತೇ ಎಲೆಯಲ್ಲಿ ಹಾಕಿಸಿಕೊಂಡು ತಿಂಡಿ ತಿನ್ನುತ್ತಿದ್ದರು. ಕುರ್ಚಿಯ ಮೇಲೆ ಕುಳಿತುಕೊಳ್ಳಲು ಹೇಳಿದರೂ ಗೌಡರ ಮೇಲಿನ ಪ್ರೀತಿ ಗೌರವ ಅಭಿಮಾನಗಳಿಂದ ಅವರ ಎದುರಿಗೆ ಕುರ್ಚಿಯ ಮೇಲೆ ಕೂರುತ್ತಿರಲಿಲ್ಲ. ಆದರೆ ಅವರಿಬ್ಬರಲ್ಲಿ ಗಾಢ ಆತ್ಮೀಯತೆ ಇತ್ತು. ಪ್ರೀತಿ-ವಿಶ್ವಾಸವಿತ್ತು.

ಚನ್ನಪ್ಪನ ಹತ್ತಿರ ಒಂದು ಏಕತಾರಿ ಇತ್ತು. ಏಕತಾರಿಯು ಒಂದೇ ತಂತಿಯಿಂದ ಬಿದುರು ಸೀಳು ಮತ್ತು ಕಡ್ಡಿಯ ಜೊತೆಗೆ ಅಭಿವೃದ್ಧಿಪಡಿಸಿ ವಿನ್ಯಾಸಗೊಳಿಸಿದ ತಂತೀವಾದ್ಯ. ಇದು ಕೇಳುಗರ ಕಿವಿಯನ್ನು ವಿಶಿಷ್ಟವಾಗಿ ಚುರುಕುಗೊಳಿಸುವ ತಂತೀವಾದ್ಯವಾಗಿರುವುದರಿಂದ ಇದನ್ನು ಕಿನ್ನರಿಯೆಂದೂ ಕರೆಯುತ್ತಾರೆ. ಚನ್ನಪ್ಪ ಏಕತಾರಿಯನ್ನು ಲಯಬದ್ಧವಾಗಿ ನುಡಿಸುತ್ತಾ ಭಾವಪೂರ್ಣವಾಗಿ ತತ್ವಪದಗಳನ್ನು ತನ್ಮಯತೆಯಿಂದ ಹಾಡುತ್ತಿದ್ದರು. ಆಗ ಗೌಡರ ಮನೆಯ ಬಳಿ ದಾರಿಹೋಕರು, ಗುರುದೀಕ್ಷೆ ಪಡೆದುಕೊಂಡವರು ಬಂದು ಗೌಡರ ಜೊತೆ ಸಂತೋಷದಿಂದ ಕೇಳುತ್ತಿದ್ದರು. ಗೌಡರ ಆತ್ಮೀಯರಾಗಿದ್ದ ಚನ್ನಪ್ಪ ಸುತ್ತಮುತ್ತಲ ಗ್ರಾಮಗಳಲ್ಲಿ ಏಕತಾರಿ ಚನ್ನಪ್ಪ, ಕಿನ್ನರಿ ಚನ್ನಪ್ಪ ಎಂದು ಹೆಸರುವಾಸಿಯಾದರು. ಬಂಧು ಬಾಂಧವರ ಮನೆಗಳಲ್ಲಿ ಸಾವು ಸಂಭವಿಸಿದಾಗ, ಗೌಡರ ಜೊತೆ ಚನ್ನಪ್ಪ ಬಂದು ಏಕತಾರಿ ಹಿಡಿದು ಬದುಕಿನ ನಶ್ವರತೆಯನ್ನು ಕುರಿತಂತಹ ತತ್ವಪದಗಳನ್ನು ತನ್ಮಯತೆಯಿಂದ ಹಾಡುತ್ತಿದ್ದರೆ, ಶೋಕತಪ್ತರಾದ ಬಂಧು-ಬಾಂಧವರ ದುಃಖ ತೀವ್ರತೆಗಳು ಎಷ್ಟೋ ಉಪಶಮನವಾಗುತ್ತಿದ್ದವು. ಸುತ್ತಮುತ್ತಲ ಗ್ರಾಮಸ್ಥರು ಅಗತ್ಯ ಸಂದರ್ಭಗಳಲ್ಲಿ ಚನ್ನಪ್ಪನನ್ನು ತತ್ವಪದಗಳನ್ನು ಹಾಡಲು ಆಹ್ವಾನಿಸುತ್ತಿದ್ದರು.

ಹಳ್ಳಿಯ ಬದುಕು ರಾಜಕೀಯ ಬದುಕಿನ ನಂತರ ಪ್ರಾರಂಭದಲ್ಲಿ ಅಷ್ಟು ಸುಲಭವಾಗಿರಲಿಲ್ಲ. ವ್ಯವಸಾಯವೆಂಬುದು ಕೋಟಿ ವಿದ್ಯೆಗಳಿಗಿಂತ ಮೇಲಾದರೂ ಕಾಲಚಕ್ರ ಉರುಳಿದಂತೆ ತಿಳಿದಷ್ಟು ಸುಲಭವಾಗಿರಲಿಲ್ಲ. ದಿನ ದಿನವೂ ಹೊಸ ಹೊಸ ಅನುಭವಗಳಾಗುತ್ತಿದ್ದವು. ಪ್ರತಿನಿತ್ಯವೂ ವ್ಯವಸಾಯದಲ್ಲಿ ಖರ್ಚುವೆಚ್ಚಗಳಿರುತ್ತಿದ್ದವು. ಆದಾಯ ಮಾತ್ರ ವರ್ಷಕ್ಕೊಮ್ಮೆ ದೊರೆಯುತ್ತಿತ್ತು. ಮಕ್ಕಳೆಲ್ಲಾ ಟೌನಿನಲ್ಲಿ ಬೆಳೆದವರು. ಅವರು ಇನ್ನೂ ಚಿಕ್ಕವರಾಗಿದ್ದರು. ವ್ಯವಸಾಯಕ್ಕೆ ದುಡ್ಡು ಹೊಂದಿಸುವುದು; ಟೌನಿನಲ್ಲಿ ಬೆಳೆದ ಐದು ಜನ ಮಕ್ಕಳು ಮತ್ತು ಹೆಂಡತಿಯನ್ನು ಪೋಷಿಸುವುದಕ್ಕೆ ಹಣ ಹೊಂದಿಸುವುದು ಸವಾಲಿನದಾಗಿತ್ತು. ಗೌಡರು ರಾಜ್ಯದ ಪ್ರತಿಷ್ಠಿತ ವ್ಯಕ್ತಿಗಳಲ್ಲೊಬ್ಬರಾಗಿದ್ದರು. ಸಾಮಾಜಿಕವಾಗಿ ಮೇಲು ಹಂತವನ್ನು ಮುಟ್ಟಿದ್ದರು. ಹಣದ ಅಗತ್ಯವಿದ್ದಾಗ ಯಾರನ್ನೂ ಕೇಳಲಾಗುತ್ತಿರಲಿಲ್ಲ. ಅತ್ಯಂತ ಗೌರವಪೂರ್ವಕವಾಗಿ ಕುಟುಂಬಕ್ಕೆ ಯಾವುದೇ ಅರೆಕೊರೆಯಾಗದಂತೆ ಸಮರ್ಥವಾಗಿ ನಿರ್ವಹಿಸಿದರು. ಗೌಡರು ತಿಮ್ಮಸಂದ್ರಕ್ಕೆ ಬಂದ ನಂತೆರ ಒಬ್ಬ ಮಗಳ ಮದುವೆಯನ್ನು ಮಾಡಿದರು. ಅದಕ್ಕಾಗಿ ಅವರು ಪಟ್ಟಶ್ರಮ ಅವರಿಗೆ ಮಾತ್ರ ಗೊತ್ತು. ಗಂಡು ಮಕ್ಕಳು ಚಿಕ್ಕವರು. ತಮ್ಮ ವಂಶದ ಅನೇಕರಿಗೆ ಡಬಲ್ ಡಿಗ್ರಿವರೆಗೆ ಓದಿಸಿದ್ದರು. ಗೌಡರ ಆಪ್ತೇಷ್ಟರು ಅಲ್ಲಿ ಇಲ್ಲಿ ಸಿಕ್ಕಾಗ ಅವರ ಆರೋಗ್ಯವನ್ನು ವಿಚಾರಿಸುತ್ತಿದ್ದರು. ಗೌಡರು "ಆರೋಗ್ಯವಾಗಿದ್ದೇನೆ. ಈ ವಯಸ್ಸಿನಲ್ಲಿ ಆರೋಗ್ಯ ಹೇಗಿರಬೇಕೋ ಹಾಗಿದೆ" ಎಂದು ಹೇಳುತ್ತಿದ್ದರು. ಬೆಳಿಗ್ಗೆ ವಾಕಿಂಗ್ ಹೋಗುತ್ತಿದ್ದರು. ದಿನಪತ್ರಿಕೆಗಳನ್ನು ಓದುತ್ತಿದ್ದರು. ರೇಡಿಯೋ ಕೇಳುತ್ತಿದ್ದರು. ಜೊತೆಗೆ ವ್ಯವಸಾಯ ದನಕರುಗಳ ಕಡೆಗೆ ಗಮನವಿರುತ್ತಿತ್ತು. ವ್ಯವಸಾಯ ಬಹಳ ಒಳ್ಳೆಯ ಕಸುಬು, ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು ಎಂಬ ಸರ್ವಜ್ಞನ ತ್ರಿಪದಿಯನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಭೂಮಿ ತಾಯಿ ಶ್ರದ್ಧೆಯಿಂದ ಕೆಲಸ ಮಾಡುವವರನ್ನು ಕೈಬಿಡುವುದಿಲ್ಲ. ವ್ಯವಸಾಯವನ್ನು ಬಹಳ ಎಚ್ಚರಿಕೆಯಿಂದ ತನುಮನವಿಟ್ಟು ಕೆಲಸ ಮಾಡಿದರೆ ಕುಟುಂಬಕ್ಕೆ ಬೇಕಾದ ಆಹಾರ, ಆದಾಯ ಎಲ್ಲವೂ ಸಿಗುತ್ತದೆ ಎಂಬುದು ಮಣ್ಣಿನ ಮಗನಾಗಿದ್ದ ಗೌಡರ ನಂಬಿಕೆಯಾಗಿತ್ತು. ಯುವಕರು ವ್ಯವಸಾಯದಿಂದ ವಿಮುಖರಾಗುತ್ತಿದ್ದುದನ್ನು ಅವರು ಗಮನಿಸುತ್ತಿದ್ದರು.

ಕೆಲವು ರಾಜಕೀಯ ಸಹದ್ಯೋಗಿಗಳು "ರಾಜಕೀಯ, ಅಧಿಕಾರ ಎಲ್ಲಾ ಬಿಟ್ಟು ಊರಲ್ಲಿ ಇದ್ದೀರಲ್ಲಾ ಏನೂ ಬೇಜಾರು ಆಗುತ್ತಿಲ್ಲವೇ" ಎಂದು ಕೇಳುತ್ತಿದ್ದರು.

ಮಾದಯ್ಯಗೌಡರು; ಅದಕ್ಕೆ ನಾನು ಪಾರ್ಲಿಮೆಂಟ್ ಸದಸ್ಯನಾಗಿದ್ದೆ. ಆಗ ಅಧಿಕಾರ ಇದೆ ಎಂದು ಸಂತೋಷವಾಗಲೂ ಇಲ್ಲಾ, ಈಗ ಅವೆಲ್ಲಾ ಇಲ್ಲ ಎಂಬ ದುಃಖವೂ ಇಲ್ಲ. ಏನಿದ್ದರೂ, ಇಲ್ಲದಿದ್ದರೂ ಅಷ್ಟೇ ನನಗೆ ಎಂದು ಜನರಿಗೆ ಹೇಳುತ್ತಿದ್ದರು.

ಮನೆಯಲ್ಲಿ ಹಣಕಾಸಿನ ಅಡಚಣೆ ಉಂಟಾದಾಗ "ನಾನು ಏನೂ ಹಣಕಾಸು ಉಳಿತಾಯ ಮಾಡದೆ, ಟೌನಿನಲ್ಲಿ ಆಸ್ತಿ ಪಾಸ್ತಿ ಮಾಡದೆ ನಿಮಗೆಲ್ಲಾ ಅನ್ಯಾಯ ಮಾಡಿದ್ದೇನೇನೋ ಎಂದು ಕೆಲವೊಮ್ಮೆ ನನಗೆ ಅನಿಸುತ್ತದೆ" ಎಂದು ಕುಟುಂಬದವರಿಗೆ ಹೇಳುತ್ತಿದ್ದರು. ಅನೇಕ ಅನುಕೂಲಸ್ಥರು ಆ ಕೆಲಸ ಈ ಕೆಲಸ ಎಂದು ಕಾಗದ ಪತ್ರ ಕೇಳಿಕೊಂಡು ಶಿಫಾರಸ್ಸಿಗೆ ಬರುತ್ತಿದ್ದರು. ನನ್ನ ಆಪ್ತರೇ ಮುಖ್ಯಮಂತ್ರಿಗಳಾಗಿದ್ದರು, ಪ್ರಭಾವಶಾಲಿ ಸಚಿವರಾಗಿದ್ದರು ಕೆಲಸಗಳು ಆಗುತ್ತಿದ್ದವು. ನಾನು ಕೇಳದಿದ್ದರೂ ಅನುಕೂಲಸ್ಥರು ದುಡ್ಡು ಕೊಡುವುದಕ್ಕೆ ಬರುತ್ತಿದ್ದರು. ಕೆಲವರು ಸುಮ್ಮನೆ ಇಟ್ಟು ಹೋಗುತ್ತಿದ್ದರು. ನಾನು ಅದೆಲ್ಲಾ ಬೇಡ ಎನ್ನುತ್ತಿದ್ದೆ. ನ್ಯಾಯವಾದ ಮಾರ್ಗದಲ್ಲಿಯೇ ನನಗೆ ಬಂದ ಆದಾಯದಲ್ಲಿ ಬೆಂಗಳೂರು ಮತ್ತು ರಾಮನಗರದ ಸುತ್ತಮುತ್ತ ಒಂದೆರಡು ಎಕರೆ ಜಮೀನು ತೆಗೆದುಕೊಂಡಿದ್ದರೆ ಅಥವಾ ಒಂದೆರಡು ಕಡೆ ನಿವೇಶನಗಳನ್ನು ಮಾಡಬಹುದಾಗಿತ್ತು. ಆದರೆ ಅದಾವುದೂ ನನಗೆ ಇಷ್ಟವಾಗುತ್ತಿರಲಿಲ್ಲ. ಇದ್ದುದರಲ್ಲಿ ತೃಪ್ತಿ ಹೊಂದುವ ಸ್ವಭಾವ ನನ್ನದಾಗಿತ್ತು. ನನ್ನದಲ್ಲದ್ದಕ್ಕೆ ನಾನು ಎಂದು ಆಸೆಪಡಲಿಲ್ಲ. ಅದರ ಅಗತ್ಯವೂ ಕಾಣಲಿಲ್ಲ". ಇದು ಗೌಡವ ಮನೋಭಾವವಾಗಿತ್ತು. ಗೌಡರ ನಿಯತ್ತು ಪ್ರಾಮಾಣಿಕತೆಗಳು ಪ್ರಶ್ನಾತೀತವಾಗಿದ್ದವು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅಳಿಲು ಸೇವೆ ಮಾಡಿದ ತೃಪ್ತಿ ಅವರಿಗಿತ್ತು. ಸಾರ್ವಜನಿಕರಿಗೆ ಅವರ ಇತಿಮಿತಿಯಲ್ಲಿ ಕೈಲಾದಷ್ಟು ಸೇವೆ ಮಾಡಿದ್ದರು. "ಜನರು ನನ್ನನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದರು; ಸಾರ್ವಜನಿಕ ಸೇವೆ ಮಾಡಬೇಕು, ಅದನ್ನು ಮಾಡಿದೆ. ಎಷ್ಟು ಸಾಧ್ಯವೋ ಅಷ್ಟು ಋಣ ತೀರಿಸಿದೆ ಎಂಬ ತೃಪ್ತಿಯಿದೆ" ಎಂದು ಹೇಳುತ್ತಿದ್ದರು. ಸಾರ್ವಜನಿಕ ಸೇವೆ ಎಂಬುದು ಕಷ್ಟ ಮತ್ತು ಕಡುಕಷ್ಟ ಎಂಬುದನ್ನು ಅವರು ಅರಿತುಕೊಂಡಿದ್ದರು. ಅದೆಷ್ಟೋ ಜನರು ಅವರಿಂದ ವಿವಿಧ ರೀತಿಯಲ್ಲಿ ಸಹಾಯ ಪಡೆದುಕೊಂಡು ಅನುಕೂಲವಂತರಾದರು. ಗೌಡರು ಉನ್ನತ ಸ್ಥಾನಮಾನದಲ್ಲಿದ್ದವರು. ಅವರ ಸ್ನೇಹಿತರು ಮುಖ್ಯಮಂತ್ರಿಗಳಾದರು, ಕೇಂದ್ರ ಮತ್ತು ರಾಜ್ಯ ಸಚಿವರುಗಳಾದರು. ಗೌಡರಿಂದ ನೆರವು ಪಡೆದ ಅನೇಕರು ಸರ್ಕಾರದ ಉದ್ಯೋಗಗಳಲ್ಲಿ ಉನ್ನತ ಸ್ಥಾನಮಾನಗಳನ್ನು ಪಡೆದುಕೊಂಡರು. ರಾಜಕೀಯದಲ್ಲಿ ದೊಡ್ಡ ಸ್ಥಾನಮಾನಗಳನ್ನು ಪಡೆದುಕೊಂಡರು. ಏನೂ ಇಲ್ಲದವರು ಅವರ ಕಣ್ಣು ಎದುರಿಗೆ ಸ್ಥಿತಿವಂತರಾಗಿ ಕೋಟ್ಯಾಧೀಶರಾದರು. ಸಮಾಜದಲ್ಲಿ ಗಣ್ಯರಾಗಿದ್ದ ಗೌಡರ ಮನೆಗೆ ಬಂದು ಹೋಗುವವರು ಹೆಚ್ಚಾಗಿದ್ದರು. ವಂಶಸ್ಥರ ಸಂಖ್ಯೆ ದೊಡ್ಡದು. ಖರ್ಚು ವೆಚ್ಚಗಳಿಗೆ ಸಮಾನವಾಗಿ ಆದಾಯ ಪ್ರಾಮಾಣಿಕರಿಗೆ ಎಲ್ಲಿಂದ ಬರಬೇಕು?. ಆದರೂ

ಕುಟುಂಬದ ಆಯ-ವ್ಯಯಗಳನ್ನು ಸರಿದೂಗಿಸುತ್ತಾ ತಮ್ಮ ಊರಿನಲ್ಲಿ ಸ್ವಾಭಿಮಾನಿಯಾಗಿ ತೃಪ್ತಿಯಿಂದ ಜೀವನ ಸಾಗಿಸಿದರು. ಕುಟುಂಬದವರಿಗೆ ಏನೂ ಕೊರತೆಯಾಗದಂತೆ ಸಂತೋಷದಿಂದ ಇರುವಂತೆ ನೋಡಿಕೊಂಡರು. ಊರಲ್ಲಿದ್ದ ಮತ್ತು ನಗರದಲ್ಲಿದ್ದ ವಂಶಸ್ಥರೆಲ್ಲರೂ ಗೌಡರನ್ನು ಪ್ರೀತಿ ಗೌರವಗಳಿಂದಲೇ ನೋಡಿಕೊಂಡರು. ಕಿರಿಯರು ಇವರೊಂದಿಗೆ ಭಯ ಭಕ್ತಿಯಿಂದಲೇ ನಡೆದುಕೊಂಡರು. ವಂಶಸ್ಥರೆಲ್ಲರ ಪ್ರೀತಿ ಗೌರವಗಳನ್ನು ಗೌಡರು ಕೊನೆಯವರೆವಿಗೂ ಉಳಿಸಿಕೊಂಡಿದ್ದರು. ಗೌಡರು ಸಹ ವಂಶದ ಎಲ್ಲರನ್ನೂ ತಮ್ಮ ಮಕ್ಕಳಷ್ಟೇ ಪ್ರೀತಿಯಿಂದ ನೋಡಿಕೊಂಡಿದ್ದರು.

ಎಂತಹ ಕಷ್ಟಗಳು ಬಂದೆರಗಿದರೂ ತತ್ತರಿಸಿ ಹೋಗದ ಗಟ್ಟಿತನವನ್ನು ಗೌಡರು ಹೊಂದಿದ್ದರು. ಸಂತಾನ ಭಾಗ್ಯ ತಡವಾಗಿ ಅವರ ದಾಂಪತ್ಯ ಜೀವನದಲ್ಲಿ ದೊರೆಯಿತು. ಇಬ್ಬರು ಹೆಣ್ಣು ಮಕ್ಕಳ ನಂತರ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಮತ್ತೆ ಒಬ್ಬಳು ಪುತ್ರಿ ಹುಟ್ಟಿದಳು. ಬೆಳೆಯುತ್ತಿದ್ದ ಮಕ್ಕಳನ್ನು ನೋಡುತ್ತಿದ್ದಾಗ ಅವರ ಮನಸ್ಸಿನಲ್ಲಿ ಮಾನವ ಸಹಜವಾದ ವಿವಿಧ ಆಲೋಚನೆಗಳ ತರಂಗಗಳು ಉಂಟಾದವು. ರಾಜಕೀಯ ಜೀವನದ ಉತ್ತುಂಗದಲ್ಲಿದ್ದಾಗ 'ಮನಸ್ಸು ಮಾಡಿದ್ದರೆ ಸಾಕಷ್ಟು ಹಣವನ್ನು ನ್ಯಾಯಮಾರ್ಗದಲ್ಲಿಯೇ ಕೂಡಿಡಬಹುದಿತ್ತು. ಹೆಣ್ಣು ಮಕ್ಕಳಿಗಾಗಿ ಬಂಗಾರವನ್ನು ಕೊಂಡಿಡಬಹುದಿತ್ತು' ಎಂಬ ಆಲೋಚನೆಗಳು ಅವರ ಮನಸ್ಸಿನಲ್ಲಿ ಮೂಡಿ ಬಂದು ಬೇಗನೆ ಹಾರಿಹೋದವು. ಭ್ರಷ್ಟಾಚಾರವನ್ನು ಮಾಡದ ಆತ್ಮ ತೃಪ್ತಿಯನ್ನು ಅವರು ಹೊಂದಿದ್ದರು. ನ್ಯಾಯಮಾರ್ಗವಾಗಿ ತಮಗೆ ದೊರೆತ ಹಣವನ್ನು ಎಂದೂ ದುರ್ಬಳಕೆ ಮಾಡದ ಸಮಾಧಾನ ಅವರಿಗಿತ್ತು. ತಾವು ಗಳಿಸಿದ ಹಣವನ್ನು ಸತ್ಕಾರ್ಯಗಳಿಗೆ ಬಳಸಿದರು. ಹಿರಿಯ ಮಗಳನ್ನು ಮದುವೆಮಾಡುವ ಸಂದರ್ಭದಲ್ಲಿ ಮನೆಯ ಅಮೂಲ್ಯವಾದ ವಸ್ತುವೊಂದನ್ನು ಮಾರಾಟ ಮಾಡಬೇಕಾದ ಅನಿವಾರ್ಯತೆ ಉಂಟಾದುದು ಅವರ ಮನಸ್ಸನ್ನು ಕಲಕಿತು. ಗೌಡರು ದೈವಾಧೀನರಾದ ನಂತರ ಮಕ್ಕಳ ಜವಾಬ್ದಾರಿ ಧರ್ಮಪತ್ನಿ ಶಾರದಮ್ಮಣ್ಣಿಯವರ ಹೆಗಲ ಮೇಲೆ ಬಿದ್ದಿತು. ಶಾರದಮ್ಮಣ್ಣಿಯವರು ಮತ್ತೊಬ್ಬಳ ಮಗಳ ಮದುವೆಗಾಗಿ ಪಿತ್ರಾರ್ಜಿತವಾಗಿ ತಮಗೆ ಬಂದಿದ್ದ ಸ್ವಲ್ಪ ಜಮೀನನ್ನು ಅನಿವಾರ್ಯವಾಗಿ ಮಾರಾಟ ಮಾಡಿ ಮದುವೆ ಮಾಡಬೇಕಾಗಿ ಬಂದಿತು.

ಗೌಡರು ಬಹುಕಾಲ ಸಾರ್ವಜನಿಕ ಜೀವನದಲ್ಲಿದ್ದರು. ದಣಿವರಿಯದೆ ಸಮಾಜಕ್ಕೆ ಸೇವೆ ಸಲ್ಲಿಸಿದರು. ಅನೇಕ ಬಾರಿ ಊಟದ ಸಮಯದಲ್ಲಿ ಊಟ ಮಾಡಲಾಗುತ್ತಿರಲಿಲ್ಲ; ಕೆಲವೊಮ್ಮೆ ಕೆಲಸದೊತ್ತಡಗಳ ಕಾರಣವಾಗಿ ದೇಹಕ್ಕೆ ಸಕಾಲದಲ್ಲಿ ಸಾಕಷ್ಟು ವಿಶ್ರಾಂತಿ ದೊರೆಯುತ್ತಿರಲಿಲ್ಲ. ಕಾಲಚಕ್ರ ಉರುಳಿದಂತೆ ಅವರಿಗೆ ರಕ್ತದೊತ್ತಡದ

ಸಮಸ್ಯೆಯುಂಟಾಯಿತು. ಅಣ್ಣನ ಮಗ ಪ್ರಭು ಡಾಕ್ಟರ್ ಆಗಿದ್ದು ತಮ್ಮ ಪ್ರೀತಿಯ ಚಿಕ್ಕಪ್ಪನವರ ಆರೋಗ್ಯವನ್ನು ಭೇಟಿಯಾದಾಗ ಸೂಕ್ತ ತಪಾಸಣೆ ಮಾಡುತ್ತಿದ್ದರು. ಬಾಲು ಇಂಜಿನಿಯರ್ ಆಗಿದ್ದರು. ಅದು ಬಾಲು ಜರ್ಮನಿಗೆ ಹೋಗಿದ್ದ ಸಮಯ. ಒಮ್ಮೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಭುವನ್ನು ಕಾಣಲು ಗೌಡರು ಹೋಗಿದ್ದರು. ಅಲ್ಲಿಯೇ ತಲೆಸುತ್ತು ಎಂದವರು ಅಷ್ಟೇ, ದೈವಾಧೀನಾರಾಗಿಯೇ ಬಿಟ್ಟರು.

ಗೌಡರು ತೀರಿಕೊಂಡದ್ದು ತನ್ನ ಅಣ್ಣನ ಮಗ ಡಾ.ಪ್ರಭುವಿನ ಎದುರು, ಅವರಿದ್ದ ಆಸ್ಪತ್ರೆಯಲ್ಲಿ ಅವರ ಕೊಠಡಿಯಲ್ಲಿಯೇ. ಯಾವುದೋ ಕೆಲಸಕ್ಕೆ ಬೆಂಗಳೂರಿಗೆ ಬಂದಿದ್ದ ಅವರು ಊರಿಗೆ ಹೋಗುವ ಮುನ್ನ ಡಾ.ಪ್ರಭುವನ್ನು ನೋಡಿಕೊಂಡು ಹೋಗುವ ಸಂದರ್ಭದಲ್ಲಿ ನಡೆದ ಘಟನೆ ಅದು. ಡಾ.ಪ್ರಭು ಅಣ್ಣನ ಮಗನಾದರೂ, ಗೌಡರಿಗೆ ಬಹಳ ಪ್ರಿಯವಾಗಿದ್ದವರು, ಹತ್ತಿರವಾಗಿದ್ದವರು. ಪರಸ್ಪರ ಪ್ರೀತಿಯನ್ನು ಹಂಚಿಕೊಂಡಿದ್ದವರು. ಆ ನೋವು ಡಾ.ಪ್ರಭು ಅವರಲ್ಲಿ ಈಗಲೂ ಇದೆ. ಪ್ರಭು ಒಬ್ಬ ಡಾಕ್ಟರ್ ಆಗಿ ಅಂತಹ ಸಾವನ್ನು ಹತ್ತಿರದಿಂದ ಕಂಡು ಅಚ್ಚರಿಪಟ್ಟರು. ಇನ್ನೂ ಅಚ್ಚರಿಯ ಸಂಗತಿಯೆಂದರೆ, ನಲವತ್ತೈದು ವರ್ಷಗಳಿಗೂ ಹೆಚ್ಚುಕಾಲ ಜನರ ಪ್ರತಿನಿಧಿಯಾಗಿ ರಾಜಕೀಯ ಜೀವನದಲ್ಲಿದ್ದು, ಕಾರ್ಯನಿರ್ವಹಿಸಿ ಹೆಸರುಮಾಡಿ ಕೊನೆಯ ಉಳಿಸಿರೆಳೆದಾಗ ಅವರ ಬ್ಯಾಂಕ್ ಅಕೌಂಟಿನಲ್ಲಿ ಇದ್ದದ್ದು ಕೇವಲ ಒಂಭೈನೂರು ರೂಪಾಯಿಗಳು ಮಾತ್ರ! ಇದು ಆವರ ಪ್ರಾಮಾಣಿಕತೆ, ಹಾಗೂ ಆದರ್ಶ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿವೆ.

ಗೌಡರ ಪಾರ್ಥಿವ ಶರೀರವನ್ನು ಊರಿಗೆ ತಂದಾಗ ಬೇರೆ ಬೇರೆ ಕಡೆಯಲ್ಲಿದ್ದ ಬಂಧು-ಬಾಂಧವರು, ಸ್ನೇಹಿತರು, ಊರ ಜನರು, ಸುತ್ತಮುತ್ತಲಿನ ಊರಿನವರು ಅಪಾರ ಸಂಖ್ಯೆಯಲ್ಲಿ ಬಂದು ಸೇರಿದ್ದರು. ಹೆಣ್ಣು ಮಕ್ಕಳ ಗೋಳು ಹೇಳತೀರದು. ಗೌಡರು ಮಾಡಿದ ಸಹಾಯವನ್ನು ಅನೇಕರು ನೆನೆದು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. "ಇಂತಹ ಪುಣ್ಯಾತ್ಮರು ಎಲ್ಲಿ ಸಿಗುತ್ತಾರೆ; ಮತ್ತೆಲ್ಲಿ ಹುಟ್ಟುತ್ತಾರೆ" ಎಂದು ಗೌಡರ ಗುಣಗಾನವನ್ನು ಮಾಡುತ್ತಿದ್ದರು. ಏಕತಾರಿ ಚನ್ನಪ್ಪ ಅನಾಥ ಪ್ರಜ್ಞೆಯಿಂದ ತನ್ನ ಏಕತಾರಿಯೊಂದಿಗೆ ಬದುಕಿನ ನಶ್ವರತೆಯನ್ನು ಕುರಿತಂತಹ ತತ್ವಪದಗಳನ್ನು ಗದ್ಗದಿತವಾದ ಧ್ವನಿಯಲ್ಲಿ ನೀರು ತುಂಬಿದ ಕಣ್ಣುಗಳನ್ನು ಮುಚ್ಚಿಕೊಂಡು ಹಾಡುತ್ತಿದ್ದರು. ಜನ ಸಾಗರವೇ ತಿಮ್ಮಸಂದ್ರದಲ್ಲಿ ಸೇರಿತ್ತು. ಅನೇಕ ಗಣ್ಯರ, ಬಂಧು ಬಾಂಧವರ ಸಮ್ಮುಖದಲ್ಲಿ ಸಕಲ

ಸರ್ಕಾರಿ ಗೌರವಗಳೊಂದಿಗೆ ಗೌಡರ ಅಂತ್ಯಕ್ರಿಯೆ ಕ್ರಮಬದ್ಧವಾಗಿ ನಡೆಯಿತು. ಕುಟುಂಬದ ಆಪ್ತರಾದ ಕೆಂಗಲ್ ಹನುಂತಯ್ಯನವರು ಆಗ ಕೇಂದ್ರದ ರೈಲ್ವೇಮಂತ್ರಿಗಳಾಗಿದ್ದರು. ಗೌಡರ ನಿಧನದ ವಿಷಯವನ್ನು ತಿಳಿದು ತುಂಬಾ ದುಃಖಿತರಾಗಿ ತಿಮ್ಮಸಂದ್ರದ ಗೌಡರ ಮನೆಗೆ ಆಗಮಿಸಿ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು. ಆ ಸಂದರ್ಭದಲ್ಲಿ ಗೌಡರು ಹನುಮಂತಯ್ಯನವರಿಗೆ ವಿವಿಧ ರೀತಿಯಲ್ಲಿ ನೆರವಾದುದನ್ನು ಕೃತಜ್ಞತೆಯಿಂದ ಸ್ಮರಿಸಿದರು. ಸರಳತೆ ವಿನಯ ಹಾಗೂ ಆತ್ಮ ಗೌರವ ವ್ಯಕ್ತಿತ್ವವನ್ನು ಎತ್ತರಕ್ಕೇರಿಸುತ್ತವೆ. ಇಂತಹ ಸದ್ಗುಣಗಳನ್ನು ಗೌಡರು ಹೊಂದಿದ್ದರು.

❖

# ಅನುಬಂಧ – ೧

ವಿಧಾನ ಸಭೆ ೧೯೬೨ರ ಚುನಾವಣೆ

ಲೆಜಿಸ್ಲೇಟಿವ್ ಬಿಸಿನೆಸ್

ದಿ ಮೈಸೂರ್ ಲೀವ್–ಸ್ಟಾಕ್ ಇಂಪ್ರೂವ್‌ಮೆಂಟ್ ಬಿಲ್ ೧೯೫೧

೨೫ ಜನವರಿ ೧೯೫೧

ಸಭಾಪತಿ: ಶ್ರೀವಿ.ವೆಂಕಟಪ್ಪ, ವಿಧಾನ ಮಂಡಲದ ಸಭಾಂಗಣ, ಹಳೆಯ ಸಾರ್ವಜನಿಕ ಕಛೇರಿಗಳು, ಬೆಂಗಳೂರು.

**ಟಿ.ಮಾದಯ್ಯಗೌಡರು**

ಸ್ವಾಮಿ, ಈ ಮಸೂದೆಯ ವಿಚಾರವಾಗಿ ಅನೇಕ ನನ್ನ ಮಾನ್ಯ ಮಿತ್ರರು ಕೆಲಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಈ ಬಗೆಗೆ ನನ್ನ ಅಭಿಪ್ರಾಯವೇನಿದೆಯೆಂಬುದನ್ನು ಕೇವಲ ಎರಡು ಮಾತುಗಳಲ್ಲಿ ತಿಳಿಸಬೇಕೆಂದಿದ್ದೇನೆ. ಈ ಕಾನೂನಿನ ಉದ್ದೇಶವಿರತಕ್ಕದ್ದು ನಮ್ಮ ದೇಶದಲ್ಲಿರತಕ್ಕ ತಳಿಗಳನ್ನು ಅಂದರೆ ರಾಸುಗಳನ್ನು ಉತ್ತಮಪಡಿಸಬೇಕು, ಮತ್ತು ಹಾಗೆ ಉತ್ತಮಪಡಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದೇ ಆಗಿದೆ. ಇದರ ಉದ್ದೇಶವೇನೋ ಬಹಳ ಒಳ್ಳೆಯದೇ. ಆದರೆ ಇದರ ಅವಶ್ಯಕತೆ ಎಷ್ಟಿದೆ ಮತ್ತು ಇದರ ಅನುಕೂಲ ಪ್ರತಿಕೂಲಗಳೇನು ಎಂಬುದರ ಬಗ್ಗೆ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ.

ಮೊದಲನೆಯದಾಗಿ, ಈ ಕಾನೂನಿನ ಅವಶ್ಯಕತೆ ಎಲ್ಲಾ ಕಡೆಯೂ ಸಾರ್ವತ್ರಿಕವಾಗಿ ಬೇಕಾಗಿದೆಯೇ ಎಂದು ಆಲೋಚಿಸಿ ನೋಡಿದರೆ ಈ ಕಾನೂನಿನಲ್ಲಿ ಹೇಳಿರುವಂತೆ ಇದನ್ನು ಎಲ್ಲಾ ಕಡೆಯಲ್ಲೂ ಜಾರಿಗೆ ತಂದೇ ತರಬೇಕೆಂದು ಹೇಳಿರತಕ್ಕದ್ದು ಅಷ್ಟು ಸೂಕ್ತವಾಗಿಲ್ಲವೆಂದು ನನಗೆ ಅನ್ನಿಸುತ್ತಿದೆ. ಎಲ್ಲೆಲ್ಲಿ ಯಾವ ಯಾವ ಪ್ರಾಂತ್ಯದ ಜನಗಳು ಬೇಕೆಂದು ಕೇಳುತ್ತಾರೋ ಅಂಥಾ ಪ್ರದೇಶಕ್ಕೆ ಬೇಕಾದರೆ ಇದನ್ನು ತಾವು ಅನ್ವಯಿಸುವಂತೆ ಮಾಡಬಹುದು. ಹಾಗೆ ಮಾಡುವುದು ಸೂಕ್ತ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಹಾಕಿ, ಅಲ್ಲಿ ಅವರು ಎಲ್ಲವನ್ನೂ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತಾರೆ, ನಂತರ ನೋಡೋಣ. ನನಗೆ ತಿಳಿದ ಮಟ್ಟಿಗೆ ಯಾವ ಪ್ರಾಂತ್ಯದ ಜನರು ತಮಗೆ ಮಾತ್ರವೇ ಈ ಮಸೂದೆಯು ಅನ್ವಯಿಸುವಂತೆ ಮಾಡತಕ್ಕದ್ದು ಸೂಕ್ತ.

ಇನ್ನು ಕೆಲವು ವಿಚಾರದ ಬಗೆಗೆ ಈ ಮಸೂದೆಯಲ್ಲಿ ತಿಳಿಸಿರುವ ಪ್ರಕಾರ ರೈತರು ನಡೆಯದೆ ಹೋದರೆ ಅದರಿಂದ ಗೋಸಂಪತ್ತಿಗೆ ಅಷ್ಟು ಧಕ್ಕೆಯುಂಟಾಗುತ್ತದೆಯೆಂಬುದನ್ನು ನಾನು ನಂಬಲಾರೆ. ಗಿಡ್ಡಾಗಿರುವ ಹೋರಿಗಳು ಎರಡು ಹಲ್ಲುಗಳನ್ನು ಹಾಕುವ ವಯಸ್ಸಿಗೆ ಬಂದ ಕೂಡಲೇ ಅವುಗಳ ಬೀಜ ಹೊಡೆಸಬೇಕು, ಇಲ್ಲವೇ ಬೀಜದ ಹೋರಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಿ ತಕ್ಷಣವೇ ಲೈಸೆನ್ಸ್ ಪಡೆದುಕೊಳ್ಳಬೇಕೆಂದು ಈ ಮಸೂದೆಯಲ್ಲಿ ಹೇಳಿರುವಾಗ, ರಾಸಿನ ಮಾಲೀಕನಿಗೆ ಯಾವುದಾದರೂ ಅನಾನುಕೂಲವಾಗಿ ಹಾಗೆ ಮಾಡಲು ತಪ್ಪಿದರೆ ಆತನಿಗೆ ಈ ಮಸೂದೆಯಿಂದ ತುಂಬಾ ತೊಂದರೆ ಆಗಬಹುದು. ಅಲ್ಲದೆ ಕೆಲವು ತುಂಟ ದನಗಳಿರುತ್ತವೆ, ಆಂಥಾವುಗಳನ್ನು ಎಲ್ಲೋ ಇರತಕ್ಕ ಪಶುವೈದ್ಯ ಶಾಲೆಗೆ ತೆಗೆದುಕೊಂಡು ಹೋಗಲು ಅಸಾಧ್ಯವೆಂದು ಕಂಡುಬರುವ ವೇಳೆಯಲ್ಲಿ ಆಯಾ ಸ್ಥಳದಲ್ಲಿಯೇ ಇಡ ಮಾಡತಕ್ಕವರಿಂದಲೇ ಅಂದರೆ ಆ ಕಸುಬಿನಲ್ಲಿ ಪರಿಪೂರ್ಣ ಪಾರಂಗತರಾಗಿರತಕ್ಕವರಿಂದಲೇ ಮಾಡಿಸಿದರೂ ಪರವಾಗಿಲ್ಲವೆಂಬ ಒಂದು ಅವಕಾಶ ಈ ಮಸೂದೆಯಲ್ಲಿ ಕಲ್ಪಿಸಬೇಕೆಂದು ನನ್ನ ಒಂದು ಸೂಚನೆ. ಆದರೆ ಈ ಇಡ ಮಾಡತಕ್ಕ ಪದ್ಧತಿ ನಮ್ಮ ಪ್ರಾಂತ್ಯದಲ್ಲಿ ಜಾರಿಯಲ್ಲಿಲ್ಲ. ಇದೆಲ್ಲ ಮಾಲೀಕನ ಇಷ್ಟಕ್ಕೇ ಬಿಡತಕ್ಕ ಕೆಲಸ. ಕೆಲವರು ಅದೇ ಉದ್ಯೋಗದಲ್ಲಿ ಹೆಚ್ಚು ಲಾಭಗಳಿಸಬೇಕೆಂಬ ಇರಾದೆಯಿಂದ ಹತ್ತಾರು ಆಳುಗಳನ್ನು ಕಟ್ಟಿಕೊಂಡು, ಒಳ್ಳೆಯ ಬೀಜದ ಹೋರಿಗಳನ್ನು ಸಾಕುತ್ತಾ ಹಣ ಗಳಿಸುತ್ತಿರುವಂಥ ಜನರು ಈಗಲೂ ಕೆಲಕೆಲವು ಹಳ್ಳಿಗಳಲ್ಲಿ ಇದ್ದೇ ಇದ್ದಾರೆ. ಆದರೆ ಎಲ್ಲರಿಗೂ ಈ ಉದ್ಯೋಗದಲ್ಲಿ ಲಾಭ ಹೊಂದುತ್ತೇವೆಂಬ ಭರವಸೆ ಇರುವುದಿಲ್ಲ. ಆದುದರಿಂದ ಇದಕ್ಕೆ ಯಾರು ಅನುಮತಿ ಪಡುತ್ತಾರೋ ಅಂಥವರ

ವಿಷಯದಲ್ಲಿಯೂ ಮತ್ತು ಎಲ್ಲಿ ಇದರ ಅವಶ್ಯಕತೆ ಆಗತ್ಯವೆಂದು ಕಂಡುಬರುತ್ತದೆಯೋ ಅಲ್ಲಿ ಮಾತ್ರ ಇದು ಆಚರಣೆಯಲ್ಲಿರುವಂತೆ ಮಡುವುದು ಸಾಧ್ಯವಾದುದ್ದು. ಈಗಲೂ ಕೂಡ ಜಾರಿಯಲ್ಲಿರತಕ್ಕ ಪದ್ಧತಿಯನ್ನು ನೋಡಿದರೆ ಅನೇಕರು ತಮ್ಮ ತಮ್ಮ ಇಚ್ಛಾನುಸಾರ ಯಾರು ಖಾಯಿಷ್ ಪಡುತ್ತಾರೋ ಅಂಥವರೆಲ್ಲರೂ ತಮ್ಮ ಹಸುಗಳಿಂದ ಒಳ್ಳೆಯ ತಳಿ ದೊರಕಿಸಿಕೊಳ್ಳಲು ಬೀಜದ ಹೋರಿಗಳಿರತಕ್ಕ ಕಡೆ ಹೋಗಿ ಅವರು ಕೇಳಿದಷ್ಟು ಹಣ ಕೊಟ್ಟು ತಮ್ಮ ಹಸುಗಳಿಗೆ ಹೋರಿ ಕೊಡಿಸಿಕೊಂಡು ಬರುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಈ ಪಶುವೈದ್ಯ ಇಲಾಖೆಯವರೂ ಸಹ ಒಂದೊಂದು ವೇಳೆ ಅಂಥ ಮಾದರೀ ರೈತನು ದನಗಳನ್ನು ಹೇಗೆ ಸಾಕುತ್ತಿದ್ದಾನೆಂಬ ವಿಧಾನದಲ್ಲಿ ಆತನಿಂದ ಕಲಿತುಕೊಳ್ಳಬೇಕಾದ ವಿಚಾರಗಳು ಬೇಕಾದಷ್ಟಿರುತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮ್ಮಲ್ಲೆಲ್ಲಾ ಅಮೃತ್‌ಮಹಲ್ ಇಲಾಖೆಯ ರಾಸುಗಳನ್ನೂ ಮತ್ತು ಹಳ್ಳಿಕಾರ್ ಜಾತಿಯ ರಾಸುಗಳನ್ನೂ ಹೆಚ್ಚಾಗಿ ಸಾಕುವ ವಾಡಿಕೆ. ಸಾಮಾನ್ಯವಾಗಿ ವ್ಯವಹಾರ ಈ ಸಂಬಂಧವಾಗಿ ಇಷ್ಟು ಸುಗಮವಾಗಿ ನಡೆದುಕೊಂಡು ಹೋಗುತ್ತಿರುವ ವೇಳೆಯಲ್ಲಿ ಹೀಗೆ ಜನರು ಒಂದು ಲೈಸೆನ್ಸ್ ಪಡೆದೇ ಬೀಜದ ಹೋರಿಗಳನ್ನಿಡಬೇಕೆಂದೂ ಅಥವಾ ಸಕಾಲದಲ್ಲಿ ಬೀಜ ತೆಗೆಸದೆ ಬಿಟ್ಟು ಬಿಟ್ಟ ರೈತನಿಗೆ ಶಿಕ್ಷೆ ವಿಧಿಸಲಾಗುತ್ತೆಂದೂ ಹೇಳುವುದು ಅಷ್ಟು ಸಾಧುವಾಗಿ ಕಾಣುತ್ತಿಲ್ಲ. ಒಂದು ವೇಳೆ ಒಂದು ಪ್ರದೇಶದಲ್ಲಿರತಕ್ಕ ಜಾನುವಾರುಗಳೆಲ್ಲಾ ಬರಿ ಗಿಡ್ಡಗಳಾಗಿದ್ದರೆ ಆಗ ಅವರು ಬೀಜದ ಹೋರಿಗೆ ಎಲ್ಲಿಗೆ ಹೋಗಬೇಕು? ಅಥವಾ ಈ ಒಂದು ಕಾನೂನಿನ ಹೆದರಿಕೆಗಾಗಿ ಅವರು ೫೦-೬೦ ಮೈಲಿ ಹೋಗಲು ಸಾಧ್ಯವೇ? ಈ ಎಲ್ಲ ಅಂಶಗಳನ್ನೂ ಕಾನೂನು ತರುವ ಮುನ್ನ ಸರ್ಕಾರದವರು ಆಲೋಚನೆ ಮಾಡಿ ನೋಡಬೇಕು. ಈ ಎಲ್ಲಾ ಕಾರಣಗಳಿಂದ ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಒಪ್ಪಿಸುವುದು ತಕ್ಷಣಕ್ಕೆ ಸಾಧುವಾಗಿದೆಯೆಂದು ನನಗೆ ಅನ್ನಿಸುತ್ತದೆ. ಇದರಲ್ಲಿ ಅನೇಕ ಭಾಗಗಳಲ್ಲಿ ತಿದ್ದುಪಡಿಯಾಗಬೇಕಾದಂಥ ವಿಷಯಗಳು ಬೇಕಾದಷ್ಟಿವೆ; ಅವುಗಳ ತಿದ್ದುಪಡಿ ಕೂಡ ಅತ್ಯಾವಶ್ಯಕ. ಈ ಸಂಬಂಧವಾಗಿ ನನ್ನ ಮಾನ್ಯ ಮಿತ್ರರಾದ ಶ್ರೀಗುಂಡಪ್ಪಗೌಡರು ಅನೇಕ ವಿಚಾರಗಳನ್ನು ಈಗಾಗಲೇ ತಿಳಿಸಿದ್ದಾರೆ. ಆದರೆ ನಾನು ಕೆಲವು ಹೊಸ ವಿಷಯಗಳನ್ನು ತಿಳಿಸಬೇಕೆಂದಿದ್ದೇನೆ.

ಈಗ ಇಲಾಖೆಯವರು ಒಬ್ಬ ಮನುಷ್ಯನಿಗೆ ಒಂದು ನೋಟೀಸ್ ಕೊಟ್ಟು "ನೀನು ನಿನ್ನ ಹೋರಿಯನ್ನು ತಂದು ನಮ್ಮ ಮುಂದೆ ಹಾಜರ್ಮಾಡಿ ಲೈಸೆನ್ಸ್ ಪಡೆಯಬೇಕು" ಎಂಬು ಹಾಗೆ ಕಳುಹಿಸುವ ನೋಟೀಸಿನಲ್ಲಿ ಅದು ಹಳ್ಳಿಯಲ್ಲಿ ಯಾರಿಗೆ ಜಾರಿಯಾಗಬೇಕಾಗಿತ್ತೋ ಆತನಿಗೆ ಜಾರಿಯಾಗದೆ ಬೇರೊಬ್ಬನಿಗೆ ಜಾರಿಯಾಗಿ ಆತನಿಗೆ

ಅದರ ವಿಚಾರವೇ ಗೊತ್ತಿಲ್ಲದೆ ಆತನು ಸುಮ್ಮನಾಗಿ ಬಿಟ್ಟರೆ, ಆತನಲ್ಲಿ ರಾಸಿರಲಿ ಅಥವಾ ಇಲ್ಲದಿರಲಿ ಆತನಿಗೆ ಆ ನೋಟೀಸ್ ಪ್ರಕಾರ ಶಿಕ್ಷೆಯಾಗಬೇಕಾಗುತ್ತದೆ. ಇದರಲ್ಲಿ ಇಂಥಾ ಅನಾನುಕೂಲಗಳಾಗಲು ಸಾಕಷ್ಟು ಅವಕಾಶವಿದೆಯೆಂದು ನನಗೆ ಅನ್ನಿಸುತ್ತಿದೆ. ಆದರೆ ಇಂಥಾದ್ದನ್ನೆಲ್ಲಾ ಬದಲಾಣೆ ಮಾಡುವುದಕ್ಕೆ ಇನ್ನೂ ಅವಕಾಶವಿದೆ. ಇದು ಸೆಲೆಕ್ಟ್ ಸಮಿತಿಯ ಮುಂದೆ ಹೋದಾಗ ಇದನ್ನೆಲ್ಲಾ ಅವರು ಆಲೋಚಿಸಲು ಅವಕಾಶವಿದೆ. ಇದೂ ಅಲ್ಲದೆ ಯಾರೋ ಒಬ್ಬ ಅಧಿಕಾರಿ ಎಲ್ಲೋ ಒಂದು ಮೂಲೆಯಲ್ಲಿ ಕುಳಿತುಕೊಂಡು ಯಾವುದೋ ಒಬ್ಬ ಮನುಷ್ಯನಿಗೆ ನೀನು ನಿನ್ನ ಹೋರಿಯನ್ನು ಪರೀಕ್ಷೆಗಾಗಿ ಇಂಥಾ ಸ್ಥಳಕ್ಕೆ ಹಾಜರ್ಮಾಡಬೇಕೆಂದು ಒಂದು ನೋಟೀಸ್ ಕೊಟ್ಟರೆ, ಆಗ ಆ ಮನುಷ್ಯ ಆ ಹೋರಿಯನ್ನು ಆತನಿರುವ ಜಾಗಕ್ಕೆ ಸಾಗಿಸಿಕೊಂಡು ಹೋಗಬೇಕು. ತಂಪು ಹೊತ್ತಿನಲ್ಲಿ ಅದನ್ನು ಸಾಗಿಸಿಕೊಂಡು ಹೋದರೆ ಅಧಿಕಾರಿಯು ಆ ವೇಳೆಯಲ್ಲಿ ಹಾಜರಿರುವುದಿಲ್ಲ. ಅವರು ಹಾಜರಾಗುವುದೇ ಒಳ್ಳೆ ಬಿಸಿಲು ಬಲಿತ ನಂತರ. ಹಾಗೆ ಬಲಿತ ಬಿಸಿಲಿನಲ್ಲಿ ಇಂಥಾ ಬೀಜದ ಹೋರಿಗಳನ್ನು ಹೊಡೆದುಕೊಂಡು ಹೋಗತಕ್ಕದ್ದು ಬಹಳ ಕಷ್ಟ. ಕೆಲವು ವೇಳೆ ಒಂದೊಂದು ಬೀಜದ ಹೋರಿಯನ್ನು ಸಾಗಿಸಿಕೊಂಡು ಹೋಗಲು ನಾಲ್ಕಾರು ಜನರ ನೆರವು ಬೇಕಾಗುತ್ತದೆ. ಅಷ್ಟೇ ಅಲ್ಲದೆ ಅಂಥಾ ಬಿಸಿಲು ಕಾಲದಲ್ಲಿ ಆ ಜಾನುವಾರಿಗೆ ಹುಲ್ಲು ಮೇವಿನ ಅನುಕೂಲತೆಗಳು ಎಲ್ಲಿಂದ ದೊರೆಯಬೇಕು? ಈ ಭೀತಿಗಳೆಲ್ಲಾ ಮಾಲೀಕನಿಗೆ ಇರುತ್ತದೆ. ಈ ತೊಂದರೆಗಳನ್ನೆಲ್ಲಾ ತಪ್ಪಿಸಲು ರೈತರು ತಮ್ಮ ರಾಸುಗಳನ್ನು ತರುವ ಬದಲು ಅದನ್ನು ಪರೀಕ್ಷೆ ಮಾಡತಕ್ಕ ಆಫೀಸರೇ ಆಯಾ ಸ್ಥಳಕ್ಕೆ ಹೋಗಿ ಅದನ್ನು ಪರೀಕ್ಷೆ ಮಾಡುವಂತೆ ಮಾಡಿದರೆ ಬಹಳ ಉತ್ತಮವಾಗಿರುತ್ತದೆ. ಅಷ್ಟೇ ಅಲ್ಲದೆ ಹಾಗೆ ಒಬ್ಬೊಬ್ಬ ಅಧಿಕಾರಿಯೂ ತನ್ನ ಸರಹದ್ದಿಗೆ ಸೇರಿರತಕ್ಕ ಗ್ರಾಮಗಳನ್ನೆಲ್ಲಾ ಗಸ್ತು ಮಾಡಿ ಪ್ರತಿಯೊಂದು ಗ್ರಾಮದಲ್ಲೂ ಎಷ್ಟೆಷ್ಟು ಬೀಜದ ಹೋರಿಗಳಿರುತ್ತವೆಂಬ ಬಗ್ಗೆ ಮತ್ತು ಅಂಥ ಪ್ರತಿಯೊಂದು ಹೋರಿಯ ಬಗ್ಗೆ ಒಂದು ಚರಿತ್ರೆಯನ್ನೇ ಬರೆದು ತಮ್ಮ ಕಚೇರಿಗಳಲ್ಲಿ ಇಡತಕ್ಕದ್ದು ಅತ್ಯಾವಶ್ಯಕವೆಂದು ಹೇಳುತ್ತೇನೆ ಹೀಗೆ ಆಯಾಯ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಹೋಗುವಂತೆ ಮಾಡದಿದ್ದಲ್ಲಿ ಹೋರಿ ಸಾಕತಕ್ಕ ರೈತರಿಗೆ ಈ ಕಾನೂನಿನ ದೃಷ್ಟಿಯಲ್ಲಿ ಎಷ್ಟು ಅನುಕೂಲವಾಗುತ್ತದೆಂದು ಭಾವಿಸಲಾಗಿದೆಯೋ ಅಷ್ಟೂ ತಪ್ಪಿ ಹೋಗುವುದಲ್ಲದೆ ರೈತರಿಗೆ ಇದರಿಂದ ಬಹಳ ತೊಂದರೆಯೂ ಆಗುತ್ತದೆ. ಆದ್ದರಿಂದ ಇದನ್ನು ಬದಲಾಯಿಸಬೇಕೆಂದು ಹೇಳುತ್ತೇನೆ. ರೈತರಿಗೊಂದು ತೊಂದರೆ ಇಂಥಾ ಕಾನೂನಿನಿಂದ ಆಗಬಾರದೆಂದು ನನ್ನ ಅಭಿಲಾಷೆ.

ಎರಡನೆಯದಾಗಿ, ಈಗ ಒಬ್ಬ ರೈತ ತಾನೇ ಇಷ್ಟಪಟ್ಟು ಕಷ್ಟದಿಂದ ಒಂದು ಹೋರಿಯನ್ನು ಸಾಕುತ್ತಾನೆಂದು ಭಾವಿಸೋಣ. ಅಂಥಾ ಮನುಷ್ಯ ಲೈಸೆನ್ಸ್ ತೆಗೆದುಕೊಳ್ಳಲು ಯಾವಾಗಲೂ ಸಿದ್ಧನಾಗಿದ್ದೇ ಇರುತ್ತಾನೆ. ಅಂಥವರಿಗೆ ಇಲಾಖೆಯವರೂ ಸಹ ಲೈಸೆನ್ಸ್ ಕೊಡಲು ಸಿದ್ಧವಾಗಿಯೇ ಇರುತ್ತಾರೆ. ಅಂಥಾ ರೈತರಿಗೆ ಈ ಕಾನೂನಿನಿಂದ ಅನುಕೂಲವೇ ಹೊರತು ಪ್ರತಿಕೂಲವಿಲ್ಲ. ಆದರೆ ಎಲ್ಲರೂ ಇದೇ ಪರಿಸ್ಥಿತಿಯಲ್ಲಿರುತ್ತಾರೆಂದು ಭಾವಿಸುವುದು ಉಚಿತವಲ್ಲ. ಆದುದರಿಂದ ಇಷ್ಟಪಟ್ಟವರಿಗೆ ಮಾತ್ರ ಇದು ಅನ್ವಯಿಸಿ, ಅಪೇಕ್ಷೆ ಪಡೆದವರಿಗೆ ತೊಂದರೆ ಉಂಟಾಗದಂತೆ ಕಾನೂನಿನಲ್ಲಿ ಅವಕಾಶವಿರಬೇಕು. ಆ ರೀತಿ ಸರ್ಕಾರದವರು ರಿವೈಜ್ ಮಾಡಬಹುದು. ಹಾಗೆ ಮಾಡದೆ ಪ್ರತಿಯೊಬ್ಬರೂ ಈ ಕಾನೂನಿಗೆ ತಲೆಬಾಗಬೇಕೆಂದು ಹೇಳುವುದಾದರೆ ಮೊಳಕಾಲ್ಮೂರುವಿನಲ್ಲಿರತಕ್ಕ ಯಾರೋ ಒಬ್ಬ ಮನುಷ್ಯ ತನ್ನ ಬಳಿ ಇರುವ ರಾಸು ಆರೋಗ್ಯವಾಗಿದೆಯೇ ಅಥವಾ ಇಲ್ಲವೇ, ಖಾಯಿಲೇ ಆಗಿದೆಯೇ ಎಂಬುದನ್ನು ಪರೀಕ್ಷೆ ಮಾಡಿಸಲು ಬೆಂಗಳೂರಿಗೇ ಬರಬೇಕೆಂದು ಹೇಳಿದರೆ, ಆತನು ಹಾಗೆ ಮಾಡಲು ತನಗೆ ಬಹಳ ತೊಂದರೆಗಳಿವೆಯೆಂದು ಒಂದು ಅರ್ಜಿ ಹಾಕಿ, ಅದು ಮೇಲಕ್ಕೆ ಹೋಗಿ ಆತನಿಗೆ ಅದರಿಂದ ಪರಿಹಾರ ದೊರಕಲು ವಿಶೇಷ ಹಣ ವ್ಯಯ ಮತ್ತು ಕಷ್ಟ ನಷ್ಟಗಳಿಗೆ ಅವಕಾಶ ಉಂಟಾಗುತ್ತದೆ. ಅಲ್ಲದೆ ಸಕಾಲದಲ್ಲಿ ಒಂದೂ ತೀರ್ಮಾನವಾಗಲು ಅವಕಾಶವಿಲ್ಲ. ಈ ಕಾರಣದಿಂದ ಇಂಥಾ ಸಂದರ್ಭಗಳಲ್ಲಿ ಅಪೀಲು ಹೋಗಲು ಆಯಾಯ ಜಿಲ್ಲೆಗಳಲ್ಲಿರತಕ್ಕ ಪಶುವೈದ್ಯ ಅಧಿಕಾರಿಗಳೇ ಉಳ್ಳವರಾಗಿದ್ದಾರೆಂದು ತಾವು ಖಚಿತಪಡಿಸಬೇಕು. ಇಂಥಾದ್ದಕ್ಕೆಲ್ಲ ಕಾನೂನಿನಲ್ಲಿ ಅವಕಾಶ ಕಲ್ಪಿಸಬೇಕಾದ್ದು ಅತ್ಯಗತ್ಯ.

ಅದೂ ಅಲ್ಲದೆ ಲೈಸೆನ್ಸ್ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನು ತನಿಖೆಮಾಡುವುದಕ್ಕೆ ವೆರ್ಟನೆರಿ ಇಲಾಖೆಗೆ ಮಾತ್ರವಲ್ಲದೆ ರೆವೆನ್ಯೂ ಇನ್ಸ್‌ಪೆಕ್ಟರಿಗೂ ಅಧಿಕಾರ ಕೊಡಲು ಪ್ರಯತ್ನ ಪಟ್ಟಿದ್ದಾರೆ, ಅನೇಕ ದಕ್ಷರಾದ ರೆವೆನ್ಯೂ ಇನ್ಸ್‌ಪೆಕ್ಟರೂ ಇದ್ದಾರೆ; ಇಲ್ಲವೆಂಬ ಭಾವನೆಯಿಲ್ಲ. ಆದರೆ ರೈತರಿಗೆ ಕಿರುಕುಳ ಕೊಡದೇಯಿರುವವರಿಗೆ ಮಾತ್ರ ಅಧಿಕಾರ ಕೊಡುವುದು ಸೂಕ್ತವೆಂಬುದು ನನ್ನ ಸಲಹೆ. ಹಾಗೆ ಅಲ್ಲಲ್ಲಿ ಕೆಲವು ಬದಲಾವಣೆಮಾಡಿ ತಳಿ ಅಭಿವೃದ್ಧಿಯಾಗುವಂತೆಯೂ ರೈತರಿಗೆ ತೊಂದರೆಯಾಗದಂತೆಯೂ ಮಾಡಬೇಕು. ಈ ಒಂದು ದೃಷ್ಟಿಯಿಂದ ಈ ಮಸೂದೆಯನ್ನು ಅಂಗೀಕಾರ ಮಾಡಿದರೆ ಬಹುಶಃ ಒಳ್ಳೆಯದೆಂದು ಅಭಿಪ್ರಾಯ ಪಡುತ್ತೇನೆ. ಗೋಸಂಪತ್ತು ಅಭಿವೃದ್ಧಿಯಾಗುವುದಕ್ಕೆ ಏನೇನು ಅನುಕೂಲಬೇಕೋ ಅದನ್ನೆಲ್ಲಾ ಸರ್ಕಾರದವರು ಮಾಡಬೇಕು. ಮೈಸೂರು ದೇಶದಲ್ಲಿ ದನಗಳ ಸಾಕುವಿಕೆ ಚನ್ನಾಗಿರುವುದರಿಂದ

ಹೊರದೇಶದಿಂದ ನಮಗೆ ಪ್ರತಿವರ್ಷವೂ ಕೋಟ್ಯಾಂತರ ರೂಪಾಯಿ ಬರುತ್ತಿದೆ. ಈ ದಿವಸ ನಮ್ಮ ರೈತರು ಹಾಗೂ ಹೀಗೂ ತಮಗೆ ಅನೇಕ ತೊಂದರೆಯಿದ್ದರೂ ಕೂಡ ದನಕರುಗಳನ್ನು ಸಾಕುವ ಕಸಬನ್ನು ಚನ್ನಾಗಿ ತಿಳಿದುಕೊಂಡು ಆದಾಯ ಪಡೆಯುತ್ತಿದ್ದಾರೆ. ಇತರ ಕಸುಬುಗಳಂತೆಯೇ ಇದನ್ನೂ ಕಾಣುತ್ತಿದ್ದಾರೆ. ಹೀಗೆ ಮಾಡುವಾಗ ಅನೇಕ ತೊಂದರೆಗಳು ಬಂದುವು. ಮೇವಿಗೆ ಅನುಕೂಲ ತಪ್ಪಿ ಹೋಯಿತು. ಡಾಲ್ಡ ಬಂದು ತುಪ್ಪ, ಹಾಲು, ಮೊಸರಿಗೆ ಸಾಕಷ್ಟು ಪ್ರಾಮುಖ್ಯತೆ ಹೋಯಿತು.

ಅಧ್ಯಕ್ಷರು– ಬೆಲೆ ಸ್ವಲ್ಪ ಕಡಿಮೆಯಾಯಿತೆಂದು ಹೇಳುತ್ತೀರಾ?.

ಶ್ರೀಟಿ.ಮಾದಯ್ಯಗೌಡರು– ಹೌದು, ಡಾಲ್ಡ, ವನಸ್ಪತಿ ಮುಂತಾದವು ಬಂದು ತುಪ್ಪವನ್ನು ಮಾಡಿ ಮಾರಾಟ ಮಾಡುತ್ತಿದ್ದ ರೈತರಿಗೆ ಏನು ನಾಲ್ಕು ಕಾಸು ಸಿಕ್ಕುತ್ತಿತ್ತೋ ಅದೂ ಹೋಯಿತು.

ಮಾನ್ಯ ಶ್ರೀಟಿ.ಮರಿಯಪ್ಪನವರು– ತುಪ್ಪಕ್ಕೆ ಬೆಲೆ ಕಡಿಮೆಯಾಗಿಲ್ಲ. ಡಾಲ್ಡ ಉಪಯೋಗಿಸುತ್ತಿದ್ದಾರೆಂದು ಹೇಳಬಹುದು.

ಶ್ರೀಟಿ.ಮಾದಯ್ಯಗೌಡರು– ನಾನು ಹಾಗೆ ತಿಳಿದುಕೊಂಡಿದ್ದೇನೆ. ಅನೇಕ ಕಾರಣಗಳಿಂದ ಗೋಸಂಪತ್ತನ್ನು ವೃದ್ಧಿ ಮಾಡುವ ಉಪಕಸುಬಿಗೆ ಬಹು ತೊಂದರೆ ಬಂದಿದೆ. ಅದನ್ನು ನಿವಾರಣೆ ಮಾಡಿ ಅಭಿವೃದ್ಧಿ ಪಡಿಸುವುದು ಧರ್ಮ. ಅದಕ್ಕೆ ಸರ್ಕಾರದವರು ಸರಿಯಾದ ಪ್ರೋತ್ಸಾಹ ನೀಡಬೇಕಾದುದು ಧರ್ಮ. ಹಳ್ಳಿಕಾರ್ ದನಗಳು ಮತ್ತು ಅಮೃತಮಹಲ್ ರಾಸುಗಳು ಸಾಮಾನ್ಯವಾಗಿ ನಮ್ಮ ಕಡೆ ಪ್ರಗತಿ ಹೊಂದುತ್ತಿವೆ. ನಮ್ಮ ದನಗಳು ಹೊರಕ್ಕೆ ಸ್ವಲ್ಪ ಹೋಗುತ್ತಿವೆಯೆಂದು ಕೇಳಿದ್ದೇನೆ. ಇನ್ನಾವ ದೇಶದಲ್ಲೂ ಇಂಥ ಸೊಗಸಾದ, ಲಕ್ಷಣವಾದ ಮತ್ತು ಶಾಂತಿಯುತವಾದ ದನಗಳು ಸಿಕ್ಕುವುದಿಲ್ಲ, ಅದನ್ನು ಚನ್ನಾಗಿ ಕಾಪಾಡಿಕೊಂಡು ಬಂದು ಉತ್ತಮ ಸ್ಥಿತಿಗೆ ತರಬೇಕು. ಟಿಪ್ಪು ಸುಲ್ತಾನನ ಕಾಲದಲ್ಲೂ ಅಮೃತಮಹಲ್ ದನಗಳಿಗೆ ಎಷ್ಟು ಪ್ರೋತ್ಸಾಹವಿತ್ತೆಂಬುದನ್ನು ಚರಿತ್ರೆಯಲ್ಲಿ ನೋಡಬಹುದು. ಈಗ ಹಾಲು ಹೆಚ್ಚಾಗಿ ಸಿಕ್ಕುವುದಿಲ್ಲವೆಂದು ಅಮೃತಮಹಲ್ ದನಗಳಿಗೆ ಬದಲಾಗಿ ಸಿಂಧಿ ರಾಸುಗಳನ್ನು ಉಪಯೋಗಿಸುವುದು ಹೆಚ್ಚಿದೆ. ಇದು ದನಗಳ ತಳಿ ಕಡಿಮೆಯಾಗಲು ಕಾರಣವಾಗಿದೆ. ಆದರೆ ಆ ಹಸುಗಳಿಗೆ ಏನು ಆಹಾರಕೊಟ್ಟು ಪೋಷಿಸಿ ನಿಗಾ ಕೊಡುತ್ತಾರೋ ಅದನ್ನೇ ನಮ್ಮ ಹಳ್ಳಿಕಾರ್ ಹಸುಗಳಿಗೆ ಕೊಟ್ಟರೆ ಅವೂ ಕೂಡ ಬಹಳ ಮಟ್ಟಿಗೆ ಉತ್ತಮ ರೀತಿಯಲ್ಲಿ ಹಾಲು ಕೊಡಲು ಅನುಕೂಲವಾಗುತ್ತದೆ. ಅದನ್ನು ಮಾಡದೆ ಹಳ್ಳಿಕಾರ ಹಸುಗಳಿಗೆ ನೂರು ರೂಪಾಯಿ ಬೆಲೆಯಿದ್ದರೂ ಕೂಡ ಅವನ್ನು ಬಿಟ್ಟು ಒಂದು ಸಾವಿರ ರೂಪಾಯಿ ತೆತ್ತು ಸಿಂಧಿ ರಾಸುಗಳನ್ನು ತಂದು ಅವಕ್ಕೆ

ಪ್ರೋತ್ಸಾಹ ಕೊಡುತ್ತಿದ್ದಾರೆ. ಅದರಲ್ಲಿ ಅಷ್ಟು ಅನುಕೂಲ ಕಾಣುವುದಿಲ್ಲ. ಹಾಲು ಕೊಡುವುದರಲ್ಲಿ, ಗಾಡಿ ಎಳೆಯುವುದರಲ್ಲಿ, ವ್ಯವಸಾಯದ ಕೆಲಸ ವಗ್ಯೆರೆ ಮಾಡುವುದರಲ್ಲಿ ಅನುಕೂಲವಾಗಿರತಕ್ಕಂಥ ಉತ್ತಮ ರಾಸುಗಳು ನಮ್ಮ ದೇಶದಲ್ಲಿರುವಾಗ ಅವನ್ನು ಯಾವ ರೀತಿಯಲ್ಲಿ ಸಾಕಬೇಕೋ ಆ ರೀತಿ ಮಾಡದೆ ಪರದೇಶದ ದನಗಳನ್ನು ತರುತ್ತಿರುವುದು ಬಹಳ ಅನ್ಯಾಯ. ಈಚೆಗೆ ಅಜ್ಜಂಪುರದಲ್ಲಿರುವ ಬೀಜದ ಹೋರಿಗಳನ್ನು ಸಾಕತಕ್ಕ ಸಂಸ್ಥೆಯು ಸ್ವಲ್ಪ ಕೆಳಮಟ್ಟಕ್ಕೆ ಇಳಿದಿದೆಯೆಂದು ಕೇಳಿಬರುತ್ತಿದೆ. ಇದರಿಂದ ಬಹು ತೊಂದರೆ. ಪ್ರತಿಯೊಂದು ಜಿಲ್ಲೆಯಲ್ಲೂ ಉತ್ತಮ ತರಹೆಯ ಬೀಜದ ಹೋರಿಗಳನ್ನು ಸಾಕುವ ಕೇಂದ್ರವಿಲ್ಲ. ಅನೇಕ ಮಹನೀಯಯರು ಹೇಳಿದ ಹಾಗೆ ಒಳ್ಳೆಯ ಹೋರಿಗಳು ಬೇಕು. ಹಾಗೆ ಏರ್ಪಾಡಾದರೆ ಅಂದರೆ ಈ ಕಾನೂನಿನಿಂದ ಆ ರೀತಿಯಾದರೆ ಉತ್ತಮವಾಗುತ್ತದೆ. ಒಳ್ಳೆಯ ಹೋರಿಗಳನ್ನು ಸಾಕತಕ್ಕ ಕೇಂದ್ರವಿರಬೇಕು. ಅಂಥ ಕಡೆ ಸೊಗಸಾದ ಕರುಗಳನ್ನಿಡಿಸಿ ಹೋರಿಗಳನ್ನು ತಯಾರುಮಾಡಿ ಬೇರೆ ಬೇರೆ ಕಡೆಗಳಿಗೆ ಹಂಚಬೇಕು. ಒಂದೊಂದು ಕಡೆಗೆ ೫೦ ಹೋರಿಗಳು ಬೇಕೆಂದು ಶ್ರೀಗುಂಡಪ್ಪಗೌಡರು ಹೇಳಿದರು. ಆದರೆ ಅದಕ್ಕಿಂತ ಒಳ್ಳೆಯ ಕೇಂದ್ರವನ್ನು ಏರ್ಪಡಿಸಿ ಒಳ್ಳೆಯ ಹಸುಗಳನ್ನು ಮತ್ತು ಹೋರಿಗಳನ್ನು ತರಿಸಿ ಹೆಚ್ಚು ಉತ್ತಮವಾದರೆ ರಾಸುಗಳನ್ನು ಉತ್ಪನ್ನ ಮಾಡಿ ರೈತರಿಗೆ ಪ್ರೋತ್ಸಾಹ ಮಾಡುವುದು ಒಳ್ಳೆಯದು. ಅದು ಸಾಧ್ಯವಿಲ್ಲವೆಂದು ಭಾವಿಸಬಾರದು, ಹೀಗೆ ಮಾಡುವುದರಿಂದ ನಮ್ಮ ಪ್ರಾಂತ್ಯಕ್ಕೆ ಮಾತ್ರವಲ್ಲದೆ ಇಡೀ ಮೈಸೂರು ದೇಶಕ್ಕೇ ಸಹಾಯವಾಗುತ್ತದೆಂದು ಅನೇಕ ಮಹನೀಯರು ಹೇಳಿದ್ದಾರೆ. ಇತರ ಜಿಲ್ಲೆಗಳ ಮಾನ್ಯಮಿತ್ರರೂ ಅದೇ ಅಭಿಪ್ರಾಯಯವನ್ನು ಸೂಚಿಸಿದ್ದಾರೆ. ಆದ್ದರಿಂದ ಈ ಮಸೂದೆಯು ಇರಬೇಕು. ಇದಕ್ಕೆ ಪೂರ್ಣ ಬೆಂಬಲವಿದೆ. ಆದರೆ ಸೂಕ್ತ ಬದಲಾವಣೆ ಮಾಡಿ, ಕೂಲಂಕುಷವಾಗಿ ಸೆಲೆಕ್ಟ್ ಸಮಿತಿಯಲ್ಲಿ ಪರಿಶೀಲಿಸಿ ಜಾರಿಗೆ ತರಬೇಕೆಂದು ತಿಳಿಸಿ ಈ ಮಸೂದೆಯನ್ನು ಪುಷ್ಟೀಕರಿಸುತ್ತೇನೆ

❖

# ಅನುಬಂಧ - ೨

Legislative Assembly

Twenty-Fifth Day, Saturday, 2nd June 1951

The Assembly met in the Assembly Hall, Old Public Offices, Bangalore at Eight Minutes past Eight of the Clock.

Mr.Speaker (the Hon'ble Sri V.Venkatappa) in the Chair.

Sri T.Madiah Gowda- Sir, I beg to move: "That in item (xii) sub-clasue (1) for the words 'Control and Management of Adult Education" the word and "Encouragement of Social Education" shall be substituted.

ಸ್ವಾಮಿ ಈಗ "Control and Management of Adult Education Work in the District" ಎಂಬುದನ್ನು ಜಿಲ್ಲಾ ಬೋರ್ಡಿನ ಕಡ್ಡಾಯವಾದ ಒಂದು ಕರ್ತವ್ಯವೆಂದು ಹೇಳಿದೆ. ಈಗ ಇಂಡಿಯಾ ಸರ್ಕಾರದವರು ಅಡಲ್ಟ್ ಎಜುಕೇಷನ್ ಎಂಬುದಕ್ಕೆ ಬದಲಾಗಿ ಸೋಷಿಯಲ್ ಎಜುಕೇಷನ್ ಎಂದು ಹೇಳಿದ್ದಾರೆ. ಸೋಷಿಯಲ್ ಎಜುಕೇಷನ್ ಎಂಬುದು ಒಂದು ಬ್ರಾಡ್‌ಟರ್ಮ್. ಇಂಡಿಯಾ ಸರ್ಕಾರದವರು ಆ ಶಬ್ಧವನ್ನು ಉಪಯೋಗಿಸುತ್ತಿರುವುದರಿಂದ ಬಹುಶಃ ಇಂಡಿಯಾದಲ್ಲೆಲ್ಲಾ ಅಡಲ್ಟ್ ಎಜುಕೇಷನ್ ಎನ್ನುವುದಕ್ಕೆ ಬದಲಾಗಿ ಸೋಷಿಯಲ್ ಎಜುಕೇಷನ್ ಎಂಬುದಾಗಿರಬೇಕೆಂದು ಮಾಡಬಹುದೆಂದು ಗೊತ್ತಾಗಿದೆ. ಅದರಲ್ಲೂ ಇದು ಜಿಲ್ಲಾ

ಬೋರ್ಡಿನ ಆಬ್ಲಿಗೇಟರಿ ಡ್ಯೂಟಿಯಾಗಿದೆ. ಅಡಲ್ಟ್ ಎಜೂಕೇಷನ್ ಎಂಬುದು ಒಂದು ಟೆಕ್ನಿಕಲ್ ಸಬ್ಜೆಕ್ಟ್ ಎಂದು ನನ್ನ ಭಾವನೆ. ಅದು ಸಂಸ್ಥಾ ನಾಮಳೆ ಒಟ್ಟಿನಲ್ಲಿ ಒಂದು ನೀತಿಗನುಗುಣವಾಗಿರಬೇಕು. ಒಂದು ಟೆಕ್ಸ್ಟ್‌ಬುಕ್ ತಯಾರುಮಾಡಿದರೂ, ಲೈಬ್ರೆರಿ ಮಾಡಿದರೂ ಎಲ್ಲಾ ವಿಧದಲ್ಲೂ ಕೂಡ ಒಂದು ಸಾಮಾನ್ಯವಾದ ನೀತಿಯನ್ನನುಸರಿಸಬೇಕಾದ್ದು ಅಗತ್ಯ. ಈ ಕಾಮನ್ ಪಾಲಿಸಿಯನ್ನು ಒಂದು ಸರಿಯಾದ ಮಟ್ಟದಲ್ಲಿಡುವುದು ಅಗತ್ಯ. ಇಲ್ಲದಿದ್ದರೆ ಜಿಲ್ಲಾ ಬೋರ್ಡಿನವರಿಗೆ ಕಂಟ್ರೋಲ್ ಮತ್ತು ಮ್ಯಾನೇಜ್‌ಮೆಂಟ್ ವಹಿಸಿದರೆ ಬೇರೆ ಬೇರೆ ಜಿಲ್ಲೆಯಲ್ಲಿ ಬೇರೆ ಬೇರೆ ನೀತಿಯನ್ನು ಅನುಸರಿಸುವುದರಿಂದ ಏನೊಂದು ಉದ್ದೇಶಪಟ್ಟಿದ್ದೇವೆಯೋ ಅದನ್ನು ಸಾಧಿಸುವುವಕ್ಕೆ ಅವಕಾಶವಾಗಲಾರದು. ಆದರೆ ಜಿಲ್ಲಾ ಬೋರ್ಡಿಗೆ "Spread and Encouragement" ಎಂದು ಅಧಿಕಾರವಿರಬೇಕೆಂಬ ಉದ್ದೇಶವಿದ್ದರೆ ಒಳ್ಳೆಯದು ಎಂದು ಅಭಿಪ್ರಾಯವಿದೆ. ಈ ಒಂದು ದೃಷ್ಟಿಯಿಂದ ಇದು ಅಗತ್ಯವಾದ ಒಂದು ಬದಲಾವಣೆಯೆಂದು ಭಾವಿಸುತ್ತೇನೆ. ಈ ವಿಚಾರವಾಗಿ ಮಾನ್ಯ ಪ್ರಧಾನ ಮಂತ್ರಿಗಳಲ್ಲೂ ಮಾತನಾಡಿದ್ದೆ. ಈ ವಿಧವಾದ ಬದಲಾಣೆಯಾಗಬಹುದೆಂದು ಅವರೂ ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಸರ್ಕಾರದವರು ಒಪ್ಪಿದರೆ ಬಹಳ ಒಳ್ಳೆಯದಾಗುತ್ತದೆ. ಅದ್ದರಿಂದ ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

❖

## ವಿಕಸನ

**ಮಹಾಪೋಷಕರು**

ಜಗದ್ಗುರು ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು

**ಅಧ್ಯಕ್ಷರು**

ಹ.ಕ. ರಾಜೇಗೌಡ

**ಉಪಾಧ್ಯಕ್ಷರು**

ಡಾ. ಪದ್ಮಾಶೇಖರ್

**ಪ್ರಧಾನ ಕಾರ್ಯದರ್ಶಿ**

ಡಾ. ಡಿ.ಕೆ. ರಾಜೇಂದ್ರ

**ಕಾರ್ಯದರ್ಶಿಗಳು**

ಡಾ. ಸೋಮಶೇಖರಗೌಡ

ಪ್ರೊ. ಎಂ.ಜಿ. ಚಂದ್ರಶೇಖರಯ್ಯ

**ಸದಸ್ಯರು**

| | |
|---|---|
| ಡಾ. ನಲ್ಲೂರು ಪ್ರಸಾದ್ | : ಪ್ರೊ. ಬಿ. ಜಯಪ್ರಕಾಶ ಗೌಡ |
| ಡಾ. ಸಂಧ್ಯಾರೆಡ್ಡಿ | : ಪ್ರೊ. ಕೆ. ಪುಟ್ಟಯ್ಯ |
| ಡಾ. ಅಂಬಳಿಕೆ ಹಿರಿಯಣ್ಣ | : ಡಾ. ಕೆ. ಚಿನ್ನಪ್ಪಗೌಡ |
| ಡಾ. ಚಂದ್ರು ಕಾಳೇನಹಳ್ಳಿ | : ಡಾ. ಸಿ. ಶಿವಲಿಂಗಪ್ಪ |
| ಬಾ.ಹ. ರಮಾಕುಮಾರಿ | : ಕೋಗಿಲಹಳ್ಳಿ ಕೃಷ್ಣಪ್ಪ |
| ಗೋಪಾಲಗೌಡ ಕಲ್ವಮಂಜಲಿ | : ಡಿ. ಮಂಜುನಾಥ |
| ಡಾ. ನರೇಂದ್ರ ರೈ ದೇರ್ಲ | : ಡಾ. ಎಚ್.ಆರ್. ಚೇತನ |
| ಡಾ. ಬಿ.ಪಿ. ಆಶಾಕುಮಾರಿ | : ಡಾ. ಎನ್.ಆರ್. ಚಂದ್ರೇಗೌಡ |
| ಡಾ. ಟಿ.ಕೆ. ಕೆಂಪೇಗೌಡ | : ಮೇಲುಕೋಟೆ ವಿ. ಎನ್. ಗೌಡ |



# ಪರಿಚಿತ ಚಿಂತಕ
# ಬಿ. ಮಾದಯ್ಯಗೌಡ

ಮಾದಯ್ಯಗೌಡರು ಬಿ.ಎ. ಮುಗಿಸಿ, ಎಲ್.ಎಲ್.ಬಿ. ಓದಲು ಪೂನಾಕ್ಕೆ ಹೋಗುವ ತಯ್ಯಾರಿಯಲ್ಲಿದ್ದರು. ನಾನಿನ್ನೂ ಬಿ.ಎ. ಪದವಿಯ ಎರಡನೆಯ ವರ್ಷದಲ್ಲಿದ್ದೆ. ಆಗ ನಮಗೆ ಕುಮಾರವ್ಯಾಸನ ಕರ್ಣಾಟ ಭಾರತ ಕಥಾ ಮಂಜರಿ ಪಠ್ಯಪುಸ್ತಕವಾಗಿತ್ತು. ಗೌಡರನ್ನು ಭೇಟಿಯಾಗಲು ಅವರ ಕೊಠಡಿಗೆ ಹೋದಾಗ, ಅವರು ಕುಮಾರವ್ಯಾಸ ಭಾರತವನ್ನು ತನ್ಮಯತೆಯಿಂದ ಓದುತ್ತಾ ಕುಳಿತಿದ್ದರು. ನನಗೆ ಆಶ್ಚರ್ಯ! ಪಾಸಾಗಿದ್ದಾರೆ; ಮತ್ತೆ ಓದುತ್ತಿದ್ದಾರಲ್ಲಾ ಅಂತ ಕೇಳಿಯೂ ಬಿಟ್ಟೆ. ಆದರೆ, ಕಾವ್ಯಾಸ್ವಾದನದಲ್ಲಿದ್ದ ಆನಂದ ಏನೆಂಬುದನ್ನು ಅವರ ಮಾತುಗಳಿಂದ ಕೇಳಿ ತಿಳಿದುಕೊಂಡೆ. ವಿದುರ ನೀತಿಯ ಬಗೆಗೆ, ರಾಜಕಾರಣದ ಬಗೆಗೆ ಗದುಗಿನ ನಾರಾಣಪ್ಪ ಬರೆದಿರುವುದನ್ನು ನಾವಿಬ್ಬರೂ ಚರ್ಚಿಸುತ್ತಿದ್ದೆವು.

- ಕೆಂಗಲ್ ಹನುಮಂತಯ್ಯ

ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಶ್ರೀ ಬಿ. ಮಾದಯ್ಯಗೌಡರು ಅಧ್ಯಕ್ಷರಾಗಿದ್ದ ಅವಧಿಯನ್ನು ಸುವರ್ಣಕಾಲವೆಂದೇ ಹೇಳಬೇಕು... ಇವರ ಸೇವಾವಧಿಯಲ್ಲಿ ಸಮಿತಿಯು ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡು, ದೇಶ ವಿದೇಶದಿಂದ ವಯಸ್ಕರ ಶಿಕ್ಷಣ ಸಮಿತಿಗೆ ನೆರವಿನ ಮಹಾಪೂರ ಹರಿದು ಬರುವಂತಾಯ್ತು... ಯುನೆಸ್ಕೊ, ಡೆನ್ಮಾರ್ಕ್‌ನ ನೆರವು ವಯಸ್ಕರ ಶಿಕ್ಷಣ ಸಮಿತಿಯತ್ತ ಸೆಳೆಯುವಲ್ಲಿ ಮಾನ್ಯ ಶ್ರೀ ಬಿ. ಮಾದಯ್ಯಗೌಡರ ಕೃತುಶಕ್ತಿ, ಮುಖಂಡತ್ವಗಳು ಕಾರಣವಾಗಿವೆ... ಸಮಿತಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಸೌಲಭ್ಯಗಳನ್ನು ಮತ್ತು ಅಂತರ್‌ಶಿಸ್ತನ್ನು ರೂಪಿಸಲು ದುಡಿದಿದ್ದಾರೆ.

- ಆರ್. ಬೋರಯ್ಯ

ನಮ್ಮ ಚಿಕ್ಕಪ್ಪನವರು(ಮಾದಯ್ಯಗೌಡರು) ನಮ್ಮನ್ನೆಲ್ಲಾ ಎಂದೂ ಅಣ್ಣನ ಮಕ್ಕಳೆಂದು ಭಾವಿಸಿರಲೇ ಇಲ್ಲ. ಸ್ವಂತ ಮಕ್ಕಳಗಿಂತ ಹೆಚ್ಚಾಗಿ ಆಡಿಸಿ, ಮುದ್ದಿಸಿ ಬೆಳೆಸಿದವರು... ನಮ್ಮೆಲ್ಲಾ ಮಕ್ಕಳ ಒಳ್ಳೆಯತನಕ್ಕೆ ಅಭಿವೃದ್ಧಿಗೆ ಅವರು ತೋರಿದ ಔದಾರ್ಯ, ಪ್ರೀತಿ, ಹರಕೆಗಳನ್ನು ನೆನಸಿಕೊಳ್ಳುವ ಹಂತಕ್ಕೆ ತಲುಪಿದೆ ನನ್ನ ಮನಸ್ಸು ಮತ್ತು ವಯಸ್ಸು.

- ಶ್ರೀಮತಿ ಸಾವಿತ್ರಮ್ಮ ದೇಜಗೌ

**ವಿಕಸನ**
ವಿಜ್ಞಾತಂ ಭವನ,
ಆದಿಚುಂಚನಗಿರಿ ವಿಶ್ವವಿದ್ಯಾನಿಲಯ (ACU)
ಬಿ.ಜಿ. ನಗರ-೫೭೧೪೪೮
ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.